Bennett & Coleman
THE TIMES OF INDIA
www.vijaykarnataka.com
ಮಂಗಳವಾರ,26 ಮೇ 2026 | ಪುಟಗಳು: 14 | ಬೆಲೆ: ₹ 5.00
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA
ಸಂಪುಟ: 27 | ಸಂಚಿಕೆ: 145

VK ವಿಜಯ ಕರ್ನಾಟಕ



ತಾಜ್ ಮಹಲ್ ಸೌಂದರ್ಯ ಕಣ್ತುಂಬಿಕೊಂಡ ಅಮೆರಿಕ ವಿದೇಶಾಂಗ ಸಚಿವ ರೂಬಿಯೊ ದಂಪತಿ

₹14,610	₹15,938	₹2,85,000
1 ಗ್ರಾಂ ದರ 22 ಕ್ಯಾರೆಟ್ (ಆಭರಣ ಚಿನ್ನ)	1 ಗ್ರಾಂ ದರ 24 ಕ್ಯಾರೆಟ್ (ಗಟ್ಟಿ ಚಿನ್ನ)	1 ಕೆಜಿ ಬೆಳ್ಳಿ ದರ (ಜಿಎಸ್‌ಟಿ ಪ್ರತ್ಯೇಕ)

ಬೆಂಗಳೂರು ದರ

ಅಸ್ಸಾಂ ವಿಧಾನಸಭೆಯಲ್ಲಿ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ವಿಧೇಯಕ ಮಂಡನೆ

ವಿಕ ಹೊಂಗಿರಣ

ನಮ್ಮ ಸಲ್ಲದ ಆಲೋಚನೆಗಳು ನಮಗೆ ಹಾನಿ ಮಾಡಿದಷ್ಟು ಬದ್ಧವೈರಿಯೂ ಮಾಡಲಾರ.
- ಗೌತಮ ಬುದ್ಧ

SBI
The banker to every Indian
ನಾವು ಕೇವಲ ಒಂದು ಕರೆ ದೂರದಲ್ಲಿದ್ದೇವೆ!
● ಖಾತೆ ಬ್ಯಾಲೆನ್ಸ್
● ಖಾತೆ ಸ್ಟೇಟ್ಮೆಂಟ್
● ಚೆಕ್ ಪುಸ್ತಕ ನೀಡಿಕೆ
● ಬಡ್ಡಿ ಪ್ರಮಾಣಪತ್ರ, ಗೃಹ ಸಾಲ/ ಶಿಕ್ಷಣ ಸಾಲ ಮತ್ತು ಇನ್ನೂ ಹಲವು...
ಈಗಲೇ ಅರ್ಜಿ ಸಲ್ಲಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ
*ಷರತ್ತುಗಳು ಅನ್ವಯಿಸುತ್ತವೆ
BANKING AS EASY AS 1-2-3-4
1800 1234 1800 2100

Vencobb
ಫಾರಂ ಧಾರಣೆ ಮಾರಾಟದ ಪ್ರತಿ ಕೆಜಿಗೆ ಸಲಹೆಯ ಬೆಲೆ ₹108/- ಕೋಲಾರ 103/- ತುಮಕೂರು 106/-
ರೀಟೇಲ್ ಮಾರಾಟದ ದರ ಪ್ರತಿ ಕೆಜಿಗೆ ಬೆಲೆ ₹148/- ಕೋಲಾರ 143/- ತುಮಕೂರು 146/-
ವಿಥ್ ಸ್ಕಿನ್ ₹209/- ಕೋಲಾರ 202/- ತುಮಕೂರು 206/-
ವಿಥೌಟ್ ಸ್ಕಿನ್ ₹238/- ಕೋಲಾರ 230/- ತುಮಕೂರು 235/-
ಗ್ರಾಹಕರಿಗೋಸ್ಕರ ನೀಡಲಾಗಿದೆ

ವೇಣುಗೋಪಾಲ್ ಕರೆ: ರಾಹುಲ್ ನೇತೃತ್ವದಲ್ಲಿ ದಿಲ್ಲಿಯಲ್ಲಿ ಸಭೆ ಇಂದು
ಹತ್ತಾರು ಲೆಕ್ಕಾಚಾರ, ಯಾರಿಗೆ ಸಿಗಲಿದೆ ವರ? | ರಾಜ್ಯಸಭೆ ಚುನಾವಣೆ ಅಜೆಂಡಾ; ಸಂಪುಟ ಪುನಾರಚನೆ, ನಾಯಕತ್ವ ಬದಲಾವಣೆಯದ್ದೇ ಎಲ್ಲೆಲ್ಲೂ ಗುಸುಗುಸು

ಕೈಕಮಾಂಡ್‌ಗೆ ಪರೀಕ್ಷೆ

■ **ವಿಕ ಸುದ್ದಿಲೋಕ** ಬೆಂಗಳೂರು

ಕಾಂಗ್ರೆಸ್ ಹೈಕಮಾಂಡ್ ಕರೆಯ ಮೇರೆಗೆ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ದಿಲ್ಲಿಗೆ ತೆರಳಿದ್ದು, ರಾಜ್ಯಸಭೆ ಚುನಾವಣೆಗೆ ಅಭ್ಯರ್ಥಿಗಳ ಹೆಸರು ಅಂತಿಮಗೊಳಿಸಲು ಸಭೆ ನಡೆಯಲಿದೆ. ಇದರ ಹೊರತಾಗಿಯೂ ಮಂಗಳವಾರ ಸಂಪುಟ ಪುನಾರಚನೆ, ನಾಯಕತ್ವಗೊಂದಲ ಇತ್ಯರ್ಥ ಕುರಿತ ಚರ್ಚೆ ದಿಲ್ಲಿ ಅಂಗಳದಲ್ಲಿ ನಡೆಯಲಿದೆಯೇ ಎಂಬ ಕುತೂಹಲವಿದೆ.

ರಾಜ್ಯ ಕಾಂಗ್ರೆಸ್‌ನಲ್ಲಿ ಕಳೆದೊಂದು ವರ್ಷದಿಂದಲೂ ನಾಯಕತ್ವದ ಬಗ್ಗೆ ಚರ್ಚೆಯಾಗುತ್ತಿದೆ. ಇಂಥ ಗೋಜಲಿಗೆ ಇತಿಶ್ರೀ ಹಾಡಲು ಪಂಚ ರಾಜ್ಯಗಳ ಚುನಾವಣೆ ಬಳಿಕ ಸಿಎಂ, ಡಿಸಿಎಂರನ್ನು ಹೈಕಮಾಂಡ್ ದಿಲ್ಲಿಗೆ ಕರೆಸಿಕೊಳ್ಳಲಿದೆ ಎಂದು ಹೇಳಲಾಗಿತ್ತು. ಆದರೆ, ಸದ್ಯದ ಪರಿಸ್ಥಿತಿಯಲ್ಲಿ ರಾಜ್ಯಸಭೆ ಚುನಾವಣೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು, ಜಿಬಿಎ, ಪಂಚಾಯಿತಿ ಇನ್ನಿತರ ಚುನಾವಣೆಸಂಬಂಧ ಪಕ್ಷವನ್ನು ಸನ್ನದ್ಧಗೊಳಿಸುವುದು ಎಐಸಿಸಿ ಆದ್ಯತೆಯಾಗಿದೆ.

ಈ ಹಿನ್ನೆಲೆಯಲ್ಲಿ ರಾಹುಲ್ ಗಾಂಧಿ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಮಂಗಳವಾರ ಖರ್ಗೆ ನಿವಾಸದಲ್ಲಿ ನಡೆಯಲಿರುವ ಸಭೆಯಲ್ಲಿ ರಾಜ್ಯಸಭೆ ಇನ್ನಿತರ ಚುನಾವಣೆ ಬಗ್ಗೆ ಚರ್ಚಿಸಲಾಗುತ್ತದೆ ಎಂಬ ವರ್ತಮಾನವಿದೆ. »09

ಪ್ರತ್ಯೇಕ ಪ್ರಯಾಣ ಸಿಎಂ ಮತ್ತು ಡಿಸಿಎಂ ಇಬ್ಬರೂ ಹೈಕಮಾಂಡ್ ಭೇಟಿಗೆ ಹೋಗುತ್ತಿದ್ದರೂ ಪ್ರತ್ಯೇಕವಾಗಿ ಸೋಮವಾರ ಸಂಜೆ ದಿಲ್ಲಿಗೆ ಪ್ರಯಾಣ ಬೆಳೆಸಿದರು. ಎಚ್‌ಎಎಲ್ ವಿಮಾನ ನಿಲ್ದಾಣದಿಂದ ಸಿಎಂ ವಿಶೇಷ ವಿಮಾನದ ಮೂಲಕ ತೆರಳಿದರೆ, ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನದ ಮೂಲಕ ಡಿಸಿಎಂ ಪ್ರಯಾಣಿಸಿದರು.

ಸಿಎಂ ಜತೆಗೆ ಸಚಿವರು

ಸಿದ್ದರಾಮಯ್ಯ ಅವರೊಂದಿಗೆ ಸಚಿವರಾದ ಡಾ.ಜಿ.ಪರಮೇಶ್ವರ, ಡಾ.ಎಚ್.ಸಿ.ಮಹದೇವಪ್ಪ, ಕೆ.ಜೆ.ಜಾರ್ಜ್, ಎಂ.ಬಿ.ಪಾಟೀಲ್, ಭೈರತಿ ಸುರೇಶ್ ದಿಲ್ಲಿಗೆ ತೆರಳಿದ್ದಾರೆ. ಡಿ.ಕೆ.ಶಿವಕುಮಾರ್ ಅವರೊಂದಿಗೆ ಸಹೋದರ ಡಿ.ಕೆ.ಸುರೇಶ್, ರಾಜ್ಯಸಭೆ ಸದಸ್ಯ ಜಿ.ಸಿ.ಚಂದ್ರಶೇಖರ್ ತೆರಳಿದ್ದಾರೆ.

ಮುಖ್ಯ ಅಜೆಂಡಾ

- ರಾಜ್ಯಸಭೆ ಚುನಾವಣೆ ಅಭ್ಯರ್ಥಿಗಳ ಆಯ್ಕೆ
- ಜಿಬಿಎ, ಪಂಚಾಯಿತಿ ಚುನಾವಣೆಗಳ ಬಗ್ಗೆ ಚರ್ಚೆ
- ಎಸ್‌ಐಆರ್ ವಿರುದ್ಧ ಹೋರಾಟದ ರೂಪುರೇಷೆ

ಸಾಧ್ಯಾಸಾಧ್ಯತೆಗಳು

- ಸಂಪುಟ ಸರ್ಜರಿಗೆ ಸಿಎಂರಿಂದ ಪ್ರಸ್ತಾಪ
- ಕೆಪಿಸಿಸಿ ಅಧ್ಯಕ್ಷರ ಬದಲಾವಣೆಗೂ ಬೇಡಿಕೆ
- ನಾಯಕತ್ವದ ಬಗ್ಗೆ ಡಿಸಿಎಂ ಹಕ್ಕೊತ್ತಾಯ

ಹೈಕಮಾಂಡ್ ಲೆಕ್ಕಾಚಾರ

- ಸದ್ಯಕ್ಕೆ ರಿಸ್ಕ್ ಬೇಡವೆಂಬ ಧೋರಣೆ
- ಯಥಾಸ್ಥಿತಿ ಮುಂದುವರಿಕೆಗೆ ಒಲವು
- ಎಸ್‌ಐಆರ್ ಬಗ್ಗೆ ನಿಗಾ ವಹಿಸಲು

ಇಂದು ಬೆಳಗ್ಗೆ 11ಕ್ಕೆ ಸಭೆ

''ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರ ನಿನ್ನೆ ರಾತ್ರಿ ಕರೆ ಮಾಡಿ ನನ್ನನ್ನು ದಿಲ್ಲಿಗೆ ಆಹ್ವಾನಿಸಿದ್ದಾರೆ. ಹಾಗಾಗಿ ದಿಲ್ಲಿಗೆ ಬಂದಿರುವೆ. ಮಂಗಳವಾರ ಬೆಳಗ್ಗೆ 11ಕ್ಕೆ ಸಭೆ ಇದೆ. ಅದರ ಅಜೆಂಡಾ ಏನೆಂದು ನನಗೆ ಗೊತ್ತಿಲ್ಲ,'' ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ.

ಗೃಹಲಕ್ಷ್ಮಿಯರೇ ಗಮನಿಸಿ!

ಇನ್ಮುಂದೆ ಬಯೋಮೆಟ್ರಿಕ್ ಕಡ್ಡಾಯ, ನವೀಕರಿಸದಿದ್ದರೆ ಹಣ ಕಟ್!

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯ ಸರಕಾರದ ಮಹತ್ವಾಕಾಂಕ್ಷಿ 'ಗೃಹಲಕ್ಷ್ಮಿ' ಯೋಜನೆಯಲ್ಲಿ ತಂತ್ರಜ್ಞಾನ ಆಧಾರಿತ ಬದಲಾವಣೆಯೊಂದನ್ನು ತರಲು ಸರಕಾರ ಮುಂದಾಗಿದೆ. ಯೋಜನೆ ದುರ್ಬಳಕೆ ಹಾಗೂ ಅನರ್ಹರಿಗೆ ಹಣ ಸಂದಾಯವಾಗುವುದನ್ನು ತಡೆಗಟ್ಟಲು ಇನ್ಮುಂದೆ 'ಒನ್-ಟೈಮ್ ಬಯೋಮೆಟ್ರಿಕ್' ವ್ಯವಸ್ಥೆಯನ್ನು ಜಾರಿಗೆ ತರಲಾಗುತ್ತಿದೆ.

ಪ್ರಸ್ತುತ ಯೋಜನೆಯ ಲಾಭ ಪಡೆಯುತ್ತಿರುವ ಎಲ್ಲ ಫಲಾನುಭವಿಗಳು ತಮ್ಮ ಖಾತೆಯನ್ನು ಬಯೋಮೆಟ್ರಿಕ್ ಹಾಗೂ ಮೊಬೈಲ್ ಸಂಖ್ಯೆಯೊಂದಿಗೆ ಮರು-ನೋಂದಣಿ (ನವೀಕರಣ) ಮಾಡಿಕೊಳ್ಳುವುದು ಕಡ್ಡಾಯವಾಗಿದೆ. ಒಂದು ವೇಳೆ ನವೀಕರಿಸದಿದ್ದರೆ ಬ್ಯಾಂಕ್ ಖಾತೆಗೆ ಹಣ ಜಮೆಯಾಗುವುದಿಲ್ಲ. ಈ ಕುರಿತು ರಾಜ್ಯ ಸರಕಾರ ಶೀಘ್ರದಲ್ಲೇ ಅಧಿಕೃತ ಆದೇಶ ಹೊರಡಿಸಲಿದೆ.

ಗೃಹಲಕ್ಷ್ಮಿ ಯೋಜನೆಯ ಲಕ್ಷಾಂತರ ಮಂದಿ ಫಲಾನುಭವಿಗಳು ನಿಧನರಾಗಿದ್ದಾರೆ. ಎರಡು ಲಕ್ಷ ಮಂದಿ ಮೃತಪಟ್ಟಿದ್ದರೂ ಫಲಾನುಭವಿಗಳಾಗಿದ್ದಾರೆ. 50 ಸಾವಿರಕ್ಕೂ ಹೆಚ್ಚು ಆದಾಯ ತೆರಿಗೆ ಪಾವತಿದಾರರು ಯೋಜನೆಯ ಲಾಭ ಪಡೆಯುತ್ತಿದ್ದರು. ಕೆಲ ಫಲಾನುಭವಿಗಳ ಖಾತೆಗೆ ಸಂದಾಯವಾದ ಗೃಹಲಕ್ಷ್ಮಿ ಹಣ ಈ ಮೊದಲು ಮಾಡಿರುವ ಸಾಲಕ್ಕೆ ಜಮೆಯಾಗುತ್ತಿದೆ. ಕೆಲವರ ಮೊಬೈಲ್ ಸಂಖ್ಯೆ ಕೂಡ ಬದಲಾಗಿದೆ. ಹೀಗಾಗಿ, ಅರ್ಹ ಫಲಾನುಭವಿಗಳಿಗೆ ಮಾತ್ರ ಯೋಜನೆಯ ಲಾಭ ಸಿಗಲಿ ಎಂಬ ಉದ್ದೇಶದಿಂದ ಗೃಹಲಕ್ಷ್ಮಿ ಯೋಜನೆಯ ಖಾತೆಗಳನ್ನು ಮತ್ತೊಮ್ಮೆ ನವೀಕರಣ ಮಾಡಲಾಗುತ್ತಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ತಿಳಿಸಿದರು.

ನಿಧನರಾದವರ ಖಾತೆಗೂ ಹಣ ಜಮೆಯಾಗುತ್ತಿತ್ತು. ಹೀಗಾಗಿ, ಗೃಹಲಕ್ಷ್ಮಿ ಫಲಾನುಭವಿಗಳು ಬದುಕಿರುವ ಬಗ್ಗೆ ಜೀವಿತ ಪ್ರಮಾಣ ಪತ್ರ ಸಲ್ಲಿಸಲು ನಿರ್ಧರಿಸಲಾಗಿತ್ತು. ಆದರೆ, ಇದಕ್ಕೆ ತೀವ್ರವಾದ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಅದಕ್ಕೆ ಪರ್ಯಾಯವಾಗಿ ಬಯೋಮೆಟ್ರಿಕ್ ವ್ಯವಸ್ಥೆ ಜಾರಿ ಮಾಡಲಾಗಿದೆ.

ನವೀಕರಣ ಹೇಗೆ?

ಫಲಾನುಭವಿಗಳು ತಮ್ಮ ಹತ್ತಿರದ ಬೆಂಗಳೂರು ಒನ್ ಅಥವಾ ಕರ್ನಾಟಕ ಒನ್ ಕೇಂದ್ರಗಳಿಗೆ ಭೇಟಿ ನೀಡಿ, ಚಾಲ್ತಿಯಲ್ಲಿರುವ ಮೊಬೈಲ್ ಸಂಖ್ಯೆ ಹಾಗೂ ಬಯೋಮೆಟ್ರಿಕ್ ನೀಡುವ ಮೂಲಕ ತಮ್ಮ ಖಾತೆಯನ್ನು ಮರು-ನೋಂದಣಿ ಮಾಡಿಸಿಕೊಳ್ಳಬಹುದು.

ಯಾರಿಗೆ ಗೃಹಲಕ್ಷ್ಮಿ ಇಲ್ಲ

ಫಲಾನುಭವಿಗಳು ಎಪಿಎಲ್ ಕಾರ್ಡ್ ಅಥವಾ ಬಿಪಿಎಲ್ ಕಾರ್ಡ್ ಹೊಂದಿರಬಹುದು. ಆದರೆ, ಆದಾಯ ತೆರಿಗೆ ಪಾವತಿದಾರರಾಗಿರಬಾರದು. ಇಲಾಖೆ ಈಗಾಗಲೇ ಸುಮಾರು 2 ಲಕ್ಷಕ್ಕೂ ಅಧಿಕ ಕಾರ್ಡ್‌ಗಳನ್ನು ಬಿಪಿಎಲ್‌ನಿಂದ ಎಪಿಎಲ್‌ಗೆ ವರ್ಗಾವಣೆ ಮಾಡಿದೆ. ಇವರಲ್ಲಿ ಬಹುತೇಕರು ಆದಾಯ ತೆರಿಗೆ ಪಾವತಿಸುತ್ತಿದ್ದುದರಿಂದ ಕಾರ್ಡ್ ರದ್ದುಪಡಿಸಲಾಗಿದೆ. ಇವರಿಗೆ ಗೃಹಲಕ್ಷ್ಮಿ ಯೋಜನೆ ರದ್ದಾಗಲಿದೆ.

ಸದ್ಯಕ್ಕೆ ನಾವು ಯಾವುದೇ ಫಲಾನುಭವಿಯ ಹೆಸರನ್ನು ನೇರವಾಗಿ ಡಿಲೀಟ್ ಮಾಡುತ್ತಿಲ್ಲ. ಇದು ಕೇವಲ 'ಒನ್ ಟೈಮ್ ಬಯೋಮೆಟ್ರಿಕ್' ಪದ್ಧತಿ. ಮಹಿಳೆಯರು ಕೇವಲ ಒಂದು ಬಾರಿ ಬಯೋಮೆಟ್ರಿಕ್ ನೀಡಿದರೆ ಸಾಕು, ಹಣ ಎಂದಿನಂತೆ ಖಾತೆಗೆ ಜಮೆಯಾಗುತ್ತದೆ. ನವೀಕರಣ ಮಾಡದ ಖಾತೆಗಳು ಮಾತ್ರ ಸ್ವಯಂಚಾಲಿತವಾಗಿ ರದ್ದಾಗುತ್ತವೆ.

-ಲಕ್ಷ್ಮೀ ಹೆಬ್ಬಾಳ್ಕರ್ ಸಚಿವೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಆಪರೇಷನ್ ಟಿವಿಕೆ ಶುರು

ಚೆನ್ನೈ: ತಮಿಳುನಾಡು ಸರಕಾರ ರಚನೆಯಲ್ಲಿ ಬಹುಮತಕ್ಕೆ ತಿಣುಕಾಡಿದ್ದ ಸಿಎಂ ಜೋಸೆಫ್ ವಿಜಯ್ ಅವರ ಟಿವಿಕೆ ಪಕ್ಷವು 'ಆಪರೇಷನ್ ಟಿವಿಕೆ' ಶುರು ಮಾಡಿದೆ.

ಇತ್ತೀಚಿನ ವಿಧಾನಸಭೆ ಚುನಾವಣೆಯಲ್ಲಿ ಹೀನಾಯ ಸೋಲಿನ ಬಳಿಕ ಎಐಎಡಿಎಂಕೆಯೊಳಗೆ ಆಂತರಿಕ ಬಂಡಾಯ ಭುಗಿಲೆದ್ದಿದೆ. ಬಂಡಾಯಕ್ಕೆ ಬೇಸತ್ತು ಪಕ್ಷದ ಮೂವರು ಶಾಸಕರಾದ ಮರಗತಮ್ ಕುಮಾರವೇಲ್, ಜಯಕುಮಾರ್ ಹಾಗೂ ಸತ್ಯಭಾಮಾ ಅವರು ಸ್ಪೀಕರ್ ಜೆ.ಸಿ.ಡಿ ಪ್ರಭಾಕರ್ ಅವರನ್ನು ಭೇಟಿಯಾಗಿ ಸೋಮವಾರ ರಾಜೀನಾಮೆ ಸಲ್ಲಿಸಿದರು. ನಂತರ ಮೂವರೂ ಸಚಿವ ಆಧವ್ ಅರ್ಜುನ್ ಅವರನ್ನು ಭೇಟಿಯಾಗಿ ಅಧಿಕೃತವಾಗಿ ಟಿವಿಕೆ ಸೇರಿದರು. ಈ ಬೆಳವಣಿಗೆಯು ಪಳನಿಸ್ವಾಮಿ ಮತ್ತು ಷಣ್ಮುಗಂ ನೇತೃತ್ವದ ಬಣ ರಾಜಕೀಯದಿಂದ ಕಂಗೆಟ್ಟಿರುವ ಎಐಎಡಿಎಂಕೆಗೆ ದೊಡ್ಡ ಆಘಾತ ನೀಡಿದೆ.

ಜನತೆಗೆ ಮತ್ತೆ ಇಂಧನಾಘಾತ

11 ದಿನಗಳಲ್ಲಿ ನಾಲ್ಕನೇ ಬಾರಿಗೆ ಪೆಟ್ರೋಲ್, ಡೀಸೆಲ್ ದರ ಏರಿಕೆ

ಹೊಸದಿಲ್ಲಿ: ಮಧ್ಯಪ್ರಾಚ್ಯ ಬಿಕ್ಕಟ್ಟಿನ ಪರಿಣಾಮದಿಂದ ದೇಶದಲ್ಲಿ ಮತ್ತೊಮ್ಮೆ ಪೆಟ್ರೋಲ್, ಡೀಸೆಲ್ ದರ ಹೆಚ್ಚಿಸುವ ಮೂಲಕ ತೈಲ ಕಂಪನಿಗಳು ಜನತೆಗೆ ಶಾಕ್ ನೀಡಿವೆ.

ಸೋಮವಾರ ಪೆಟ್ರೋಲ್ ದರ ಲೀಟರ್‌ಗೆ 2.61 ರೂ. ಹಾಗೂ ಡೀಸೆಲ್ ದರವನ್ನು 2.71 ರೂ. ಏರಿಸಲಾಗಿದೆ. ಕಳೆದ 11 ದಿನಗಳಲ್ಲಿ ಇದು 4ನೇ ಏರಿಕೆಯಾಗಿದೆ. ಇದರೊಂದಿಗೆ ದಿಲ್ಲಿಯಲ್ಲಿ ಪೆಟ್ರೋಲ್ ದರ 102.12 ರೂ. ಹಾಗೂ ಡೀಸೆಲ್ ದರ 99.51 ರೂ. ತಲುಪಿದೆ. ಮೇ 15ರಂದು ಮೊದಲ ಬಾರಿಗೆ ಹೆಚ್ಚಿಸಲಾಗಿತ್ತು. ಈಗ ಒಟ್ಟು ಏರಿಕೆ ಪ್ರಮಾಣ ಸುಮಾರು 7.5 ರೂ. ಆಗಿದೆ. ಇಂಧನ ದರ ಏರಿಕೆ ಖಂಡಿಸಿ ಕಾಂಗ್ರೆಸ್ ಸೇರಿದಂತೆ ಪ್ರತಿಪಕ್ಷಗಳು ಕೇಂದ್ರ ಸರಕಾರದ ವಿರುದ್ಧ ಕಿಡಿಕಾರಿವೆ.

ಇರಾನ್ ಮೇಲೆ ಅಮೆರಿಕ-ಇಸ್ರೇಲ್ ಜಂಟಿ ದಾಳಿ ನಡೆಸಿದ ಬಳಿಕ ವಿಶ್ವದ ಪ್ರಮುಖ ತೈಲ ಹಾಗೂ ಅನಿಲ ಸಾಗಣೆ ಹಡಗು ಸಂಚಾರ ಮಾರ್ಗ ಎನಿಸಿರುವ ಹರ್ಮುಜ್ ಜಲಸಂಧಿ ಮುಚ್ಚಿದ್ದರಿಂದ ಇಂಧನ ಪೂರೈಕೆ ಸರಪಳಿಗೆ ಅಡಚಣೆಯಾಗಿದೆ. ಇದರಿಂದಾಗಿ ಜಾಗತಿಕ ಕಚ್ಚಾ ತೈಲ ಬೆಲೆಗಳು ಫೆಬ್ರವರಿಯಿಂದ ಶೇ. 50ರಷ್ಟು ಜಿಗಿತ ಕಂಡಿವೆ. ಆದರೆ, ಅಮೆರಿಕ-ಇರಾನ್ ನಡುವೆ ಕದನ ವಿರಾಮ ಮಾತುಕತೆ ಸಕಾರಾತ್ಮಕವಾಗಿದ್ದು ಸೋಮವಾರ ಕಚ್ಚಾ ತೈಲದ ಬೆಲೆ ಬ್ಯಾರೆಲ್‌ಗೆ 100 ಡಾಲರ್‌ಗಿಂತ ಕಡಿಮೆಯಾಗಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಸ್ವಲ್ಪ ಕಡಿಮೆಯಾಗಿದ್ದರೂ ಹಿಂದಿನ ನಷ್ಟ ಸರಿದೂಗಿಸಿಕೊಳ್ಳಲು ತೈಲ ಕಂಪನಿಗಳು ಈ ದರ ಏರಿಕೆ ಮಾಡಿವೆ.

ಬೆಂಗಳೂರು ದರ

- ಪೆಟ್ರೋಲ್: 110.93 ರೂ.
- ಡೀಸೆಲ್: 98.80 ರೂ.
- ಸಿಎನ್‌ಜಿ (1 ಕೆ.ಜಿ): 90 ರೂ.

ಪೆಟ್ರೋಲ್ ಬಲೆ | ವಿಕ ಫೋಕಸ್ »10

ಮೇ 15ರಂದು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಲೀಟರ್‌ಗೆ ತಲಾ 3 ರೂ. ಮತ್ತು ಮೇ 19ರಂದು ಲೀಟರ್‌ಗೆ 90 ಪೈಸೆ ಹೆಚ್ಚಿಸಲಾಗಿತ್ತು. ಮೇ 23ರಂದು ಪೆಟ್ರೋಲ್ ಲೀಟರ್‌ಗೆ 87 ಪೈಸೆ ಮತ್ತು ಡೀಸೆಲ್ ದರದಲ್ಲಿ 91 ಪೈಸೆ ಹೆಚ್ಚಿಸಲಾಯಿತು. ಸ್ಥಳೀಯ ತೆರಿಗೆಗಳೂ ಒಳಗೊಂಡಂತೆ ಪೆಟ್ರೋಲ್, ಡೀಸೆಲ್ ದರದಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸ ಇರುತ್ತದೆ.

30ರಂದು 'ಕೈ' ಪ್ರತಿಭಟನೆ: ಸತತ ಇಂಧನ ದರ ಏರಿಕೆಯಿಂದ ಬಿಜೆಪಿ ನೇತೃತ್ವದ ಕೇಂದ್ರ ಸರಕಾರವು ಜನರನ್ನು ಲೂಟಿ ಮಾಡುತ್ತಿದೆ ಎಂದು ಕಾಂಗ್ರೆಸ್ ಆಕ್ರೋಶ ವ್ಯಕ್ತಪಡಿಸಿದೆ. ತೈಲ ಬೆಲೆ ಏರಿಕೆ ವಿರುದ್ಧ ಇದೇ 30ರಂದು ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲು ನಿರ್ಧರಿಸಿದೆ. ಲೋಕಸಭೆ ಪ್ರತಿಪಕ್ಷನಾಯಕ ರಾಹುಲ್ ಗಾಂಧಿ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು 'ಇನ್‌ಫ್ಲೇಷನ್ ಮ್ಯಾನ್' (ಹಣದುಬ್ಬರಕ್ಕೆ ದಾರಿ ಮಾಡಿಕೊಡುವ ವ್ಯಕ್ತಿ) ಎಂದು ಟೀಕಿಸಿದ್ದಾರೆ.

ಮೇಕೆದಾಟು ಯೋಜನೆ ಜಾರಿ ಶತಸಿದ್ಧ

ಬೆಂಗಳೂರು: ಮಹತ್ವಾಕಾಂಕ್ಷೆಯ ಮೇಕೆದಾಟು ಯೋಜನೆಯನ್ನು ನಿಲ್ಲಿಸುವ ಹಕ್ಕು ತಮಿಳುನಾಡು ಸರಕಾರಕ್ಕೆ ಇಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು,''ಮೇಕೆದಾಟು ಯೋಜನೆ ಬಗ್ಗೆ ನಾವು ಡಿಪಿಆರ್ ಸಿದ್ಧಪಡಿಸಿದ್ದೇವೆ. ಇದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಕೇಂದ್ರ ಸರಕಾರ ಅನುಮತಿ ನೀಡಿದ ಮೇಲೆ ಭೂಮಿಪೂಜೆ ನೆರವೇರಿಸುತ್ತೇವೆ,'' ಎಂದು ಹೇಳಿದರು. ಡಿಕೆಶಿ ಅವರ ಈ ಹೇಳಿಕೆಗಳು ತಮಿಳುನಾಡಿನಲ್ಲಿ ಸಂಚಲನ ಸೃಷ್ಟಿಸಿವೆ.

ಡಿಕೆಶಿ ಹೇಳಿಕೆ ಬೆನ್ನಲ್ಲೇ ತಮಿಳುನಾಡು ಸಿಎಂ ವಿಜಯ್ ಅವರು ಮೇಕೆದಾಟು ಯೋಜನೆ ವಿರುದ್ಧ ಕಾನೂನು ಹೋರಾಟ ನಡೆಸಲು ಸೂಚನೆ ನೀಡಿದ್ದಾರೆ. ತಮಿಳುನಾಡಿನ ಜನರ ಹಕ್ಕುಗಳನ್ನು ರಕ್ಷಿಸಲು ಮತ್ತು ರೈತರ ಹಿತಾಸಕ್ತಿಗಳನ್ನು ರಕ್ಷಿಸಲು ತಜ್ಞರು ಹಾಗೂ ಅಧಿಕಾರಿಗಳ ಜತೆ ಪರಿಶೀಲನಾ ಸಭೆ ನಡೆಸಿದ ನಂತರ ವಿಜಯ್ ಅವರಿಂದ ಈ ಸೂಚನೆ ಹೊರಬಿದ್ದಿದೆ.

ಈ ಮಧ್ಯೆ, ಕರ್ನಾಟಕದ ಪ್ರಸ್ತಾಪಿತ ಮೇಕೆದಾಟು ಯೋಜನೆ ವಿರುದ್ಧದ ಅರ್ಜಿ ಪರಿಗಣಿಸಲು ನಿರಾಕರಿಸಿದ ತೀರ್ಪು ಮರುಪರಿಶೀಲಿಸುವಂತೆ ಕೋರಿ ತಮಿಳುನಾಡು ಸರಕಾರ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಹೊಸದಿಲ್ಲಿಯಲ್ಲಿ ಸೋಮವಾರ ಶತಾವಧಾನಿ ಆರ್. ಗಣೇಶ್ ಅವರಿಗೆ 'ಪದ್ಮಭೂಷಣ' ಪ್ರಶಸ್ತಿ ಪ್ರದಾನ ಮಾಡಿದರು.

ಪಾಠ ಕಲಿಯದ ಎನ್‌ಟಿಎ: ಸುಪ್ರೀಂ ಬೇಸರ

ಹೊಸದಿಲ್ಲಿ: ವೈದ್ಯಕೀಯ, ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕೆ ಜೆಇಇ ಮತ್ತು ನೀಟ್ ನಡೆಸುವ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಹಿಂದಿನ ತಪ್ಪುಗಳಿಂದ ಪಾಠ ಕಲಿಯದಿರುವುದು ಬೇಸರದ ಸಂಗತಿ ಎಂದು ಸುಪ್ರೀಂ ಕೋರ್ಟ್ ಅಸಮಾಧಾನ ಹೊರಹಾಕಿದೆ.

ಎನ್‌ಟಿಎಅನ್ನು ಸದೃಢ ಹಾಗೂ ಸ್ವಾಯತ್ತ ಸಂಸ್ಥೆಯನ್ನಾಗಿ ರೂಪಿಸಬೇಕೆಂದು ಅಖಿಲ ಭಾರತ ವೈದ್ಯಕೀಯ ಒಕ್ಕೂಟ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಪಿಎಸ್ ನರಸಿಂಹ ನೇತೃತ್ವದ ದ್ವಿ ಸದಸ್ಯ ಪೀಠ ವಿಚಾರಣೆ ನಡೆಸಿತು. ಹಿಂದಿನ ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಿಂದ ಎನ್‌ಟಿಎ ಯಾವುದೇ ಪಾಠ ಕಲಿತಿಲ್ಲ ಎಂದು ಬೇಸರ ವ್ಯಕ್ತಪಡಿಸಿದ ನ್ಯಾಯಪೀಠವು ಕೇಂದ್ರ, ಎನ್‌ಟಿಎ ಮತ್ತು ಸಿಬಿಐಗೆ 3 ದಿನದೊಳಗೆ ಪ್ರತಿಕ್ರಿಯೆ ಸಲ್ಲಿಸುವಂತೆ ನೋಟಿಸ್ ಜಾರಿ ಮಾಡಿತು.

ಈ ಮಧ್ಯೆ, ನೀಟ್-ಯುಜಿ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತ ಪುಣೆ ಪ್ರಾಂಶುಪಾಲೆ ಮನಿಶಾ ಹವಾಲ್ದಾರ್ ಕೆಲವು ವಿದ್ಯಾರ್ಥಿಗಳಿಂದ ಹಣ ಪಡೆದು ಪರೀಕ್ಷೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಹಂಚಿಕೊಂಡಿದ್ದರು ಎಂದು ಸಿಬಿಐಗೆ ಕೋರ್ಟ್‌ಗೆ ತಿಳಿಸಿದೆ.

ಇನ್‌ಸೈಟ್

ಐಪಿಎಲ್: ಇಂದು ಕ್ವಾಲಿಫೈಯರ್ 1ರಲ್ಲಿ ಆರ್‌ಸಿಬಿ-ಜಿಟಿ ಫೈಟ್ »05
ಹರ್ಮುಜ್‌ನಲ್ಲಿ ಟೋಲ್ ಇಲ್ಲ ಎಂದ ಇರಾನ್ »13
ನೀರಾವರಿಗಾಗಿ ಸಿಡಿದೆದ್ದ ರೈತರು »06

ಕಾರ್ಮಿಕ ವಲಯದಲ್ಲಿ ಅಸಮಾಧಾನ | ವೇತನ ನಿಗದಿ ಅಧಿಸೂಚನೆ ವಾಪಸ್‌ಗೆ ಉದ್ಯೋಗದಾತರ ಆಗ್ರಹ

ಬೀಡಿ, ಗಾರ್ಮೆಂಟ್ಸ್ ಕಾರ್ಮಿಕರಿಗಿಲ್ಲ ಕನಿಷ್ಠ ವೇತನ

■ **ವಿಕ ಸುದ್ದಿಲೋಕ** ಬೆಂಗಳೂರು

ಕನಿಷ್ಠ ವೇತನ ನಿಗದಿಯಿಂದ ಗಾರ್ಮೆಂಟ್ಸ್, ಬೀಡಿ ಕಾರ್ಮಿಕರೂ ಸೇರಿದಂತೆ 19 ಉದ್ಯಮಗಳ ನೌಕರರನ್ನು ಸರಕಾರ ಹೊರಗಿಟ್ಟಿರುವುದಕ್ಕೆ ಕಾರ್ಮಿಕ ವಲಯದಲ್ಲಿ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ.

ಅಪಾಯಕಾರಿ ನಾಲ್ಕು ಉದ್ಯೋಗಗಳು ಸೇರಿ 99 ಅಧಿಸೂಚಿತ ಉದ್ದಿಮೆಗಳಲ್ಲಿ ದುಡಿಯುವವರಿಗೆ ಕನಿಷ್ಠ ವೇತನವನ್ನು ಶೇ.60ರಷ್ಟು ಹೆಚ್ಚಳ ಮಾಡಿರುವ ಸರಕಾರ, ಆ ಪಟ್ಟಿಯಲ್ಲಿ ಅತ್ಯಂತ ದುರ್ಬಲ ಹಾಗೂ ಸೂಕ್ಷ್ಮ ವಲಯವೆಂದು ಗುರುತಿಸಲಾಗಿರುವ ಬೀಡಿ ಹಾಗೂ ಗಾರ್ಮೆಂಟ್ಸ್ ಉದ್ಯಮ ಎರಡನ್ನೂ ಪರಿಗಣಿಸಿಲ್ಲ. ಈ ಎರಡೂ ವಲಯಗಳಲ್ಲೂ ಬಹುತೇಕ ಮಹಿಳೆಯರೇ ಕಾರ್ಯನಿರ್ವಹಿಸುತ್ತಿದ್ದು, ಅವರಿಗೆ ಅನ್ಯಾಯವಾಗಿದೆ ಎಂದು ಕಾರ್ಮಿಕ ಸಂಘಟನೆಗಳು ಅಸಮಾಧಾನ ಹೊರಹಾಕಿವೆ.

ಈ ಮಧ್ಯೆ, ಕರ್ನಾಟಕ ಉದ್ಯೋಗದಾತರ ಸಂಘ ನ್ಯಾಯಾಲಯದ ಆದೇಶ ಉಲ್ಲಂಘನೆ ಮಾಡಿ ನಿಗದಿಪಡಿಸಿರುವ ವೇತನ ಅಧಿಸೂಚನೆ ವಾಪಸ್ ಪಡೆಯಬೇಕೆಂದು ಮುಖ್ಯಮಂತ್ರಿ ಹಾಗೂ ಕಾರ್ಮಿಕರ ಸಚಿವರಿಗೆ ಸೋಮವಾರ ಮನವಿ ಸಲ್ಲಿಸಿವೆ.

ವೇತನ ಪರಿಷ್ಕರಣೆಯಿಂದ ರಾಜ್ಯದಲ್ಲಿ ಒಂದು ಕೋಟಿಗೂ ಅಧಿಕ ಉದ್ಯೋಗಿಗಳಿಗೆ ಸಹಾಯಕವಾಗಲಿದೆ. ಆದರೆ, ಕನಿಷ್ಠ ವೇತನ ಪರಿಷ್ಕರಣೆಯ ಹೊರಗೆ ಉಳಿದಿರುವ 19 ಉದ್ಯೋಗಗಳಲ್ಲಿ 10 ಲಕ್ಷಕ್ಕೂ ಹೆಚ್ಚು ಕಾರ್ಮಿಕರಿದ್ದಾರೆ.

''ಬೀಡಿ, ತೋಟ ಮತ್ತು ಗಾರ್ಮೆಂಟ್ಸ್ ಕಾರ್ಖಾನೆಯ ಕಾರ್ಮಿಕರು ಕಡಿಮೆ ವೇತನ ಪಡೆಯುತ್ತಿದ್ದಾರೆ. 2023ರ ಜನವರಿಯಲ್ಲಿ ಗಾರ್ಮೆಂಟ್ಸ್ ಕಾರ್ಮಿಕರಿಗೆ ಕನಿಷ್ಠ ವೇತನದ ಪರಿಷ್ಕರಣೆ ಘೋಷಿಸಿದಾಗ, ಪರಿಷ್ಕೃತ ವೇತನವು 2017ರಲ್ಲಿ ಇತರ ಉದ್ಯೋಗಗಳಿಗೆ ನಿಗದಿಪಡಿಸಿದ ಕನಿಷ್ಠ ವೇತನಕ್ಕಿಂತ ಕಡಿಮೆಯಿತ್ತು. ಇದು ವೇತನ ಅಸಮಾನತೆ ಮಾತ್ರವಲ್ಲ, ಲಿಂಗ ತಾರತಮ್ಯವೂ ಆಗಿದೆ. ಏಕೆಂದರೆ, ಗಾರ್ಮೆಂಟ್ಸ್ ಕಾರ್ಮಿಕರು ಪ್ರಧಾನವಾಗಿ ಮಹಿಳೆಯರಾಗಿದ್ದಾರೆ,'' ಎಂದು ಅಖಿಲ ಭಾರತ ಕೇಂದ್ರ ಕಾರ್ಮಿಕ ಸಂಘಗಳ ಮಂಡಳಿಯ (ಎಐಸಿಸಿಟಿಯು) ರಾಜ್ಯ ಕಾರ್ಯದರ್ಶಿ ಕೆ. ಮೈತ್ರೇಯಿ ಹೇಳಿದರು.

''ವೇತನ ಪರಿಷ್ಕರಣೆಯಿಂದ ಮಹಿಳೆಯರಿಗೆ ಹೆಚ್ಚಿನ ಅನ್ಯಾಯವಾಗಿದ್ದು, ಅದನ್ನು ಸರಿಪಡಿಸಲು ಸರಕಾರಕ್ಕೆ ಮನವಿ ಸಲ್ಲಿಸಲಾಗುವುದು. ಸರಕಾರ ತಾರತಮ್ಯ ಧೋರಣೆ ಅನುಸರಿಸುವುದು ಸರಿಯಲ್ಲ, ಎಲ್ಲಾ ಕಾರ್ಮಿಕರನ್ನೂ ಒಂದೇ ರೀತಿ ಕಾಣಬೇಕು,'' ಎಂದು ಅವರು 'ವಿಜಯ ಕರ್ನಾಟಕ'ಕ್ಕೆ ತಿಳಿಸಿದರು.

ಸಾಂದರ್ಭಿಕ ಚಿತ್ರ

ಗಾರ್ಮೆಂಟ್ಸ್ ನೌಕರರಿಗೆ ಸರಕಾರದಿಂದ ಸತತ ಅನ್ಯಾಯ

''ರಾಜ್ಯದಲ್ಲಿ ಗಾರ್ಮೆಂಟ್ಸ್ ನೌಕರರಿಗೆ ಸತತವಾಗಿ ಅನ್ಯಾಯವಾಗುತ್ತಲೇ ಇದೆ. ಸರಕಾರ ಹಾಗೂ ಗಾರ್ಮೆಂಟ್ಸ್ ಕಾರ್ಖಾನೆಗಳ ಮಾಲೀಕರು ವೇತನ ತಾರತಮ್ಯ ಮಾಡುತ್ತಿರುವುದಲ್ಲದೆ, ಮಹಿಳೆಯರನ್ನು ಕೇವಲ ಪೂರಕ ಆದಾಯ ತರುವವರೆಂದು ಪರಿಗಣಿಸಲಾಗಿದೆ. ಆದರೆ, ಬಹುತೇಕ ಕುಟುಂಬಗಳಲ್ಲಿ ಈ ಗಾರ್ಮೆಂಟ್ಸ್ ನೌಕರರೇ ಮನೆಗಳನ್ನು ನಡೆಸುತ್ತಿದ್ದಾರೆ,'' ಎಂದು ಗಾರ್ಮೆಂಟ್ಸ್ ಮತ್ತು ಟೆಕ್ಸ್‌ಟೈಲ್ಸ್ ವರ್ಕರ್ಸ್ ಯೂನಿಯನ್ (ಜಿಎಟಿಬ್ಲ್ಯೂಯು)ನ ಅಧ್ಯಕ್ಷೆ ಎಚ್.ಆರ್. ಪ್ರತಿಭಾ ಹೇಳಿದರು.

ಅಲ್ಲದೆ, ''ಸರಕಾರದ ಈ ತಾರತಮ್ಯದಿಂದ 5 ಲಕ್ಷಕ್ಕೂ ಅಧಿಕ ಗಾರ್ಮೆಂಟ್ಸ್ ನೌಕರರು ಹಾಗೂ ಅವರನ್ನೇ ನಂಬಿ ಬದುಕುತ್ತಿರುವವರಿಗೆ ಅನ್ಯಾಯವಾಗಿದೆ. ಸದ್ಯ ಕನಿಷ್ಠ ವೇತನ 18 ಸಾವಿರ ರೂ. ಇದ್ದರೂ 13 ಸಾವಿರ ರೂ. ಮಾತ್ರ ನೀಡಲಾಗುತ್ತಿದೆ. ಸರಕಾರ ಕೂಡಲೇ ಗಾರ್ಮೆಂಟ್ಸ್ ನೌಕರರಿಗೂ ಕನಿಷ್ಠ ವೇತನ ನಿಗದಿಪಡಿಸಿ ಸಂಕಷ್ಟದಲ್ಲಿರುವವರಿಗೆ ನೆರವಾಗಬೇಕು,'' ಎಂದು ಅವರು ಆಗ್ರಹಿಸಿದ್ದಾರೆ.

ಹೈಕೋರ್ಟ್ ಮೊರೆ ಹೋಗಲು ಚಿಂತನೆ

ಈ ಮಧ್ಯೆ, ನಿಗದಿತ ಉದ್ಯೋಗಗಳಿಗೆ ಕನಿಷ್ಠ ವೇತನದ ಅಂತಿಮ ಅಧಿಸೂಚನೆ ಪ್ರಶ್ನಿಸಿ ಉದ್ಯೋಗದಾತರು ನ್ಯಾಯಾಲಯದ ಮೊರೆ ಹೋಗುವ ಸಾಧ್ಯತೆಯಿದೆ. ಅಂತಿಮ ಅಧಿಸೂಚನೆಯು ಕರ್ನಾಟಕ ಹೈಕೋರ್ಟ್ ನಿರ್ದೇಶನ ಮತ್ತು ಕಾನೂನಿನ ನಿಯಮವನ್ನು ಉಲ್ಲಂಘಿಸಿದೆ ಎಂದು ಹೇಳಿರುವ ಕರ್ನಾಟಕ ಉದ್ಯೋಗದಾತರ ಸಂಘ, ಹೈಕೋರ್ಟ್ ಮೊರೆ ಹೋಗಲು ಚಿಂತಿಸುತ್ತಿದೆ.

''ಮೊದಲಿಗೆ ಹೈಕೋರ್ಟ್‌ನ ಮುಂದೆ ಕರಡು ಅಧಿಸೂಚನೆ ಪ್ರಶ್ನಿಸಲಾಗಿತ್ತು. ನ್ಯಾಯಾಲಯ ಅಂತಿಮ ಅಧಿಸೂಚನೆ ಹೊರಡಿಸದಂತೆ ತಡೆ ನೀಡಿದೆ. ಅದನ್ನು ಧಿಕ್ಕರಿಸಿ ಅಧಿಸೂಚನೆ ಹೊರಡಿಸಲಾಗಿದೆ. ಎರಡನೆಯದಾಗಿ ಹೊಸ ವೇತನ ಸಂಹಿತೆ ಜಾರಿಗೆ ಬಂದಿರುವುದರಿಂದ ಕನಿಷ್ಠ ವೇತನ ನಿಯಮ ಈಗ ಜಾರಿಯಲ್ಲಿಲ್ಲ, ಆದರೂ ಹಳೆಯ ನಿಯಮದಡಿ ವೇತನ ನಿಗದಿಪಡಿಸಿರುವುದು ಕಾನೂನು ಬಾಹಿರ. ಮೂರನೇಯದಾಗಿ ವೇತನ ಹೆಚ್ಚಳಕ್ಕೆ ವಿರೋಧವಿಲ್ಲ, ಆದರೆ, ಏಕಾಏಕಿ ಶೇ.60ರಷ್ಟು ಹೆಚ್ಚಳ ಮಾಡುವುದರಿಂದ ಉದ್ಯಮಗಳಿಗೆ ಭಾರಿ ಹೊಡೆತ ಬೀಳಲಿದೆ. ಹಾಗಾಗಿ, ಮುಖ್ಯಮಂತ್ರಿಗೆ ಅಧಿಸೂಚನೆ ವಾಪಸ್ ಪಡೆಯಲು ಮನವಿ ಸಲ್ಲಿಸಲಾಗಿದೆ,'' ಎಂದು ಸಂಘದ ಅಧ್ಯಕ್ಷ ಬಿ.ಸಿ. ಪ್ರಭಾಕರ್ ತಿಳಿಸಿದರು.

ಪ್ರಶ್ನೆ: ಆರೋಗ್ಯ ಸಮಸ್ಯೆಯಿಂದ ಮುಕ್ತಿ ಯಾವಾಗ ಗುರೂಜಿ?

ಜನ್ಮ ದಿನಾಂಕ: 17.03.1977 **ನಕ್ಷತ್ರ:** ಉತ್ತರಾಷಾಢ

ಪರಿಹಾರ: ಕುಲದೇವರು ಹಾಗೂ ಕುಲಗುರುಗಳನ್ನು ಪೂಜಿಸಿ. ನಿಮ್ಮ ಇಚ್ಛೆಯು ಪೂರೈಸುತ್ತದೆ. ಶರೀರ ಸ್ವಸ್ಥವಾಗುವುದು. ಇಷ್ಟ ಕಾರ್ಯವೂ ಸಿದ್ಧಿಸುವುದು. ಧೃತಿಗೆಡಬೇಡಿ. ಬೆನ್ನ ಹಿಂದೆ ದೇವರು ಇದ್ದಾನೆ. ಲಕ್ಷ್ಮೀನರಸಿಂಹ ಅಷ್ಟೋತ್ತರ ಪಾರಾಯಣ ಮಾಡಿ.

ನೀವೂ ಪ್ರಶ್ನೆ ಕೇಳಬಹುದು...
ವಾಟ್ಸ್ಆ್ಯಪ್ ಸಂಖ್ಯೆ: 6366422240

ಪಂಚಾಂಗ 26-05-2026

ಪರಾಭವನಾಮ ಸಂವತ್ಸರ
ಅಯನ: ಉತ್ತರಾಯಣ.
ಋತು: ಗ್ರೀಷ್ಮ. **ಮಾಸ:** ಅಧಿಕ ಜ್ಯೇಷ್ಠ. **ಪಕ್ಷ:** ಶುಕ್ಲ. **ಮಳೆ ನಕ್ಷತ್ರ:** ರೋಹಿಣಿ. **ನಿತ್ಯನಕ್ಷತ್ರ:** ಉತ್ತರಾ.
ತಿಥಿ: ಏಕಾದಶಿ. **ಯೋಗ:** ಸಿದ್ಧಿ.
ಕರಣ: ವಣಿಕ್.
ವಾರ: ಮಂಗಳವಾರ.

ರಾಹು ಕಾಲ: ಮ. 3.00 - 4.30
ಗುಳಿಕ ಕಾಲ: ಮ. 12.00-1.30
ಯಮಗಂಡ ಕಾಲ: ಬೆ. 9.00-10.30
ಸೂರ್ಯ ಉದಯ: ಬೆ. 5.53
ಸೂರ್ಯ ಅಸ್ತ: ಸಂ. 6.39

ಹೋಟೆಲ್ ತಿಂಡಿ, ಊಟದ ದರ ಹೆಚ್ಚಿಸಲು ಚಿಂತನೆ

■ ಕಾರ್ಮಿಕರ ಕನಿಷ್ಠ ವೇತನ ಶೇ.60 ಹೆಚ್ಚಿಸಿದ್ದೇ ಇದಕ್ಕೆ ಕಾರಣ

ಬೆಂಗಳೂರು: ಒಂದೆಡೆ ತೈಲ ಬೆಲೆ ಏರಿಕೆ, ಮತ್ತೊಂದೆಡೆ ಕಾರ್ಮಿಕರ ಕನಿಷ್ಠ ವೇತನ ಹೆಚ್ಚಳದ ಹಿನ್ನೆಲೆಯಲ್ಲಿ ಹೋಟೆಲ್‌ಗಳಲ್ಲಿ ತಿಂಡಿ- ಊಟದ ದರ ಹೆಚ್ಚಿಸಲು ರಾಜ್ಯ ಹೋಟೆಲ್ ಮಾಲೀಕರ ಸಂಘ ಚಿಂತನೆ ನಡೆಸಿದೆ.

''ಕಾರ್ಮಿಕರ ಕನಿಷ್ಠ ವೇತನವನ್ನು ಒಮ್ಮೆಲೆ ಶೇ.60ರಷ್ಟು ಏರಿಸಿದರೆ ಹೋಟೆಲ್‌ಗಳಲ್ಲಿ ಊಟ, ತಿಂಡಿ ದರ ಒಂದೂವರೆಯಿಂದ ಎರಡು ಪಟ್ಟು ಹೆಚ್ಚಾಗುವುದು ಅನಿವಾರ್ಯ. ಈಗ ಸಾಮಾನ್ಯ ಹೋಟೆಲ್‌ಗಳಲ್ಲಿ ಪ್ಲೇಟ್ ಇಡ್ಲಿ ದರ 40-45 ರೂ. ಇದೆ. ಅದು 90 ರೂ.ಗೆ ಏರಿಕೆಯಾಗಲಿದೆ. 150 ರೂ. ಇರುವ ಊಟದ ದರ 250-300 ರೂ.ಗೆ ತಲುಪುವುದು ನಿಶ್ಚಿತ,'' ಎಂದು ರಾಜ್ಯ ಹೋಟೆಲ್ ಮಾಲೀಕರ ಸಂಘ ಎಚ್ಚರಿಕೆ ನೀಡಿದೆ.

''ಅಡುಗೆ ಅನಿಲ, ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯಿಂದ ತತ್ತರಿಸಿ ಹೋಗಿದ್ದೇವೆ. ಈಗ ಕಾರ್ಮಿಕ ಇಲಾಖೆಯು ಕಾರ್ಮಿಕರ ಕನಿಷ್ಠ ವೇತನವನ್ನು ಶೇ.60ರಷ್ಟು ಹೆಚ್ಚಿಸಿರುವುದು ಬರಸಿಡಿಲು ಬಡಿದಂತಾಗಿದೆ. ಕಾರ್ಮಿಕರಿಗೆ ಪರಿಷ್ಕೃತ ವೇತನ ಜಾರಿಯಾದರೆ 23 ಸಾವಿರ ರೂ. ಕೊಡಬೇಕು. ಅದರ ಜತೆಗೆ ಅವರಿಗೆ ಪಿಎಫ್, ಊಟ, ತಿಂಡಿ, ವಸತಿ ವ್ಯವಸ್ಥೆ ಸೇರಿದಂತೆ ಸುಮಾರು 30-35 ಸಾವಿರ ರೂ.ವರೆಗೆ ವೆಚ್ಚತಗುಲಲಿದೆ. ಪ್ರತಿ ಹೋಟೆಲ್‌ನಲ್ಲಿ 5-6 ಕಾರ್ಮಿಕರು ಇರುತ್ತಾರೆ. ಇಷ್ಟು ವೇತನ ಕೊಟ್ಟರೆ ನಂತರ ಹೋಟೆಲ್ ಕಟ್ಟಡದ ಬಾಡಿಗೆ, ನೀರು, ವಿದ್ಯುತ್ ಬಿಲ್, ತೆರಿಗೆ ಪಾವತಿ ಇತ್ಯಾದಿಗಳಿರುತ್ತವೆ. ಇದರ ನಡುವೆ ಹೋಟೆಲ್ ನಡೆಸುವುದು ಹೇಗೆ? ಹೀಗಾಗಿ, ಸರಕಾರ ಕಾರ್ಮಿಕರ ಕನಿಷ್ಠ ವೇತನವನ್ನು ಶೇ.25ರಷ್ಟು ಹೆಚ್ಚಳ ಮಾಡಲಿ. ಇಲ್ಲದಿದ್ದರೆ ಬರುವ ದಿನಗಳಲ್ಲಿ ಹೋಟೆಲ್‌ಗಳಲ್ಲಿ ತಿಂಡಿ-ಊಟದ ಬೆಲೆಗಳು ಜನ ಊಹಿಸಲಾರಷ್ಟು ಎತ್ತರಕ್ಕೆ ಜಿಗಿಯುತ್ತವೆ,'' ಎಂದು ಕರ್ನಾಟಕ ರಾಜ್ಯ ಹೋಟೆಲುಗಳ ಸಂಘದ ಅಧ್ಯಕ್ಷ ಜಿ.ಕೆ. ಶೆಟ್ಟಿ ಸರಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

''ಕಾರ್ಮಿಕರ ಕನಿಷ್ಠ ವೇತನವನ್ನು ಇಳಿಕೆ ಮಾಡದಿದ್ದರೆ ಹೋಟೆಲ್‌ಗಳಲ್ಲಿ ತಿಂಡಿ, ಊಟದ ದರಗಳನ್ನು ಏರಿಸುವುದು ಮತ್ತೆ ಅನಿವಾರ್ಯವಾಗುತ್ತದೆ,'' ಎಂದು ಬೃಹತ್ ಬೆಂಗಳೂರು ಮಹಾನಗರ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಪಿ.ಸಿ. ರಾವ್ ತಿಳಿಸಿದರು.

50th Birthday
May your 50th Year be just the start of a fabulous journey . Wishing you a golden 50th filled with good health joy and prosperity
Best Wishes From
S. R. Prasad, Veena, Yogish, Aaditya, Nirmala. P and Kusuma R. Prasad
Smt. Chethana. R. Prasad.

108 ಕೇಂದ್ರೀಕೃತ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್‌ಗೆ ಸಿಎಂ ಚಾಲನೆ

ಆಂಬ್ಯುಲೆನ್ಸ್ ಸೇವೆ ಮತ್ತಷ್ಟು ಸುಧಾರಣೆ

■ **ವಿಕ ಸುದ್ದಿಲೋಕ** ಬೆಂಗಳೂರು

ಗೋಲ್ಡನ್ ಅವರ್‌ನೊಳಗೆ ರೋಗಿಗೆ ಚಿಕಿತ್ಸೆ ಲಭಿಸುವಂತೆ ಆರೋಗ್ಯ ಕವಚ ಆಂಬ್ಯುಲೆನ್ಸ್‌ಗಳು ಪರಿಣಾಮಕಾರಿಯಾಗಿ ಕೆಲಸ ಮಾಡಲು ದೇಶದಲ್ಲೇ ಮೊದಲ ಬಾರಿಗೆ ಆರಂಭಿಸಿರುವ ಕೇಂದ್ರೀಕೃತ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಚಾಲನೆ ನೀಡಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ '108 ಆರೋಗ್ಯ ಕವಚ ಕೇಂದ್ರೀಕೃತ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್' ಉದ್ಘಾಟಿಸಿ ಮಾತನಾಡಿದ ಅವರು, ''ಅಪಘಾತ, ಹೆರಿಗೆ, ಹೃದಯಾಘಾತ ಸೇರಿ ಗಂಭೀರ, ಕ್ಲಿಷ್ಟ ಆರೋಗ್ಯ ಪರಿಸ್ಥಿತಿ ಎದುರಿಸುವವರಿಗೆ ತಕ್ಷಣ ಚಿಕಿತ್ಸೆ ದೊರೆಯಬೇಕು. ಈ ನಿಟ್ಟಿನಲ್ಲಿ ರಾಜ್ಯದಲ್ಲಿ ಸುಮಾರು 18 ವರ್ಷಗಳಿಂದ ಇರುವ 108 ಆಂಬ್ಯುಲೆನ್ಸ್ ಸೇವೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿಸಲು ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್ ನೆರವಾಗಲಿದೆ. ಕಳೆದ ಬಜೆಟ್ ಘೋಷಣೆಯಂತೆ ಈ ವ್ಯವಸ್ಥೆ ರೂಪಿಸಲಾಗಿದೆ,'' ಎಂದರು.

''ಗೋಲ್ಡನ್ ಅವರ್‌ನಲ್ಲಿ ಚಿಕಿತ್ಸೆ ದೊರೆತ ಶೇ.80ರಷ್ಟು ಜನರು ಬದುಕುಳಿದಿದ್ದಾರೆ. ಜೀವನ್ಮರಣದ ಹೋರಾಟದಲ್ಲಿ ತುರ್ತು ಚಿಕಿತ್ಸೆ ಹೆಚ್ಚಿನ ಮಹತ್ವ ಹೊಂದಿದೆ. ಈ ಹಿನ್ನೆಲೆಯಲ್ಲಿ ಸಾಮಾನ್ಯ ಜನರಿಗೆ ಗುಣಮಟ್ಟದ ಆರೋಗ್ಯ ಸೌಲಭ್ಯ ನೀಡಲು ಸರಕಾರ ಬದ್ಧವಾಗಿದೆ,'' ಎಂದು ಹೇಳಿದರು.

ಇನ್ನಷ್ಟು ಸುಸಜ್ಜಿತ: ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ''108 ಆಂಬ್ಯುಲೆನ್ಸ್ ಸೇವೆಯನ್ನು ಖಾಸಗಿಯವರಿಗೆ ವಹಿಸುವ ಬದಲು ಸರಕಾರವೇ ನಿರ್ವಹಿಸಲು ನಿರ್ಧರಿಸಿ ಅತ್ಯಾಧುನಿಕ ವ್ಯವಸ್ಥೆ ಅಳವಡಿಸಲು ತೀರ್ಮಾನಿಸಲಾಗಿದೆ. ಈ ಸಂಬಂಧ ಸಿಂಗಾಪುರ ಸೇರಿ ಹಲವೆಡೆಯ ಮಾದರಿ ಬಗ್ಗೆ ಅಧ್ಯಯನ ನಡೆಸಿ ಆರೋಗ್ಯ ಕವಚವನ್ನು ಇನ್ನಷ್ಟು ಸುಸಜ್ಜಿತಗೊಳಿಸಲು ಕಾರ್ಯೋನ್ಮುಖರಾದೆವು. ಮೊದಲು ಚಾಮರಾಜನಗರ, ಬಳಿಕ ಮೈಸೂರಿನಲ್ಲಿ ಇದನ್ನು ಪ್ರಾಯೋಗಿಕವಾಗಿ ಜಾರಿಗೆ ತಂದು ಎದುರಾದ ಸವಾಲು, ತಪ್ಪುಗಳನ್ನು ಸರಿಪಡಿಸಿಕೊಂಡು ರಾಜ್ಯಾದ್ಯಂತ ವಿಸ್ತರಿಸಲಾಗಿದೆ,'' ಎಂದರು.

''ಸುಧಾರಿತ ವ್ಯವಸ್ಥೆಯಲ್ಲಿ ಆಂಬ್ಯುಲೆನ್ಸ್ ಟ್ರ್ಯಾಕಿಂಗ್ ವ್ಯವಸ್ಥೆ ಇದೆ. ರಾಜ್ಯದ ಎಲ್ಲ ಆಂಬ್ಯುಲೆನ್ಸ್‌ಗಳು ಇದರಡಿ ಕೆಲಸ ಮಾಡುತ್ತವೆ. ಟೆಲಿಮನಸ್, ಇ- ಸಂಜೀವಿನಿ, ಮಹಿಳಾ ಮತ್ತು ಮಕ್ಕಳ ಸಹಾಯವಾಣಿಯನ್ನು ಇದರೊಂದಿಗೆ ಜೋಡಿಸಲಾಗಿದ್ದು, ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ಇದೊಂದು ಮಹತ್ವದ ಹೆಜ್ಜೆಯಾಗಿದೆ,'' ಎಂದು ಹೇಳಿದರು.

ವಿಧಾನ ಪರಿಷತ್‌ನ ಮುಖ್ಯ ಸಚೇತಕ ಸಲೀಂ ಅಹ್ಮದ್, ಶಾಸಕರಾದ ಎಸ್. ಸುರೇಶ್‌ಕುಮಾರ್, ಪ್ರಿಯಾಕೃಷ್ಣ ಉಪಸ್ಥಿತರಿದ್ದರು.



108 ಕೇಂದ್ರೀಕೃತ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್ ಲೋಕಾರ್ಪಣೆಗೊಳಿಸಿದ ಬಳಿಕ ಸಿಎಂ ಸಿದ್ದರಾಮಯ್ಯ ಅವರು ಅದರ ಕಾರ್ಯವೈಖರಿ ವೀಕ್ಷಿಸಿದರು.

ಕಾರ್ಯ ನಿರ್ವಹಣೆ ಹೇಗೆ?

ರಾಜ್ಯದಲ್ಲಿ 770ರಷ್ಟು 108 ಸೇರಿ ಸರಕಾರಿ ಆಸ್ಪತ್ರೆಗಳ ಒಂದು ಸಾವಿರ ಆಂಬ್ಯುಲೆನ್ಸ್‌ಗಳಿವೆ. ಕಂಟ್ರೋಲ್ ಸೆಂಟರ್‌ಗೆ ಪ್ರತಿನಿತ್ಯ 24 ಗಂಟೆಗಳಲ್ಲಿ ಸರಿಸುಮಾರು 8,500ಕ್ಕೂ ಅಧಿಕ ಕರೆಗಳು ಬರುತ್ತಿವೆ. ಇವುಗಳ ನಿರ್ವಹಣೆಗೆ 50 ಸೀಟರ್‌ಗಳ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್ ರೂಪಿಸಲಾಗಿದೆ. ಈ ಹಿಂದೆ 108ಗೆ ಕರೆ ಮಾಡಿದಲ್ಲಿ ನಿಖರ ವಿಳಾಸ, ಕರೆ ಮಾಡಿದವರ ವಿವರ ತಿಳಿಯುತ್ತಿರಲಿಲ್ಲ. ಜತೆಗೆ, ರಿಯಲ್ ಟೈಂನಲ್ಲಿ ಸೇವೆ ಒದಗಿಸಲು ಕೆಲ ಸಮಸ್ಯೆಗಳಿದ್ದವು. ಈಗ ಸಂಪೂರ್ಣ ವಿವರ ಸೆಂಟರ್‌ನ ಸ್ಕ್ರೀನಲ್ಲಿ ಲಭ್ಯವಾಗುತ್ತದೆ. ಅತ್ಯಂತ ಗೌಪ್ಯವಾಗಿ ಈ ವಿವರಗಳು ಇರಲಿವೆ.

ಜತೆಗೆ, ಎಲ್ಲ 108 ಆಂಬ್ಯುಲೆನ್ಸ್‌ಗಳಿಗೆ ಜಿಪಿಎಸ್ ಅಳವಡಿಸಲಾಗಿದ್ದು, ಎಂಡಿಟಿ ಟ್ಯಾಬ್ಲೆಟ್ ಒದಗಿಸಲಾಗಿದೆ. ಸೆಂಟರ್ ಸಿಬ್ಬಂದಿ ರೋಗಿಯ ವಿವರ ಪಡೆದು ಅವರ ಸನಿಹದ 108ಗೆ ಸಂದೇಶ ರವಾನಿಸುತ್ತಾರೆ. ಎಂಡಿಟಿ ಮೂಲಕ ಸಂದೇಶ ಸ್ವೀಕರಿಸುವ ಆಂಬ್ಯುಲೆನ್ಸ್‌ಗಳು ಘಟನಾ ಸ್ಥಳಕ್ಕೆ ತೆರಳಿ ರೋಗಿಯನ್ನು ಸಮೀಪದ ಸರಕಾರಿ ಆಸ್ಪತ್ರೆಗೆ (ರೋಗಿ ಬಯಸಿದಲ್ಲಿ ಖಾಸಗಿ ಆಸ್ಪತ್ರೆ) ಕರೆದೊಯ್ಯುತ್ತಾರೆ. ಈ ಸಂದರ್ಭದಲ್ಲಿ ವಾಹನದ ಪ್ರತಿ ಚಲನೆ ಕಮಾಂಡ್ ಸೆಂಟರ್‌ನಲ್ಲಿ ನೋಡಬಹುದು. ಆಸ್ಪತ್ರೆಯ ವಿವರ ಸೇರಿ ಅಗತ್ಯ ಸೂಚನೆ ನೀಡಲು ಕೂಡ ಸಾಧ್ಯವಾಗಲಿದೆ. ಆಬ್ಯುಲೆನ್ಸ್‌ನಲ್ಲಿರುವ ವೈದ್ಯಕೀಯ ಸಿಬ್ಬಂದಿ ಬಯಸಿದಲ್ಲಿ ಹೆಚ್ಚಿನ ನೆರವನ್ನು ತಜ್ಞ ವೈದ್ಯರಿಂದ ಪಡೆಯುವ ಅವಕಾಶ ಇದೆ.

ಎಸ್‌ಐ ಸೇರಿ ಆರು ಪೊಲೀಸರ ಅಮಾನತು

■ **ವಿಕ ಸುದ್ದಿಲೋಕ** ರಾಮನಗರ (ಬೆಂಗಳೂರು ದಕ್ಷಿಣ)

ಪ್ರಧಾನಿ ನರೇಂದ್ರ ಮೋದಿ ಅವರ ಬೆಂಗಳೂರು ಭೇಟಿಯ ವೇಳೆ ಉಂಟಾಗಿದ್ದ ಭದ್ರತಾ ಲೋಪದ ಬೆನ್ನಲ್ಲೇ ಈಗ ದೊಡ್ಡ ಮಟ್ಟದ ಶಿಸ್ತು ಕ್ರಮ ಕೈಗೊಳ್ಳಲಾಗಿದೆ. ಮೋದಿ ಅವರು ಸಂಚರಿಸಬೇಕಿದ್ದ ರಸ್ತೆಯ ಪಕ್ಕದಲ್ಲೇ ಸ್ಫೋಟಕಗಳು ಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯಲೋಪ ಆರೋಪದ ಮೇಲೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಸೇರಿದಂತೆ ಒಟ್ಟು ಆರು ಪೊಲೀಸ್ ಸಿಬ್ಬಂದಿಯನ್ನು ಅಮಾನತುಗೊಳಿಸಿ ಆದೇಶ ಹೊರಡಿಸಲಾಗಿದೆ.

ಪ್ರಧಾನಿ ಮೋದಿ ಸಾಗುವ ಮಾರ್ಗದಲ್ಲಿ ಸ್ಫೋಟಕ ಪತ್ತೆ ಪ್ರಕರಣ

ಬೆಂಗಳೂರು ದಕ್ಷಿಣ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ಆರ್. ಶ್ರೀನಿವಾಸ್ ಗೌಡ ಅವರ ಆದೇಶದ ಮೇರೆಗೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ದುರ್ಗೇಗೌಡ, ಸಹಾಯಕ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಶಂಕರ್ ಮತ್ತು ನಾಲ್ವರು ಕಾನ್‌ಸ್ಟೆಬಲ್‌ಗಳನ್ನು ಅಮಾನತುಗೊಳಿಸಲಾಗಿದೆ.

ಮೇ 10ರಂದು ಕನಕಪುರ ರಸ್ತೆಯ ಸಮೀಪದ ಅರಣ್ಯ ಪ್ರದೇಶದ ಪಕ್ಕದಲ್ಲಿರುವ ಮಣ್ಣಿನ ರಸ್ತೆಯಿಂದ 20 ಅಡಿ ದೂರದಲ್ಲಿ ಎರಡು ಜಿಲೆಟಿನ್ ಕಡ್ಡಿಗಳು, ಆರು ಧೂಪದ್ರವ್ಯ ಕಡ್ಡಿಗಳು, ಒಂದು ಬೆಂಕಿಕಡ್ಡಿ ಪೆಟ್ಟಿಗೆ, ಸೆಲ್ಲೋಫೇನ್ ಟೇಪ್‌ಗಳು, ಒಂದು ಬ್ಯಾಟರಿ ಪ್ಯಾಕ್, ತಂತಿಗಳು ಮತ್ತು ಸರ್ಕಿಟ್ ಬೋರ್ಡ್‌ನಂತೆ ಕಾಣುವ ವಸ್ತುಗಳು ಕಂಡುಬಂದಿದ್ದವು.

ಆರ್ಟ್ ಆಫ್ ಲಿವಿಂಗ್‌ನ 45ನೇ ವರ್ಷಾಚರಣೆ ಮತ್ತು ಅದರ ಸಂಸ್ಥಾಪಕ ಶ್ರೀಶ್ರೀ ರವಿಶಂಕರ್ ಗುರೂಜಿ ಅವರ 70ನೇ ಹುಟ್ಟುಹಬ್ಬದ ಆಚರಣೆಯಲ್ಲಿ ಭಾಗವಹಿಸಲು ಪ್ರಧಾನಿಯವರು ಬೆಂಗಳೂರಿಗೆ ಭೇಟಿ ಕೊಟ್ಟಿದ್ದರು. ಪ್ರಧಾನಿ ಭೇಟಿಗೆ ಸುಮಾರು ಒಂದೂವರೆ ಗಂಟೆ ಮೊದಲು ಸ್ಫೋಟಕಗಳು ಪತ್ತೆಯಾಗಿದ್ದವು.

ಚಾರ್ಜ್ ತನಕ ನಿರೀಕ್ಷಣಾ ಜಾಮೀನಿಗೆ ಬೆಲೆ

ಬೆಂಗಳೂರು: ಆರೋಪಿಯ ವಿರುದ್ಧ ನಿರೀಕ್ಷಣಾ ಜಾಮೀನು ಒಮ್ಮೆ ಮಂಜೂರಾದರೆ ಅದು ಆರೋಪಪಟ್ಟಿ ಸಲ್ಲಿಕೆಯ ಬಳಿಕವೂ ಮುಂದುವರಿಯಲಿದ್ದು, ಮಂಜೂರಾದ ನಿರೀಕ್ಷಣಾ ಜಾಮೀನು ರದ್ದಾಗುವುದಕ್ಕೂ ಮುನ್ನ ನ್ಯಾಯಾಂಗ ಬಂಧನಕ್ಕೊಳಪಡಿಸಲು ಅವಕಾಶವಿಲ್ಲ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ನಿರೀಕ್ಷಣಾ ಜಾಮೀನಿದ್ದರೂ, ಬಂಧನಕ್ಕೆ ಆದೇಶಿಸಿದ್ದ ವಿಚಾರಣಾ ನ್ಯಾಯಾಲಯದ ಆದೇಶ ಪ್ರಶ್ನಿಸಿ ಆರೋಪಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾ. ವಿಜಯ್‌ಕುಮಾರ್ ಎ. ಪಾಟೀಲ್ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ.

ಅಲ್ಲದೆ, ''ಕ್ರಿಮಿನಲ್ ಪ್ರಕರಣವೊಂದರಲ್ಲಿ ಒಮ್ಮೆ ಮಂಜೂರಾದ ನಿರೀಕ್ಷಣಾ ಜಾಮೀನು, ಪ್ರಕರಣದ ತನಿಖೆ ಮುಗಿದು ಆರೋಪಪಟ್ಟಿ ಸಲ್ಲಿಕೆಯಾದ ಬಳಿಕವೂ ಮುಂದುವರಿಯಲಿದೆ. ಜತೆಗೆ, ನಿರೀಕ್ಷಣಾ ಜಾಮೀನು ಮಂಜೂರಾಗಿದ್ದರೂ ರಾಜ್ಯ ಸರಕಾರ ಇಲ್ಲವೇ, ಸಂತ್ರಸ್ತೆಯ ಪರ ನಿರೀಕ್ಷಣಾ ಜಾಮೀನು ರದ್ದುಗೊಳಿಸುವಂತೆ ಕೋರಿ ಅರ್ಜಿ ಸಲ್ಲಿಸದಿದ್ದರೂ, ಆರೋಪಿಯನ್ನು ವಶಕ್ಕೆ ಪಡೆದುಕೊಳ್ಳುವಂತೆ ನಿರ್ದೇಶನ ನೀಡಿರುವ ವಿಚಾರಣಾ ನ್ಯಾಯಾಲಯದ ಕ್ರಮ ಕಾನೂನುಬಾಹಿರ,'' ಎಂದು ಆದೇಶಿಸಿದೆ.

''ಆರೋಪಿಗೆ ಈಗಾಗಲೇ ಷರತ್ತುಬದ್ಧ ನಿರೀಕ್ಷಣಾ ಜಾಮೀನು ಮಂಜೂರಾಗಿದೆ. ಆದರೆ, ಈವರೆಗೂ ಜಾಮೀನಿನ ಷರತ್ತುಗಳನ್ನು ಉಲ್ಲಂಘಿಸಿರುವ ಸಂಬಂಧ ಯಾವುದೇ ಸಾಕ್ಷ್ಯಾಧಾರಗಳಿಲ್ಲ. ಅಲ್ಲದೆ, ರಾಜ್ಯ ಸರಕಾರ ಅಥವಾ ಸಂತ್ರಸ್ತೆಯ ಪರ ಜಾಮೀನು ರದ್ದುಪಡಿಸುವ ಅರ್ಜಿ ಸಲ್ಲಿಕೆಯಾಗಿಲ್ಲ. ಆದ್ದರಿಂದ ನಿರೀಕ್ಷಣಾ ಜಾಮೀನು ರದ್ದುಗೊಳಿಸದೆ ಆರೋಪಿಯನ್ನು ಬಂಧನಕ್ಕೆ ಕಳುಹಿಸಿರುವುದು ಕಾನೂನುಬಾಹಿರ,'' ಎಂದು ತಿಳಿಸಿತು.

ಅಲ್ಲದೆ, ವಿಶೇಷ ನ್ಯಾಯಾಲಯದ ಆದೇಶವನ್ನು ರದ್ದುಪಡಿಸಿದ್ದು, ಆರೋಪಿಯನ್ನು ಬಿಡುಗಡೆ ಮಾಡಬೇಕು ಎಂದು ಆದೇಶಿಸಿರುವ ನ್ಯಾಯಾಲಯ, ರೆಗ್ಯೂಲರ್ ಜಾಮೀನು ಅರ್ಜಿಯನ್ನು ಕಾನೂನು ಪ್ರಕಾರ ಮರುಪರಿಶೀಲಿಸಬೇಕೆಂಬ ಅರ್ಜಿಯನ್ನು ಪುರಸ್ಕರಿಸಿದೆ.

ಮದ್ಯೋದ್ಯಮ ಪ್ರಮುಖರ ಸಮಾವೇಶದಲ್ಲಿ ಸಚಿವ ತಿಮ್ಮಾಪುರ ಭರವಸೆ

ಸುಸ್ಥಿರ ಮದ್ಯ ಉತ್ಪಾದನೆಗೆ ಬೆಂಬಲ

■ **ವಿಕ ಸುದ್ದಿಲೋಕ** ಬೆಂಗಳೂರು

ಕರ್ನಾಟಕವು ಮದ್ಯ, ಆಲ್ಕೋಹಾಲ್ ಉತ್ಪಾದನೆಯ ಹೊಸತನದ ಹಬ್ ಆಗಿ ತನ್ನ ಸ್ಥಾನವನ್ನು ಮತ್ತಷ್ಟು ಭದ್ರಪಡಿಸಿಕೊಂಡಿದೆ. ಪರಿಸರಕ್ಕೆ ಪೂರಕ (ಸುಸ್ಥಿರ) ಬೆಳವಣಿಗೆ, ದೇಶೀಯ ಉತ್ಪಾದನೆ ಮತ್ತು ಬೆಂಗಳೂರಿನಿಂದ ಹೊರಗೆ ಬ್ರೀವರಿ ಪರಿಸರ ವ್ಯವಸ್ಥೆಯ ವಿಸ್ತರಣೆಗೆ ರಾಜ್ಯ ಸರಕಾರ ಸಂಪೂರ್ಣ ಬೆಂಬಲ ಘೋಷಿಸಿದೆ.

ನಗರದಲ್ಲಿ ಸೋಮವಾರ ನಡೆದ ಮದ್ಯೋದ್ಯಮದ ಪ್ರಮುಖರ ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿದ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ, ''ವ್ಯಾಪಾರ ವಹಿವಾಟು ಸುಲಭಗೊಳಿಸಲು ಮತ್ತು ರಾಜ್ಯದ ಮದ್ಯ ಉತ್ಪಾದನಾ ವ್ಯವಸ್ಥೆಯನ್ನು ಬಲಪಡಿಸಲು ಕರ್ನಾಟಕ ಸರಕಾರವು ಕಳೆದ ಒಂದು ವರ್ಷದಲ್ಲಿ ಮಹತ್ವದ ಅಬಕಾರಿ ಮತ್ತು ನಿಯಂತ್ರಕ ಸುಧಾರಣೆಗಳನ್ನು ತಂದಿದೆ,'' ಎಂದು ತಿಳಿಸಿದರು.

''ಲೈಸೆನ್ಸ್ ಪ್ರಕ್ರಿಯೆ ಸರಳೀಕರಣ, ಎಂಆರ್‌ಪಿ ಪರಿಷ್ಕರಣೆ ವ್ಯವಸ್ಥೆ, ಡಿಜಿಟಲ್ ಅನುಸರಣೆ ಹಾಗೂ ವಾರ್ಷಿಕ ಪರವಾನಗಿ ನವೀಕರಣ ಸುಧಾರಣೆಗಳ ಮೂಲಕ ನಾವು ಹೆಚ್ಚು ಪಾರದರ್ಶಕ ಮತ್ತು ತಂತ್ರಜ್ಞಾನ ಆಧಾರಿತ ವ್ಯವಸ್ಥೆಯನ್ನು ನಿರ್ಮಿಸುತ್ತಿದ್ದೇವೆ. ಉದ್ಯಮದ ದೀರ್ಘಾವಧಿ ಹೂಡಿಕೆಗೆ ಪೂರಕವಾಗಿ 2030ರವರೆಗೆ ನೀತಿ ಸ್ಥಿರತೆಯನ್ನು ಒದಗಿಸಲು ಸರಕಾರ ಬದ್ಧವಾಗಿದೆ,'' ಎಂದು ಭರವಸೆ ನೀಡಿದರು.

40,000 ಕೋಟಿ ರೂ. ಆದಾಯ: ''ಕರ್ನಾಟಕ ಸದ್ಯ ಅಬಕಾರಿ ಸುಂಕದ ಮೂಲಕ ವಾರ್ಷಿಕ ಸುಮಾರು 40,000 ಕೋಟಿ ರೂ. ಆದಾಯ ಗಳಿಸುತ್ತಿದೆ. ಇದು ರಾಜ್ಯದ ಆರ್ಥಿಕತೆಯಲ್ಲಿ ಈ ಕ್ಷೇತ್ರದ ಪ್ರಾಮುಖ್ಯತೆಯನ್ನು ತೋರಿಸುತ್ತದೆ. ಆದರೆ ನಮ್ಮ ಉದ್ದೇಶ ಕೇವಲ ಆದಾಯ ಗಳಿಕೆಯಲ್ಲ, ಸುಸ್ಥಿರ ಬೆಳವಣಿಗೆ ಮೂಲಕ ಗ್ರಾಹಕರು, ರೈತರು, ಉತ್ಪಾದಕರು ಮತ್ತು ಸ್ಥಳೀಯ ಸಮೂಹಕ್ಕೆ ಪ್ರಯೋಜನವಾಗುವ ಸಮತೋಲಿತ ವ್ಯವಸ್ಥೆಯನ್ನು ನಿರ್ಮಿಸುವುದಾಗಿದೆ,'' ಎಂದು ಸಚಿವರು ಸ್ಪಷ್ಟಪಡಿಸಿದರು.

''ಆಲ್ಕೋಹಾಲ್ ಪ್ರವಾಸೋದ್ಯಮ, ಸುಸ್ಥಿರ ಮದ್ಯ ತಯಾರಿಕೆ ಮೂಲಸೌಕರ್ಯ ಮತ್ತು ತಂತ್ರಜ್ಞಾನ ಆಧಾರಿತ ಉತ್ಪಾದನೆಯಲ್ಲಿ ರಾಜ್ಯಕ್ಕೆ ಅಪಾರ ಅವಕಾಶಗಳಿದ್ದು, ಪರಿಸರ ಸಂರಕ್ಷಣೆಗಾಗಿ ಬಾಟಲ್ ಮರುಬಳಕೆ ಹಾಗೂ ತ್ಯಾಜ್ಯ ನೀರಿನ ಸಂಸ್ಕರಣೆಗೆ ಉದ್ಯಮಗಳು ಆದ್ಯತೆ ನೀಡುವ ಅಗತ್ಯವಿದೆ,'' ಎಂದು ತಿಳಿಸಿದರು.

ಇಂಡಿಯನ್ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಶಿವಕುಮಾರ್ ಈಶ್ವರನ್ ಮಾತನಾಡಿ, ''ನೀರಿನ ಸಂರಕ್ಷಣೆ ಮತ್ತು ಇಂಧನ ದಕ್ಷತೆಯು ಈ ಉದ್ಯಮದ ಭವಿಷ್ಯವನ್ನು ನಿರ್ಧರಿಸಲಿವೆ. ಮದ್ಯದ ಉದ್ಯಮದ ಬೆಳವಣಿಗೆಯ ಲಾಭವು ನಮ್ಮ ಗ್ರಾಮೀಣ ಭಾಗಕ್ಕೂ ತಲುಪಬೇಕು. ಬ್ರೀವರಿಗಳಿಗೆ ಅಗತ್ಯವಿರುವ ಬಾರ್ಲಿ, ಧಾನ್ಯಗಳು ಮತ್ತು ಹಣ್ಣುಗಳನ್ನು ಹೊರಗಿನಿಂದ ತರಿಸುವ ಬದಲು ನಮ್ಮದೇ ರಾಜ್ಯದ ರೈತರಿಂದ ನೇರವಾಗಿ ಖರೀದಿಸಬೇಕು. ಇದರಿಂದ ಸ್ಥಳೀಯ ಪೂರೈಕೆ ಸರಪಳಿ ಬಲಗೊಳ್ಳುತ್ತದೆ,'' ಎಂದರು.

ಜಂಟಿ ಅಬಕಾರಿ ಆಯುಕ್ತರು, ಬ್ರೀವರ್‌ಗಳು, ಡಿಸ್ಟಿಲರಿಗಳ ಪ್ರತಿನಿಧಿಗಳು, ಪರಿಸರ ಸುಸ್ಥಿರತೆ ತಜ್ಞರು ಹಾಗೂ ತಂತ್ರಜ್ಞಾನ ಪೂರೈಕೆದಾರರು ಸಮಾವೇಶದಲ್ಲಿ ಭಾಗವಹಿಸಿದ್ದರು.

HITACHI

ಹಿಟಾಚಿ ಎನರ್ಜಿ ಇಂಡಿಯಾ ಲಿಮಿಟೆಡ್
ಸಿಐಎನ್ : L31904KA2019PLC121597
ನೋಂದಾಯಿತ ಕಛೇರಿ : 8ನೇ ಮಹಡಿ, ಬ್ರಿಗೇಡ್ ಓಪಸ್ 70/401, ಕೊಡಿಗೇಹಳ್ಳಿ ಮುಖ್ಯ ರಸ್ತೆ, ಬೆಂಗಳೂರು - 560092
ದೂರವಾಣಿ ಸಂಖ್ಯೆ: +91 80 6847 3700
ವೆಬ್ ಸೈಟ್ : www.hitachienergy.com/in
ಇ-ಮೇಲ್ : investors@hitachienergy.com

31/03/2026 ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ವರ್ಷಾಂತ್ಯಕ್ಕೆ ಲೆಕ್ಕಪರಿಶೋಧಿಸಿದ ಫಲಿತಾಂಶಗಳ ಸಾರಾಂಶ (₹ ಕೋಟಿಗಳಲ್ಲಿ)

	ವಿವರಗಳು	31/03/2026ರ ತ್ರೈಮಾಸಿಕಾಂತ್ಯಕ್ಕೆ	31/03/2026ರ ವರ್ಷಾಂತ್ಯಕ್ಕೆ	31/03/2025ರ ಅನುರೂಪವಾದ ತ್ರೈಮಾಸಿಕಾಂತ್ಯಕ್ಕೆ
1	ಕಾರ್ಯ ನಿರ್ವಹಣೆಗಳಿಂದ ಒಟ್ಟು ಆದಾಯ	2,754.05	8,147.71	1,883.68
2	ನಿವ್ವಳ ಲಾಭ / (ನಷ್ಟ) ಅವಧಿಗೆ (ತೆರಿಗೆಗೂ ಮುನ್ನ, ಅಸಾಮಾನ್ಯ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ಮುನ್ನ)	443.35	1,375.16	246.67
3	ನಿವ್ವಳ ಲಾಭ / (ನಷ್ಟ) ತೆರಿಗೆ ಅವಧಿಗೂ ಮುನ್ನ (ಅಸಾಮಾನ್ಯ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ನಂತರ)	443.35	1,320.92	246.67
4	ನಿವ್ವಳ ಲಾಭ / (ನಷ್ಟ) ತೆರಿಗೆ ನಂತರದ ಅವಧಿಗೆ (ಅಸಾಮಾನ್ಯ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ನಂತರ)	330.46	987.84	183.89
5	ಈ ಅವಧಿಗೆ ಒಟ್ಟು ಸಮಗ್ರ ಆದಾಯ [(ಲಾಭ / (ನಷ್ಟ) ಗಳನ್ನು ಒಳಗೊಂಡ (ತೆರಿಗೆ ನಂತರದ) ಈ ಅವಧಿಗೆ ಮತ್ತು ಇತರ ಸಮಗ್ರ ಆದಾಯ (ತೆರಿಗೆ ನಂತರ)]	329.15	988.59	183.09
6	ಈಕ್ವಿಟಿ ಷೇರು ಬಂಡವಾಳ (ಮುಖಬೆಲೆ ಪ್ರತಿ ಷೇರಿಗೆ ತಲಾ ₹2/- ರಂತೆ)	8.92	8.92	8.92
7	ಪ್ರತಿ ಷೇರಿನ ಗಳಿಕೆ (ತಲಾ ₹2/- ರಂತೆ)			
	1. ಮೂಲ	74.14	221.63	43.15
	2. ತಗ್ಗಿಸಿದ	74.14	221.63	43.15

ಸೂಚನೆ :
ಮೇಲ್ಕಂಡ ಫಲಿತಾಂಶಗಳ ಸಾರಾಂಶವು 2015ರ SEBI (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಾವಳಿಗಳ 33ರ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್ ಗಳಿಗೆ ಸಲ್ಲಿಸಲಾದ ತ್ರೈಮಾಸಿಕ ಹಣಕಾಸು ಫಲಿತಾಂಶಗಳ ವಿವರವಾದ ಸ್ವರೂಪದ ಸಾರವಾಗಿದೆ. ತ್ರೈಮಾಸಿಕ ಹಣಕಾಸು ಫಲಿತಾಂಶಗಳ ಸಂಪೂರ್ಣ ಸ್ವರೂಪವು ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳಲ್ಲಿ : www.nseindia.com ಮತ್ತು www.bseindia.com ಹಾಗೂ ಕಂಪನಿಯ ವೆಬ್‌ಸೈಟ್: www.hitachienergy.com/in/en/investor-relations/financial-results ನಲ್ಲಿ ಲಭ್ಯವಿದೆ. ಕೆಳಗೆ ನೀಡಲಾದ ತ್ವರಿತ ಪ್ರತಿಕ್ರಿಯೆ (QR) ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಇದನ್ನು ಪರಿಶೀಲಿಸಬಹುದು.

ಹಿಟಾಚಿ ಎನರ್ಜಿ ಇಂಡಿಯಾ ಲಿಮಿಟೆಡ್‌ಗಾಗಿ

ಸಹಿ/-
ನುಗುರಿ ವೇಣು
ವ್ಯವಸ್ಥಾಪಕ ನಿರ್ದೇಶಕರು ಮತ್ತು ಸಿಇಓ
ಡಿಐಎನ್ : 07032076

ಸ್ಥಳ : ಮುಂಬೈ
ದಿನಾಂಕ : ಮೇ 25, 2026

ಸಾರ್ವಜನಿಕರಿಗೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮನವಿ

ಸರಕಾರಿ ಶಾಲೆಗಳ ಅಭಿವೃದ್ಧಿಗೆ ಕೈಜೋಡಿಸಿ

■ **ವಿಕ ಸುದ್ದಿಲೋಕ** ಬೆಂಗಳೂರು

ಸರಕಾರಿ ಶಾಲೆಗಳ ಅಭಿವೃದ್ಧಿಗಾಗಿ ಕೇವಲ ಸರಕಾರದ ಅನುದಾನವನ್ನೇ ಕಾಯದೆ, ಸಾರ್ವಜನಿಕರು ಮುಕ್ತವಾಗಿ ಕೈಜೋಡಿಸಲು ಮುಂದೆ ಬರಬೇಕು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಕರೆ ನೀಡಿದರು.

ಸಮಗ್ರ ಶಿಕ್ಷಣ ಕರ್ನಾಟಕ ಕಚೇರಿಯಲ್ಲಿ ಸೋಮವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಶಿಕ್ಷಕರು, ಪ್ರಾಂಶುಪಾಲರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಎಸ್‌ಡಿಎಂಸಿ ಸದಸ್ಯರೊಂದಿಗೆ ಮಾತನಾಡಿದ ಅವರು, ಇಲಾಖೆಯ ಸಾಧನೆಗಳು ಮತ್ತು ಮುಂಬರುವ ಯೋಜನೆಗಳ ಕುರಿತು ಸಮಗ್ರ ಮಾಹಿತಿ ಹಂಚಿಕೊಂಡರು.

''ರಾಜ್ಯದಲ್ಲಿ 47 ಸಾವಿರಕ್ಕೂ ಹೆಚ್ಚು ಸರಕಾರಿ ಶಾಲೆಗಳಿವೆ. ಹಳೆಯ ವಿದ್ಯಾರ್ಥಿಗಳು, ಉದ್ಯಮಿಗಳು ಹಾಗೂ ದಾನಿಗಳು 'ನಮ್ಮ ಶಾಲೆ ನಮ್ಮ ಜವಾಬ್ದಾರಿ' ಯೋಜನೆಯಡಿ ಆರ್ಥಿಕ ನೆರವು ನೀಡುವ ಮೂಲಕ ಶಾಲೆಗಳ ಅಭಿವೃದ್ಧಿಗೆ ಕೈಜೋಡಿಸಬೇಕು,'' ಎಂದು ಮನವಿ ಮಾಡಿದರು.

ಬೆಂಗಳೂರಿನಲ್ಲಿ ಸಚಿವ ಮಧು ಬಂಗಾರಪ್ಪ ಅಧಿಕಾರಿಗಳ ಜತೆ ಸಭೆ ನಡೆಸಿದರು.

''ಈಗಾಗಲೇ ಹಲವು ದಾನಿಗಳು 500 ರೂ.ನಿಂದ ಲಕ್ಷಾಂತರ ರೂಪಾಯಿಗಳವರೆಗೆ ದೇಣಿಗೆ ನೀಡುತ್ತಿದ್ದಾರೆ. ಈ ಹಣವನ್ನು ಶಾಲೆಗಳಲ್ಲಿ ಸ್ಮಾರ್ಟ್ ಟಿವಿ, ಆರ್‌ಒ ಪ್ಲಾಂಟ್, ಶೌಚಾಲಯ ನಿರ್ಮಾಣ, ಫ್ಯಾನ್ ಮತ್ತು ಲ್ಯಾಬ್ ಉಪಕರಣಗಳನ್ನು ಒದಗಿಸಲು ಬಳಸಿಕೊಳ್ಳಲಾಗುತ್ತಿದೆ,'' ಎಂದರು.

ಹಬ್ಬದ ವಾತಾವರಣ ನಿರ್ಮಿಸಿ: ''ಹೊಸ ಶೈಕ್ಷಣಿಕ ವರ್ಷದ ಆರಂಭವನ್ನು ಹಬ್ಬದ ರೀತಿಯಲ್ಲಿ ಆಚರಿಸಲು ಸಿದ್ಧತೆ ಮಾಡಿಕೊಳ್ಳಬೇಕು. ಮೇ 29, 30 ಮತ್ತು 31ರಂದು ಶಾಲಾ ಆವರಣವನ್ನು ಸ್ವಚ್ಛಗೊಳಿಸಬೇಕು. ತಳಿರು ತೋರಣ ಕಟ್ಟಿ ಜೂ. 1ರಂದು ಶಾಲೆಗೆ ಬರುವ ಮಕ್ಕಳನ್ನು ಸ್ವಾಗತಿಸಬೇಕು. ದಾನಿಗಳು, ನಾಗರಿಕ ವೇದಿಕೆಗಳು, ಎಸ್‌ಡಿಎಂಸಿ ಹಾಗೂ ಹಳೆಯ ವಿದ್ಯಾರ್ಥಿಗಳು ಕೈಜೋಡಿಸಿ ಮಕ್ಕಳಿಗೆ ವಿಶೇಷ ಊಟದ ವ್ಯವಸ್ಥೆ ಮಾಡುವ ಮೂಲಕ ಅವರಲ್ಲಿ ಶಾಲೆಗೆ ಬರುವ ಉತ್ಸಾಹವನ್ನು ಹೆಚ್ಚಿಸಬೇಕು,'' ಎಂದು ಕರೆ ನೀಡಿದರು.

ದಾಖಲಾತಿ ಹೆಚ್ಚಿಸಿ: ''ಖಾಸಗಿ ಶಾಲೆಗಳಿಗಿಂತ ಅತ್ಯುತ್ತಮ ಹಾಗೂ ನುರಿತ ಶಿಕ್ಷಕರು ಸರಕಾರಿ ಶಾಲೆಗಳಲ್ಲಿದ್ದಾರೆ ಎಂಬುದನ್ನು ಪೋಷಕರಿಗೆ ಮನವರಿಕೆ ಮಾಡಿ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆ ಹೆಚ್ಚಿಸಬೇಕು. ಶಾಲೆಗಳಲ್ಲಿ ವಿಶೇಷ ತರಗತಿಗಳನ್ನು ನಡೆಸಲು ಅನುಕೂಲವಾಗುವಂತೆ ಸರಕಾರಿ ಶಾಲೆಗಳಿಗೆ ಉಚಿತ ವಿದ್ಯುತ್ ಕಲ್ಪಿಸಲಾಗಿದೆ. ಗುಣಮಟ್ಟದ ಶಿಕ್ಷಣದೊಂದಿಗೆ ಮಕ್ಕಳ ಭವಿಷ್ಯ ರೂಪಿಸುವ ಈ ಮಹತ್ವದ ಕಾರ್ಯದಲ್ಲಿ ಶಿಕ್ಷಕರು, ಪೋಷಕರು, ಎಸ್‌ಡಿಎಂಸಿ ಸದಸ್ಯರು ಹಾಗೂ ಸಮುದಾಯ ವೇದಿಕೆಗಳು ಒಟ್ಟಾಗಿ ಶ್ರಮಿಸೋಣ,'' ಎಂದು ಹೇಳಿದರು.

ಕೆಪಿಎಸ್ ಶಾಲೆಗಳಿಗೆ ಶಂಕುಸ್ಥಾಪನೆ ಜೂ.1ಕ್ಕೆ

ರಾಜ್ಯದ ಸರಕಾರಿ ಶಾಲೆಗಳ ಸಬಲೀಕರಣ ಮತ್ತು ಗುಣಮಟ್ಟದ ಶಿಕ್ಷಣ ಗುರಿಯೊಂದಿಗೆ ಆರಂಭಿಸುತ್ತಿರುವ ನೂತನ ಕರ್ನಾಟಕ ಪಬ್ಲಿಕ್ ಶಾಲೆಗಳ (ಕೆಪಿಎಸ್) ಕಟ್ಟಡಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಜೂನ್ 1ರಂದು ಶಿವಮೊಗ್ಗದಲ್ಲಿ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ ಎಂದು ಸಚಿವ ಮಧು ಬಂಗಾರಪ್ಪ ತಿಳಿಸಿದರು.

Published for the Proprietors, Metropolitan Media Company Limited, by Lokesh K V at No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011. (Ph: 08040877666) and printed by him at Bennett Coleman & Co Ltd., The Times of India Press, No. 9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph: 08042200500) Regd. Office: No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011 (Ph: 08040877666), Editor: Sudarshan Channangihalli – responsible for selection of news under PRB Act. ©All Rights Reserved. Reproduction in whole or in part without written permission is prohibited.
RNI No. 71653/99
Vol. 27 Issue No.145

ತೈಲ ಬೆಲೆ ಏರಿಕೆ ವಿರುದ್ಧ 30ಕ್ಕೆ ಕೈ ಪ್ರತಿಭಟನೆ

ಅಂದು ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಧರಣಿ | ಮುಂದಿನ ಹಂತದಲ್ಲಿ ವಿಧಾನಸಭೆ ಕ್ಷೇತ್ರಗಳಲ್ಲಿ ಹೋರಾಟ

■ ವಿಕ ಸುದ್ದಿಲೋಕ ಬೆಂಗಳೂರು

ಕಳೆದ 11 ದಿನಗಳಲ್ಲಿ ಪ್ರತಿ ಲೀಟರ್ ಪೆಟ್ರೋಲ್, ಡೀಸೆಲ್ ದರದಲ್ಲಿ ತಲಾ 7.52 ರೂ. ಏರಿಕೆ ಮಾಡುವ ಮೂಲಕ ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಜನರನ್ನು ಲೂಟಿ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿರುವ ಕಾಂಗ್ರೆಸ್, ತೈಲ ಬೆಲೆ ಏರಿಕೆ ವಿರುದ್ಧ ಇದೇ 30ರಂದು ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲು ನಿರ್ಧರಿಸಿದೆ.

ಕೆಪಿಸಿಸಿ ಕಚೇರಿಯಲ್ಲಿ ಸೋಮವಾರ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಹಾಗೂ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಜಂಟಿ ಪತ್ರಿಕಾಗೋಷ್ಠಿ ನಡೆಸಿ ಕೇಂದ್ರ ಸರಕಾರದ ನಡೆಯನ್ನು ತೀವ್ರವಾಗಿ ಖಂಡಿಸಿದರು.

ಸಿಎಂ ಸಿದ್ದರಾಮಯ್ಯ ಮಾತನಾಡಿ, ''ನರೇಂದ್ರ ಮೋದಿಯವರು ಪ್ರಧಾನಿಯಾದ ಬಳಿಕ ಸತತವಾಗಿ ಪೆಟ್ರೋಲ್, ಡೀಸೆಲ್ ಬೆಲೆ ಏರಿಸುವುದನ್ನು ರೂಢಿ ಮಾಡಿಕೊಂಡಿದ್ದು, ಎರಡು ವಾರದಲ್ಲಿ ನಾಲ್ಕನೇ ಬಾರಿ ಇಂಧನ ದರ ಏರಿಕೆ ಮಾಡಿ ದೇಶವನ್ನು ಹಾಗೂ ಜನಸಾಮಾನ್ಯರನ್ನು ಲೂಟಿ ಮಾಡುತ್ತಿದ್ದಾರೆ. ದೇಶದ ಇತಿಹಾಸದಲ್ಲಿ ಪೆಟ್ರೋಲ್, ಡೀಸೆಲ್, ಗ್ಯಾಸ್ ದರ ಇಷ್ಟೊಂದು ಏರಿಕೆಯಾಗಿದ್ದಿಲ್ಲ. ಜನಸಾಮಾನ್ಯರು, ಮಧ್ಯಮ ವರ್ಗದ ಜನರ ಜೀವನ ದುಸ್ತರವಾಗಿದ್ದು, ತತ್ತರಿಸಿ ಹೋಗಿದ್ದಾರೆ,'' ಎಂದು ವಾಗ್ದಾಳಿ ನಡೆಸಿದರು.

''ಬಿಜೆಪಿ ಅಧಿಕಾರಕ್ಕೆ ಬಂದರೆ ಗುಜರಾತ್ ಮಾದರಿ ಸರಕಾರ ಬರುತ್ತದೆ, ಒಳ್ಳೆಯ ದಿನಗಳು ಬರುತ್ತವೆ ಎಂದು ಹೇಳಿ ಜನರಿಗೆ ಟೋಪಿ ಹಾಕಿದ್ದಾರೆ. ಬೆಂಗಳೂರಿನಲ್ಲಿ ಪೆಟ್ರೋಲ್ ಬೆಲೆ 110.93 ರೂ., ಡೀಸೆಲ್ ದರ 98.89 ರೂ. ತಲುಪಿದ್ದು, ತಲಾ 7.52 ರೂ. ಹೆಚ್ಚಳವಾಗಿದೆ. ಪ್ರಧಾನಿ ಮೋದಿಯವರು ದೇಶವನ್ನು ಲೂಟಿ ಮಾಡುತ್ತಿರುವುದು ರುಜುವಾತಾಗುತ್ತಿದೆ,'' ಎಂದು ಆರೋಪಿಸಿದರು.

ಡಿಸಿಎಂ ಡಿ.ಕೆ.ಶಿವಕುಮಾರ್ ಮಾತನಾಡಿ, ''ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಬೆಲೆ ಏರಿಕೆ ಮೂಲಕ ಜನರ ಮೇಲೆ ಆರ್ಥಿಕ ಹೊರೆ ಹೆಚ್ಚಿಸಿದರೆ, ರಾಜ್ಯ ಕಾಂಗ್ರೆಸ್ ಸರಕಾರ ಗ್ಯಾರಂಟಿ ಯೋಜನೆಗಳ ಮೂಲಕ ಜನಸಾಮಾನ್ಯರ ಆರ್ಥಿಕ ಹೊರೆ ಇಳಿಸುತ್ತಿದೆ. ಕಾಂಗ್ರೆಸ್ ಗ್ಯಾರಂಟಿ ಇಲ್ಲವಾಗಿದ್ದರೆ ಪರಿಸ್ಥಿತಿ ಯಾವ ರೀತಿ ಇರುತ್ತಿತ್ತು ಎಂದು ಆಲೋಚಿಸಬೇಕು. ಬೆಲೆ ಏರಿಕೆ ಗಗನಕ್ಕೆ, ಆದಾಯ ಪಾತಾಳಕ್ಕೆ ಕುಸಿಯುತ್ತಿದೆ. ಸಿಲಿಂಡರ್ ದರ ಏರಿಕೆ, ಅಭಾವದಿಂದ ಹೋಟೆಲ್ ಮಾಲೀಕರು ಅರ್ಧ ಬಂದ್ ಮಾಡಿದ್ದಾರೆ,'' ಎಂದು ದೂರಿದರು.

''ತೈಲ ಬೆಲೆ ಏರಿಕೆ ಎಲ್ಲರ ಬದುಕಿಗೆ ಶಾಪವಾಗಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆ ಕಡಿಮೆಯಿದ್ದರೂ ಇಷ್ಟು ದೊಡ್ಡ ಪ್ರಮಾಣದಲ್ಲಿ ಬೆಲೆ ಏರಿಕೆ ಮಾಡಲಾಗಿದೆ. ಇಂಧನ ಮೇಲಿನ ತೆರಿಗೆ ಮೂಲಕ ಕೇಂದ್ರ ಸರಕಾರ ನಿತ್ಯ 1,000 ಕೋಟಿ ರೂ. ಸಂಗ್ರಹಿಸುತ್ತಿದೆ. ಈ ತೆರಿಗೆ ಬಿಟ್ಟು ಜನಸಾಮಾನ್ಯರ ಮೇಲಿನ ಆರ್ಥಿಕ ಹೊರೆ ಕಡಿಮೆ ಮಾಡಬಹುದಾಗಿತ್ತು,'' ಎಂದು ತಿಳಿಸಿದರು.

''ಈ ನಡುವೆ, ಪ್ರಧಾನಿಯವರು ಅಡುಗೆ ಎಣ್ಣೆ ಕಡಿಮೆ ಬಳಸುವಂತೆ ಸಲಹೆ ನೀಡಿದ್ದಾರೆ. ಕೇಂದ್ರ ಸರಕಾರ 12 ವರ್ಷಗಳಲ್ಲಿ ತೈಲಗಳ ಮೇಲಿನ ತೆರಿಗೆ ಮೂಲಕ 43 ಲಕ್ಷ ಕೋಟಿ ರೂ. ಸಂಗ್ರಹಿಸಿದೆ. ತೈಲ ಬೆಲೆ ಏರಿಕೆ ವಿರುದ್ಧ ಇದೇ 30ರಂದು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲಾಗುವುದು. ನಂತರ ಪ್ರತಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹೋರಾಟ ನಡೆಸಲು ಸೂಚಿಸಲಾಗುವುದು,'' ಎಂದು ಹೇಳಿದರು.

ಈಗಲೂ ಸಮೂಹ ಸಾರಿಗೆ ಬಳಸುತ್ತಿದ್ದಾರೆಯೇ?

''ಬೆಲೆ ಏರಿಕೆ ವಿರುದ್ಧ ಜನರ ಗಮನ ಸೆಳೆಯುವುದು, ಜಾಗೃತಿ ಮೂಡಿಸುವ ಕೆಲಸ ಮಾಡಲಿದ್ದು, ಜನರೇ ಬಿಜೆಪಿ ನೇತೃತ್ವದ ಕೇಂದ್ರ ಸರಕಾರವನ್ನು ಕಿತ್ತೊಗೆಯಬೇಕು. ಮೋದಿಯವರು ಮದುವೆಗೆ ಚಿನ್ನ ಖರೀದಿಸಬೇಡಿ, ಸರಿಯಾಗಿ ಊಟ ಮಾಡಬೇಡಿ ಎಂದು ಹೇಳಿ ಜನರನ್ನು ನಿಯಂತ್ರಿಸಲು ಹೇಗೆ ಸಾಧ್ಯ? ಒಂದು ದಿನ ಮೆಟ್ರೋದಲ್ಲಿ ಸಂಚರಿಸಿದ ಬಿಜೆಪಿ ನಾಯಕರು, ಕೇಂದ್ರ ಸಚಿವರು, ಅಧಿಕಾರಿಗಳು ಈಗ ಸಮೂಹ ಸಾರಿಗೆ ಬಳಸುತ್ತಿದ್ದಾರೆಯೇ? ಕೇವಲ ಪ್ರಚಾರಕ್ಕಾಗಿ ಒಂದು ದಿನ ಫೋಟೊ ಶೂಟ್ ಮಾಡಿಕೊಂಡಿದ್ದಾರೆ. ಇದು ವಾಸ್ತವವಾಗಿ ಜಾರಿ ಮಾಡಲು ಆಗದ ಕೆಲಸವಾಗಿದೆ. ಜನರಿಗೆ ತೊಂದರೆಯಾಗಲಿ ಎಂಬ ಉದ್ದೇಶದಿಂದ ಇಂತಹ ಕಾರ್ಯಕ್ರಮ ರೂಪಿಸುತ್ತಿದ್ದಾರೆ,'' ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅಸಮಾಧಾನ ವ್ಯಕ್ತಪಡಿಸಿದರು.

ದರ ಏರಿಕೆಯಿಂದ ಸರಕಾರಕ್ಕೆ ₹6000 ಕೋಟಿ ಆದಾಯ

■ ವಿಕ ಸುದ್ದಿಲೋಕ ಬೆಂಗಳೂರು

ಪೆಟ್ರೋಲ್ ದರ ಏರಿಕೆಯಿಂದ ವಾರ್ಷಿಕ 6,000 ಕೋಟಿ ರೂ. ಹೆಚ್ಚುವರಿ ಆದಾಯ ಗಳಿಸುತ್ತಿರುವ ರಾಜ್ಯದಲ್ಲಿನ ಕಾಂಗ್ರೆಸ್ ಸರಕಾರ, ಮಾರಾಟ ತೆರಿಗೆಯನ್ನು ಕಡಿಮೆ ಮಾಡದೆ ಕೇಂದ್ರ ಸರಕಾರದ ಮೇಲೆ ಆರೋಪ ಹೊರಿಸುತ್ತಿದೆ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಆಕ್ಷೇಪಿಸಿದರು.

''ಈಗ ಪ್ರತಿ ಲೀಟರ್ ಪೆಟ್ರೋಲ್ ಮಾರಾಟದಿಂದ ರಾಜ್ಯ ಸರಕಾರಕ್ಕೆ ಹೆಚ್ಚುವರಿಯಾಗಿ 1.15 ರೂ. ಸಂಗ್ರಹವಾಗುತ್ತಿದೆ. ಜನರಿಗೆ ನೆರವಾಗಬೇಕೆಂಬ ಮನಸ್ಸಿದ್ದರೆ ರಾಜ್ಯ ಸರಕಾರವೇ ಮಾರಾಟ ತೆರಿಗೆ ಇಳಿಸಬೇಕು. ಇಲ್ಲದಿದ್ದರೆ ಹೆಚ್ಚುವರಿ ಆದಾಯ ಪಡೆಯುತ್ತಿರುವ ಬಗ್ಗೆ ಜನರಿಗೆ ಹೇಳಬೇಕು. ಅದನ್ನು ಬಿಟ್ಟು ತೈಲ ದರ ಏರಿಕೆ ವಿರುದ್ಧ ಕಾಂಗ್ರೆಸ್ ಹೋರಾಟ ಮಾಡುವುದು ಎಂದರೆ ಅದು ಜನರಿಗೆ ಮಾಡುವ ವಂಚನೆ,'' ಎಂದು ದೂರಿದರು.

ವಿಧಾನಸೌಧದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ''ಕಾಂಗ್ರೆಸ್ ಸರಕಾರ ಪೆಟ್ರೋಲ್ ಮೇಲಿನ ಮಾರಾಟ ತೆರಿಗೆ ಹೆಚ್ಚಳ ಮಾಡಿದ್ದು, ಅದನ್ನು ಕಡಿಮೆ ಮಾಡದೆ ಕೇಂದ್ರ ಸರಕಾರದ ಮೇಲೆ ಆರೋಪ ಹೊರಿಸುತ್ತಿದೆ. ದರ ಏರಿಕೆಯಿಂದ ಕೇಂದ್ರ ಸರಕಾರಕ್ಕೆ ಆದಾಯ ಬರುವುದಿಲ್ಲ. ರಾಜ್ಯ ಸರಕಾರಕ್ಕೆ ಹೆಚ್ಚುವರಿಯಾಗಿ ವಾರ್ಷಿಕ 6,000 ಕೋಟಿ ರೂ. ಸಂಗ್ರಹವಾಗಲಿದ್ದು, ಇದನ್ನು ಗ್ಯಾರಂಟಿಗೆ ಬಳಸುತ್ತಾರೆ,'' ಎಂದು ದೂರಿದರು.

''ಪೆಟ್ರೋಲ್ ದರ ಏರಿಕೆ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜಕಾರಣ ಮಾಡುತ್ತಿದ್ದಾರೆ. ಯುದ್ಧದಿಂದಾಗಿ ಪೆಟ್ರೋಲ್ ಬಳಕೆ ತಗ್ಗಿಸುವಂತೆ ಬೇರೆ ದೇಶಗಳು ತಮ್ಮ ಜನರಿಗೆ ನಿರ್ಬಂಧ ವಿಧಿಸಿದ್ದರೂ ಪ್ರಧಾನಿ ನರೇಂದ್ರ ಮೋದಿಯವರು ಅಂತಹ ನಿರ್ಬಂಧ ಹಾಕಿಲ್ಲ. ಕರ್ನಾಟಕದಲ್ಲಿ ಪೆಟ್ರೋಲ್ ದರ ಲೀಟರ್‌ಗೆ 107.70 ರೂ. ಇದ್ದರೆ, ದಿಲ್ಲಿಯಲ್ಲಿ 99.50 ರೂ., ಗುಜರಾತ್‌ನಲ್ಲಿ 99.10 ರೂ., ಉತ್ತರ ಪ್ರದೇಶದಲ್ಲಿ 99.50 ರೂ., ಹರಿಯಾಣದಲ್ಲಿ 99.70 ರೂ. ಇದೆ. ಅಂದರೆ ರಾಜ್ಯದಲ್ಲಿ ಮಾತ್ರ ದರ ಹೆಚ್ಚಾಗಿರುವುದು ಸ್ಪಷ್ಟ,'' ಎಂದು ಹೇಳಿದರು.



ತೈಲ ಬೆಲೆ ಏರಿಕೆ ಹೆಸರಲ್ಲಿ ಕೇಂದ್ರದಿಂದ ಲೂಟಿ

ಬೆಂಗಳೂರು: ಕೇಂದ್ರದಲ್ಲಿರುವ ಬಿಜೆಪಿ ನೇತೃತ್ವದ ಸರಕಾರವು 11 ದಿನಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಪ್ರತಿ ಲೀಟರ್‌ಗೆ ತಲಾ 7.52 ರೂ. ಹೆಚ್ಚಿಸುವ ಮೂಲಕ ಇಂಧನ ಲೂಟಿ ಆರಂಭಿಸಿದ್ದು, ದುಡಿಯುವ ವರ್ಗ, ರೈತರು, ಬಡವರು, ಗೃಹಿಣಿಯರು, ಸಣ್ಣ ಉದ್ಯಮಿಗಳು ಮತ್ತು ಜನಸಾಮಾನ್ಯರ ಜೇಬು ಹಾಗೂ ಬಜೆಟ್‌ಗೆ ವಿನಾಶಕಾರಿಯಾಗಿದೆ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಆರೋಪಿಸಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ಸೋಮವಾರ ಸಿಎಂ, ಡಿಸಿಎಂ ಜತೆಗೆ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ''ತೈಲ, ಗ್ಯಾಸ್ ಬೆಲೆ ಏರಿಕೆಯಂತಹ ಅತಿರೇಕದ ಲೂಟಿ ಮತ್ತು ಪಿಕ್‌ಪಾಕೆಟ್ ವಿರುದ್ಧ ಸಾಮಾನ್ಯ ಜನ ನಾನಾ ರೀತಿಯಲ್ಲಿ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಆದರೂ, ಬಿಜೆಪಿ ನಾಯಕರು ಮತ್ತು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರವು ಜನರ ಸಂಕಷ್ಟವನ್ನು ಹಾಸ್ಯ ಮಾಡುತ್ತಾ, ಕನ್ನಡಿಗರು ಮತ್ತು ದೇಶದ ಜನರು ಎದುರಿಸುತ್ತಿರುವ ಜೀವನೋಪಾಯದ ಬಿಕ್ಕಟ್ಟಿಗೆ ಯಾವುದೇ ಸ್ಪಂದನೆ ನೀಡದೆ ಮೌನವಾಗಿದೆ,'' ಎಂದು ಕಿಡಿ ಕಾರಿದರು.

''ಕಳೆದ 12 ವರ್ಷಗಳಲ್ಲಿ ಮೋದಿ ಸರಕಾರವು ಪೆಟ್ರೋಲ್, ಡೀಸೆಲ್ ಮೇಲೆ ಅಬಕಾರಿ ಮತ್ತು ಕಸ್ಟಮ್ಸ್ ಸುಂಕ ವಿಧಿಸುವ ಮೂಲಕ 43 ಲಕ್ಷ ಕೋಟಿ ರೂ. ಸಂಗ್ರಹಿಸಿ ಜನರ ಜೇಬಿಗೆ ಕತ್ತರಿ ಹಾಕಿದೆ. ಕಳೆದ ಮೇ 23ರಂದು ಡಾಲರ್ ಎದುರು ಭಾರತೀಯ ರೂಪಾಯಿ ಮೌಲ್ಯ ಕುಸಿದ ಸಂದರ್ಭ ಬಳಸಿಕೊಂಡು ಆರ್‌ಬಿಐನ ಅಮೂಲ್ಯವಾದ ವಿದೇಶಿ ವಿನಿಮಯ ಮೀಸಲು ಮೊತ್ತವನ್ನು ಮಾರಾಟ ಮಾಡುವ ಮೂಲಕ ಮೋದಿ ಸರಕಾರವು ಆರ್‌ಬಿಐನಿಂದ 2.87 ಲಕ್ಷ ಕೋಟಿ ರೂ. ಪಡೆದುಕೊಂಡಿದೆ,'' ಎಂದು ಆಕ್ಷೇಪಿಸಿದರು.

''ಸಿಎನ್‌ಜಿ ಬೆಲೆ 11 ದಿನಗಳಲ್ಲಿ 4 ಬಾರಿ ಏರಿಕೆಯಾಗಿದೆ. 2014ರ ಮೇ ತಿಂಗಳಲ್ಲಿ 412 ರೂ.ನಷ್ಟಿದ್ದ ಎಲ್‌ಪಿಜಿ ಸಿಲಿಂಡರ್ ದರ ಈಗ 915.50 ರೂ.ಗೆ ಏರಿಕೆಯಾಗಿದೆ. ಹಾಗೆಯೇ, ವಾಣಿಜ್ಯ ಸಿಲಿಂಡರ್ ಬೆಲೆ 1,241 ರೂ.ನಿಂದ 3,152 ರೂ.ಗೆ ಹೆಚ್ಚಳವಾಗಿದೆ. ಮೋದಿ ಸರಕಾರವು ಕೂಡಲೇ ಇಂಧನ ಲೂಟಿಯನ್ನು ನಿಲ್ಲಿಸಬೇಕು. ಪೆಟ್ರೋಲ್, ಡೀಸೆಲ್, ಗೃಹಬಳಕೆ ಗ್ಯಾಸ್, ವಾಣಿಜ್ಯ ಗ್ಯಾಸ್, ಸಣ್ಣ ಸಿಲಿಂಡರ್, ಸಿಎನ್‌ಜಿ, ಪಿಎನ್‌ಜಿ ಬೆಲೆ ಇಳಿಕೆ ಮಾಡಬೇಕು,'' ಎಂದು ಆಗ್ರಹಿಸಿದರು.

ರಾಜ್ಯಸಭೆಗೆ ಡಿವಿಎಸ್ ಆಕಾಂಕ್ಷಿ

ಬೆಂಗಳೂರು: ರಾಜ್ಯಸಭೆ ಸದಸ್ಯ ಸ್ಥಾನಕ್ಕೆ ತಾವು ಆಕಾಂಕ್ಷಿ ಎಂದು ಮಾಜಿ ಸಿಎಂ ಡಿ.ವಿ.ಸದಾನಂದಗೌಡ ಹೇಳಿದ್ದಾರೆ. ಈ ಬಗ್ಗೆ ಮೈಸೂರಿನಲ್ಲಿ ಸೋಮವಾರ ಪ್ರತಿಕ್ರಿಯಿಸಿರುವ ಅವರು, ''ರಾಜ್ಯಸಭಾ ಸದಸ್ಯ ಸ್ಥಾನಕ್ಕೆ ನಾನು ಸಹ ಅಪೇಕ್ಷಿತ. ನಾನು ಸಕ್ರಿಯ ರಾಜಕಾರಣದಿಂದ ದೂರ ಉಳಿದಿದ್ದೇನೆ. ಹೀಗಾಗಿ ಪಕ್ಷದ ಹಿರಿಯರು ರಾಜ್ಯಸಭೆ ಅಥವಾ ಬೇರೆ ಯಾವುದೇ ಸ್ಥಾನಮಾನ ನೀಡಿದರೂ ನಿಭಾಯಿಸುತ್ತೇನೆ. ಎನ್‌ಡಿಎ ಮಿತ್ರಪಕ್ಷದ ಸ್ಥಾನ ಖಾಲಿಯಾಗಿರುವ ಹಿನ್ನೆಲೆಯಲ್ಲಿ ಈ ಬಗ್ಗೆ ರಾಷ್ಟ್ರೀಯ ನಾಯಕರು ತೀರ್ಮಾನ ಮಾಡುತ್ತಾರೆ,'' ಎಂದು ತಿಳಿಸಿದರು. ಬಿಜೆಪಿ ಬೆಂಬಲದಿಂದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರನ್ನು ರಾಜ್ಯಸಭೆಗೆ ಆಯ್ಕೆ ಮಾಡಬಹುದು ಎಂಬ ಬಗ್ಗೆ ಚರ್ಚೆಯಾಗುತ್ತಿದೆ. ಇದರ ನಡುವೆ ತಾವು ಆಕಾಂಕ್ಷಿಯೆಂದು ಡಿವಿಎಸ್ ಹೇಳಿರುವುದು ಗಮನ ಸೆಳೆದಿದೆ.

ಕೋಟ್ಯಂತರ ಗ್ರಾಹಕರ ಜೇಬಿನ ಹೊರೆ ಇಳಿಸಿದ ಗೃಹ ಜ್ಯೋತಿ

ಕರೆಂಟ್ ಬಿಲ್‌ನಿಂದ ಮುಕ್ತಿ, ಬದುಕಿಗೆ ಆರ್ಥಿಕ ಶಕ್ತಿ | ಕತ್ತಲ ಮನೆಗಳಿಗೆ ಬೆಳಕಿನ ಭಾಗ್ಯ

ಗ್ಯಾರಂಟಿ ವಾರ್ತೆ

ಬೆಂಗಳೂರು: ದಿನನಿತ್ಯದ ಬದುಕಿನ ವೆಚ್ಚಗಳು ಗಗನಕ್ಕೇರುತ್ತಿರುವ ಈ ಕಾಲದಲ್ಲಿ, ಸಾಮಾನ್ಯ ಕುಟುಂಬವೊಂದರ ಮಾಸಿಕ ಬಜೆಟ್ ಅನ್ನು ಅತಿ ಹೆಚ್ಚು ಕಾಡುವ ವಿಷಯವೆಂದರೆ ಅದು ಅಗತ್ಯ ಸೇವೆಗಳ ಬಿಲ್ ಪಾವತಿ. ಇಂತಹ ಸವಾಲಿನ ದಿನಗಳಲ್ಲಿ ರಾಜ್ಯದ ಬಡ ಹಾಗೂ ಕೆಳ-ಮಧ್ಯಮ ವರ್ಗದ ಕುಟುಂಬಗಳ ಮನೆ-ಮನಗಳನ್ನು ಬೆಳಗಿದ ಯೋಜನೆ 'ಗೃಹಜ್ಯೋತಿ'.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಜಾರಿಗೆ ತಂದ ಪಂಚ ಗ್ಯಾರಂಟಿಗಳಲ್ಲಿ ಒಂದಾದ ಈ ಯೋಜನೆ, ಕಳೆದ ಮೂರು ವರ್ಷಗಳಲ್ಲಿ ಕೇವಲ ಉಚಿತ ವಿದ್ಯುತ್ ನೀಡುವ ಸೌಲಭ್ಯವಾಗಿ ಉಳಿಯದೆ, ರಾಜ್ಯದ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಯ ಶಕ್ತಿಯಾಗಿ ಹೊರಹೊಮ್ಮಿದೆ. ಸರ್ಕಾರದ ಇಂಧನ ಇಲಾಖೆಯ ಅಂಕಿ-ಅಂಶಗಳ ಪ್ರಕಾರ, ರಾಜ್ಯದ 1.64 ಕೋಟಿಗೂ ಅಧಿಕ ಗೃಹ ವಿದ್ಯುತ್ ಗ್ರಾಹಕರು ಈ ಯೋಜನೆಯಡಿ ನೋಂದಾಯಿಸಿಕೊಂಡು 'ಶೂನ್ಯ ಬಿಲ್' (Zero Bill) ಸೌಲಭ್ಯವನ್ನು ಪಡೆಯುತ್ತಿದ್ದಾರೆ. ಇದಕ್ಕಾಗಿ ಸರ್ಕಾರವು ಈವರೆಗೆ ₹26,115 ಕೋಟಿ ಅನುದಾನವನ್ನು ವೆಚ್ಚ ಮಾಡಿದ್ದು, ವಿದ್ಯುತ್ ಸರಬರಾಜು ಕಂಪನಿಗಳಿಗೆ (ESCOMs) ಸಬ್ಸಿಡಿ ರೂಪದಲ್ಲಿ ಪಾವತಿಸುತ್ತಿದೆ.

2023ರ ಆಗಸ್ಟ್ 5ರಂದು ಕಲಬುರಗಿಯಲ್ಲಿ ಅಧಿಕೃತವಾಗಿ ಚಾಲನೆ ಪಡೆದ ಈ ಯೋಜನೆ, ರಾಜ್ಯದ ಪ್ರತಿಯೊಂದು ಮನೆಗೂ ಗರಿಷ್ಠ 200 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ಒದಗಿಸುವ ಭರವಸೆಯನ್ನು ಯಶಸ್ವಿಯಾಗಿ ಈಡೇರಿಸಿದೆ. ಈ ಯೋಜನೆಯ ಅತ್ಯಂತ ಪ್ರಗತಿಪರ ನಿರ್ಧಾರವೆಂದರೆ, ಇದು ಕೇವಲ ಸ್ವಂತ ಮನೆ ಉಳ್ಳವರಿಗಷ್ಟೇ ಸೀಮಿತವಾಗದೆ, ಲಕ್ಷಾಂತರ ಬಾಡಿಗೆ ಮನೆಗಳ ನಿವಾಸಿಗಳಿಗೂ ವಿಸ್ತರಣೆಯಾಯಿತು. ಇದರಿಂದಾಗಿ ನಗರ ಹಾಗೂ ಗ್ರಾಮೀಣ ಭಾಗದ ಶ್ರಮಿಕ ವರ್ಗಕ್ಕೆ ಅತಿ ದೊಡ್ಡ ಆರ್ಥಿಕ ನೆಮ್ಮದಿ ಸಿಕ್ಕಂತಾಗಿದೆ.

ದುಡಿದು ತಿನ್ನುವ ನಮ್ಮಂಥವರಿಗೆ ಕರೆಂಟ್ ಬಿಲ್ ಕಟ್ಟುವುದೇ ದೊಡ್ಡ ಕಗ್ಗಂಟಾಗಿತ್ತು. ಎರಡು ದಿನದ ಕಷ್ಟದ ದುಡಿಮೆಯನ್ನು ಅದಕ್ಕೇ ಮುಡಿಪಾಗಿಡಬೇಕಿತ್ತು. ಈಗ ಸಿದ್ದರಾಮಯ್ಯನವರ ಕಡೆಯಿಂದ ಕರೆಂಟ್ ಸಂಪೂರ್ಣ ಉಚಿತವಾಗಿದೆ. ಇದರಿಂದ ಉಳಿಯುವ ಹಣ ನಮ್ಮ ಹೊಟ್ಟೆ ತುಂಬಿಸುತ್ತಿದೆ. ಅಷ್ಟೇ ಅಲ್ಲ, ನಮ್ಮ ಮಕ್ಕಳು ಯಾವುದೇ ಭಯವಿಲ್ಲದೆ ರಾತ್ರಿ ಹೊತ್ತು ನೆಮ್ಮದಿಯಿಂದ ಓದಿಕೊಳ್ಳಲು ಈ ಯೋಜನೆ ಬೆಳಕಾಗಿದೆ.

▸▸ ಮಹದೇವಪ್ಪ ವಾಲ್ಮೀಕಿ, ಹಾವೇರಿ

ಕೂಲಿ ಮಾಡಿ ದಿನದ ತುತ್ತು ಹುಡುಕುವ ಜನ ನಾವು. ತಿಂಗಳಿಗೆ ಸಾವಿರ ರೂಪಾಯಿ ಕರೆಂಟ್ ಬಿಲ್ ಬರುತ್ತಿತ್ತು. ಬಿಲ್ ಕಟ್ಟಲು ಎರಡು ದಿನದ ಇಡೀ ಕೂಲಿಯನ್ನು ಎತ್ತಿಡಬೇಕಿತ್ತು. ಆದರೆ ಗೃಹಜ್ಯೋತಿಯಿಂದಾಗಿ 'ಜೀರೋ ಬಿಲ್' ಬರುತ್ತಿದೆ. ಕರೆಂಟ್ ಫ್ರೀ ಆಗಿದ್ದರಿಂದ ಬಡವರ ಬದುಕಿಗೆ ಬಹಳ ಅನುಕೂಲವಾಗಿದೆ.

▸▸ ಲಕ್ಷ್ಮಣಕುಮಾರ್, ರಾಯಚೂರು

ಬಂಡವಾಳದ ಕೊರತೆಯಿಂದಾಗಿ ಹೆಣ್ಣುಮಕ್ಕಳಿಗೆ ಹೊಲಿಗೆ ತರಬೇತಿ ನೀಡಲು ಹೊಸ ಯಂತ್ರ ಖರೀದಿಸಲಾಗದೆ ಹಾಗೂ ವಿದ್ಯುತ್ ವೆಚ್ಚ ಭರಿಸಲು ಚಿಂತಿಸುತ್ತಿದ್ದೆ. ಇಂತಹ ಸಮಯದಲ್ಲಿ ಸರ್ಕಾರದ 'ಗೃಹಜ್ಯೋತಿ' ಯೋಜನೆಯ ಉಚಿತ ಕರೆಂಟ್ ನನಗೆ ದೊಡ್ಡ ಬಲ ತುಂಬಿತು. ವಿದ್ಯುತ್ ಬಿಲ್‌ನ ಚಿಂತೆ ಇಲ್ಲದಾದಾಗ, ಪ್ರತಿ ತಿಂಗಳು ಬರುತ್ತಿದ್ದ 'ಗೃಹಲಕ್ಷ್ಮಿ' ಹಣವನ್ನು ಅತ್ಯಂತ ಜೋಪಾನವಾಗಿ ಕೂಡಿಟ್ಟು ಹೊಸ ಹೊಲಿಗೆ ಯಂತ್ರಗಳನ್ನು ಖರೀದಿಸಿ ಸ್ವಂತ 'ಟೈಲರಿಂಗ್ ಕ್ಲಾಸ್' ಆರಂಭಿಸಿದೆ!

▸▸ ಅಮೀನಾ ಬೇಗಂ, ಶಹಾಪುರ

ದೇಶಕ್ಕೇ ಮಾದರಿಯಾದ ಇಂಧನ ಕ್ರಾಂತಿ

ಕರ್ನಾಟಕದ ಈ 'ಗೃಹಜ್ಯೋತಿ' ಮಾದರಿಯು ದೇಶದ ಇಂಧನ ವಲಯದಲ್ಲೇ ಒಂದು ಕ್ರಾಂತಿಕಾರಿ ಹೆಜ್ಜೆಯಾಗಿದೆ. ಕೇವಲ ಉಚಿತ ಸೌಲಭ್ಯ ನೀಡುವುದಷ್ಟೇ ಅಲ್ಲದೆ, ಗ್ರಾಹಕರು ತಮ್ಮ ಸರಾಸರಿ ಬಳಕೆಯ ಮಿತಿಯೊಳಗೆ ವಿದ್ಯುತ್ ಬಳಸುವಂತೆ ಪ್ರೇರೇಪಿಸುವ ಮೂಲಕ ವಿದ್ಯುತ್ ಉಳಿತಾಯದ (Power Conservation) ಪ್ರಜ್ಞೆಯನ್ನು ಜನರಲ್ಲಿ ಮೂಡಿಸಿದೆ. ಕರ್ನಾಟಕದ ಈ ಯಶಸ್ವೀ ಮಾದರಿಯನ್ನು ದೇಶದ ಹಲವು ರಾಜ್ಯಗಳು ಇಂದು ಸೂಕ್ಷ್ಮವಾಗಿ ಗಮನಿಸುತ್ತಿದ್ದು, ತಮ್ಮಲ್ಲೂ ಜಾರಿಗೆ ತರಲು ಆಸಕ್ತಿ ತೋರುತ್ತಿರುವುದು ಇದರ ಸಾಧನೆಯಾಗಿದೆ.

ಶೂನ್ಯ ಬಿಲ್‌ನಿಂದ ಗ್ರಾಮೀಣ ಆರ್ಥಿಕತೆ ಚೇತರಿಕೆ

ಪ್ರತಿ ತಿಂಗಳು ವಿದ್ಯುತ್ ಬಿಲ್ ರೂಪದಲ್ಲಿ ಉಳಿತಾಯವಾಗುತ್ತಿರುವ ₹800 ರಿಂದ ₹1,500 ವರೆಗಿನ ಹಣವು ಬಡ ಮತ್ತು ಮಧ್ಯಮ ವರ್ಗದವರ ಜೇಬಿನಲ್ಲೇ ಉಳಿಯುತ್ತಿದೆ. ಈ ಹಣವನ್ನು ಪೋಷಕರು ತಮ್ಮ ಮಕ್ಕಳ ಶಾಲಾ ಸೌಲಭ್ಯಗಳಿಗೆ, ಉತ್ತಮ ಪೌಷ್ಟಿಕ ಆಹಾರ ಧಾನ್ಯಗಳ ಖರೀದಿಗೆ ಮತ್ತು ಮನೆಯ ಹಿರಿಯರ ಔಷಧಿ ವೆಚ್ಚಗಳಿಗೆ ಬಳಸಿಕೊಳ್ಳುತ್ತಿದ್ದಾರೆ. ಸಣ್ಣಪುಟ್ಟ ಉದ್ದಿಮೆಗಳನ್ನು ಕೂಡ ಮನೆಯಿಂದಲೇ ಆರಂಭಿಸಿದ್ದಾರೆ. ಆ ಮೂಲಕ ಜನರ ಕೊಳ್ಳುವ ಶಕ್ತಿ ಹೆಚ್ಚಾಗಿದ್ದು, ಗ್ರಾಮೀಣ ಆರ್ಥಿಕತೆಯೂ ಚೇತರಿಸಿಕೊಳ್ಳುತ್ತಿದೆ.





ಬಡವರ ಮನೆ ಬೆಳಗುವುದೇ ನಿಜವಾದ ಸುಶಾಸನ

ಪ್ರತಿ ತಿಂಗಳು ಕೋಟ್ಯಂತರ ಮನೆಗಳಿಗೆ ಗೃಹಜ್ಯೋತಿಯಡಿ ಶೂನ್ಯ ಬಿಲ್ ತಲುಪುತ್ತಿರುವುದನ್ನು ನೋಡಿದಾಗ ಆಗುವ ತೃಪ್ತಿ ಅಪಾರ. ಜನರ ಮೇಲಿನ ಆರ್ಥಿಕ ಹೊರೆಯನ್ನು ಕಡಿಮೆ ಮಾಡಿ, ಅವರ ಬದುಕಿನ ಗುಣಮಟ್ಟವನ್ನು ಹೆಚ್ಚಿಸುವುದೇ ನಮ್ಮ ಪ್ರಗತಿಪರ ಕರ್ನಾಟಕದ ಮೂಲ ಆಶಯ.

▸▸ ಸಿದ್ದರಾಮಯ್ಯ, ಮುಖ್ಯಮಂತ್ರಿಗಳು

ಇಂಧನ ವಲಯದಲ್ಲಿ ಕರ್ನಾಟಕದ ಹೊಸ ಇತಿಹಾಸ

ಗೃಹಜ್ಯೋತಿ ಯೋಜನೆಯು ಜನಸಾಮಾನ್ಯರ ಆರ್ಥಿಕ ಸಬಲೀಕರಣಕ್ಕೆ ಹೊಸ ಶಕ್ತಿ ತುಂಬಿದೆ. ಗೃಹಬಳಕೆಯ ವಿದ್ಯುತ್ ಬಿಲ್‌ನಿಂದ ಮುಕ್ತಿ ನೀಡುವುದರ ಜೊತೆಗೆ, ಜನರಲ್ಲಿ ಜವಾಬ್ದಾರಿಯುತ ವಿದ್ಯುತ್ ಬಳಕೆಯ ಶಿಸ್ತನ್ನು ತಂದಿರುವುದು ಈ ಯೋಜನೆಯ ದೊಡ್ಡ ಯಶಸ್ಸು.

▸▸ ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿಗಳು

ಪಾರದರ್ಶಕ ಮತ್ತು ನಿರಂತರ ಇಂಧನ ಸೇವೆ

ಅತ್ಯಂತ ಸಂಕೀರ್ಣವಾದ ವಿದ್ಯುತ್ ವಿತರಣಾ ವ್ಯವಸ್ಥೆಯ ನಡುವೆಯೂ, ನಮ್ಮ ಇಲಾಖೆಯು 1.64 ಕೋಟಿಗೂ ಅಧಿಕ ಗ್ರಾಹಕರಿಗೆ ಯಾವುದೇ ಗೊಂದಲವಿಲ್ಲದೆ ಗೃಹಜ್ಯೋತಿಯ ಸೌಲಭ್ಯವನ್ನು ಯಶಸ್ವಿಯಾಗಿ ತಲುಪಿಸಿದೆ.

▸▸ ಕೆ.ಜೆ. ಜಾರ್ಜ್, ಇಂಧನ ಸಚಿವರು

ಕರ್ನಾಟಕ ವಾರ್ತೆ

ಬಿಜೆಪಿ ಸರಕಾರದ ತಪ್ಪು ಸರಿಪಡಿಸಲು ಯತ್ನ: ಖಂಡ್ರೆ

ಕಾರ್ಕಳ (ಉಡುಪಿ): ಪರಿಭಾವಿತ (ಡೀಮ್ಡ್) ಅರಣ್ಯ ಪ್ರದೇಶದಲ್ಲಿ ಸರಕಾರಿ ಕಟ್ಟಡ, ಆಸ್ಪತ್ರೆ, ಅಂಗನವಾಡಿ ಇತ್ಯಾದಿಗಳು ಇದ್ದು, ಬಿಜೆಪಿ ಸರಕಾರದ ಆಡಳಿತದಲ್ಲಿ ಆಗಿರುವ ತಪ್ಪು ಸರಿಪಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವುದಾಗಿ ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ತಿಳಿಸಿದರು.

ಕಾರ್ಕಳದಲ್ಲಿ ಸೋಮವಾರ ವಲಯ ಅರಣ್ಯಾಧಿಕಾರಿಗಳ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ನೂತನ ಕಟ್ಟಡವನ್ನು ಸೋಮವಾರ ಉದ್ಘಾಟಿಸಿದ ಅವರು, ''ಡೀಮ್ಡ್ ಅರಣ್ಯ ಸಮಸ್ಯೆ ಪರಿಹರಿಸಲು ಕೊನೆಯ ಅವಕಾಶ ದೊರೆತಿದ್ದು, ಸರ್ವೋಚ್ಚ ನ್ಯಾಯಾಲಯಕ್ಕೆ ಮರು ಮನವಿ ಸಲ್ಲಿಸಲು ಜಿಲ್ಲಾ ಮಟ್ಟ ಮತ್ತು ರಾಜ್ಯಮಟ್ಟದಲ್ಲಿ ಸಮಿತಿ ರಚಿಸಲಾಗಿದೆ,'' ಎಂದರು.

''ಮೊದಲಿಗೆ ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದಾಗ 9 ಲಕ್ಷ ಹೆಕ್ಟೇರ್ ಜಮೀನನ್ನು ಡೀಮ್ಡ್ ಅರಣ್ಯ ಎಂದು ಗುರುತಿಸಲಾಗಿತ್ತು, ನಂತರ 2022ರಲ್ಲಿ ಪ್ರಮಾಣಪತ್ರ ಸಲ್ಲಿಸಿದಾಗ 3.33 ಲಕ್ಷ ಹೆಕ್ಟೇರ್ ಎಂದು ಪರಿಷ್ಕರಿಸಲಾಯಿತು. ಆಗ ಸಮರ್ಪಕವಾಗಿ ಸರ್ವೆ ನಡೆಸದೆ, ಖುದ್ದು ಪರಿಶೀಲಿಸದ ಕಾರಣ ಸರಕಾರಿ ಕಟ್ಟಡ, ಶಾಲೆ, ಆಸ್ಪತ್ರೆ, ಪಟ್ಟಾ ಭೂಮಿ ಸೇರಿದೆ. ಬಡ ಮತ್ತು ಮಧ್ಯಮ ವರ್ಗದ ಜನರು ಸಂಕಷ್ಟ ಎದುರಿಸುತ್ತಿದ್ದು, ಈ ಲೋಪ ಸರಿಪಡಿಸಬೇಕಾಗಿದೆ,'' ಎಂದರು.

''ಕುದುರೆಮುಖ ಕಬ್ಬಿಣದ ಅದಿರು ಕಂಪನಿ ಅರಣ್ಯ ಇಲಾಖೆಗೆ ದಂಡ ಮತ್ತು ಇತರ ಶುಲ್ಕವನ್ನು ಪಾವತಿಸಬೇಕಾಗಿದೆ. ಪ್ರಸ್ತುತ ಹೈಕೋರ್ಟ್ ಈ ಸಂಬಂಧ ನಿರ್ದೇಶನ ನೀಡಿದ್ದು, ನ್ಯಾಯಾಲಯದ ಆದೇಶದಂತೆ ಸರಕಾರ ನಡೆಯಲಿದೆ,'' ಎಂದರು.

ಅರಣ್ಯ ಸಿಬ್ಬಂದಿಯ ಸುರಕ್ಷತೆಗಾಗಿ ವಿದ್ಯುತ್ ಪ್ರವಹಿಸುವ ಕೈಗೋಲು (ಸ್ಟಿಕ್), ಮಳೆಯಿಂದ ರಕ್ಷಿಸುವ ಜಾಕೆಟ್, ಶೂ ಇತ್ಯಾದಿ ನೀಡುವಂತೆ ಇಲಾಖೆ ಹಿರಿಯ ಅಧಿಕಾರಿಗಳಿಗೆ ಸಚಿವ ಈಶ್ವರ ಖಂಡ್ರೆ ಇದೇ ಸಂದರ್ಭದಲ್ಲಿ ಸೂಚಿಸಿದರು.

ಸಚಿವ ವೆಂಕಟೇಶ್‌ಗೆ ಹೆಚ್ಚುವರಿ ಖಾತೆ ಹಂಚಿಕೆ

ಬೆಂಗಳೂರು: ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ಅವರಿಗೆ ಹೆಚ್ಚುವರಿಯಾಗಿ ಯೋಜನೆ ಮತ್ತು ಸಾಂಖ್ಯಿಕ ಖಾತೆ ವಹಿಸಿ ಆದೇಶ ಹೊರಡಿಸಲಾಗಿದೆ. ಸಂಪುಟದ ಸದಸ್ಯರಾಗಿದ್ದ ಡಿ. ಸುಧಾಕರ್ ನಿಧನದ ಹಿನ್ನೆಲೆಯಲ್ಲಿ ಅವರ ಬಳಿಯಿದ್ದ ಯೋಜನೆ ಮತ್ತು ಸಾಂಖ್ಯಿಕ ಖಾತೆ ಹೊಣೆಗಾರಿಕೆಯನ್ನು ವೆಂಕಟೇಶ್ ಅವರಿಗೆ ಸಿಎಂ ಸಿದ್ದರಾಮಯ್ಯ ನೀಡಿದ್ದಾರೆ. ಈ ಸಂಬಂಧ ಮುಖ್ಯಮಂತ್ರಿಯವರ ಶಿಫಾರಸಿನ ಅನ್ವಯ ರಾಜ್ಯಪಾಲರ ಅಂಗೀಕಾರ ದೊಂದಿಗೆ ಲೋಕಭವನದಿಂದ ಸೋಮವಾರ ಅಧಿಸೂಚನೆ ಹೊರಬಿದ್ದಿದೆ.

ಉಸ್ತುವಾರಿ ಸಚಿವರಿಗೆ ಎಸ್‌ಐಆರ್ ಹೊಣೆ

ಸಂಘಟನೆಯಲ್ಲಿ ಆಸಕ್ತಿ ಇಲ್ಲದವರಿಗೆ ಕೊಕ್

■ ವಿಕ ಸುದ್ದಿಲೋಕ ಬೆಂ.ಗ್ರಾಮಾಂತರ

ಜಿಲ್ಲಾ ಉಸ್ತುವಾರಿ ಸಚಿವರಿಗೆ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಮ್ಯಾಪಿಂಗ್ ಕುರಿತು ನಿಗಾವಹಿಸುವ ಜವಾಬ್ದಾರಿ ವಹಿಸಲಾಗಿದೆ ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ದೇವನಹಳ್ಳಿ ಖಾಸಗಿ ರೆಸಾರ್ಟ್‌ನಲ್ಲಿ ಎರಡು ದಿನ ನಡೆದ ಸಭೆಯ ಬಳಿಕ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ''ಎಲ್ಲ ಜಿಲ್ಲಾ ಉಸ್ತುವಾರಿ ಸಚಿವರು ತಮ್ಮ ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳಲ್ಲಿ ಎಸ್‌ಐಆರ್ ಮ್ಯಾಪಿಂಗ್ ಹೇಗೆ ನಡೆಯುತ್ತಿದೆ ಎಂದು ಗಮನಿಸಬೇಕು. ಆಯಾ ಭಾಗಗಳಲ್ಲಿ ಕಾರ್ಯಕರ್ತರ ಸಭೆ ಮಾಡಬೇಕು. ಎಲ್ಲಾ ಮತದಾರರ ಮತ ಉಳಿಸುವ ಕೆಲಸ ಮಾಡಬೇಕು. ಮತದಾರರ ದಾಖಲೆಗಳನ್ನು ಒದಗಿಸುವ ಕೆಲಸ ಮಾಡಬೇಕು. ಬಿಎಲ್‌ಒಗಳಿಗೆ ಅಗತ್ಯವಾದ ದಾಖಲೆಗಳನ್ನು ಒದಗಿಸುವ ಕೆಲಸವನ್ನು ಪಕ್ಷದ ಮುಖಂಡರು ಮಾಡಬೇಕೆಂದು ಸೂಚಿಸಲಾಗಿದೆ,'' ಎಂದು ಹೇಳಿದರು.

''ಕೆಪಿಸಿಸಿಯಿಂದಲೂ ಎಸ್‌ಐಆರ್ ಕುರಿತು ನಮ್ಮ ಕಾರ್ಯಕರ್ತರಿಗೆ ಕಾರ್ಯಾಗಾರ ಮಾಡುತ್ತೇವೆ. ಎಲ್ಲ ಸಚಿವರು, ಶಾಸಕರು ಬೇರೆ ಕೆಲಸ ಬಿಟ್ಟು ಈ ಕೆಲಸ ಮಾಡಬೇಕು ಅಂತ ಸೂಚನೆ ಕೊಟ್ಟಿದ್ದೇನೆ. ಎಸ್‌ಐಆರ್ ಮತ್ತು ಜಿಬಿಎ ಚುನಾವಣೆ ಬಗ್ಗೆ ಸಭೆಯ ಮೂಲಕ ಎಲ್ಲರಿಗೂ ಜವಾಬ್ದಾರಿ ಕೊಟ್ಟಿದ್ದೇವೆ. ಸಭೆಗೆ ಬಾರದ ಪದಾಧಿಕಾರಿಗಳನ್ನು ಹುದ್ದೆಯಿಂದ ತೆಗೆದು ಹಾಕಲು ಹೈಕಮಾಂಡ್ ಆದೇಶ ನೀಡಿದ್ದು, ಅದರಂತೆ ನಾನು ಮಾಡುತ್ತೇನೆ. ಪಕ್ಷ ಸಂಘಟನೆಯಲ್ಲಿ ಆಸಕ್ತಿ ಇಲ್ಲದವರನ್ನು ತೆಗೆದು ಹಾಕುತ್ತೇವೆ,'' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಮತದಾರರ ಕೈಬಿಡುವ ತಂತ್ರ

ಕೇಂದ್ರದಲ್ಲಿರುವ ಬಿಜೆಪಿ ಸರಕಾರ ಎಸ್‌ಐಆರ್ ಮೂಲಕ ಮತದಾರರ ಪಟ್ಟಿಯಿಂದ ಸಾರ್ವಜನಿಕರ ಹೆಸರು ಕೈಬಿಡುವುದರೊಂದಿಗೆ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡುತ್ತಿದೆ ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಆರೋಪಿಸಿದರು. ದೇವನಹಳ್ಳಿಯಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಶಕಗಳಿಂದ ಮತ ಚಲಾಯಿಸುತ್ತಿರುವವರ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕುತ್ತಿರುವುದು ಸಂವಿಧಾನಕ್ಕೆ ಮಾಡುತ್ತಿರುವ ದ್ರೋಹ,'' ಎಂದು ಕಿಡಿಕಾರಿದರು.

ಎಪ್ಪತ್ತರ ದಶಕದಿಂದ ಮರಳಿದ ಕರ್ಟನ್ ಬ್ಯಾಂಗ್ಸ್



ಇಂದಿನ ಯುವತಿಯರ ಹೊಸ ಸೆಳೆತ ಕರ್ಟನ್ ಬ್ಯಾಂಗ್ಸ್ ಹೇರ್ ಸ್ಟೈಲ್‌ನತ್ತ.

ಶ್ರೀವಿದ್ಯಾ
feedbacklvk@vijaykarnataka.com

ಕೇಶ ವಿನ್ಯಾಸ

ಫ್ಯಾಷನ್ ಜಗತ್ತಿನಲ್ಲಿ ಹೇರ್‌ಸ್ಟೈಲ್‌ಗಳು ಕ್ಷಣಕ್ಷಣಕ್ಕೂ ಬದಲಾಗುತ್ತಿರುತ್ತವೆ. ಆದರೆ ಕೆಲವು ಶೈಲಿಗಳು ಮಾತ್ರ ಎಂದಿಗೂ ಹಳೆಯದಾಗುವುದಿಲ್ಲ, ಅಂಥದ್ದೇ ಒಂದು ಹೇರ್ ಸ್ಟೈಲ್ ಕರ್ಟನ್ ಬ್ಯಾಂಗ್ಸ್. 70ರ ದಶಕದ ಈ ವಿಂಟೇಜ್ ಸ್ಟೈಲ್ ಈಗ ಮತ್ತೆ ಆಧುನಿಕ ರೂಪದಲ್ಲಿ ಹೊಸ ಸಂಚಲನ ಮೂಡಿಸಿದೆ.

ಕರ್ಟನ್ ಬ್ಯಾಂಗ್ಸ್ ಎಂದರೆ ಮುಖದ ಎರಡು ಬದಿಗಳಲ್ಲಿ ಪರದೆಯಂತೆ ಹರಡಿಕೊಂಡಿರುವ ಕೂದಲಿನ ವಿನ್ಯಾಸ. ಇದು ಸಾಮಾನ್ಯವಾಗಿ ಕಣ್ಣಿನ ಕೆಳ ಭಾಗ ಅಥವಾ ಕೆನ್ನೆಯ ಮೂಳೆಯವರೆಗೆ ಉದ್ದವಿರುತ್ತದೆ. ಇದು ಮುಖಕ್ಕೆ ಸಾಫ್ಟ್ ಮತ್ತು ಸ್ಟೈಲಿಶ್ ಲುಕ್ ನೀಡುತ್ತದೆ. ಮುಖದ ಆಕಾರವನ್ನು ಎದ್ದು ಕಾಣಿಸುವಂತೆ ಮಾಡುವ ಈ ವಿನ್ಯಾಸವು ಎಲ್ಲರಿಗೂ ಒಪ್ಪುತ್ತದೆ ಎಂಬುದು ಈ ಹೇರ್ ಸ್ಟೈಲ್‌ನ ಪ್ಲಸ್ ಪಾಯಿಂಟ್.

ಕರ್ಟನ್ ಬ್ಯಾಂಗ್ಸ್ ಜನಪ್ರಿಯತೆ

ಇದು ರೌಂಡ್, ಓವಲ್ ಅಥವಾ ಸ್ಕ್ವೇರ್ ಹೀಗೆ ಯಾವುದೇ ಆಕಾರದ ಮುಖಕ್ಕಾದರೂ ಸುಂದರವಾಗಿ ಹೊಂದಿಕೊಳ್ಳುತ್ತದೆ. ಉಳಿದ ಬ್ಯಾಂಗ್ಸ್ ಸ್ಟೈಲ್‌ಗಳಿಗೆ ಹೋಲಿಸಿದರೆ ಇದನ್ನು ನಿರ್ವಹಿಸುವುದು ಸುಲಭ. ಕೂದಲು ಬೆಳೆದಂತೆಲ್ಲಾ ಇದು ಲೇಯರ್ಡ್ ಹೇರ್‌ಸ್ಟೈಲ್‌ನಂತೆ ಮಾರ್ಪಡುತ್ತದೆ. ಕೂದಲನ್ನು ಬಿಟ್ಟಾಗ ಮಾತ್ರವಲ್ಲದೆ, ಪೋನಿಟೇಲ್ ಅಥವಾ ಬನ್ ಹಾಕಿದಾಗಲೂ ಕರ್ಟನ್ ಬ್ಯಾಂಗ್ಸ್ ಮುಖಕ್ಕೆ ಆಕರ್ಷಕ ಚೌಕಟ್ಟನ್ನು ನೀಡುತ್ತದೆ.

ಸಿಗ್ನೇಚರ್ ಸಿ ಆಕಾರ

ಕರ್ಟನ್ ಬ್ಯಾಂಗ್ಸ್‌ಗೆ ಸುಂದರವಾದ ಹಾಗೂ ಲಯಬದ್ಧ ಆಕಾರ ನೀಡಲು, ಕೂದಲು ಸ್ವಲ್ಪ ತೇವವಿರುವಾಗಲೇ ಸ್ಟೈಲಿಂಗ್ ಆರಂಭಿಸಿ. ಮಧ್ಯಮ ಗಾತ್ರದ ರೌಂಡ್ ಬ್ರಷ್ ಮತ್ತು ಹೇರ್‌ಡ್ರೈಯರ್ ಬಳಸಿ. ಮೊದಲು ಕೂದಲನ್ನು ಕೆಳಮುಖವಾಗಿ ಬ್ರಷ್ ಮಾಡಿ ನಂತರ ಮುಖದ ವಿರುದ್ಧ ದಿಕ್ಕಿಗೆ ತಿರುಗಿಸಿ ಬ್ಲೋ-ಡ್ರೈ ಮಾಡಿ. ಇದು ಆ ಕ್ಲಾಸಿಕ್ ಸಿ ಆಕಾರದ ಸುರುಳಿಯನ್ನು ನೀಡುತ್ತದೆ.

ಹೇರ್‌ಡ್ರೈಯರ್‌ನಿಂದ ಕೂದಲು ಬಿಸಿಯಿರುವಾಗಲೇ ವೆಲ್ಕ್ರೋ ರೋಲರ್‌ಗಳನ್ನು ಬಳಸಿ. ಕೂದಲನ್ನು ನೇರವಾಗಿ ಮೇಲಕ್ಕೆತ್ತಿ, ತುದಿಯಿಂದ ಬುಡದವರೆಗೆ ರೋಲ್ ಮಾಡಿ. ಸುಮಾರು 10 ನಿಮಿಷಗಳ ಕಾಲ ಹಾಗೆಯೇ ಬಿಡಿ. ಕೂದಲು ಸಂಪೂರ್ಣ ತಣ್ಣಗಾದ ನಂತರ ರೋಲರ್ ತೆಗೆದರೆ, ಕೂದಲು ಸುಂದರವಾದ ಅಲೆಗಳಂತೆ ಕಾಣುತ್ತದೆ. ನೀವು ಹೇರ್ ಸ್ಟ್ರೇಟ್‌ನರ್ ಬಳಸುತ್ತಿದ್ದರೆ, ಕೂದಲನ್ನು ಕೇವಲ ಕೆಳಕ್ಕೆ ಎಳೆಯಬೇಡಿ. ಬದಲಿಗೆ, ಕೂದಲಿನ ತುದಿಗೆ ಬಂದಾಗ ಸ್ಟ್ರೇಟ್‌ನರ್ ಅನ್ನು ಸ್ವಲ್ಪ ಹೊರಕ್ಕೆ ತಿರುಗಿಸಿ. ಇದು ನಿಮ್ಮ ಬ್ಯಾಂಗ್ಸ್ ಹೆಚ್ಚು ಸ್ವಾಭಾವಿಕವಾಗಿ ಮತ್ತು ಸುಂದರವಾಗಿ ಕಾಣುವಂತೆ ಮಾಡುತ್ತದೆ. ಬ್ಯಾಂಗ್ಸ್ ಹಣೆಯ ಮೇಲಿರುವುದರಿಂದ, ಮುಖದ ಎಣ್ಣೆ ಅಂಶವನ್ನು ಬೇಗನೆ ಹೀರಿಕೊಳ್ಳುತ್ತವೆ. ಆದ್ದರಿಂದ ನಿಮ್ಮ ಕೂದಲು ಸ್ವಚ್ಛವಾಗಿದ್ದರೂ ಸಹ, ಬುಡಕ್ಕೆ ಸ್ವಲ್ಪ ಡ್ರೈ ಶಾಂಪೂ ಸಿಂಪಡಿಸಿ. ಇದು ಕೂದಲಿನ ವಾಲ್ಯೂಮ್ ಅನ್ನು ಕಾಪಾಡಿಕೊಳ್ಳಲು ಮತ್ತು ದಿನವಿಡೀ ಫ್ರೆಶ್ ಆಗಿ ಕಾಣಲು ಸಹಾಯ ಮಾಡುತ್ತದೆ. ಬ್ಯಾಂಗ್ಸ್ ಮೇಲೆ ಅತಿಯಾದ ಕಂಡೀಷನರ್, ಎಣ್ಣೆ ಅಥವಾ ಜೆಲ್ ಬಳಸಬೇಡಿ. ಇವು ಕೂದಲನ್ನು ಅಂಟಂಟಾಗಿಸಿ ಕೆಳಕ್ಕೆ ಜಾರುವಂತೆ ಮಾಡುತ್ತವೆ. ಕೂದಲನ್ನು ಸೆಟ್ ಮಾಡಲು ಹಗುರವಾದ ಸೆಟ್ಟಿಂಗ್ ಸ್ಪ್ರೇ ಬಳಸಬಹುದು. ■

ಲವಲVK CELEBRITY ಸ್ಟೈಲ್

ಜಾನ್ವಿ ಸೀರೆ ಝಲಕ್

ಸಾಂಪ್ರದಾಯಿಕ ಸೀರೆಗೆ ಆಧುನಿಕ ಟ್ವಿಸ್ಟ್ ಕೊಟ್ಟಿರುವ ನಟಿ ಜಾನ್ವಿ ಕಪೂರ್ ಅವರ ಇತ್ತೀಚಿನ ಲುಕ್ ವೈರಲ್ ಆಗಿದೆ. ಸೀರೆ ಹಾಗೂ ದುಪಟ್ಟಾ ಪರಸ್ಪರ ಬೇರೆಯೇ. ಆದರೆ ಇವೆರಡರ ಸಂಯೋಜನೆಯೊಂದಿಗೆ ಜಾನ್ವಿ ಹೆಣ್ಣುಮಕ್ಕಳ ಮನ ಗೆದ್ದಿದ್ದಾರೆ.

ನೀಲಿ ಬಣ್ಣದ ಶಿಫಾನ್ ಸೀರೆ ಸರಳವಾಗಿಯೇ ಗಮನ ಸೆಳೆದಿದೆ. ಇದಕ್ಕೆ ಮ್ಯಾಚಿಂಗ್ ಹಾಗೂ ಆಕರ್ಷಕ ವಿನ್ಯಾಸವಿರುವ ಬ್ಲೌಸ್ ಧರಿಸಿದ್ದರು. ಪ್ರಮುಖ ಆಕರ್ಷಣೆಯೆಂದರೆ ಅದರ ಒನ್ ಶೋಲ್ಡರ್ ಶೈಲಿಯ ಡ್ರೇಪ್ ಮತ್ತು ಅದಕ್ಕೆ ಮ್ಯಾಚ್ ಆಗುವಂತೆ ಕತ್ತಿನ ಸುತ್ತಲೂ ಸುರುಳಿಯಾಕಾರದಲ್ಲಿ ಸುತ್ತಿ, ಹಿಂದೆ ತೂಗಾಡುವಂತೆ ಬಿಟ್ಟಿದ್ದ ದುಪಟ್ಟಾ, ಅವರ ಈ ಶೈಲಿ ಸೀರೆ ಉಡುವ ಸಾಂಪ್ರದಾಯಿಕ ವಿಧಾನಕ್ಕೆ ಹೊಸ ಟ್ವಿಸ್ಟ್ ನೀಡಿದೆ. ಸೀರೆಗೆ ಪೂರಕವಾಗಿ ಇಯರ್‌ರಿಂಗ್ಸ್ ಮತ್ತು ಉಂಗುರ ಹಾಗೂ ಬ್ರೇಸ್ಲೆಟ್ ಧರಿಸಿದ್ದರು. ಮಿನುಗುವ ಐಶ್ಯಾಡೋ, ವಿಂಗ್ಡ್ ಲೈನರ್, ಗ್ಲಾಸಿ ನ್ಯೂಡ್ ಲಿಪ್‌ಸ್ಟಿಕ್‌ನೊಂದಿಗೆ ಕಂಗೊಳಿಸಿರುವ ಜಾನ್ವಿ ಅವರ ಈ ಲುಕ್ ಮುಂದಿನ ದಿನಗಳಲ್ಲಿ ಸಾಮಾನ್ಯ ಜನರನ್ನು ಸೆಳೆಯುವ ನಿರೀಕ್ಷೆ ಇದೆ. ■

ಲವಲVK ಕಿಚನ್ TIPS

ಅಡುಗೆ ಮನೆಯ ಚಾಕು ಹರಿತವಾಗಿರಲಿ



ಹಣ್ಣು, ತರಕಾರಿ, ಮಾಂಸ ಕತ್ತರಿಸುವ ಚಾಕು ಮೊಂಡಾಗಿದ್ದರೆ ಕತ್ತರಿಸುವ ಪ್ರಕ್ರಿಯೆ ಯುದ್ಧದಂತೆ ಭಾಸವಾಗುತ್ತದೆ. ಚಾಕು ಹರಿತವಾಗಿಲ್ಲದಿದ್ದರೆ ಹೀಗಾಗುತ್ತದೆ ಎಂದೇ ಬಹುತೇಕರು ಅಂದುಕೊಂಡಿದ್ದಾರೆ. ಆದರೆ ಚಾಕುವಿನ ಬಳಕೆ, ಅದನ್ನು ತೊಳೆಯುವ, ನಿರ್ವಹಣೆ ಮಾಡುವ ವಿಧಾನವೂ ಹರಿತ ಮೇಲ್ಮೈ ಮೇಲೆ ಪರಿಣಾಮ ಬೀರುತ್ತದೆ. ಚಾಕು ಮೊಂಡಾಗಿದ್ದರೆ ಅಡುಗೆ ಪ್ರಕ್ರಿಯೆ ನಿಧಾನವಾಗುತ್ತದೆ ಮತ್ತು ಅಸುರಕ್ಷಿತವಾಗಿರುತ್ತದೆ.

- ಕಟ್ಟಿಂಗ್ ಬೋರ್ಡ್‌ನ ಮೇಲ್ಮೈ ಕೂಡ ಚಾಕುವಿನ ಅಂಚಿನ ಮೇಲೆ ಪರಿಣಾಮ ಬೀರುತ್ತದೆ. ಗಾಜು, ಕಲ್ಲು, ಮಾರ್ಬಲ್, ಸೆರಾಮಿಕ್‌ನಂಥ ಗಟ್ಟಿ ಮೇಲ್ಮೈಯ ಕಟ್ಟಿಂಗ್ ಬೋರ್ಡ್ ನೋಡಲು ಸುಂದರವಾಗಿ ಕಂಡರೂ ಚಾಕುವಿನ ಸ್ಟೀಲ್ ಅಂಚಿನ ಮೇಲೆ ಇದು ಪರಿಣಾಮ ಬೀರುತ್ತದೆ. ಇದಕ್ಕಾಗಿ ಮರದ ಅಥವಾ ಪ್ಲಾಸ್ಟಿಕ್ ಕಟ್ಟಿಂಗ್ ಬೋರ್ಡ್ ಉತ್ತಮ.
- ಚಾಕುಗಳನ್ನು ಇಂಥದ್ದೇ ವಸ್ತುಗಳನ್ನು ಕತ್ತರಿಸಲೆಂದೇ ವಿವಿಧ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿರುತ್ತದೆ. ಆದರೆ ಜನರು ಎಲ್ಲಾ ಬಗೆಯ ಚಾಕು ಒಂದೇ ಎಂದು ತಿಳಿದು ಅದರಿಂದಲೇ ಬಾಟಲಿಯ ಮುಚ್ಚಳ ತೆಗೆಯುವುದು, ಫ್ರೋಝನ್ ಆಹಾರಗಳನ್ನು ಸ್ಲೈಸ್ ಮಾಡುವುದು, ಮಾಂಸ ಕತ್ತರಿಸುವುದು, ತರಕಾರಿ ಹೆರೆಯುವುದು, ಪ್ಯಾಕೆಟ್ ಕತ್ತರಿಸುವುದನ್ನು ಮಾಡುತ್ತಾರೆ. ಇದರಿಂದ ಚಾಕುವಿನ ಹರಿತ ಅಂಚಿಗೆ ಸಾಕಷ್ಟು ಒತ್ತಡ ಬಿದ್ದು ಮೊಂಡಾಗುತ್ತದೆ.
- ಸಾಮಾನ್ಯ ಚಾಕುವಿನಿಂದ ದಪ್ಪನೆಯ ಕುಂಬಳಕಾಯಿ ಕತ್ತರಿಸಲಾಗದು. ಇದೇ ರೀತಿ ಬ್ರೆಡ್ ಕತ್ತರಿಸುವ ಚಾಕುವಿನಲ್ಲಿ ಸೇಬು ಕತ್ತರಿಸಲಾಗದು. ಕಷ್ಟಪಟ್ಟು ಕತ್ತರಿಸಿದರೂ ಕ್ರಮೇಣ ಆ ಚೂರಿಯ ಬ್ಲೇಡ್ ಹರಿತ ಕಳೆದುಕೊಳ್ಳುತ್ತದೆ.
- ಚಾಕುವನ್ನು ನೀರಿನಲ್ಲಿ ಪದೇಪದೆ ತೊಳೆಯುವುದು ಹಾಗೂ ಅದನ್ನು ಸಿಂಕ್‌ನಲ್ಲಿ ಬಹುಸಮಯದವರೆಗೆ ಇಡುವುದರಿಂದ ಇತರ ಪಾತ್ರೆಗಳ ಮೇಲ್ಮೈ ಅದಕ್ಕೆ ತಗಲಿ ಮೊಂಡಾಗುತ್ತದೆ.
- ಚಾಕುವನ್ನು ಹೇಗೆ ಬೇಕೋ ಹಾಗೆ ಡ್ರಾಯರ್‌ನಲ್ಲಿ ಇಡುವುದರಿಂದಲೂ ಅದರ ಅಂಚು ಸ್ಟೀಲ್, ಸೆರಾಮಿಕ್ ಇತ್ಯಾದಿಗೆ ತಾಗಿ ಬಗ್ಗುತ್ತದೆ. ■

ವಿಜಯಬಂಧ - 7957

■	■	1	2		3		■	■
4		■		■		■	5	6
	■	7		8		9	■	
10	11		■		■	12	13	
■		■	■	■	■	■		■
14		15	■	16	■	17		18
	■	19	20		21		■	
22		■		■		■	23	
■	■	24					■	■

ಎಡದಿಂದ ಬಲಕ್ಕೆ
1 ನಿರಾಕಾರದಿಂದ ಸಹಾಯ ಮಾಡಿದ ನಿಮಿತ್ತಮಾತ್ರದ ವ್ಯಕ್ತಿ 5
4 ತಾಕತ್ತು ಇದ್ದದನು ಬಗ್ಗಿಸದ ಕೊರಳು 2
5 ದಾಂಧಲೆ ಮಾಡಿದಾಗ ಆದ ಸರ್ವನಾಶ 2
7 ನೂತನವಾಗಿ ಬೆಳಗಿದ ಪ್ರಭೆ 5
10 ಕರದಿಂದ ಎತ್ತಿ ಮುದ್ದಿಸಲಾಗದ ಕಾಡುಪ್ರಾಣಿ 3
12 ಶರ್ಕರ ಭಕ್ಷಿಸಿ ಶರ ಪಿಡಿದ ಬೇಡ 3
14 ನಸುಕಿನ ಜಾವದಲ್ಲಿ ಅರಳಿದ ಚಿತ್ತ 3
17 ಮತದ ಒತ್ತಾಸೆಯಿಂದ ಅಹಂಕಾರ ತುಂಬಿಕೊಂಡವನು 3
19 ಅದೃಶ್ಯ ಮಾಡುವ ಶಕ್ತಿ ಉಳ್ಳ ಮಾನವ 5
22 ಸರತಿಯಲ್ಲಿ ಬಂದರೆ ಈ ಮನ್ಮಥಪ್ರಿಯೆ ಸಿಗುತ್ತಾಳೆ 2
23 ತಕರಾರು ಮಾಡದೆ ನೀಡಿದ ತಂತಿ 2
24 ಹಿಂದೆ ಕಾನಕಾನಹಳ್ಳಿ ಎಂದಿದ್ದ ಬೆಂಗಳೂರು ದಕ್ಷಿಣದ ಶಹರು 5

ಮೇಲಿನಿಂದ ಕೆಳಕ್ಕೆ
2 ತಾರಕನ ಎದುರು ಬಂದು ನಿಂತ ರಾಕ್ಷಸ 3
3 ಆಕಳನ್ನು ಹೊಡೆದು ತಂದಾಗ ಮಾಡಿದ ಊಟ 3
4 ಕಳದಲ್ಲಿ ಪ್ರದರ್ಶಿಸಿದ ಅಂಕಕ್ಕೆ ಬಂದ ಕೆಟ್ಟ ಹೆಸರು 3
6 ಸರದ ದರ ತುಂಬಾ ಸಲೀಸು 3
7 ಹೊರಡಿ ಎಂದರೂ ಕೇಳದೆ ಥಳಿಸು 2
8 ಕಳ್ಳಹೆಜ್ಜೆ ಇರಿಸುತ್ತಾ ಸನ್ಯಾಸಿಯಂತೆ ಬಂದ ಮಾರ್ಜಾಲ 2
9 ಕುಶಲ ಕೇಳಿದಾಗ ಆಗಮಿಸಿದ ಸೀತಾತನಯ 2
11 ಅರಸರ ರುಚಿಗೆ ಸಹಕರಿಸಿದ ನಾಲಗೆ 3
13 ಬಸವಣ್ಣನವರು ಕಂಡು ಬಂದ ಜೈನ ದೇಗುಲ 3
14 ಮರದ ಮೇಲೆ ಹತ್ತಿದವನ ಮೇಲಿರಿಸಿದ ಸೇಡು 3
15 ಪಿಸು ಮಾತಿಗೆ ಮರುಳಾಗಿ ಅರಳಿದ ಪುಷ್ಪ 2
16 ಶ್ರೀನಿವಾಸನ ಹಣೆಯ ಮೇಲೆ ಎತ್ತಿ ಕಾಣುವ ತಿಲಕ 2
17 ಮನುಜನಿಗೆ ಹಣ ಸಿಕ್ಕಾಗ ಮಾಡಿದ ಮೋಜು 2
18 ಅವರು ಕಂಡು ಬಂದ ತಾಯಿಮನೆ 3
20 ಯಜ್ಞವನ್ನು ಮಾಡಿಸುವಿಕೆ 3
21 ಕೊಣಪ ಎತ್ತಿ ತಂದ ಶಿಲೆ ತುಂಬಾ ನಯ 3

ವಿಜಯಬಂಧ | 7956
ಎಡದಿಂದ ಬಲಕ್ಕೆ: 2.ಜಟ್ಟಿ 3.ನ್ಯಾಸ 6.ಸಮಾನ 8.ಮತಂಗ 9.ಯಮತನಯ 13.ಅನವರತ 17.ಸಮಗ್ರ 18.ಸಮಯ 19.ಹಕ್ಕು 20.ಹಣೆ.
ಮೇಲಿನಿಂದ ಕೆಳಕ್ಕೆ: 1.ಮಸಲತ್ತು 2.ಜನಪ್ರಿಯ 4.ಸಮನ್ವಯ 5.ರಂಗಭೂಮಿ 7.ಸಾಮಂತ 10.ಮಸನ 11.ನಶ್ವರ 12.ಅವಸರ 13.ಅನುಗ್ರಹ 14.ವರ್ಷಋತು 15.ತಪಾಸಣೆ 16.ಅಪಯಶ.

ಅ.ನಾ. ಪ್ರಹ್ಲಾದರಾವ್

ದಿನ ಭವಿಷ್ಯ

ಶ್ರೀಪತಿ ಭಟ್ ಆಚಾರ್ಯ, ಬೆಂಗಳೂರು

ನಿಮ್ಮ ರಾಶಿಚಕ್ರಕ್ಕೆ ಅನುಗುಣವಾಗಿ ಸೂಕ್ತವಾದ ರತ್ನಗಳು, ಶಿಕ್ಷಣ, ವೃತ್ತಿಜೀವನ, ವಿವಾಹ, ಸಂತಾನ, ಆರೋಗ್ಯ, ಆರ್ಥಿಕ ಸ್ಥಿತಿ ಮತ್ತು ಇನ್ನಿತರ ವಿಷಯಗಳ ಬಗ್ಗೆ ವಿವರಗಳಿಗಾಗಿ ಹಾಗೆಯೇ ಸಮಸ್ಯೆಗಳಿಗೆ ಪರಿಹಾರ ರೂಪದ ಪೂಜೆಗಳು, ವಿವಾಹ ಹೊಂದಾಣಿಕೆ, ಮಕ್ಕಳ ಜಾತಕ ಮತ್ತು ಶೈಕ್ಷಣಿಕ ಪ್ರಗತಿಯ ಬಗ್ಗೆ ಮಾಹಿತಿಗಾಗಿ ದಯವಿಟ್ಟು ಖುದ್ದಾಗಿ ಭೇಟಿ ನೀಡಿ. ದೂ: 9513747474

ಕನ್ಯಾ, ಮಕರ, ಮೀನ-ಈ ರಾಶಿಯವರು ಈ ದಿನ ಜಾಮೀನು ಕೊಡಬೇಡಿ

ಮೇಷ: ರಾಜಕೀಯ ವರ್ಗದವರಿಗೆ ತಮ್ಮ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಸಕಾಲ. ಕೆಲಸಗಾರರ ಅಸಹಕಾರದಿಂದ ನಷ್ಟ ನೋಡಬೇಕಾಗಬಹುದು. ಮಕ್ಕಳ ಆರೋಗ್ಯದಲ್ಲಿ ವ್ಯತ್ಯಾಸ ಉಂಟಾಗುವುದು. **ಶುಭ ಸಂಖ್ಯೆ** : 9, **ಬಣ್ಣ**: ನೀಲಿ
(**ನಾಮಾಕ್ಷರ:** ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ) ಅಶ್ವಿನಿ, ಭರಣಿ, ಕೃತ್ತಿಕಾ 1ನೇ ಪಾದ


ವೃಷಭ: ಮಾನಸಿಕ ನೆಮ್ಮದಿಗೆ ಪುಣ್ಯಕ್ಷೇತ್ರಗಳ ದರ್ಶನ ಮಾಡುವುದು ಉತ್ತಮ. ವೃತ್ತಿಯಲ್ಲಿ ಹೊಸ ಪ್ರಯತ್ನಗಳು ಲಾಭ ತಂದು ಕೊಡಲಿವೆ. ಅಗತ್ಯ ವಸ್ತುಗಳ ಖರೀದಿಗೆ ಹಣ ವಿನಿಯೋಗ ಆಗುವುದು. **ಶುಭ ಸಂಖ್ಯೆ** : 2, **ಬಣ್ಣ**: ಕಂದು
(ಇ, ಉ, ಎ, ಒ, ವ, ವಿ, ವು, ವೆ, ವೊ) ಕೃತ್ತಿಕಾ 2, 3, 4ನೇ ಪಾದ, ರೋಹಿಣಿ, ಮೃಗಶಿರ 1, 2ನೇ ಪಾದ


ಮಿಥುನ: ಸಾಹಸ ಕೃತ್ಯಗಳನ್ನು ಕೈಗೊಳ್ಳುವ ಮನೋಭಿಲಾಷೆ ಕಾಡಲಿದ್ದು ಅದಕ್ಕೆ ಪ್ರಯತ್ನಿಸುವಿರಿ. ಮಗನ ಉದ್ಯೋಗದಲ್ಲಿನ ಪ್ರಗತಿಯಿಂದ ಸಂತೋಷ. ಇಂದು ಅಪೇಕ್ಷಿಸುತ್ತಿರುವ ವಸ್ತು ಕೈ ಸೇರಲಿದೆ. **ಶುಭ ಸಂಖ್ಯೆ** : 6, **ಬಣ್ಣ**: ಆಕಾಶ ನೀಲಿ
(ಕ, ಕಿ, ಕು, ಘ, ಙ, ಚ, ಕೆ, ಕೊ, ಹ) ಮೃಗಶಿರ 3, 4, ಆರ್ದ್ರೆ, ಪುನರ್ವಸು 1, 2, 3

ಕಟಕ: ಕಾಡುವ ಸಮಸ್ಯೆಯಿಂದ ಯಾರಲ್ಲೂ ನಂಬಿಕೆ ಇಡದಂತಹ ಪರಿಸ್ಥಿತಿ ಬರಬಹುದು. ಕಣ್ಣಿನ ದೃಷ್ಟಿ ಸರಿಪಡಿಸಿಕೊಳ್ಳಲು ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬೇಕಾಗುವುದು. ಬರಹಗಾರರಿಗೆ ವಿಷಯ ಸಂಗ್ರಹವಾಗುವುದು. **ಶುಭ ಸಂಖ್ಯೆ** : 8, **ಬಣ್ಣ**: ಬಿಳಿ
(ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ) ಪುನರ್ವಸು 4ನೇ ಪಾದ, ಪುಷ್ಯ, ಆಶ್ಲೇಷ

ಸಿಂಹ: ವಸ್ತುಗಳ ಖರೀದಿಯಲ್ಲಿ ವಿಶೇಷ ರಿಯಾಯಿತಿ ಸಿಕ್ಕಿ ಲಾಭ ಪಡೆಯುವಿರಿ. ಮಾನಸಿಕ ಸ್ಥಿತಿ ಹತೋಟಿಗೆ ತರುವಲ್ಲಿ ಶ್ರಮದ ಅಗತ್ಯ. ನಿರುದ್ಯೋಗಿಗಳಿಗೆ ಲೆಕ್ಕಪತ್ರಗಳ ಜವಾಬ್ದಾರಿ ನೋಡುವ ಕೆಲಸ ಸಿಗುವ ಸಾಧ್ಯತೆ ಇದೆ. **ಶುಭ ಸಂಖ್ಯೆ** : 3, **ಬಣ್ಣ**: ಹಸಿರು
(ಮ, ಮಿ, ಮು, ಮೆ, ಮೊ, ಟ, ಟಿ, ಟು, ಟೆ) ಮಘೆ, ಪುಬ್ಬೆ, ಉತ್ತರ ಫಲ್ಗುಣಿ 1ನೇ ಪಾದ

ಕನ್ಯಾ: ಅತಿ ಆಲಸ್ಯವು ಕೆಲಸಕ್ಕೆ ಅಡ್ಡಿ ಮಾಡಲಿದೆ. ಅದರ ಪರಿಣಾಮ ಜನರ ಅಪಹಾಸ್ಯಕ್ಕೆ ಕಾರಣರಾಗುವಿರಿ. ಹಳೆಯ ವಾಹನದ ಕೊಡು-ಕೊಳ್ಳುವಿಕೆಯಲ್ಲಿ ಲೆಕ್ಕಪತ್ರಗಳ ಬಗ್ಗೆ ಗಮನವಿರಲಿ. **ಶುಭ ಸಂಖ್ಯೆ** : 1, **ಬಣ್ಣ**: ಪಾಚಿ ಹಸಿರು
(ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ) ಉತ್ತರ ಫಲ್ಗುಣಿ 2, 3, 4ನೇ ಪಾದ, ಹಸ್ತ, ಚಿತ್ತಾ 1, 2ನೇ ಪಾದ


ತುಲಾ: ಎಲೆಕ್ಟ್ರಾನಿಕ್ ಕ್ಷೇತ್ರದಲ್ಲಿರುವವರಿಗೆ ವ್ಯಾಪಾರದಲ್ಲಿ ಅದಾಯವಿದೆ. ಬಂಧುಗಳ ಮನೆಯ ಸತ್ಕಾರ ಕೂಟಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಿರಿ. ಉದ್ಯೋಗ ವ್ಯವಹಾರಗಳಲ್ಲಿ ತೊಂದರೆಗಳಿರುವುದಿಲ್ಲ. **ಶುಭ ಸಂಖ್ಯೆ** : 4, **ಬಣ್ಣ**: ಹಳದಿ
(ರ, ರಿ, ರು, ರೆ, ರೊ, ತ, ತಿ, ತು, ತೆ) ಚಿತ್ತಾ 3, 4ನೇ ಪಾದ, ಸ್ವಾತಿ, ವಿಶಾಖ 1, 2, 3ನೇ ಪಾದ

ವೃಶ್ಚಿಕ: ಪ್ರಾಮಾಣಿಕವಾಗಿ ಮತ್ತು ನಿಷ್ಠೆಯಿಂದ ಕೆಲಸ-ಕಾರ್ಯಗಳಲ್ಲಿ ತೊಡಗಿಸಿಕೊಂಡಲ್ಲಿ ನಿಧಾನವಾಗಿ ಯಶಸ್ಸು ಪ್ರಾಪ್ತಿ. ಕೃಷಿ ಪ್ರದೇಶವನ್ನು ವ್ಯವಸ್ಥಿತ ರೀತಿಯಲ್ಲಿ ಇಟ್ಟುಕೊಳ್ಳಲು ತೀರ್ಮಾನಿಸುವುದು ಉತ್ತಮ. **ಶುಭ ಸಂಖ್ಯೆ** :5, **ಬಣ್ಣ**: ಬೂದು
(ತೊ, ನ, ನಿ, ನು, ನೆ, ನೊ, ಯ, ಯಿ, ಯು) ವಿಶಾಖ 4ನೇ ಪಾದ, ಅನುರಾಧ, ಜ್ಯೇಷ್ಠ

ಧನುಸ್ಸು: ಹಿಡಿದ ಕಾರ್ಯದಲ್ಲಿ ವಿಳಂಬ ಉಂಟಾಗುವುದು ಅಥವಾ ಅಂತಿಮ ಕ್ಷಣದಲ್ಲಿ ನೆರವೇರುವ ಅನುಭವವಾಗಲಿದೆ. ಧ್ಯಾನ ಮಾಡುವುದರಿಂದ ಮನಸ್ಸು ನಕಾರಾತ್ಮಕ ಭಾವನೆಯಿಂದ ಹೊರಬರಬಹುದು. **ಶುಭ ಸಂಖ್ಯೆ** : 9, **ಬಣ್ಣ**: ಕೇಸರಿ
(ಯೆ, ಯೊ, ಬ, ಬಿ, ಬು, ಧ, ಭ, ಢ, ಬೆ) ಮೂಲ, ಪೂರ್ವಾಷಾಢ, ಉತ್ತರಾಷಾಢ 1ನೇ ಪಾದ


ಮಕರ: ಹೊಸ ಆಕಾಂಕ್ಷೆಗಳನ್ನು ಅಥವಾ ಜೀವನದ ಗುರಿಗಳನ್ನು ಚೆನ್ನಾಗಿ ಅರಿತುಕೊಂಡು ಬದುಕಿನಲ್ಲಿ ಮುಂದಿನ ಹೆಜ್ಜೆ ಇಡುವುದು ಉತ್ತಮ. ವ್ಯವಹಾರದಲ್ಲಿ ದಾಕ್ಷಿಣ್ಯ ಪ್ರವೃತ್ತಿಗೆ ಒಳಗಾಗದಂತೆ ಇರಿ. **ಶುಭ ಸಂಖ್ಯೆ** : 7, **ಬಣ್ಣ**: ಗುಲಾಬಿ
(ಬೊ,ಜ,ಜಿ,ಶಿ,ಶು,ಶೆ,ಶೊ,ಗ,ಗಿ) ಉತ್ತರಾಷಾಢ 2, 3, 4 ನೇ ಪಾದ, ಶ್ರವಣ, ಧನಿಷ್ಠ 1, 2ನೇ ಪಾದ

ಕುಂಭ: ವಿವಾದಾಸ್ಪದ ವಿಷಯಗಳ ಕಡೆ ಗಮನ ಕೊಡದೆ ನಿಮ್ಮ ಕೆಲಸಗಳನ್ನು ಮಾಡಿಕೊಂಡಲ್ಲಿ ಲಾಭ ದೊರಕುವುದು. ಮನಸ್ಸಿಗೆ ಮುದ ನೀಡುವ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಭಾಗವಹಿಸುವಿರಿ. **ಶುಭ ಸಂಖ್ಯೆ** :8, **ಬಣ್ಣ**: ಕೆಂಪು
(ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ) ಧನಿಷ್ಠ 3, 4ನೇ ಪಾದ, ಶತಭಿಷ, ಪೂರ್ವಾಭಾದ್ರ 1, 2, 3ನೇ ಪಾದ


ಮೀನ: ಪ್ರತಿಯೊಂದರಲ್ಲೂ ಯಶಸ್ಸನ್ನು ಕಾಣಲು ಶ್ರಮಪಡಬೇಕಾದ ಅಗತ್ಯವಿದೆ. ಮಾಡಿದ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸಿ. ಉದ್ಯೋಗ ದೊರೆತು ಸಮಾಧಾನವಾಗುವುದು. **ಶುಭ ಸಂಖ್ಯೆ** : 3, **ಬಣ್ಣ**: ಕಪ್ಪು
(ದಿ,ದು,ಖ,ಝ,ಥ,ದೆ,ದೊ,ಚ,ಚಿ) ಪೂರ್ವಾಭಾದ್ರ 4ನೇ ಪಾದ, ಉತ್ತರಾಭಾದ್ರ, ರೇವತಿ

ದಿನಗೂಲಿ ನೌಕರಿಯಿಂದ ವಜಾಗೊಂಡ ಮಹಿಳೆ ಆತ್ಮಹತ್ಯೆಗೆ ಯತ್ನ

ಬಾಗಲಕೋಟೆ: ನವನಗರದ ಮ್ಯೂಸಿಯಂನಲ್ಲಿ ದಿನಗೂಲಿ ಕಾರ್ಮಿಕರಾಗಿದ್ದ ಮಂಜುಳಾ ದಾಸರ (40) ಅವರನ್ನು ಪುನರ್ವಸತಿ ಹಾಗೂ ಪುನರ್‌ನಿರ್ಮಾಣ ವಿಭಾಗದಿಂದ ಇತ್ತೀಚೆಗೆ ವಜಾಗೊಳಿಸಲಾಗಿತ್ತು. ನೊಂದ ಅವರು ಸೋಮವಾರ ಮ್ಯೂಸಿಯಂ ಎದುರು ವಿಷಸೇವಿಸಿ ಆತ್ಮಹತ್ಯೆಗೆ ಯತ್ನಿಸಿದರು. ಅಸ್ವಸ್ಥಗೊಂಡ ಅವರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಯಿತು. "ವಿನಾಕಾರಣ ಕೆಲಸದಿಂದ ತೆಗೆದುಹಾಕಲಾಗಿದೆ" ಎಂದು ಮಂಜುಳಾ ಆರೋಪಿಸಿದ್ದಾರೆ.

ಬೆಟ್ಟಿಂಗ್ ಆಡುತ್ತಿದ್ದ ಇಬ್ಬರ ಬಂಧನ

ಬೆಳಗಾವಿ: ನಗರದಲ್ಲಿ ಐಪಿಎಲ್ ಕ್ರಿಕೆಟ್ ಬೆಟ್ಟಿಂಗ್ ಆಡುತ್ತಿದ್ದ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ. ಮೈತಾಬ ಮುಲ್ಲಾ, ಅಫ್ಜಲ್ ಅಸ್ಗರ್‌ಅಲಿ ಬಂಧಿತರು. ಆರೋಪಿಗಳಿಂದ 6,600 ರೂ.ನಗದು ಹಾಗೂ ಮೊಬೈಲ್ ಸೇರಿ ಇತರ ಸಾಮಗ್ರಿ ಜಪ್ತಿ ಮಾಡಲಾಗಿದೆ.

ಪಡಿತರ ಅಕ್ಕಿ ಜಪ್ತಿ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಜಲಾಶಯದ ಬಳಿ ಅಕ್ರಮವಾಗಿ ಸಾಗಿಸುತ್ತಿದ್ದ 325 ಕ್ವಿಂಟಾಲ್ ಪಡಿತರ ಅಕ್ಕಿಯನ್ನು ಭಾನುವಾರ ವಶಪಡಿಸಿಕೊಳ್ಳಲಾಗಿದೆ. ಕೊಪ್ಪಳ ಕಡೆಯಿಂದ ಹೊಸಪೇಟೆ ಕಡೆ ಬರುತ್ತಿದ್ದ ಲಾರಿಯನ್ನು ಆಹಾರ ನಿರೀಕ್ಷಕ ಅಜಿತ್ ಹಾಗೂ ಪೊಲೀಸ್ ಅಧಿಕಾರಿಗಳು ತಡೆದು ತಪಾಸಣೆ ನಡೆಸಿದರು. ಈ ವೇಳೆ ಅಧಿಕೃತ ದಾಖಲೆಗಳಿಲ್ಲದೆ ಅಕ್ಕಿ ಸಾಗಿಸುತ್ತಿತ್ತು. ಇದರ ಮೌಲ್ಯ 7.54 ಲಕ್ಷ ರೂ. ಎಂದು ಅಧಿಕಾರಿಗಳು ತಿಳಿಸಿದ್ದಾರೆ.

TIMES interact
Connecting People, Connecting Needs.

ನಿಮ್ಮ ಕ್ಲಾಸಿಫೈಡ್ ಜಾಹೀರಾತಿಗಾಗಿ ಸಂಪರ್ಕಿಸಿ
080-40877 666, 40877 543
ಕರೆ ಮಾಡಿ : 99160 79232
narasinha.kulkarni@timesofindia.com

ಉದ್ಯೋಗ RECRUITMENT

SITUATION VACANT

OTHER VACANCIES

GENERAL

ಬೇಕಾಗಿದ್ದಾರೆ: ಬೆಂಗಳೂರಿನಲ್ಲಿ ಯುಪಿವಿಸಿ/ಅಲ್ಯೂಮಿನಿಯಂ ಕಿಟಕಿ ಮತ್ತು ಬಾಗಿಲುಗಳ ತಯಾರಿಕಾ ಘಟಕಕ್ಕೆ ತಂತ್ರಜ್ಞರು / ಸಹಾಯಕರು ಅಗತ್ಯವಿದ್ದಾರೆ. ವಸತಿ ಒದಗಿಸಬಹುದಾಗಿದೆ. ಕೈಗಾರಿಕಾ ಮಾನದಂಡಗಳ ಪ್ರಕಾರ ಸಂಬಳ ಇರುತ್ತದೆ. ನಿಮ್ಮ ರೆಸ್ಯೂಮ್ ಅನ್ನು ವ್ಯಾಟ್ಸ್‌ಆ್ಯಪ್ 9886301959 ಮೂಲಕ ಕಳುಹಿಸಿ ಅಥವಾ info@urbanartisan.orgಗೆ ಇಮೇಲ್ ಮಾಡಿ.

ಕೆಲಸ ಖಾಲಿ ಇದೆ: ಕರ್ನಾಟಕದಾದ್ಯಂತ ಎಂಎನ್‌ಸಿ ಕಂಪನಿಗಳಾದ ಟಿವಿಎಸ್, ಬ್ರಿಟಾನಿಯಾ ಡೈರಿಗಳಿಗೆ ಹಾಗೂ ಆಫೀಸ್‌ಗಳಿಗೆ 7ನೇ, 10ನೇ, 12ನೇ ತರಗತಿ, ಐಟಿಐ, ಎನಿ ಡಿಗ್ರಿಯವರಿಗೆ ಬಂದ ದಿನವೇ ನೇರ ಆಯ್ಕೆ (ಮಾರ್ಕೆಟಿಂಗ್ ಅಲ್ಲ). ವಸತಿಯೂಟವಿರುತ್ತದೆ. ಸಂಬಳ: ರೂ. 15,000 - 46,000/- ಸಂಪರ್ಕಿಸಿ: 77608 35029

ಬೆಂಗಳೂರಿನ ಜೆ.ಪಿ.ನಗರದಲ್ಲಿ ಮನೆ ಕೆಲಸದವರು, ಅಡಿಗೆಯವರು ಮತ್ತು ಡ್ರೈವರ್ ಬೇಕಾಗಿದ್ದಾರೆ. ಉತ್ತಮ ಸಂಬಳದೊಂದಿಗೆ ಊಟ ವಸತಿ ಉಚಿತ. 8951517993 / 9009003538

RETIRED PERSONS

WANTED Men, Women - Office work, Full /Part Time, Age 25 to 65, SSLC, PUC, Degree. Earn Monthly Rs. 1 Lakh +, Free Europe Trip. Ct:9980670027

ಪ್ರವಾಸ TRAVEL

TOURS & TRAVELS

05-06-2026 1 ದಿನ ಕೊಟ್ಟಿಯೂರ್ 11-6-26 3 ದಿನ ಕೊಟ್ಟಿಯೂರು, ವೈನಾಡು, 17-6-26 5 ದಿನ ಪಳನಿ, ರಾಮೇಶ್ವರಂ, ಕನ್ಯಾಕುಮಾರಿ ಇತ್ಯಾದಿ ಶ್ರೀವಿನಾಯಕ ಟ್ರಾವೆಲ್ಸ್ 9972500645

TIMES TRIBUTE
PAYING HOMAGE TO THE DEPARTED SOUL
ದಿನಪತ್ರಿಕೆಯಲ್ಲಿ ತುರ್ತು ಸ್ಮರಣೆ ಅಥವಾ ನಿಧನ ಜಾಹೀರಾತು ಪ್ರಕಟಿಸಲು ನಾವು ಲಭ್ಯ
ನಾವು ನಿಮ್ಮ ಮನವಿಯನ್ನು ಕರೆ/ಇಮೇಲ್/ವಾಟ್ಸಪ್ ಮೂಲಕ ಸ್ವೀಕರಿಸುತ್ತೇವೆ
ತ್ವರಿತಗತಿಯಲ್ಲಿ ನಿಮ್ಮ ಪ್ರಕಟಣೆ/ ಜಾಹೀರಾತು ವಿನ್ಯಾಸ ಮಾಡಲಾಗುವುದು
ನೀವು ಅನುಮೋದಿಸಿದ ನಂತರ ಶುಲ್ಕವನ್ನು ಪೇಟಿಎಂ/ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಪಾವತಿಸುವುದು.
ಸಂಪರ್ಕಿಸಿ: ನರಸಿಂಹ ಕುಲಕರ್ಣಿ-99160 79232
narasinha.kulkarni@timesofindia.com

ಆಸ್ತಿಗಳು PROPERTY

PROPERTY ANCILLARIES

PROPERTY WANTED

LAND required for long term lease- 20 yrs, for petrol bunk in Chanasandra Village, Uttarahalli Hobli. Ph-9844776757

personal

CHANGE OF NAME

I, DINESH KRISHNAN, residing at 468, 1st A Cross Road, Behind Popular Bajaj Showroom, 8th Block, Koramangala, Bangalore - 560095, have changed my name from DINESH to DINESH KRISHNAN and shall hereafter be known as DINESH KRISHNAN for all purposes.

I, PRASHANT MAHENDRA BOHRA S/o Mahendra Kumar Madanlal, residing at No.227/229, Seppings Road, Shivaji Nagar, Bengaluru-560 001 have changed my name to PRASHANT BOHRA vide affidavit dated 23.05.2026 sworn before notary A R Muneer Ahmed, Bangalore.

ESLAVATH Sowjanya, W/o 14863468A SEP/MT R Ramesh Nayak, R/a Latpally Nagar, Kurnool Telangana, changed my name to Ramavath Sowjanya, for all purpose.

"I, Regina, residing at #177/30 24th cross Old BagalurLayout St thomas town post bangalore 560084, have changed my name from Regina C to Regina for all purpose.

I, M Rema Bhaskaran, W/o. Bhaskaran A. No.16, BMP No.13, 1st Main, 3rd Cross, Malleshpalya, Blr-75, have change my name from Rema Madambath to M Rema Bhaskaran for all foture proses.

I Ganesh Honakeri aged about 48 years residing at No.92,16th cross, Vijayalakshmi, Kalkere, Horamavu Bengaluru-560043 have changed my daughter's name Taniksha Ganesh Honakeri to TANIKSHA HONAKERI (Both name & person refer to one and the same person) vide affidavit Dated 23/05/2026 sworn before notary Uday Kumar K.

ನಾವಿಬ್ಬರು ಆಲೋಕ್ ಕುಮಾರ್ ಮತ್ತು ಮಧು ಸಿನ್ಹಾ ಆರ್, ವಾಸಸ್ಥಳ: ಬಿ112, ಜಿಆರ್ ಸಂಕಲ್ಪ ಅಪಾರ್ಟ್‌ಮೆಂಟ್, ಬೆಂಗಳೂರು-35. ನಾವು ನಮ್ಮ ಅಪ್ರಾಪ್ತ ವಯಸ್ಸಿನ ಮಗನ ಹೆಸರನ್ನು ರೆಯಾನ್ಶ್ ಕುಮಾರ್ (ಜನ್ಮ ದಿನಾಂಕ: 09/09/2017) ಇವರಿಂದ ರೆಯಾನ್ಶ್ ಸಿಂಗ್ ಎಂದು ಬದಲಾಯಿಸಿಕೊಂಡಿದ್ದೇವೆ. ಇದಕ್ಕೆ ಸಂಬಂಧಿಸಿದಂತೆ ದಿನಾಂಕ 13/05/2026 ರ ಅಫಿಡವಿಟ್ ಸಂಖ್ಯೆ: IN-KA58790030219242Y ಆಗಿರುತ್ತದೆ.

CAUTION NOTICE
Publication reserves the right to withhold / cancel ads without prior notice and / or assigning any reason. Refund (if any) against such unpublished ads must be claimed at the booking offices.

I, SHELVI W/o Vishal Bernadshaa.R Agd 46 Yrs R/at 78/3, 4th Crs, Srirampuram Blr- 21 Hv Changed my name as VARNIKHAA SHRI VISHAL vide affidavit Dt: 25/5/26 Sworn To Notary Sakalesh Blr.

I, Deepa Baranwal, R/o Flat No. 401, N D Passion Apartment, C-Block, Haralur Main Road, Kudlu, Bommanahalli, Bengaluru – 560068 , declare that Deepa Rani, Kumari Deepa Rani and Mrs. Deepa Barnwal refer to one and the same person and henceforth I shall be known as Deepa Baranwal for all purposes.

ನಾನು, ಅಮನ್‌ದೀಪ್, ರೋಹಿತ್ ವರ್ಮಾ ಅವರ ಪತ್ನಿ, ಎ-305, ಅನಿಶಾ ಗ್ರ್ಯಾಂಜ್ ಅಪಾರ್ಟ್‌ಮೆಂಟ್, ಕಗ್ಗದಾಸಪುರ, ಬೆಂಗಳೂರು-560093, ನನ್ನ ಹೆಸರನ್ನು ಅಮನ್‌ದೀಪ್ ಶರ್ಮಾ ಎಂದು 20/05/2026 ರಂದು ನೋಟರಿ ಪಬ್ಲಿಕ್ ಎ.ಆರ್. ಮುನೀರ್ ಅಹ್ಮದ್ ಅವರ ಮುಂದೆ ಪ್ರಮಾಣವಚನ ಸ್ವೀಕರಿಸಿ ನನ್ನ ಹೆಸರನ್ನು ಅಮನ್‌ದೀಪ್ ಶರ್ಮಾ ಎಂದು ಬದಲಾಯಿಸಿಕೊಂಡಿದ್ದೇನೆ.

I, V.SHANKAR @ V. VENKATESH, son of late Venkatappa, aged about 59 years, residing at No.521, 3rd Cross, Near Rajeshwari Theatre, Laggere, Bangalore North, Bangalore-560058, have sworn to an affidavit before the Notary Public. Sri B.M. Chandrashekar on 20-05-2026 for change of name and henceforth my name will be V.VENKATESH for all purposes-

I, Shiva prasad S/o Damodara Acharya, R/o 120, Asset Aura, Gunjur Palya, Bengaluru 560087 declare I have changed my name from Shiva prasad to Shivaprasad Acharya and henceforth I shall be known as Shivaprasad Acharya in all purpose, vide affidavit IN-KA66526542765380Y sworn before the Notary Public at Bengaluru on 21/05/2026. Shivaprasad Acharya and Shiva prasad both are same and one identical person.

EXPANSION OF INITIALS I, SAJITH P V, S/o K BALAKRISHNAN, residing at 23 Confident Lilian Phase 3 Hebron Road Halehalli Bengaluru 560036, hereby declare that henceforth I shall be known as SAJITH VEETTILTHAZHATHETHIL PERUMBILAVIL for all purposes. The initials P V in my name stand for VEETTILTHAZHATHETHIL PERUMBILAVIL. All concerned please note.

I, Jayanth B R/o No 136/197, Behind Bisilu Maramma Temple, Ilvala Hobli, Belawadi Post, Mysuru 570018 have changed my minor daughter's name from Srushti Harithas to Tanvi Harithas for all purposes

I, PALLAVI, W/o R. Manavalan, R/at #8 Dwarakamai, 4th Cross, Nagappa Reddy Layout, Ramamurthy Nagar, Bangalore-560016, have changed my name to S. PALLAVI SURESH, vide affidavit dt: 23-05-2026, before notary K.R Padmanabhaiah, Bangalore.

I, SAI DHANASHRI, D/o R. Manavalan, R/at #8 Dwarakamai, 4th Cross, Nagappa Reddy Layout, Ramamurthy Nagar, Bangalore 560016, have changed my name to M. SAI DHANASHREE vide affidavit dt: 23-05-2026, before notary K.R Padmanabhaiah, Bangalore.

I, Mohit Thapliyal, Resident 3062, Sobha Althea, Harohalli, Yelahanka, Po: Singanayakanahalli, Karnataka. Bengaluru-560064. Changed My Minor Son Name from Laksh Mohit Thapliyal to Laksh Thapliyal to all further purposes.

I, Varun Kumar V, R/o 5183, Sobha Forest View, 100 feet Vajarahalli Main Road, Thalaghattapura, Bengaluru 560109, have changed my name to Varun Bhat vide affidavit dated 21/05/2026 sworn before Notary Ramesh Kumar K, Bengaluru.

I, MAHAVEER S/O ANNARAJ JAIN residing at NO.2, JAGARWAL NIVAS 2nd floor, T.S LANE SUBRAMANYA LANE AKKIPET CROSS COTTONPET BANGALORE 560053, have changed my name to MAHAVEER JAIN vide affidavit IN-KA66406344744675Y dated 21/5/2026 at Bangalore

I Ganesh Honakeri aged about 48 years residing at No.92, 16th cross, Vijayalakshmi, Kalkere, Horamavu Bengaluru-560043 have changed my daughter's name Diksha Ganesh Honakeri to DIKSHA HONAKERI (Both name & person refer to one and the same person) vide affidavit dated 23/05/2026 sworn before notary Uday Kumar K.

I, VIBHA GUPTA, D/o AJAY KUMAR GUPTA, R/o S09-1105, Smondoville, Neo Town Road, Electronic City Phase 1, Bangalore - 560100. I have changed my name to VIBHA BANSAL vide affidavit dated: 21/05/2026 FOR ALL FUTURE PURPOSES.

I, ASHISH KUMAR S/o Omkar Mal agd 39 Yrs R/at S.V. Enclave, Flt 004, 8th Mn Kothanur Mn Rd, Puttenahalli Blr- 78 hv Changed my name as ASHISH AGARWAL Vide affidavit dt: 25-5-26 Sworn to Notary Sakalesh Blr.

I Dhanalaxmi W/o Gurumurthy R/o No. 3821, Pushpaka Vimana, opposite federal bank, Vishweshwariah layout 6th block, Ullal upanagar, Bangalore - 560056 have changed my name to Dhanalaxmi Gurumurthy.

I, Martina Mary Martin D/o Leon Anthony D Monte R/o No 80,G 1, Bhanu Pride Apartment, Kachara kanahalli, St Thomas Town Post, Bengaluru 560084. Have Changed my name to Martina Mary D Monte for All Purposes.

I Sarita Pradeep Badiger, W/O.Pradeep Badiger, No.3435/B, Vivekananda Nagar, Hangal Haveri-581104. Have Changed My Name From Sarita Atapatakar To Sarita Pradeep Badiger For All Future Purposes

ಎಚ್ಚರಿಕೆ ನೋಟೀಸು
ಪ್ರಕಾಶಕರು ಪೂರ್ವ ಸೂಚನೆ ನೀಡದೆಯೇ ಮತ್ತು /ಅಥವಾ ಯಾವುದೇ ಕಾರಣ ನೀಡದೆ ಜಾಹೀರಾತುಗಳನ್ನು ತಡೆ ಹಿಡಿಯುವ / ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತಾರೆ. ಹೀಗೆ ಪ್ರಕಟವಾಗದ ಜಾಹೀರಾತುಗಳು (ಇದ್ದಲ್ಲಿ) ಸಂಬಂಧಿತ ಮರುಪಾವತಿಗಳಿಗಾಗಿ ಬುಕಿಂಗ್ ಕಚೇರಿಗಳಲ್ಲಿ ಕ್ಲೇಮು ಸಲ್ಲಿಸಬೇಕು.

6495603X HAV/ASH Dinesh Kumar ASC Centre & College my son name service records Priyash to Kumar Priyansh, Dt: 25.05.2026, for all purpose.

6504535Y SEP/ASH Surjeet Kumar Yadav 1 ATC my mother name service records Ramawati Devi to Ramavti, Dt: 25.05.2026, for all purpose.

I DHRUV GOWDA.K, S/o Y.S Keshava, H.No:275 raithra santhe road near KHB colony Yelahanka Bangalore. Shall Be Known as DHRUV GOWDA. K for all Purpose.

I MRIDUL CHANDRA PRASAD R/O B8095, PRESTIGE SUNRISE PARK BIRCHWOOD, ELECTONIC CITY PH1, BANGALORE-560100 have changed my name to MRIDUL CHANDRA

I, Vikrant Sahu, R/o No. 406, 4th floor, Winst Sai Kalyan, 1st Main Road, Coffee Board Layout, Kempapura, Hebbal, Bangalore-560024, have changed my daughter's name (minor) from "DHAIRYA" to "ISHA GUPTA".

I, Faizan Ahmed S/o Fayaz Ahmed R/o No 12/1 S Street Langford Road Shantinagar Bangalore - 560027 have changed my name to Mohammed Faizan Ahmed for all purposes

I, SOHANLAL BOHRA, Having Address at NO. 63, 5th Cross, Magadi Road, Bangalore North, Bangalore, Karnataka – 560023. I hereby Declare that the names SOHANLAL Bohra and M SOHAN one and same person. Vide affidavit dated 22/05/2026. Sworn to before Ms Aruna.V Advocate and Notary Bangalore

I, BHARGAV RAM, Son of RAGHAVENDRA H P and SUPREETHA, residing at No. 150, Sri Yoga Narasimha Nilaya, 15th Cross, 15th Main Road, Near Kadirenahalli Petrol Bunk, Kanaka Layout, Banashankari 2nd Stage, Bangalore - 560070, have changed my name to RAM HUNASUGI R one and the same person for all purposes. Vide affidavit date 23-05-2026 before notary H G Venkataramu, Bangalore

LOST & FOUND

ದಿನಾಂಕ 15/03/2018 ರಂದು ಚಾಮರಾಜಪೇಟೆ ಉಪ-ನೋಂದಣಾಧಿಕಾರಿ (SRO) ಕಚೇರಿಯಲ್ಲಿ ನೋಂದಣಿಯಾಗಿರುವ (ನೋಂದಣಿ ಸಂಖ್ಯೆ: CP-1-08432 -2017-18), ವೆಂಕಟೇಶ್ ಎಲ್. ವಿ ರವರಿಂದ ಚೇತನ್ ವಿ ರವರಿಗೆ ಬರೆದುಕೊಡಲಾದ, ಬೆಂಗಳೂರಿನ ಬನಶಂಕರಿ 6ನೇ ಹಂತ, 9ನೇ ಬ್ಲಾಕ್‌ನಲ್ಲಿರುವ ಖಾಲಿ ನಿವೇಶನ ಸಂಖ್ಯೆ 323 ರ ಅಸಲು ದಾನಪತ್ರವು (Original Gift Deed) ಕಳೆದ 8 ವರ್ಷಗಳಿಂದ ಕಳೆದುಹೋಗಿರುತ್ತದೆ. ಈ ಬಗ್ಗೆ ಕರ್ನಾಟಕ ರಾಜ್ಯ ಪೊಲೀಸ್ (KSP) ಇಲಾಖೆಯಲ್ಲಿ ಕಳೆದುಹೋದ ವರದಿ ಸಂಖ್ಯೆ: 2218612/2026 ಅನ್ನು ದಾಖಲಿಸಲಾಗಿದೆ. ಇದು ಯಾರಿಗಾದರೂ ದೊರೆತಲ್ಲಿ ದಯವಿಟ್ಟು ಸಂಪರ್ಕಿಸಿ: 7829187297

GALLERIA

R.E.S. POLYTECHNIC
Estd: 1986 - Recognised by Govt. of Karnataka & AICTE
10th Pass / What Next ???
JOIN DIPLOMA IN: Computer Science ♦ IS ♦ Civil ♦ Mechanical ♦ Automobile ♦ Electrical ♦ Electronics ♦ Fashion Tech ♦ Commerce (CP)
After Diploma can join JOB / 2nd year Engg OR Any Degree through LATERAL ENTRY QUOTA
PUC Pass Join 2 yrs Diploma Engineering
PUC Fail Join 3 yrs Diploma Engineering
EVENING / WEEKEND CLASSES
Available for working Professionals to EE
5, Sunkadakatte, Magadi Road, Hegganahalli Cross, B-91
Call: Secretary-99166 46466 / Principal-9916639466
RES-26701

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳನ್ನು ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಂದಿಗೆ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆಯು ಜವಾಬ್ದಾರಿಯಾಗುವುದಿಲ್ಲ.
- ಜಾಹೀರಾತು ವ್ಯವಸ್ಥಾಪಕರು

ಮಾರ್ಚ್ 28ರಿಂದ ಮೇ 31ರವರೆಗೆ

ಐಪಿಎಲ್ ಸಂಗ್ರಾಮ

2026ರ ಹಂಗಾಮ

ಕ್ವಾಲಿಫೈಯರ್ 1ರಲ್ಲಿಂದು ಬೆಂಗಳೂರು VS ಗುಜರಾತ್ ಪೈಪೋಟಿ | ಇತ್ತಂಡಗಳಿಗೆ ನೇರ ಫೈನಲ್ ಪ್ರವೇಶಿಸುವ ವಿಶ್ವಾಸ

ಆರ್‌ಸಿಬಿ ಬ್ಯಾಟಿಂಗ್, ಜಿಟಿ ಬೌಲಿಂಗ್‌ಗೆ ಸತ್ವ ಪರೀಕ್ಷೆ

ಧರ್ಮಶಾಲಾ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಸತತ 2ನೇ ಬಾರಿ ಐಪಿಎಲ್ ಕಿರೀಟ ಮುಡಿಗೇರಿಸಿಕೊಳ್ಳುವ ತವಕದಲ್ಲಿದೆ. ಇಲ್ಲಿನ ಹಿಮಾಚಲ ಪ್ರದೇಶದ ಕ್ರಿಕೆಟ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆಯಲಿರುವ ಕ್ವಾಲಿಫೈಯರ್ 1ರ ಪಂದ್ಯದಲ್ಲಿ ಮಾಜಿ ಚಾಂಪಿಯನ್ ಗುಜರಾತ್ ಟೈಟನ್ಸ್ ತಂಡದ ಸವಾಲು ಎದುರಿಸಲಿದೆ.

ಉಭಯ ತಂಡಗಳು ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಸಮಬಲದ ಸಾಮರ್ಥ್ಯವನ್ನು ಹೊಂದಿವೆಯಾದರೂ ಕಳೆದ ಬಾರಿಯ ಚಾಂಪಿಯನ್ ಆರ್‌ಸಿಬಿ ತಂಡದ ಬ್ಯಾಟಿಂಗ್ ಮತ್ತು ಟೈಟನ್ಸ್ ತಂಡದ ಬೌಲಿಂಗ್‌ಗೆ ಈ ಪಂದ್ಯ ಸತ್ವ ಪರೀಕ್ಷೆ ಎನಿಸಿದೆ. 14 ಪಂದ್ಯಗಳ ನಂತರ ಉಭಯ ತಂಡಗಳು ತಲಾ 18 ಅಂಕಗಳನ್ನು ಕಲೆಹಾಕಿ ಲೀಗ್ ಹಂತವನ್ನು ಮುಗಿಸಿವೆ. ಆದರೆ ಉತ್ತಮ ರನ್‌ರೇಟ್ ಆಧಾರದ ಮೇಲೆ ಆರ್‌ಸಿಬಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನ ಪಡೆದಿದೆ.

ಪ್ರಸಕ್ತ ಸಾಲಿನಲ್ಲಿ ಬೆಂಗಳೂರು ಮತ್ತು ಗುಜರಾತ್ ತಂಡಗಳು ಪರಿಪೂರ್ಣ ಪ್ರದರ್ಶನ ನೀಡಿವೆ. ಆದರೆ ಪ್ಲೇಆಫ್ ಹಂತದಲ್ಲಿನ ಸ್ಥಿರ ಆಟ ಉಭಯ ತಂಡಗಳ ಪ್ರಶಸ್ತಿ ಭವಿಷ್ಯವನ್ನು ನಿರ್ಧರಿಸಲಿದೆ. ಹೀಗಾಗಿ ಎಲ್ಲರ ಚಿತ್ತ ಆರ್‌ಸಿಬಿ ಮತ್ತು ಜಿಟಿ ತಂಡಗಳ ಮೇಲೆ ನೆಟ್ಟಿದೆ. ರಜತ್ ಪಾಟೀದಾರ್ ಸಾರಥ್ಯದ ಆರ್‌ಸಿಬಿ, ಹಿಂದಿನ ಋತುಗಳಿಗಿಂತ ಭಿನ್ನವಾಗಿ ಆಕ್ರಮಣಕಾರಿ ಬ್ಯಾಟಿಂಗ್ ಮತ್ತು ಹೆಚ್ಚು ವಿಶ್ವಾಸಾರ್ಹ ಬೌಲಿಂಗ್ ಘಟಕವನ್ನು ನಿರ್ಮಿಸಿಕೊಂಡಿದೆ. ಬೆಂಗಳೂರು ತಂಡವು ಹಲವು ಬಾರಿ 200 ರನ್ ಗಡಿ ದಾಟಿದೆ. ಹಾಗೆಯೇ 200ಕ್ಕೂ ಅಧಿಕ ರನ್‌ಗಳನ್ನು ಬೆನ್ನಟ್ಟಿದೆ. ತಂಡದ ತಾರಾ ಆಟಗಾರ ವಿರಾಟ್ ಕೊಹ್ಲಿ, ದೇವದತ್ ಪಡಿಕ್ಕಲ್ ಮತ್ತು ರಜತ್ ಬೆಂಗಳೂರು ತಂಡದ ಬ್ಯಾಟಿಂಗ್ ಬೆನ್ನೆಲುಬಾಗಿದ್ದಾರೆ. ಪರ್ಪಲ್ ಕ್ಯಾಪ್ ಒಡೆಯ ಭುವನೇಶ್ವರ್ ಮತ್ತು ಜೋಶ್ ಹೇಜಲ್‌ವುಡ್ ತಂಡದ ಬೌಲಿಂಗ್‌ನ ಅಸ್ತ್ರಗಳಾಗಿದ್ದಾರೆ.

ಏತನ್ಮಧ್ಯೆ, ಅಸಾಧಾರಣ ಬೌಲಿಂಗ್ ದಾಳಿ ಮತ್ತು ಸಮತೋಲಿತ ಬ್ಯಾಟಿಂಗ್ ಕ್ರಮಾಂಕವನ್ನು ಹೊಂದಿರುವ ಟೈಟನ್ಸ್, ಆರ್‌ಸಿಬಿಗೆ ದೊಡ್ಡ ಸವಾಲೊಡ್ಡುವ ಸಾಧ್ಯತೆ ಇದೆ. ನಾಯಕ ಶುಬ್ಮನ್ ಗಿಲ್, ಆರೆಂಜ್ ಕ್ಯಾಪ್ ಒಡೆಯ ಸಾಯಿ ಸುದರ್ಶನ್ ಮತ್ತು ಜೋಸ್ ಬಟ್ಲರ್ ಅವರಂತಹ ಆಟಗಾರರನ್ನು ಹೊಂದಿರುವ ಗುಜರಾತ್ ತಂಡ ಎಂತಹ ಬೌಲರ್‌ಗಳನ್ನೂ ಬಡಿದಟ್ಟಬಲ್ಲ ಸಾಮರ್ಥ್ಯವನ್ನು ಹೊಂದಿದೆ. ಅದರಲ್ಲೂ ಪ್ರಬಲ ಬೌಲಿಂಗ್ ಶಕ್ತಿಯನ್ನು ಟೈಟನ್ಸ್ ಒಳಗೊಂಡಿದೆ. ಕಗಿಸೊ ರಬಾಡ ಮಾತ್ರವಲ್ಲದೆ, ಪ್ರಸಿದ್ಧ್ ಕೃಷ್ಣ ಮತ್ತು ಸ್ಪಿನ್ನರ್ ರಶೀದ್ ಖಾನ್ ಆರ್‌ಸಿಬಿ ಬ್ಯಾಟರ್‌ಗಳನ್ನು ಕಾಡುವ ಸಾಮರ್ಥ್ಯ ಹೊಂದಿದ್ದಾರೆ.

ಸೋತವರಿಗಿದೆ ಇನ್ನೊಂದು ಅವಕಾಶ

ಕ್ವಾಲಿಫೈಯರ್ 1ರಲ್ಲಿ ಗೆದ್ದ ತಂಡ ನೇರವಾಗಿ ಮೇ 31ರಂದು ನಡೆಯಲಿರುವ ಫೈನಲ್‌ಗೆ ಅರ್ಹತೆ ಗಳಿಸಲಿದೆ. ಸೋತ ತಂಡವು ಎಲಿಮಿನೇಟರ್ ಪಂದ್ಯದ ವಿಜೇತ ತಂಡವನ್ನು ಎದುರಿಸುವ ಮೂಲಕ ಫೈನಲ್ ತಲುಪಲು ಅವಕಾಶವನ್ನು ಹೊಂದಿದೆ.

ಭುವಿ-ರಬಾಡ ಪ್ರಧಾನ ಆಕರ್ಷಣೆ

ಆರ್‌ಸಿಬಿಯ ವೇಗಿ ಭುವನೇಶ್ವರ್ ಕುಮಾರ್ ಮತ್ತು ಗುಜರಾತ್ ಟೈಟನ್ಸ್ ತಂಡದ ವೇಗಿ ಕಗಿಸೊ ರಬಾಡ ಪ್ರಸಕ್ತ ಐಪಿಎಲ್‌ನಲ್ಲಿ ತಲಾ 24 ವಿಕೆಟ್ ಕಬಳಿಸಿದ್ದು, ಅತ್ಯಧಿಕ ವಿಕೆಟ್ ಪಡೆದವರ ಪಟ್ಟಿಯಲ್ಲಿ ಕ್ರಮವಾಗಿ ಮೊದಲೆರಡು ಸ್ಥಾನಗಳಲ್ಲಿದ್ದಾರೆ. ಉಭಯ ಬೌಲರ್‌ಗಳು ಆಯಾ ತಂಡಗಳ ಪ್ರಮುಖ ಬೌಲಿಂಗ್ ಅಸ್ತ್ರಗಳಾಗಿದ್ದಾರೆ. ಪವರ್ ಪ್ಲೇ ಅವಧಿಯಲ್ಲಿ ನಿರ್ಣಾಯಕ ಪಾತ್ರವಹಿಸುವ ಭುವಿ ಮತ್ತು ರಬಾಡ ಪಂದ್ಯದ ಫಲಿತಾಂಶವನ್ನು ನಿರ್ಣಯಿಸುವಲ್ಲಿ ಪ್ರಮುಖರಾಗಿದ್ದಾರೆ.



ಸಾಯಿ ಸುದರ್ಶನ್

- 14 ಪಂದ್ಯ
- 638 ರನ್
- 157.92 ಸ್ಟ್ರೈಕ್ ರೇಟ್
- 100 ಗರಿಷ್ಠ ರನ್

ವಿರಾಟ್ ಕೊಹ್ಲಿ

- 14 ಪಂದ್ಯ
- 557 ರನ್
- 163.82 ಸ್ಟ್ರೈಕ್ ರೇಟ್
- 105 ಗರಿಷ್ಠ ರನ್

08 ಇತ್ತಂಡಗಳ ಮುಖಾಮುಖಿ

04 ಬೆಂಗಳೂರು ಜಯ

04 ಗುಜರಾತ್ ಗೆಲುವು

ಧರ್ಮಶಾಲಾದಲ್ಲಿ ಮೊದಲ ಬಾರಿ ಜಿಟಿ ಕಣಕ್ಕೆ

ಗುಜರಾತ್ ಟೈಟನ್ಸ್ 2022ರಲ್ಲಿ ಐಪಿಎಲ್‌ಗೆ ಪದಾರ್ಪಣೆ ಮಾಡಿದಾಗಿನಿಂದ ಧರ್ಮಶಾಲಾದ ಎಚ್‌ಪಿಸಿಎ ಕ್ರೀಡಾಂಗಣದಲ್ಲಿ ಇದೇ ಮೊದಲ ಸಲ ಐಪಿಎಲ್ ಪಂದ್ಯ ಆಡಲು ಸಜ್ಜಾಗಿದೆ

ಪವರ್‌ಪ್ಲೇನಲ್ಲಿ ಪರಿಣಾಮಕಾರಿ ಬೌಲಿಂಗ್

ಹಾಲಿ ಐಪಿಎಲ್ ಟೂರ್ನಿಯ ಪವರ್ ಪ್ಲೇನಲ್ಲಿ ಅತ್ಯುತ್ತಮ ಬೌಲಿಂಗ್ ಪ್ರದರ್ಶನ ನೀಡಿದ ಮೂರು ತಂಡಗಳ ಪೈಕಿ ಗುಜರಾತ್ ಮತ್ತು ಬೆಂಗಳೂರು ತಂಡಗಳು ಸೇರಿವೆ. ಈ ಅವಧಿಯಲ್ಲಿ ಗುಜರಾತ್ 30 ವಿಕೆಟ್ ಕಿತ್ತರೆ, ಆರ್‌ಸಿಬಿ 28 ವಿಕೆಟ್ ಕಬಳಿಸಿದೆ

ಪ್ಲೇಆಫ್‌ನಲ್ಲಿ ಮೊದಲ ಪೈಪೋಟಿ

ಒಟ್ಟು 8 ಬಾರಿ ಮುಖಾಮುಖಿಯಾಗಿರುವ ಉಭಯ ತಂಡಗಳು ತಲಾ 4 ಸಲ ಗೆದ್ದಿವೆ. ಅಚ್ಚರಿ ಎಂದರೆ ಇದೇ ಮೊದಲ ಸಲ ಪ್ಲೇಆಫ್ ಪಂದ್ಯದಲ್ಲಿ ಎರಡೂ ತಂಡಗಳು ಸೆಣಸುತ್ತಿವೆ

ಮಳೆಯಿಂದ ಪಂದ್ಯ ರದ್ದಾದರೆ?

ಒಂದು ವೇಳೆ ಮೊದಲ ಕ್ವಾಲಿಫೈಯರ್ ಪಂದ್ಯ ಮಳೆ ಅಥವಾ ಇನ್ನಿತರ ಕಾರಣಗಳಿಂದ ರದ್ದಾದರೆ ಲೀಗ್ ಹಂತದಲ್ಲಿ ಅತ್ಯಧಿಕ ಪಾಯಿಂಟ್‌ಗಳನ್ನು ಹೊಂದಿರುವ ತಂಡ ಫೈನಲ್‌ಗೆ ನೇರ ಅರ್ಹತೆ ಗಳಿಸಲಿದೆ. ಕ್ವಾಲಿಫೈಯರ್ 1ರ ಸೋತ ತಂಡ ಮತ್ತೊಮ್ಮೆ ಫೈನಲ್ ಪ್ರವೇಶಕ್ಕಾಗಿ ಕ್ವಾಲಿಫೈಯರ್ 2ರಲ್ಲಿ ಎಲಿಮಿನೇಟರ್ ಪಂದ್ಯದ ವಿಜೇತ ತಂಡವನ್ನು ಎದುರಿಸಲಿದೆ. ಫೈನಲ್ ಹೊರತುಪಡಿಸಿ ಪ್ಲೇಆಫ್‌ನ ಇತರ ಪಂದ್ಯಗಳಿಗೆ ಯಾವುದೇ ಮೀಸಲು ದಿನ ನಿಗದಿಪಡಿಸಿಲ್ಲ. ಹೀಗಾಗಿ ಫಲಿತಾಂಶಕ್ಕಾಗಿ ಹೆಚ್ಚುವರಿ 120 ನಿಮಿಷ ಅಥವಾ 5 ಓವರ್‌ಗಳ ಪಂದ್ಯ ಅಥವಾ ಸೂಪರ್ ಓವರ್ ಬಳಸಿಕೊಂಡು ಫಲಿತಾಂಶವನ್ನು ನಿರ್ಧರಿಸಬಹುದು.

ಪಂದ್ಯ ಆರಂಭ: ರಾತ್ರಿ 7.30
ಸ್ಥಳ: ಹಿಮಾಚಲ ಪ್ರದೇಶ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣ, ಧರ್ಮಶಾಲಾ
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಸಂಭಾವ್ಯ ತಂಡಗಳು

ಬೆಂಗಳೂರು: ವಿರಾಟ್ ಕೊಹ್ಲಿ, ವೆಂಕಟೇಶ್ ಅಯ್ಯರ್, ದೇವದತ್ ಪಡಿಕ್ಕಲ್, ರಜತ್ ಪಾಟೀದಾರ್ (ನಾಯಕ), ಜಿತೇಶ್ ಶರ್ಮಾ, ರೊಮಾರಿಯೊ ಶೆಫರ್ಡ್, ಟಿಮ್ ಡೇವಿಡ್, ಕೃಣಾಲ್ ಪಾಂಡ್ಯ, ಭುವನೇಶ್ವರ್ ಕುಮಾರ್, ಜಾಕೋಬ್ ಡಫಿ/ ಸುಯಾಶ್ ಶರ್ಮಾ, ಜೋಶ್ ಹೇಜಲ್‌ವುಡ್, ರಸಿಖ್ ಸಲಾಮ್.

ಗುಜರಾತ್: ಶುಬ್ಮನ್ ಗಿಲ್ (ನಾಯಕ), ಬಿ. ಸಾಯಿ ಸುದರ್ಶನ್, ಜೋಸ್ ಬಟ್ಲರ್, ವಾಷಿಂಗ್ಟನ್ ಸುಂದರ್, ಜೇಸನ್ ಹೋಲ್ಡರ್, ರಾಹುಲ್ ತೇವಾಟಿಯಾ, ನಿಶಾಂತ್ ಸಿಂಧು, ರಶೀದ್ ಖಾನ್, ಅರ್ಷದ್ ಖಾನ್, ಕಗಿಸೊ ರಬಾಡ, ಮೊಹಮ್ಮದ್ ಸಿರಾಜ್, ಪ್ರಸಿದ್ಧ್ ಕೃಷ್ಣ/ ಸಾಯಿ ಕಿಶೋರ್

ಪಿಚ್/ಹವಾಮಾನ ವರದಿ

ಧರ್ಮಶಾಲಾ ಕ್ರೀಡಾಂಗಣದ ಪಿಚ್ ಬ್ಯಾಟಿಂಗ್‌ಗೆ ನೆರವಾಗುವ ಸಾಧ್ಯತೆ ಇದೆ. ಮೊದಲು ಬ್ಯಾಟ್ ಮಾಡುವ ತಂಡ 200ರಿಂದ 220 ರನ್ ಗಳಿಸುವ ಸಾಧ್ಯತೆ ಇದೆ. ಆದಾಗ್ಯೂ ಬೌಲರ್‌ಗಳು ಅದರಲ್ಲೂ ವೇಗಿಗಳು ಪರಿಣಾಮಕಾರಿ ಪ್ರದರ್ಶನ ನೀಡುವ ಅವಕಾಶವಿದೆ. ಹೀಗಾಗಿ ಇಲ್ಲಿನ ಪಿಚ್ ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡಕ್ಕೂ ಅತ್ಯುತ್ತಮ ವೇದಿಕೆ ಎನಿಸಿದೆ.

ರಾಷ್ಟ್ರಪತಿ ಭವನದಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ 2026ನೇ ಸಾಲಿನ ಪದ್ಮಶ್ರೀ ಪ್ರಶಸ್ತಿ ಸ್ವೀಕರಿಸಿದ ಹೈಜಂಪರ್ ಪ್ರವೀಣ್ ಕುಮಾರ್ ಮತ್ತು ಕ್ರಿಕೆಟರ್ ಹರ್ಮನ್ ಪ್ರೀತ್ ಕೌರ್.

ರಿಬಾಕಿನಾ, ಸ್ವಿಯಾಟೆಕ್ ಶುಭಾರಂಭ

ಪ್ಯಾರಿಸ್: ಎರಡನೇ ಶ್ರೇಯಾಂಕಿತೆ ಎಲೆನಾ ರಿಬಾಕಿನಾ ಮತ್ತು ಮೂರನೇ ಶ್ರೇಯಾಂಕಿತೆ ಇಗಾ ಸ್ವಿಯಾಟೆಕ್ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಶುಭಾರಂಭ ಮಾಡಿದ್ದಾರೆ.

ಆರಂಭಿಕ ಸುತ್ತಿನಲ್ಲಿ ರಿಬಾಕಿನಾ 6-2, 6-2 ಸೆಟ್‌ಗಳಿಂದ ಶ್ರೇಯಾಂಕ ರಹಿತೆ ವೆರೊನಿಕಾ ಎರ್ಜಾವೆಕ್ ವಿರುದ್ಧ ಗೆದ್ದರೆ, ಸ್ವಿಯಾಟೆಕ್ 6-1, 6-2 ಸೆಟ್‌ಗಳಿಂದ ಎಮರ್ಸನ್ ಜೋನ್ಸ್ ಎದುರು ಜಯ ಗಳಿಸಿದರು.

ಏತನ್ಮಧ್ಯೆ, ಮಾಜಿ ನಂ.1 ಆಟಗಾರ ನೊವಾಕ್ ಜೊಕೊವಿಕ್ ಮೊದಲ ಹರ್ಡಲ್ಸ್ ದಾಟಿದ್ದಾರೆ. 25ನೇ ಗ್ರ್ಯಾನ್ ಸ್ಲಾಮ್ ಕಿರೀಟದ ಮೇಲೆ ಕಣ್ಣಿಟ್ಟಿರುವ ಸರ್ಬಿಯಾದ ಜೊಕೊ, ಭಾನುವಾರ ತಡರಾತ್ರಿ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಆರಂಭಿಕ ಪಂದ್ಯದಲ್ಲಿ 5-7, 7-5, 6-1, 6-4 ಸೆಟ್‌ಗಳಿಂದ ಮೆಪೆಟ್ಸಿ ಪೆರಾರ್ಡ್ ಎದುರು ಗೆದ್ದು ಎರಡನೇ ಸುತ್ತಿಗೆ ಮುನ್ನಡೆದರು.

ಭಾರತೀಯ ಸಂಜಾತ ನಿಶೇಶ್‌ಗೆ ಜಯ: ಭಾರತ ಮೂಲದ ಟೆನಿಸ್ ಆಟಗಾರ ನಿಶೇಶ್ ಬಸವರೆಡ್ಡಿ ಪುರುಷರ ಸಿಂಗಲ್ಸ್ ವಿಭಾಗದ ಆರಂಭಿಕ ಪಂದ್ಯದಲ್ಲಿ 7ನೇ ಶ್ರೇಯಾಂಕಿತ ಅಮೆರಿಕ ಟೇಲರ್ ಫ್ರಿಟ್ಜ್‌ಗೆ ಆಘಾತ ನೀಡುವ ಮೂಲಕ ಗಮನ ಸೆಳೆದಿದ್ದಾರೆ. ವೈಲ್ಡ್ ಕಾರ್ಡ್ ಮೂಲಕ ಟೂರ್ನಿಗೆ ಪ್ರವೇಶ ಪಡೆದಿರುವ ಸದ್ಯ ಅಮೆರಿಕದಲ್ಲಿ ನೆಲೆಸಿರುವ ಬಸವರೆಡ್ಡಿ 7-6(5), 7-6(5), 6-7(9) 6-1 ಸೆಟ್‌ಗಳಿಂದ ವಿಶ್ವದ 9ನೇ ರ‍್ಯಾಂಕ್‌ನ ಫ್ರಿಟ್ಜ್‌ಗೆ ಸೋಲುಣಿಸಿದರು. ಎರಡು ಗಂಟೆ ಮತ್ತು 45 ನಿಮಿಷ ನಡೆದ ನಾಲ್ಕು ಸೆಟ್‌ಗಳ ಪಂದ್ಯದ ಮೂರು ಸೆಟ್‌ಗಳನ್ನು ಟೈಬ್ರೇಕರ್‌ನಲ್ಲಿ ವಶಪಡಿಸಿಕೊಂಡಿದ್ದು ನಿಶೇಶ್ ದಿಟ್ಟ ಆಟಕ್ಕೆ ಸಾಕ್ಷಿಯಂತಿತ್ತು.

ಹೆಡ್ ಪತ್ನಿ ವಿರುದ್ಧ ನಿಂದನೆ

ಹೊಸದಿಲ್ಲಿ: ಕ್ರೀಡೆಯಲ್ಲಿ ಭಾವನೆ ಮತ್ತು ಉದ್ವೇಗ ಇರುವುದು ಸರ್ವೇ ಸಾಮಾನ್ಯ. ಆದರೆ ಆಟದ ಹಿಂದೆ ನಿಜವಾದ ಮನುಷ್ಯರು ಮತ್ತು ಅವರ ಕುಟುಂಬಗಳು ಇರುತ್ತವೆ ಎಂಬುದನ್ನು ಮರೆಯಬಾರದು. ಇದು ಐಪಿಎಲ್ 2026ರ ಆನ್‌ಲೈನ್ ಕಿರುಕುಳಕ್ಕೆ ಬೇಸತ್ತು ಆಸ್ಟ್ರೇಲಿಯಾದ ಕ್ರಿಕೆಟರ್ ಟ್ರಾವಿಸ್ ಹೆಡ್ ಅವರ ಪತ್ನಿ ಜೆಸ್ಸಿಕಾ ಹೆಡ್ ಆಸ್ಟ್ರೇಲಿಯಾದ ಮಾಧ್ಯಮವೊಂದಕ್ಕೆ ನೀಡಿರುವ ಹೇಳಿಕೆ.

ಐಪಿಎಲ್ 2026ರ ಎಸ್‌ಆರ್‌ಎಚ್ ಮತ್ತು ಆರ್‌ಸಿಬಿ ನಡುವಿನ ಪಂದ್ಯದ ವೇಳೆ ಟ್ರಾವಿಸ್ ಹೆಡ್ ಮತ್ತು ವಿರಾಟ್ ಕೊಹ್ಲಿ ನಡುವೆ ತೀವ್ರ ಮಾತಿನ ಚಕಮಕಿ ನಡೆದಿತ್ತು. ಪಂದ್ಯ ಮುಗಿದ ಬಳಿಕ ಕೊಹ್ಲಿ ಹಸ್ತಲಾಘವ ಮಾಡಲು ನಿರಾಕರಿಸಿದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು. ಆದರೆ, ಕ್ರೀಡಾಂಗಣದೊಳಗಿನ ಮಾತಿನ ಚಕಮಕಿ ಪಂದ್ಯ ಮುಗಿದ ನಂತರ ಸಾಮಾಜಿಕ ಜಾಲತಾಣಗಳಲ್ಲಿ ಹೊಸ ರೂಪ ಪಡೆದುಕೊಂಡಿದೆ. ಕೆಲವು ಅತಿರೇಕದ ಅಭಿಮಾನಿಗಳು ಟ್ರಾವಿಸ್ ಹೆಡ್ ಮಾತ್ರವಲ್ಲದೆ ಅವರ ಪತ್ನಿ ಜೆಸ್ಸಿಕಾ, ಅವರ ಸ್ನೇಹಿತರು ಮತ್ತು ಕುಟುಂಬದವರ ಖಾತೆಗಳ ವಿರುದ್ಧ ವೈಯಕ್ತಿಕ ದಾಳಿ ನಡೆಸುತ್ತಿದ್ದಾರೆ.

ರಾಜೀನಾಮೆ ನೀಡಿದ ಎಐಎಡಿಎಂಕೆ ಮೂವರು ಶಾಸಕರು ಟಿವಿಕೆ ಸೇರ್ಪಡೆ

ಚೆನ್ನೈ: ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಹೀನಾಯ ಸೋಲಿನ ಆಘಾತ ಮರೆಯುವ ಮುನ್ನವೇ ಎಐಎಡಿಎಂಕೆ ಪಕ್ಷಕ್ಕೆ ಮತ್ತೊಂದು ಗಂಡಾಂತರ ಎದುರಾಗಿದೆ. ಪಕ್ಷದೊಳಗಿನ ಆಂತರಿಕ ಬಂಡಾಯಕ್ಕೆ ಬೇಸತ್ತು ಮೂವರು ಶಾಸಕರು ರಾಜೀನಾಮೆ ನೀಡಿ, ಆಡಳಿತಾರೂಢ ಟಿವಿಕೆ ಸೇರ್ಪಡೆಯಾಗಿದ್ದಾರೆ.

ಮಧುರಾಂತಕಂ ಶಾಸಕ ಮರಗತಮ್ ಕುಮಾರವೇಲ್, ಪೆರುಂದುರೈ ಶಾಸಕ ಜಯಕುಮಾರ್ ಹಾಗೂ ಧರ್ಮಾಪುರಂ ಶಾಸಕಿ ಸತ್ಯಭಾಮಾ ಅವರು ಸೋಮವಾರ ಸ್ಪೀಕರ್ ಜೆ.ಸಿ.ಡಿ. ಪ್ರಭಾಕರ್ ಭೇಟಿಯಾಗಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಮೂವರ ರಾಜೀನಾಮೆಯನ್ನು ವಿಧಾನಸಭೆ ಸ್ಪೀಕರ್ ಅಂಗೀಕರಿಸಿದ್ದಾರೆ.

ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ ಮೂವರು ಸಚಿವ ಆಧವ್ ಅರ್ಜುನ್ ಭೇಟಿಯಾದರು. ಔಪಚಾರಿಕ ಮಾತುಕತೆ ಬಳಿಕ ಅಧಿಕೃತವಾಗಿ ಟಿವಿಕೆ ಸೇರ್ಪಡೆಯಾದರು. ಇತ್ತೀಚೆಗೆ ಹಿರಿಯ ನಾಯಕ ಷಣ್ಮುಗಂ ನೇತೃತ್ವದಲ್ಲಿ ಎಐಡಿಎಂಕೆಯ 30 ಶಾಸಕರು ಸಿಎಂ ವಿಜಯ್ ಅವರ ಟಿವಿಕೆ ಸರಕಾರ ಬೆಂಬಲಿಸಿದ್ದರು. ಪಕ್ಷದ ವಿಪ್ ಉಲ್ಲಂಘಿಸಿ 25 ಶಾಸಕರು ಸರಕಾರದ ವಿಶ್ವಾಸಮತ ಯಾಚನೆ ಪರವಾಗಿ ಮತದಾನ ಮಾಡಿದ್ದರು. ರಾಜೀನಾಮೆ ನೀಡಿದ ಮೂವರು ಶಾಸಕರು ಭಿನ್ನಮತೀಯ ನಾಯಕ ಷಣ್ಮುಗಂ ಗುಂಪಿನಲ್ಲಿ ಗುರುತಿಸಿಕೊಂಡಿದ್ದರು. ಮೂವರು ರಾಜೀನಾಮೆಯಿಂದ ಬಂಡಾಯ ಗುಂಪಿನ ಬಲ 17ಕ್ಕೆ ಕುಸಿದಿದೆ. ಇದಕ್ಕೂ ಮೊದಲು ಬಂಡಾಯ ಗುಂಪಿನಲ್ಲಿದ್ದ ಐವರು ಶಾಸಕರು ಎಡಪ್ಪಾಡಿ ಪಳನಿಸ್ವಾಮಿ ಗುಂಪಿಗೆ ಮರಳಿದ್ದರು. ಸದ್ಯ ಪಳನಿಸ್ವಾಮಿ ಬಣದಲ್ಲಿ 27 ಶಾಸಕರಿದ್ದು ಷಣ್ಮುಗಂ ಗುಂಪಿನಲ್ಲಿ 17 ಶಾಸಕರಿದ್ದಾರೆ.

ಆಪರೇಷನ್ ದಳಪತಿ ಶುರು

ಪಳನಿಸ್ವಾಮಿ ವಿರುದ್ಧ ಬಂಡಾಯ ಎದ್ದಿರುವ ಬಣದಿಂದ ಮಹತ್ವದ ಹೆಜ್ಜೆ

ಹೊಸ ಸರಕಾರದ ಆಡಳಿತ ಆರಂಭವಾದ ಕೂಡಲೇ 'ಆಪರೇಷನ್ ಟಿವಿಕೆ' ಸ್ಟಾರ್ಟ್?

ಎಐಎಡಿಎಂಕೆ ಪಕ್ಷವನ್ನು ಇಬ್ಭಾಗ ಮಾಡುವ ಉದ್ದೇಶ ಇಲ್ಲ. ಮಾಜಿ ಸಿಎಂ ಜಯಲಲಿತಾ ಕಾಲದ 'ಅಮ್ಮ ಆಡಳಿತ' ಮರುಸ್ಥಾಪಿಸಲು ನಾವು ಪ್ರಯತ್ನಿಸುತ್ತಿದ್ದೇವೆ. ಎಡಪ್ಪಾಡಿ ಪಳನಿಸ್ವಾಮಿ ನಮ್ಮ ನಾಯಕರು. ನಾವು ಎಂದಿಗೂ ಪಕ್ಷ ತೊರೆಯುವುದಿಲ್ಲ.

- ವೇಲುಮಣಿ ಎಐಎಡಿಎಂಕೆ ಭಿನ್ನಮತೀಯ ನಾಯಕ

ಮೇಕೆದಾಟು ಯೋಜನೆಗೆ ವಿಜಯ್ ಅಡ್ಡಗಾಲು

ರಾಜ್ಯದ ಮಹತ್ವಾಕಾಂಕ್ಷೆಯ ಮೇಕೆದಾಟು ಯೋಜನೆಗೆ ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ್ ಅಡ್ಡಗಾಲು ಹಾಕಿದ್ದಾರೆ. ಅಣೆಕಟ್ಟು ನಿರ್ಮಿಸುವ ಕರ್ನಾಟಕದ ಪ್ರಸ್ತಾವನೆಯ ಕುರಿತು ಸೋಮವಾರ ಪರಿಶೀಲನಾ ಸಭೆ ನಡೆಸಿದರು.

''ತಮಿಳುನಾಡಿನ ಜನರ ಹಕ್ಕುಗಳನ್ನು ರಕ್ಷಿಸಲು ಮತ್ತು ರೈತರ ಹಿತಾಸಕ್ತಿಗಳನ್ನು ರಕ್ಷಿಸಲು ವಿವರವಾದ ಪರಿಶೀಲನಾ ಸಭೆ ನಡೆಸಲಾಯಿತು,'' ಎಂದು ಸಿಎಂ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದೆ. ಸಭೆಯಲ್ಲಿ ಸಂಪುಟ ಸಚಿವರಾದ ಆನಂದ್, ಅಧವ್ ಅರ್ಜುನ ಮತ್ತು ನಿರ್ಮಲ್‌ಕುಮಾರ್, ಅಡ್ವೊಕೇಟ್ ಜನರಲ್ ವಿಜಯ್ ನಾರಾಯಣ್ ಅವರು ಭಾಗವಹಿಸಿದ್ದರು.

ತಮಿಳುನಾಡಿನ ಮರು ಪರಿಶೀಲನಾ ಅರ್ಜಿ ವಜಾ

ಹೊಸದಿಲ್ಲಿ: ಕರ್ನಾಟಕದ ಪ್ರಸ್ತಾವಿತ ಮೇಕೆದಾಟು ಯೋಜನೆ ವಿರುದ್ಧದ ಅರ್ಜಿಯನ್ನು ಪರಿಗಣಿಸಲು ನಿರಾಕರಿಸಿದ 2025ರ ನವೆಂಬರ್ ತೀರ್ಪನ್ನು ಮರುಪರಿಶೀಲಿಸಬೇಕು ಎಂದು ಕೋರಿ ತಮಿಳುನಾಡು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ. ಅರ್ಜಿಯನ್ನು ಸಿಜೆಐ ಸೂರ್ಯಕಾಂತ್ ಮತ್ತು ನ್ಯಾ. ಜಾಯ್‌ಮಾಲ್ಯ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ಅವರ ಪೀಠವು ತಿರಸ್ಕರಿಸಿತು. ''ಮೇಕೆದಾಟು ಅಣೆಕಟ್ಟೆ ನಿರ್ಮಾಣಕ್ಕೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಮಾತ್ರ ಕೇಂದ್ರ ಜಲ ಆಯೋಗ ಅನುಮತಿ ನೀಡಿದೆ. ತಮಿಳುನಾಡಿನ ಆಕ್ಷೇಪಣೆಗಳನ್ನು ತಜ್ಞರು ಪರಿಶೀಲಿಸಿದ ಬಳಿಕವೇ ಈ ಪ್ರಕ್ರಿಯೆ ನಡೆದಿದೆ. ಈ ಹಂತದಲ್ಲಿ ಇದನ್ನು ಪ್ರಶ್ನಿಸಿ ತಮಿಳುನಾಡು ಅರ್ಜಿ ಸಲ್ಲಿಸಿರುವುದು ಅವಧಿ ಪೂರ್ವ,'' ಎಂದು ಅಭಿಪ್ರಾಯಪಟ್ಟಿತು. ''ತಮಿಳುನಾಡಿನ ಆಕ್ಷೇಪಣೆಗಳನ್ನು ಹಾಗೂ ತಜ್ಞ ಸಂಸ್ಥೆಗಳು, ಕಾವೇರಿ ನೀರು ನಿಯಂತ್ರಣ ಸಮಿತಿ ಮತ್ತು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಗಳ ಅಭಿಪ್ರಾಯಗಳನ್ನು ಪರಿಗಣಿಸಿದ ನಂತರವೇ ಆಯೋಗವು ಯೋಜನೆಗೆ ಅನುಮೋದನೆ ನೀಡಲಿದೆ,'' ಎಂದು ಪೀಠ ತಿಳಿಸಿದೆ.

50 ಸಾವಿರ ರೂ. ಬೆಳೆ ಸಾಲ ಮನ್ನಾ

2025ರ ಮೇನಿಂದ 2026ರ ಫೆಬ್ರವರಿವರೆಗೆ ಸಹಕಾರಿ ಬ್ಯಾಂಕ್‌ಗಳಲ್ಲಿ ತಮಿಳುನಾಡು ರೈತರು ತೆಗೆದುಕೊಂಡಿರುವ 50 ಸಾವಿರ ರೂ.ವರೆಗಿನ ಬೆಳೆ ಸಾಲವನ್ನು ಸಿಎಂ ವಿಜಯ್ ಮನ್ನಾ ಮಾಡುವುದಾಗಿ ಘೋಷಿಸಿದ್ದಾರೆ. ವಿಧಾನಸಭಾ ಚುನಾವಣಾ ಪ್ರಣಾಳಿಕೆಯಲ್ಲಿ ವಿಜಯ್ ಅವರು ಸಾಲ ಮನ್ನಾ ಭರವಸೆ ನೀಡಿದ್ದರು. ಅದನ್ನು ಸದ್ಯ ಈಡೇರಿಸಿದ್ದಾರೆ. ರಾಜ್ಯದ ಸುಮಾರು 14 ಲಕ್ಷ ರೈತರು ಸಾಲ ಮನ್ನಾದ ಲಾಭ ಪಡೆಯಲಿದ್ದಾರೆ. ಸಾಲ ಮನ್ನಾದಿಂದ ತಮಿಳುನಾಡು ಸರಕಾರದ ಬೊಕ್ಕಸಕ್ಕೆ 2,044 ಕೋಟಿ ರೂ. ಹೊರೆಯಾಗಲಿದೆ ಎಂದು ಕೃಷಿ ಸಚಿವ ಆರ್.ವಿನೋದ್ ತಿಳಿಸಿದ್ದಾರೆ.

ನಿತ್ಯವೂ 5 ಪ್ರದರ್ಶನಕ್ಕೆ ಅವಕಾಶ

ಹೊಸ ತಮಿಳು ಸಿನಿಮಾ ಬಿಡುಗಡೆಯಾದ ದಿನದಿಂದ ವಾರದ ಎಲ್ಲಾ ದಿನಗಳು ನಿತ್ಯವೂ 5 ಪ್ರದರ್ಶನಕ್ಕೆ ಅವಕಾಶ ನೀಡಿ ಸಿಎಂ ವಿಜಯ್ ಆದೇಶ ಹೊರಡಿಸಿದ್ದಾರೆ. ಈ ನಿರ್ಣಯವು ತಮಿಳುನಾಡು ಸಿನಿಮಾ ಕ್ಷೇತ್ರಕ್ಕೆ ಪುಷ್ಟಿ ನೀಡಲಿದೆ ಎಂದು ಸರಕಾರ ಪ್ರಕಟಣೆಯಲ್ಲಿ ತಿಳಿಸಿದೆ. ಇದುವರೆಗೂ, ನಿತ್ಯವೂ 4 ಪ್ರದರ್ಶನಕ್ಕೆ ಮಾತ್ರವೇ ಅವಕಾಶವಿದ್ದು, ವಿಶೇಷ ಸಂದರ್ಭಗಳಲ್ಲಿ ಮಾತ್ರವೇ ಜಿಲ್ಲಾಧಿಕಾರಿ ಅನುಮತಿಯೊಂದಿಗೆ 5ನೇ ಅಥವಾ ವಿಶೇಷ ಪ್ರದರ್ಶನ ಮಾಡಬಹುದಿತ್ತು.

ಭಾರತ-ಆಸ್ಟ್ರೇಲಿಯಾ ಹಾಕಿ ಸರಣಿ ಸವಾಲಿಗೆ ವನಿತೆಯರು ಸಜ್ಜು

ಪರ್ತ್: ಭಾರತ ಮಹಿಳಾ ಹಾಕಿ ತಂಡ ಎಫ್‌ಐಎಚ್ ನೇಷನ್ಸ್ ಕಪ್‌ನ ಪೂರ್ವ ಸಿದ್ಧತೆಯ ಭಾಗವಾಗಿ ಮಂಗಳವಾರ ಇಲ್ಲಿ ಆರಂಭವಾಗಲಿರುವ ನಾಲ್ಕು ಪಂದ್ಯಗಳ ಹಾಕಿ ಸರಣಿಯಲ್ಲಿ ಆಸ್ಟ್ರೇಲಿಯಾ ತಂಡದ ಸವಾಲು ಎದುರಿಸಲು ಸಜ್ಜಾಗಿದೆ.

ಆಕ್ಲೆಂಡ್‌ನಲ್ಲಿ ಜೂನ್ 15ರಿಂದ 21ರವರೆಗೆ ನಡೆಯಲಿರುವ ಎಫ್‌ಐಎಚ್ ಹಾಕಿ ಮಹಿಳಾ ನೇಷನ್ಸ್ ಕಪ್‌ಗೆ ಮುನ್ನ ಸಾಮರ್ಥ್ಯ ವೃದ್ಧಿಸಿಕೊಳ್ಳಲು ಉಭಯ ತಂಡಗಳಿಗೆ ಈ ಸರಣಿ ಅತ್ಯಂತ ಮಹತ್ವದ್ದಾಗಿದೆ.

ವರ್ಷದ ಆರಂಭದಲ್ಲಿ ಅರ್ಜೆಂಟೀನಾ ಪ್ರವಾಸ ಕೈಗೊಂಡಿದ್ದ ಭಾರತ, ಉತ್ತಮ ಪ್ರದರ್ಶನ ನೀಡುವ ಮೂಲಕ ನಾಲ್ಕು ಪಂದ್ಯಗಳ ಸರಣಿಯನ್ನು 2-2ರಲ್ಲಿ ಡ್ರಾ ಸಾಧಿಸಿತ್ತು. ಹೀಗಾಗಿ ಸಲಿಮಾ ಟೇಟೆ ಸಾರಥ್ಯದ ಭಾರತೀಯರು ಹೊಸ ಭರವಸೆಯೊಂದಿಗೆ ಕಣಕ್ಕಿಳಿಯುತ್ತಿದ್ದಾರೆ. ಬೆಂಗಳೂರಿನ ಸಾಯ್ ಕೇಂದ್ರದಲ್ಲಿ ಆಯೋಜಿಸಲಾಗಿದ್ದ ರಾಷ್ಟ್ರೀಯ ತರಬೇತಿ ಶಿಬಿರದಲ್ಲಿ ಹಲವು ಉನ್ನತ ಮಟ್ಟದ ಕಾರ್ಯತಂತ್ರಗಳ ತರಬೇತಿ ಹೊಂದಿರುವ ಭಾರತ ತಂಡ, ಶ್ರೇಷ್ಠ ಪ್ರದರ್ಶನ ನೀಡುವ ಗುರಿ ಹೊಂದಿದೆ.

ಪೊಲೀಸರ ಮೇಲೆ ಹಲ್ಲೆ: ಅಲ್ಕಾ ಲಾಂಬಾ ದೋಷಿ ಎಂದ ಕೋರ್ಟ್

ಹೊಸದಿಲ್ಲಿ: ಮಹಿಳಾ ಮೀಸಲು ಸಂಬಂಧ ಜಂತರ್‌ಮಂತರ್‌ನಲ್ಲಿ ನಡೆದಿದ್ದ ಘರ್ಷಣೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಅಲ್ಕಾ ಲಾಂಬಾ ಅವರು 'ದೋಷಿ' ಎಂದು ಕೋರ್ಟ್ ಹೇಳಿದೆ.

ವಿಚಾರಣೆ ನಡೆಸಿದ ರೋಸ್ ಅವೆನ್ಯೂ ಕೋರ್ಟ್, ''ಆಡಳಿತಾತ್ಮಕ ಕರ್ತವ್ಯಕ್ಕೆ ಅಡ್ಡಿಪಡಿಸಿದ ಹಿನ್ನೆಲೆಯಲ್ಲಿ ಅಲ್ಕಾ ಲಂಬಾ ಅವರನ್ನು ದೋಷಿ ಎಂದು ಪರಿಗಣಿಸಲಾಗಿದೆ. ಈ ಅಪರಾಧಕ್ಕಾಗಿ ಅವರಿಗೆ ಎಷ್ಟು ಶಿಕ್ಷೆ ವಿಧಿಸಬೇಕು ಎಂಬ ಬಗ್ಗೆ ಜೂನ್ 5 ರಂದು ಅಂತಿಮ ಹಂತದ ವಾದ ಹಾಗೂ ಪ್ರತಿವಾದಗಳು ನಡೆಯಲಿವೆ,'' ಎಂದು ನ್ಯಾಯಾಧೀಶರು ತಿಳಿಸಿದ್ದಾರೆ. ಕಳೆದ ವರ್ಷದ ಡಿಸೆಂಬರ್‌ನಲ್ಲಿ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಅಲ್ಕಾ ವಿರುದ್ಧ ಸಾರ್ವಜನಿಕ ಸೇವಕರ ಕಾನೂನು ಉಲ್ಲಂಘನೆ ಹಾಗೂ ಹಲ್ಲೆಯ ಪ್ರಕರಣ ದಾಖಲಿಸಿತ್ತು. ಕೆಳ ನ್ಯಾಯಾಲಯದ ಈ ನಿರ್ಧಾರವನ್ನು ಫೆಬ್ರವರಿ 2026ರಲ್ಲಿ ರೋಸ್ ಅವೆನ್ಯೂ ಸೆಷನ್ಸ್ ಕೋರ್ಟ್ ಕೂಡ ಎತ್ತಿಹಿಡಿದಿತ್ತು. ಸಾರ್ವತ್ರಿಕ ಚುನಾವಣೆಗೂ ಮುನ್ನ ನಡೆದಿದ್ದ ಈ ರಾಜಕೀಯ ಪ್ರತಿಭಟನೆಯು ಈಗ ನಾಯಕಿಗೆ ಸೆರೆವಾಸದ ಭೀತಿ ತಂದೊಡ್ಡಿದೆ.

ಲಕ್ಷ್ಯ, ಸಿಂಧೂ ಆಕರ್ಷಣೆ

ಸಿಂಗಾಪುರ ಓಪನ್ ಬ್ಯಾಡ್ಮಿಂಟನ್

ಸಿಂಗಾಪುರ: ಭಾರತದ ಅಗ್ರಮಾನ್ಯ ಷಟ್ಲರ್‌ಗಳಾದ ಲಕ್ಷ್ಯ ಸೇನ್ ಮತ್ತು ಪಿ.ವಿ. ಸಿಂಧೂ ಮಂಗಳವಾರ ಇಲ್ಲಿ ಆರಂಭವಾಗಲಿರುವ ಸಿಂಗಾಪುರ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತ ತಂಡದ ಸವಾಲನ್ನು ಮುನ್ನಡೆಸಲಿದ್ದಾರೆ. ಹಾಗೆಯೇ ಸ್ಥಿರ ಪ್ರದರ್ಶನ ನೀಡಲು ಎದುರು ನೋಡುತ್ತಿರುವ ಉಭಯ ಆಟಗಾರರು ಪ್ರಶಸ್ತಿ ಬರ ನೀಗಿಸುವ ಉತ್ಸಾಹದಲ್ಲಿದ್ದಾರೆ. ಹಾಲಿ ಕಾಮನ್‌ವೆಲ್ತ್ ಗೇಮ್ಸ್ ಚಾಂಪಿಯನ್ ಲಕ್ಷ್ಯ, ಪುರುಷರ ಸಿಂಗಲ್ಸ್‌ನಲ್ಲಿ ಚೀನಾದ ಲು ಗುಯಾಂಗ್ ಜು ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ. ಮಹಿಳಾ ಸಿಂಗಲ್ಸ್‌ನಲ್ಲಿ ಸಿಂಧೂ ಇಂಡೊನೇಷ್ಯಾದ ಪುತ್ರಿ ಕುಸುಮಾ ವಾರ್ದಾನಿ ಎದುರು ಕಣಕ್ಕಿಳಿಯಲಿದ್ದಾರೆ.

ಯಶಸ್‌ಗೆ ಕಾಮನ್‌ವೆಲ್ತ್ ಟಿಕೆಟ್

ಬೆಂಗಳೂರು: ಕರ್ನಾಟಕದ ಯಶಸ್ ಪಿ. ಪುರುಷರ 400 ಮೀಟರ್ ಹರ್ಡಲ್ಸ್ ಸ್ಪರ್ಧೆಯಲ್ಲಿ ಮುಂಬರುವ ಕಾಮನ್ ವೆಲ್ತ್ ಕ್ರೀಡಾಕೂಟಕ್ಕೆ ಅರ್ಹತೆ ಗಳಿಸಿದ್ದಾರೆ. ರಾಂಚಿಯಲ್ಲಿ ಸೋಮವಾರ ನಡೆದ ಫೆಡ್ ಕಪ್‌ನ 400 ಮೀ. ಹರ್ಡಲ್ಸ್ ಸ್ಪರ್ಧೆಯಲ್ಲಿ ಅವರು 49.00 ಸೆಕೆಂಡ್‌ಗಳಲ್ಲಿ ಅಗ್ರಸ್ಥಾನಿಯಾಗಿ ಗುರಿ ಮುಟ್ಟಿದರು. ಜತೆಗೆ ಕಾಮನ್‌ವೆಲ್ತ್ ಕೂಟಕ್ಕೆ ನಿಗದಿಪಡಿಸಲಾದ ಅರ್ಹತಾ ಮಾನದಂಡ 49.00 ಸೆಕೆಂಡ್‌ಗಳನ್ನು ಪೂರೈಸಿದರು. ಇದೇ ವೇಳೆ ರಾಜ್ಯದ ಅಭಿನಯ ಶೆಟ್ಟಿ, ಮಹಿಳೆಯರ ಹೈ ಜಂಪ್‌ನಲ್ಲಿ ಮೂರನೇ ಸ್ಥಾನ ಗಳಿಸಿದ್ದಾರೆ.

ಗೈಲ್ ಗ್ಯಾಸ್ ಲಿಮಿಟೆಡ್
[ಗೈಲ್ (ಇಂಡಿಯಾ) ಲಿ.ನ ಸಂಪೂರ್ಣ ಸ್ವಾಮ್ಯದ ಅಂಗ ಸಂಸ್ಥೆ]

ಸಿಜಿಡಿ ಯೋಜನೆಗಾಗಿ ಗುತ್ತಿಗೆದಾರರ ನೇಮಕಕ್ಕೆ ನೋಟಿಸ್

ಬೆಂಗಳೂರಿನ ಗೈಲ್ ಗ್ಯಾಸ್ ಲಿಮಿಟೆಡ್, DPNG LMC/GI ವರ್ಕ್ಸ್ ಬೆಂಗಳೂರು (ನಗರ ಮತ್ತು ಗ್ರಾಮೀಣ: 4.01) ಮತ್ತು ದಕ್ಷಿಣ ಕನ್ನಡ (9.28) ಕಾರ್ಯಗಳ ಅನುಷ್ಠಾನಕ್ಕಾಗಿ ಸ್ಥಳದಲ್ಲೇ ನೇರ ಆಯ್ಕೆ ಪ್ರಕ್ರಿಯೆಯ ಮೂಲಕ ಗುತ್ತಿಗೆದಾರರು/ಏಜೆನ್ಸಿಗಳಿಂದ ಬಿಡ್‌ಗಳನ್ನು ಆಹ್ವಾನಿಸಿದೆ.
ಕೆಳಕಂಡ ಸ್ಥಳಗಳಲ್ಲಿ ನೇರ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗುವುದು:

ಕ್ರ. ಸಂ.	GAs	DPNG LMC/GI ವರ್ಕ್ಸ್
1	ಬೆಂಗಳೂರು (ನಗರ ಮತ್ತು ಗ್ರಾಮೀಣ 4.01)	27.05.2026, 29.05.2026 & 30.05.2026ರ ಬೆಳಿಗ್ಗೆ 10.00 ರಿಂದ ಸಂಜೆ 5.30 ಗಂಟೆವರೆಗೆ
2	ದಕ್ಷಿಣ ಕನ್ನಡ (9.28)	

ಸ್ಥಳ: ಸಮ್ಮೇಳನ ಕೊಠಡಿ, 3ನೇ ಮಹಡಿ, ಗೈಲ್ ಗ್ಯಾಸ್ ಲಿಮಿಟೆಡ್, SNo 44, No 2, ಎಂಎಸ್ ಕಾಂಪ್ಲೆಕ್ಸ್, RMV 2ನೇ ಹಂತ, ನ್ಯೂ BEL ರಸ್ತೆ, ಮತ್ತಿಕೆರೆ, ಬೆಂಗಳೂರು, ಕರ್ನಾಟಕ 560054. ಆಸಕ್ತ ಬಿಡ್ದರ್‌ಗಳು ಕೆಲಸದ ಅನುಭವ ಪ್ರಮಾಣಪತ್ರಗಳು, GST ನೋಂದಣಿ, PAN, PF/ESI ನೋಂದಣಿ (ಅನ್ವಯಿಸುವ ಕಡೆ) ಹಾಗೂ ಲಭ್ಯವಿರುವ ಮಾನವಶಕ್ತಿ ಮತ್ತು ಸಲಕರಣೆಗಳ ವಿವರಗಳನ್ನು ಒಳಗೊಂಡಂತೆ ಸಂಬಂಧಿತ ಪೂರಕ ದಾಖಲೆಗಳನ್ನು ಸಲ್ಲಿಸಬಹುದು.

ಬಿಡ್‌ದಾರರು ಕಳೆದ ಏಳು (7) ವರ್ಷಗಳಲ್ಲಿ ಕನಿಷ್ಠ ಒಂದು ಕೆಲಸದ ಆದೇಶದ ಪ್ರತಿಯನ್ನು GAIL/GAIL GAS/GAILನ ಗ್ರೂಪ್ ಕಂಪನೀಸ್/ಇತರೆ ಯಾವುದೇ ಕಂಪನಿಗಳಲ್ಲಿ ಅನುಭವದ ಪುರಾವೆಯಾಗಿ ಸಲ್ಲಿಸಬೇಕು.

(i) ಸಿಜಿಡಿಯಲ್ಲಿ ಎಲ್‌ಎಂಸಿಯ ಕೆಲಸಗಳ ನಿರ್ವಹಣೆ.
ಅಥವಾ
(ii) ಅನಿಲ / ಸಿಎನ್‌ಜಿ ಕೇಂದ್ರ/ ಸಿಜಿಎಸ್/ ಸಂಸ್ಕರಣಾ ಘಟಕ/ ಎಸ್‌ವಿ ಕೇಂದ್ರಗಳು / ಹೈಡ್ರೋಕಾರ್ಬನ್ಸ್/ ನೀರು/ ಒಳಚರಂಡಿ / ಚರಂಡಿ / ಅಗ್ನಿಶಾಮಕ ವ್ಯವಸ್ಥೆ/ ಕ್ರಯೋಜೆನಿಕ್ / ಯಾವುದೇ ಇತರೆ ಯುಟಿಲಿಟಿ ವಲಯದಲ್ಲಿ ಪೈಪ್‌ಲೈನ್ ಕೆಲಸಗಳ ನಿರ್ವಹಣೆ.
ಅಥವಾ
(iii) ಪ್ಲಂಬಿಂಗ್ ಕೆಲಸಗಳನ್ನು ಒಳಗೊಂಡ ವಸತಿ/ವಾಣಿಜ್ಯ/ಸಾಂಸ್ಥಿಕ/ಕೈಗಾರಿಕಾ ಕಟ್ಟಡಗಳ ನಿರ್ಮಾಣ/ನಿರ್ವಹಣೆ.
ಅಥವಾ
(iv) ಭೂಗತ ಡಕ್ಟ್/ವಿದ್ಯುತ್ ಕೇಬಲ್‌ಗಳು/ದೂರಸಂಪರ್ಕ ಕೇಬಲ್‌ಗಳು/ಫೈಬರ್ ಆಪ್ಟಿಕ್ ಕೇಬಲ್‌ಗಳು (OFC)/ ಯಾವುದೇ ಕೇಬಲ್ ಹಾಕುವುದು.

ವಿವರವಾದ ನಿಯಮಗಳು ಮತ್ತು ಷರತ್ತುಗಳು ಕೆಳಕಂಡ ಲಿಂಕ್‌ನಲ್ಲಿ ಲಭ್ಯವಿರುತ್ತವೆ:
https://gailgas.com/eoi/expression-interest

ಸಂಪರ್ಕಿಸುವ ವ್ಯಕ್ತಿಗಳು
ravi.tandle@gail.co.in (ಮೊಬೈಲ್ ನಂ.: 9542519900); ssb@gail.co.in (ಮೊಬೈಲ್ ನಂ.: 9639001617); tshiva@gail.co.in (ಮೊಬೈಲ್ ನಂ.: 7351238882); aprakash@gail.co.in (ಮೊಬೈಲ್ ನಂ.: 9810904370)

ಈ ನೋಟಿಸ್ ಸಂಬಂಧ ಎಲ್ಲಾ ತಿದ್ದುಪಡಿಗಳು/ಸೇರ್ಪಡೆಗಳನ್ನು ಗೈಲ್ ಗ್ಯಾಸ್ ವೆಬ್‌ಸೈಟ್‌ನಲ್ಲಿ ಮಾತ್ರ ನೀಡಲಾಗುತ್ತದೆ. ಆದ್ದರಿಂದ, ನಿಯಮಿತವಾಗಿ ವೆಬ್‌ಸೈಟ್‌ಗೆ ಭೇಟಿ ನೀಡಬೇಕೆಂದು ತಮ್ಮಲ್ಲಿ ವಿನಂತಿಸಲಾಗಿದೆ.

Corporate Identification Number: U40200DL2008GOI178614

ಆನ್‌ಲೈನ್‌ನಲ್ಲಿ ದೀಪ್ಕೆ ತರಹ ಆಫ್‌ಲೈನ್‌ನಲ್ಲಿ ವಕೀಲ ಸುಧೀರ್ ಹೈಡ್ರಾಮಾ

ಅಧಿಕೃತವಾಗಲು ಕಾಕ್ರೋಚ್ ಜನತಾ ಪಾರ್ಟಿ ಸಜ್ಜು

ಚಂಡೀಗಢ: ಕೆಲವು ದಿನಗಳಿಂದ ದೇಶಾದ್ಯಂತ ಸಾಮಾಜಿಕ ಮಾಧ್ಯಮದಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿರುವ ಕಾಕ್ರೋಚ್ ಜನತಾ ಪಕ್ಷವು (ಸಿಜೆಪಿ) ಪೂರ್ಣ ಪ್ರಮಾಣದ ರಾಜಕೀಯ ಪಕ್ಷವಾಗಿ ಹೊರಹೊಮ್ಮಲು ಸಜ್ಜಾಗಿದೆ. ಹರಿಯಾಣದ ಪಾಣಿಪತ್‌ನ ವಕೀಲ ಸುಧೀರ್ ಜಾಖರ್ ಅವರು ಪಕ್ಷದ ನೋಂದಣಿಗಾಗಿ ಕೇಂದ್ರೀಯ ಚುನಾವಣಾ ಆಯೋಗಕ್ಕೆ ಅರ್ಜಿ ಸಲ್ಲಿಸಿರುವುದಾಗಿ ತಿಳಿಸಿದ್ದಾರೆ. ಪಕ್ಷ ಸ್ಥಾಪನೆಗೆ ಸಂಬಂಧಿಸಿದ ಪ್ರಾಥಮಿಕ ಮಾಹಿತಿಯನ್ನು ಈಗಾಗಲೇ ಆಯೋಗಕ್ಕೆ ಒದಗಿಸಲಾಗಿದೆ. ''ಪಕ್ಷವನ್ನು ಸಂವಿಧಾನಬದ್ಧವಾಗಿ ಸ್ಥಾಪಿಸಲಾಗಿದೆ. ಅಧ್ಯಕ್ಷ, ಕಾರ್ಯದರ್ಶಿ ಮತ್ತು ಖಜಾಂಚಿ ಹುದ್ದೆಗಳಿಗೆ ಸಂಬಂಧಿಸಿದ ಅಗತ್ಯ ದಾಖಲೆಗಳು ಮತ್ತು ಅಫಿಡವಿಟ್‌ಗಳಿಗೆ ಸಂಬಂಧಿಸಿದ ಔಪಚಾರಿಕತೆಗಳನ್ನು ಪ್ರಸ್ತುತ ಅಂತಿಮಗೊಳಿಸಲಾಗುತ್ತಿದೆ. ಈ ಪಕ್ಷವು ರಾಷ್ಟ್ರಕ್ಕೆ ಬಲವಾದ ಪ್ರತಿಪಕ್ಷ ಮತ್ತು ಬಲಿಷ್ಠ ಪರ್ಯಾಯ ಎರಡನ್ನೂ ಒದಗಿಸುವ ಸಾಮರ್ಥ್ಯವನ್ನು ಹೊಂದಿದೆ ಎಂದು ನಾನು ಭಾವಿಸುತ್ತೇನೆ,'' ಎಂದು ಜಾಖರ್ ಪ್ರತಿಕ್ರಿಯಿಸಿದ್ದಾರೆ.

'ಕಾಕ್ರೋಚ್ ಜನತಾ ಪಾರ್ಟಿ' ಆನ್‌ಲೈನ್ ಚಳವಳಿ ಆರಂಭಿಸಿದ, ಪ್ರಸ್ತುತ ಅಮೆರಿಕದಲ್ಲಿ ನೆಲೆಸಿರುವ ಅಭಿಜೀತ್ ದೀಪ್ಕೆ ಕುರಿತು ಮಾತನಾಡಿದ ಜಾಖರ್, ''ಅಮೆರಿಕದಲ್ಲಿ ಕುಳಿತು ಭಾರತದಲ್ಲಿ ವ್ಯವಸ್ಥಿತ ಬದಲಾವಣೆಯ ಬಗ್ಗೆ ಮಾತನಾಡುವ ಯಾರೋ ಒಬ್ಬರ ಕಲ್ಪನೆಯನ್ನು ಜನರಿಗೆ ಅರಗಿಸಿಕೊಳ್ಳಲು ಆಗುವುದಿಲ್ಲ. ಚಳವಳಿಯನ್ನು ಪ್ರಾರಂಭಿಸಲು ಅಥವಾ ರಾಜಕೀಯ ಪಕ್ಷವನ್ನು ಸ್ಥಾಪಿಸಲು ಬಯಸಿದರೆ, ಅವರು ಸಂಘಟಿಸಲು ಭಾರತಕ್ಕೆ ಬರಬೇಕು,'' ಎಂದು ಅಭಿಪ್ರಾಯಪಟ್ಟಿದ್ದಾರೆ.

ಜಿರಳೆ ಅರ್ಜಿಯ ತುರ್ತು ವಿಚಾರಣೆಗೆ ಸುಪ್ರೀಂ ನಕಾರ

ಹೊಸದಿಲ್ಲಿ: ಕಾಕ್ರೋಚ್ ಜನತಾ ಪಾರ್ಟಿ ಸಂಬಂಧಿಸಿದ ಅರ್ಜಿಯನ್ನು ತುರ್ತು ವಿಚಾರಣೆ ನಡೆಸುವಂತೆ ಸಲ್ಲಿಸಲಾದ ಮನವಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ತಿರಸ್ಕರಿಸಿದೆ. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾ. ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜೋಯ್ಮಲ್ಯ ಬಾಗ್ಚಿ ಅವರಿದ್ದ ಪೀಠವು, ''ಅರ್ಜಿದಾರರು ವಿಷಯವನ್ನು ಭಾವನಾತ್ಮಕವಾಗಿ ತೆಗೆದುಕೊಳ್ಳುತ್ತಿರುವಂತೆ ಕಾಣುತ್ತಿದೆ. ಈ ವಿಷಯವನ್ನು ತುಂಬಾ ಭಾವನಾತ್ಮಕವಾಗಿ ತೆಗೆದುಕೊಳ್ಳಬೇಡಿ. ಈ ಪ್ರಕರಣದಲ್ಲಿ ಅಂತಹ ಗಂಭೀರ ತುರ್ತು ಏನಿಲ್ಲ. ನಾವು ನೋಡುತ್ತೇವೆ,'' ಎಂದು ತಿಳಿಸಿದೆ. ಅರ್ಜಿಯಲ್ಲಿ ಕಾಕ್ರೋಚ್ ಜನತಾ ಪಾರ್ಟಿ ಸಂಬಂಧಿತ ಚಟುವಟಿಕೆಗಳ ಕುರಿತು ಸಿಬಿಐ ತನಿಖೆ ನಡೆಸಬೇಕೆಂದು ಕೋರಲಾಗಿತ್ತು.

ನೀರಾವರಿಗಾಗಿ ಸಿಡಿದೆದ್ದ ರೈತರು

ವೀರಭದ್ರೇಶ್ವರ, ಬಸವೇಶ್ವರ ಏತ ನೀರಾವರಿ ಯೋಜನೆ ವಿಳಂಬ | ಅನಿರ್ದಿಷ್ಟಾವಧಿ ಧರಣಿ

ಸಾಲಹಳ್ಳಿಯಲ್ಲಿ ನಡೆಯುತ್ತಿರುವ ಧರಣಿ ಸತ್ಯಾಗ್ರಹದಲ್ಲಿ ಸಾವಿರಾರು ರೈತರು ಭಾಗವಹಿಸಿದ್ದರು.

■ **ವಿಕ ಸುದ್ದಿಲೋಕ** ರಾಮದುರ್ಗ (ಬೆಳಗಾವಿ)

ತಾಲೂಕಿನ ಸಾಲಹಳ್ಳಿಯ ಬಾಚಿ-ರಾಯಚೂರು ರಾಜ್ಯ ಹೆದ್ದಾರಿಯಲ್ಲಿ ವೀರಭದ್ರೇಶ್ವರ ಹಾಗೂ ಬಸವೇಶ್ವರ ಏತ ನೀರಾವರಿ ಯೋಜನೆಗಳ ಅನುಷ್ಠಾನ ವಿಳಂಬ ಖಂಡಿಸಿ ರೈತರು ಸೋಮವಾರ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಆರಂಭಿಸಿದರು.

ಪ್ರತಿಭಟನಾಕಾರರು ಬಾಚಿ-ರಾಯಚೂರು ರಾಜ್ಯ ಹೆದ್ದಾರಿಯಲ್ಲೇ ಟೆಂಟ್ ಹಾಕಿ ಧರಣಿ ಪ್ರಾರಂಭಿಸಿರುವುದರಿಂದ ಹೆದ್ದಾರಿಯ ಎ ಭಾಗದಲ್ಲಿ ಸಂಚಾರ ಸ್ಥಗಿತಗೊಂಡಿದೆ. ಈ ಮಾರ್ಗದ ವಾಹನಗಳು ಲೋಕಾಪುರದಿಂದ ತಿರುವು ಪಡೆದು ಸಂಚರಿಸುತ್ತಿವೆ.

ರೈತ ಸಂಘದ ರಾಜ್ಯ ಗೌರವಾಧ್ಯಕ್ಷ ಶಶಿಕಾಂತ ಗುರೂಜಿ ಮಾತನಾಡಿ, "ವೀರಭದ್ರೇಶ್ವರ ಏತ ನೀರಾವರಿ ಯೋಜನೆ 9 ವರ್ಷ ಗತಿಸಿದರೂ ಇನ್ನೂ ಪೂರ್ಣಗೊಂಡಿಲ್ಲ. ವಿಳಂಬಕ್ಕೆ ಸ್ಥಳೀಯ ಶಾಸಕರೇ ಕಾರಣ. ಕೂಡಲೇ ಯೋಜನೆಗೆ ಭೂಮಿ ಕೊಟ್ಟ ರೈತರಿಗೆ ಪರಿಹಾರ ನೀಡಬೇಕು. ಅರ್ಧಕ್ಕೆ ನಿಂತಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ವಹಿಸಬೇಕು. ಈ ಕುರಿತು ವೇದಿಕೆಗೆ ಬಂದು ಲಿಖಿತ ಭರವಸೆ ನೀಡಬೇಕು. ಇಲ್ಲದಿದ್ದರೆ ಮಂಗಳವಾರ ರಾಮದುರ್ಗ ತಾಲೂಕು ಸಂಪೂರ್ಣ ಬಂದ್ ಮಾಡಬೇಕಾಗುತ್ತದೆ," ಎಂದು ಎಚ್ಚರಿಕೆ ನೀಡಿದರು.

"ಸ್ಥಳೀಯ ಶಾಸಕರು ಮುಖ್ಯಮಂತ್ರಿಗಳ ಒಡನಾಡಿಯಾಗಿದ್ದರೂ ಸರಕಾರದಿಂದ ರೈತರಿಗೆ ಕೊಡಿಸಲು ಏಕೆ ಸಾಧ್ಯವಾಗುತ್ತಿಲ್ಲ? ಉಚಿತ ಯೋಜನೆಗಳಿಗೆ ನೀಡಲು ಹಣವಿದೆ. ಆದರೆ ರೈತರಿಗೆ ಪರಿಹಾರ ನೀಡಲು ತಾತ್ಸಾರ ತೋರಲಾಗುತ್ತಿದೆ. ಇಂಥ ಸರಕಾರ ಯಾವ ಪುರುಷಾರ್ಥಕ್ಕೆ ಇರಬೇಕು," ಎಂದು ಪ್ರಶ್ನಿಸಿದರು.

ರೈತ ಸಂಘ ಮತ್ತು ಹಸಿರು ಸೇನೆಯ ರಾಜ್ಯಾಧ್ಯಕ್ಷ ಚೂನಪ್ಪ ಪೂಜೇರಿ ಮತ್ತು ಸತ್ಯಾಗ್ರಹಕ್ಕೆ ಬೆಂಬಲಿಸಿದ ತಾಲೂಕಿನ ಎಲ್ಲ ಮಠಾಧೀಶರು ಮಾತನಾಡಿದರು.

ಕೊಲೆಗೆ ಸುಪಾರಿ: ಮಾವ ಸೇರಿ ಏಳು ಮಂದಿ ಬಂಧನ

ಮೈಸೂರು: ಸುಪಾರಿ ನೀಡಿ ಆಸ್ತಿಯಲ್ಲಿ ಪಾಲು ಕೊಡಲು ಒಪ್ಪದ ಸೋದರಳಿಯನ ಕೊಲೆಗೆ ಯತ್ನಿಸಿದ ಪ್ರಕರಣದಲ್ಲಿ ಮಾವ ಸೇರಿದಂತೆ ಏಳು ಮಂದಿ ಜೈಲು ಪಾಲಾಗಿದ್ದಾರೆ.

ಪಿತ್ರಾರ್ಜಿತ ಆಸ್ತಿ ಉಳಿಸಿಕೊಳ್ಳಲು 37 ಲಕ್ಷ ರೂ. ಸುಪಾರಿ ನೀಡಿದ್ದ ಸೋದರಮಾವ ರಾಜು ಅಲಿಯಾಸ್ ಸೌದೆ ರಾಜು, ಸುಪಾರಿ ಪಡೆದಿದ್ದ ಕೆ.ಪಿ.ಪ್ರಿಯ, ಮೀರ್ ಹುಸೇನ್ ಅಲಿ, ನಯಾಜ್ ಅಹ್ಮದ್, ಹಬೀದ್ ಪಾಷ, ಅಯಾಜ್ ಪಾಷ, ಅಮೀನುಲ್ಲಾನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಮರದ ವ್ಯಾಪಾರಿಯಾಗಿದ್ದ ರಾಜು ತನ್ನ ತಂಗಿಯ ಮಗ ಪ್ರವೀಣ್ ಕುಮಾರ್‌ನ ಹತ್ಯೆಗೆ ಸುಪಾರಿ ನೀಡಿರುವುದು ವಿಚಾರಣೆ ವೇಳೆ ಬೆಳಕಿಗೆ ಬಂದಿದೆ. ರಾಜು ಬಳಿ ಇರುವ ಆಸ್ತಿಯಲ್ಲಿ ತಮಗೂ ಪಾಲು ಬರಬೇಕೆಂದು ಪ್ರವೀಣ್ ಕುಮಾರ್ ಅವರು ತಾಯಿಯ ಪರವಾಗಿ ಕೋರ್ಟ್ ಮೊರೆ ಹೋಗಿದ್ದರು.

ಸೌದೆ ರಾಜು

ಆಸ್ತಿಯಲ್ಲಿ ಪಾಲು ಕೊಡಲು ಒಪ್ಪದ ರಾಜು ತಕರಾರು ತೆಗೆದಿದ್ದ. ಪ್ರವೀಣ್‌ಕುಮಾರ್‌ನನ್ನು ಕೊಲೆ ಮಾಡಿದರೆ ಆಸ್ತಿ ಉಳಿಯಲಿದೆ ಎಂದು ನಿರ್ಧರಿಸಿದ ರಾಜು, ವರ್ಷದ ಹಿಂದೆ 7 ಲಕ್ಷ ರೂ. ಸುಪಾರಿ ಹಣವನ್ನು ನೀಡಿದ್ದ. ಮೊದಲ ಸಾರಿ ಅಪಘಾತದ ಮೂಲಕ ಪ್ರವೀಣ್‌ಕುಮಾರ್ ಕೊಲೆಗೆ ಯತ್ನ ನಡೆಸಿದ್ದರು. ಆದರೆ, ಪ್ರವೀಣ್ ಪ್ರಾಣಾಪಾಯದಿಂದ ಪಾರಾಗಿದ್ದರು. ಪೊಲೀಸರು ಸಹ ಇದನ್ನು ರಸ್ತೆ ಅಪಘಾತ ಎಂದೇ ನಂಬಿದ್ದರು. ಕಳೆದ ಏ. 13ರಂದು ಪ್ರವೀಣ್ ಕುಮಾರ್ ಬೈಕ್‌ನಲ್ಲಿ ತೆರಳುತ್ತಿದ್ದಾಗ ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ, ಕೊಲೆಗೆ ಯತ್ನಿಸಿದ್ದರು. ಅಷ್ಟರಲ್ಲಿ ಅದೇ ಮಾರ್ಗದಲ್ಲಿ ವಾಹನ ಬಂದ ಪರಿಣಾಮ ದುಷ್ಕರ್ಮಿಗಳು ಪರಾರಿಯಾಗಿದ್ದರು," ಎಂದು ಮೈಸೂರು ಜಿಲ್ಲೆ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಲೈಂಗಿಕ ದೌರ್ಜನ್ಯ ಪ್ರಕರಣ: ವಕೀಲ ಭರತ್ ಬಂಧನ

ಶಿವಮೊಗ್ಗ: ಭದ್ರಾವತಿ ತಾಲೂಕಿನ ಗ್ರಾಮವೊಂದರ ಗೃಹಿಣಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಿ ವಕೀಲ ಮತ್ತು ಬಿಜೆಪಿ ಮುಖಂಡ ಭರತ್ (36) ಎಂಬುವವರನ್ನು ಬಂಧಿಸಲಾಗಿದೆ.

ಹಳೆನಗರದೂರು ಗ್ರಾಮದ ಭರತ್ ಅವರು ಗೃಹಿಣಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ ಬ್ಲ್ಯಾಕ್‌ಮೇಲ್ ಮಾಡಿದ್ದಾರೆಂದು ಆರೋಪಿಸಿ ಭದ್ರಾವತಿ ಪೇಪರ್ ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತಲೆಮರೆಸಿಕೊಂಡಿದ್ದ ಆರೋಪಿಯನ್ನು ಪತ್ತೆ ಹಚ್ಚಿ ಬಂಧಿಸಲಾಗಿದೆ.

ವಿಜಯನಗರ ಕಾಲದ 'ಯಾಳಿ' ಶಿಲ್ಪ ಪತ್ತೆ

ಹೊಸಪೇಟೆ (ವಿಜಯನಗರ): ಹಂಪಿಯ ಹಜಾರರಾಮ ದೇವಸ್ಥಾನದ ಆವರಣದಲ್ಲಿ ಭಾರತೀಯ ಪುರಾತತ್ವ ಇಲಾಖೆ ನಡೆಸುತ್ತಿರುವ ಉತ್ಖನನ ಹಾಗೂ ಜೀರ್ಣೋದ್ಧಾರ ವೇಳೆ ವಿಜಯನಗರ ಕಾಲದ ಅತ್ಯಂತ ಅಪರೂಪದ ಕಲ್ಲಿನ ಶಿಲ್ಪವೊಂದು ಪತ್ತೆಯಾಗಿದೆ.

ಹಿಂದೂ ಪುರಾಣಗಳಲ್ಲಿ ಉಲ್ಲೇಖಿತವಾಗಿರುವ ಸಿಂಹದ ದೇಹ ಹಾಗೂ ಇತರ ಪ್ರಾಣಿಗಳ ಮುಖಲಕ್ಷಣ ಹೊಂದಿರುವ ಪೌರಾಣಿಕ ರಕ್ಷಕ ಪ್ರಾಣಿ ಯಾಳಿ (ಅಥವಾ ವ್ಯಾಲ) ಶಿಲ್ಪವಾಗಿದೆ ಎಂದು ಗುರುತಿಸಲಾಗಿದೆ. ದೇವಸ್ಥಾನದ ಆವರಣದಲ್ಲಿ ನೆಲಸಮಗೊಂಡಿದ್ದ ಭಾಗವನ್ನು ಪುನರುತ್ಥಾನಗೊಳಿಸುವಾಗ ಈ ಕಲಾಕೃತಿ ಬೆಳಕಿಗೆ ಬಂದಿದೆ. ದೇವಸ್ಥಾನದ ಪ್ರವೇಶದ್ವಾರ ಅಥವಾ ಕಂಬದ ಅಲಂಕಾರಿಕ ಭಾಗವಾಗಿ ಈ ಶಿಲ್ಪವು ನಿರ್ಮಾಣವಾಗಿದ್ದಿರಬಹುದು. ದುಷ್ಟ ಶಕ್ತಿಗಳನ್ನು ತಡೆಯುವ ಭವ್ಯ ರಕ್ಷಣ ಸಂಕೇತವಾಗಿದೆ. ವಿಶಿಷ್ಟವಾದ ಕೆತ್ತನೆ ಕಲಾಶೈಲಿಯನ್ನು ಪ್ರತಿಬಿಂಬಿಸುವ ಉಬ್ಬುಚಿತ್ರವಿದ್ದು ಹಿಂಭಾಗದಲ್ಲಿ ಸುರುಳಿಯಾಕಾರದ ಸುಂದರವಾದ ಬಾಲದ ವಿನ್ಯಾಸವಿದೆ. ಶತಮಾನಗಳ ಕಾಲ ಮಣ್ಣಿನಡಿ ಹುದುಗಿಕೊಂಡಿದ್ದರೂ ಶಿಲ್ಪದ ಸೂಕ್ಷ್ಮ ಕೆತ್ತನೆಗಳು ಇಂದಿಗೂ ಸುಸ್ಥಿತಿಯಲ್ಲಿದ್ದು ವಿಜಯನಗರ ಕಾಲದ ಶಿಲ್ಪಿಗಳ ಶ್ರೇಷ್ಠ ಕರಕುಶಲತೆಗೆ ಸಾಕ್ಷಿಯಾಗಿದೆ.

ಹಂಪಿ ಹಜಾರರಾಮ ದೇವಸ್ಥಾನದಲ್ಲಿ ಉತ್ಖನನ ವೇಳೆ ಪತ್ತೆಯಾಗಿರುವ ಅಪರೂಪದ ಯಾಳಿ ಶಿಲ್ಪ.

TATA
TATA POWER
THE TATA POWER COMPANY LIMITED,
Bombay House, 24, Homi Mody Street, Mumbai - 400 001, India, Tel: (9122) 6665 8282, Fax: (91 22) 6665 8801 Website: www.tatapower.com CIN: L28920MH1919PLC000567

ಸಾರ್ವಜನಿಕ ಸೂಚನೆ

ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಯು ಹೆಸ್ಕಾಂ HESCOMನ ಮೂರು (3) ಜಿಲ್ಲೆಗಳಾದ ಬೆಳಗಾವಿ, ಉತ್ತರ ಕನ್ನಡ ಮತ್ತು ಧಾರವಾಡ ಜಿಲ್ಲೆಗಳಿಗೆ ವಿದ್ಯುತ್ ಕಾಯ್ದೆ, 2003ರ ಕಲಂ 14 ಮತ್ತು 15ರ ಅಡಿಯಲ್ಲಿ ವಿತರಣಾ ಪರವಾನಗಿ ಮಂಜೂರು ಮಾಡುವ ಕುರಿತು ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಸಲಹೆಗಳು/ಆಕ್ಷೇಪಣೆಗಳನ್ನು ಆಹ್ವಾನಿಸುವ ಸಾರ್ವಜನಿಕ ಸೂಚನೆ

(ಪ್ರಕರಣ ಸಂಖ್ಯೆ: MP/06/2026)

1. ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ (ಟಾಟಾ ಪವರ್) ಸಂಸ್ಥೆಯು ವಿದ್ಯುತ್ ಕಾಯಿದೆ, 2003 ("ಕಾಯಿದೆ")ರ ಕಲಂ 14 ಮತ್ತು ಕಲಂ 15ರ ಅಡಿಯಲ್ಲಿ ಹಾಗೂ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (KERC) (ಪರವಾನಗಿ) ನಿಯಮಗಳು, 2004 ಮತ್ತು ಇತರ ಅನ್ವಯವಾಗುವ ನಿಯಮಗಳು ಹಾಗೂ ವಿನಿಯಮಗಳ ಜೊತೆಗೆ ಓದಿಕೊಂಡು, **ಹೆಸ್ಕಾಂನ ಮೂರು (3) ಆದಾಯ ಜಿಲ್ಲೆಗಳಾದ ಬೆಳಗಾವಿ, ಉತ್ತರ ಕನ್ನಡ ಮತ್ತು ಧಾರವಾಡವನ್ನು ಒಳಗೊಂಡ ಭೌಗೋಳಿಕವಾಗಿ ಪರಸ್ಪರ ಸಂಪರ್ಕ ಹೊಂದಿರುವ ಪ್ರದೇಶಗಳಿಗೆ** ಟಾಟಾ ಪವರ್ ಕಂಪನಿ ಲಿಮಿಟೆಡ್‌ಗೆ ವಿತರಣಾ ಪರವಾನಗಿ ಮಂಜೂರು ಮಾಡುವಂತೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (KERC/ಆಯೋಗ) ಮುಂದೆ ಅರ್ಜಿಯನ್ನು **(ಪ್ರಕರಣ ಸಂಖ್ಯೆ: MP/06/2026)** ಸಲ್ಲಿಸಿದೆ. ಆಯೋಗವು ಅರ್ಜಿಯನ್ನು ದಾಖಲಿಸಿಕೊಂಡಿದ್ದು, ಕಾಯಿದೆಯ ಕಲಂ 15(2)ರ ಅಡಿಯಲ್ಲಿ ಸಾರ್ವಜನಿಕ ಸೂಚನೆಯನ್ನು ಪ್ರಕಟಿಸುವಂತೆ ಟಾಟಾ ಪವರ್‌ಗೆ ನಿರ್ದೇಶಿಸಿದೆ.

2. ಅರ್ಜಿಯ ಪ್ರಮುಖ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ಕೆಳಗೆ ನೀಡಲಾಗಿದೆ:

ಅರ್ಜಿದಾರರ ಹೆಸರು:	ದಿ ಟಾಟಾ ಪವರ್ ಕಂಪನಿ ಲಿಮಿಟೆಡ್
ಅರ್ಜಿದಾರರ ನೋಂದಾಯಿತ ಕಚೇರಿಯ ವಿಳಾಸ:	ಬಾಂಬೆ ಹೌಸ್, 24 ಹೋಮಿ ಮೋದಿ ಸ್ಟ್ರೀಟ್, ಮುಂಬೈ 400 001
ಅರ್ಜಿ ಸಲ್ಲಿಸಿರುವ ಪರವಾನಗಿಯ ಸ್ವರೂಪ:	ಕಾಯಿದೆಯ ಕಲಂ 14ರ ಆರನೇ ಪರಂತುಕದ ಅಡಿಯಲ್ಲಿ ವಿತರಣಾ ಪರವಾನಗಿ
ಅರ್ಜಿದಾರರ ಪ್ರಮುಖ ವ್ಯವಹಾರ ಸ್ಥಳ:	**ಹೆಸ್ಕಾಂನ ಮೂರು (3) ಆದಾಯ ಜಿಲ್ಲೆಗಳಾದ ಬೆಳಗಾವಿ, ಉತ್ತರ ಕನ್ನಡ ಮತ್ತು ಧಾರವಾಡವನ್ನು ಒಳಗೊಂಡ ಭೌಗೋಳಿಕವಾಗಿ ಸಂಪರ್ಕಿತ ಪ್ರದೇಶಗಳು**

3. ಅರ್ಜಿಯ ಇತರ ಪ್ರಮುಖ ಲಕ್ಷಣಗಳು:
- ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಯು ಮುಂಬೈ, ಅಜ್ಮೀರ್ ಹಾಗೂ ದೆಹಲಿ ಮತ್ತು ಒಡಿಶಾ ರಾಜ್ಯಗಳ ಗ್ರಾಹಕರ ವಿದ್ಯುತ್ ಬೇಡಿಕೆಯನ್ನು ಪೂರೈಸುತ್ತಿದೆ.
- ಟಾಟಾ ಪವರ್ ಡಿಸ್ಟ್ರಿಬ್ಯೂಷನ್ – ಮುಂಬೈ ಸಂಸ್ಥೆಯು 485 ಚದರ ಕಿ.ಮೀ. ಪ್ರದೇಶದಲ್ಲಿ 0.8 ಮಿಲಿಯನ್‌ಗಿಂತ ಹೆಚ್ಚು ಗ್ರಾಹಕರನ್ನು ಹೊಂದಿದ್ದು, 4,850 ಸಿಕೆಎಂ ನೆಟ್‌ವರ್ಕ್ ಉದ್ದ ಮತ್ತು 99.99%ಕ್ಕಿಂತ ಹೆಚ್ಚಿನ ವಿಶ್ವಾಸಾರ್ಹತೆಯನ್ನು ಹೊಂದಿದೆ – ಇದು ದೇಶದಲ್ಲೇ ಅತ್ಯುನ್ನತ ಶ್ರೇಣಿಯಲ್ಲಿದೆ.
- ಟಾಟಾ ಪವರ್ – ಡಿಡಿಎಲ್, ಟಾಟಾ ಪವರ್ ಸೆಂಟ್ರಲ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಸಿಒಡಿಎಲ್), ಟಾಟಾ ಪವರ್ ನಾರ್ದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎನ್‌ಒಡಿಎಲ್), ಟಾಟಾ ಪವರ್ ಸದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎಸ್‌ಒಡಿಎಲ್), ಟಾಟಾ ಪವರ್ ವೆಸ್ಟರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಡಬ್ಲ್ಯೂಒಡಿಎಲ್) ಮತ್ತು ಟಾಟಾ ಪವರ್ ಅಜ್ಮೀರ್ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಎಡಿಎಲ್)ನಲ್ಲಿ ಟಾಟಾ ಪವರ್‌ನ ಕಾರ್ಯಸಾಧನೆ ಗಮನಾರ್ಹವಾಗಿದೆ.
- ಟಾಟಾ ಪವರ್ ಶತಮಾನಕ್ಕೂ ಮೀರಿ ವಿದ್ಯುತ್ ವಿತರಣಾ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದು, ಆದ್ದರಿಂದ ಹೆಚ್ಚುತ್ತಿರುವ ಸಂಕೀರ್ಣ ವಿದ್ಯುತ್ ವಿತರಣಾ ವ್ಯವಹಾರವನ್ನು ನಿರ್ವಹಿಸುವ ಅಪ್ರತಿಮ ಪರಿಣತಿ ಮತ್ತು ಸಾಮರ್ಥ್ಯಗಳನ್ನು ಹೊಂದಿದೆ. ಅರ್ಜಿದಾರರು ವಿವಿಧ ಸಮನ್ವಯ (synergies) ಲಾಭಗಳನ್ನು ಪಡೆದು ಪ್ರಸ್ತಾವಿತ ಪೂರೈಕೆ ಪ್ರದೇಶದಲ್ಲಿ – ಅಂದರೆ **ಹೆಸ್ಕಾಂನ ಮೂರು (3) ಆದಾಯ ಜಿಲ್ಲೆಗಳಾದ ಬೆಳಗಾವಿ, ಉತ್ತರ ಕನ್ನಡ ಮತ್ತು ಧಾರವಾಡ** ಪ್ರದೇಶದಲ್ಲಿ – ಗ್ರಾಹಕರ ನಿರಂತರವಾಗಿ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಉದ್ದೇಶಿಸಿದ್ದಾರೆ.
- ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ವಿತರಣಾ ಪರವಾನಗಿ ಕೋರುತ್ತಿರುವ ಪ್ರಸ್ತಾವಿತ ಪ್ರದೇಶವು ಪ್ರಸ್ತುತ **ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಲಿಮಿಟೆಡ್ (ಹೆಸ್ಕಾಂ)**ನ ವಿತರಣಾ ವ್ಯಾಪ್ತಿಗೆ ಒಳಪಡುತ್ತದೆ.

4. ಅರ್ಜಿದಾರರ ಕಾನೂನು ಸ್ಥಿತಿ ಮತ್ತು ನೋಂದಣಿ ಸಂಖ್ಯೆ: ಪಬ್ಲಿಕ್ ಲಿಮಿಟೆಡ್ ಕಂಪನಿ – ಸಿಐಎನ್ [L28920MH1919PLC000567]

5. ಷೇರು ಹೊಂದಿರುವ ಮಾದರಿ:

ಕ್ರ. ಸಂ.	ಷೇರುದಾರರ ಹೆಸರು	ಹೊಂದಿರುವ ಷೇರುಗಳ ಸಂಖ್ಯೆ (31 ಜೂನ್ 2024)
(i)	ಪ್ರವರ್ತಕ ಮತ್ತು ಪ್ರವರ್ತಕ ಗುಂಪು	1,49,72,57,565
(ii)	ಸಾರ್ವಜನಿಕ	1,69,80,81,982
(iii)	ಪ್ರವರ್ತಕರಲ್ಲದ – ಸಾರ್ವಜನಿಕವಲ್ಲದ	0
(iv)	ಡೀಲರ್ ಅಡಿಯಲ್ಲಿನ ಷೇರುಗಳು	0
(v)	ಉದ್ಯೋಗಿ ಟ್ರಸ್ಟ್ ಹೊಂದಿರುವ ಷೇರುಗಳು	0
(vi)	ಒಟ್ಟು	3,19,53,39,547

6. ವ್ಯವಸ್ಥಾಪನಾ ವಿವರ (ನಿರ್ದೇಶಕರ ಮಂಡಳಿ):

ಕ್ರ. ಸಂ.	ಹೆಸರು ಮತ್ತು ಪದನಾಮ	ಶೈಕ್ಷಣಿಕ ಅರ್ಹತೆ	ಪರಿಣತಿ ಕ್ಷೇತ್ರ	ಅನುಭವ
1	ಶ್ರೀ. ನಟರಾಜನ್ ಚಂದ್ರಶೇಖರನ್, ಸ್ವತಂತ್ರವಲ್ಲದ, ಕಾರ್ಯ ನಿರ್ವಾಹಕವಲ್ಲದ ನಿರ್ದೇಶಕ, ಅಧ್ಯಕ್ಷರು	• ಮಾಸ್ಟರ್ಸ್ ಇನ್ ಕಂಪ್ಯೂಟರ್ ಅಪ್ಲಿಕೇಷನ್ಸ್, ರೀಜನಲ್ ಇಂಜಿನಿಯರಿಂಗ್ ಕಾಲೇಜ್, ತಿರುಚಿ • ಗೌರವ 'ಡಾಕ್ಟರ್ ಆಫ್ ಲೆಟರ್ಸ್', ರೀಜನಲ್ ಇಂಜಿನಿಯರಿಂಗ್ ಕಾಲೇಜ್, ತಿರುಚಿ	• ಟಾಟಾ ಸನ್ಸ್‌ನ ಅಧ್ಯಕ್ಷರು • ಜಾಗತಿಕ ವ್ಯವಹಾರ ಕಾರ್ಯಾಚರಣೆಗಳಲ್ಲಿ ನಾಯಕತ್ವ	36 ವರ್ಷಗಳಿಗಿಂತ ಹೆಚ್ಚು
2	ಡಾ. ಪ್ರವೀರ್ ಸಿನ್ಹಾ, ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ	• ಪಿಎಚ್‌ಡಿ, ಭಾರತೀಯ ತಂತ್ರಜ್ಞಾನ ಸಂಸ್ಥೆ ದೆಹಲಿ • ಮಾಸ್ಟರ್ ಇನ್ ಬಿಸಿನೆಸ್ ಲಾ, ನ್ಯಾಷನಲ್ ಲಾ ಸ್ಕೂಲ್, ಬೆಂಗಳೂರು • ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಪದವಿ, ದೆಹಲಿ ಕಾಲೇಜ್ ಆಫ್ ಇಂಜಿನಿಯರಿಂಗ್	• ವಿದ್ಯುತ್ ಕ್ಷೇತ್ರದ ಪರಿಣತ • ವಿದ್ಯುತ್ ಉತ್ಪಾದನೆ ಮತ್ತು ವಿತರಣೆಯಲ್ಲಿ ನಾಯಕತ್ವ	36 ವರ್ಷಗಳಿಗಿಂತ ಹೆಚ್ಚು
3	ಶ್ರೀಮತಿ ಅಂಜಲಿ ಬನ್ಸಲ್, ಸ್ವತಂತ್ರ ಕಾರ್ಯ ನಿರ್ವಾಹಕವಲ್ಲದ ನಿರ್ದೇಶಕಿ	• ಬ್ಯಾಚುಲರ್ಸ್ ಇನ್ ಕಂಪ್ಯೂಟರ್ ಇಂಜಿನಿಯರಿಂಗ್ • ಮಾಸ್ಟರ್ಸ್ ಇನ್ ಇಂಟರ್‌ನ್ಯಾಷನಲ್ ಫೈನಾನ್ಸ್ ಅಂಡ್ ಬಿಸಿನೆಸ್, ಕೊಲಂಬಿಯಾ ವಿಶ್ವವಿದ್ಯಾಲಯ	• ಕಾರ್ಪೊರೇಟ್ ಆಡಳಿತದಲ್ಲಿ ಪರಿಣತಿ • ತಂತ್ರಜ್ಞಾನ ಮತ್ತು ಹಣಕಾಸು ಸೇವಾ ಕ್ಷೇತ್ರಗಳಲ್ಲಿ ಅನುಭವ	20 ವರ್ಷಗಳಿಗಿಂತ ಹೆಚ್ಚು
4	ಶ್ರೀ. ಅಶೋಕ್ ಸಿನ್ಹಾ, ಸ್ವತಂತ್ರ ಕಾರ್ಯ ನಿರ್ವಾಹಕವಲ್ಲದ ನಿರ್ದೇಶಕ	• ಬ್ಯಾಚುಲರ್ಸ್ ಇನ್ ಕೆಮಿಕಲ್ ಇಂಜಿನಿಯರಿಂಗ್, ಐಐಟಿ ಕಾನ್ಪುರ • ಎಂಬಿಎ, ಐಐಎಂ ಬೆಂಗಳೂರು	• ಇಂಧನ ಕ್ಷೇತ್ರದಲ್ಲಿ ವ್ಯಾಪಕ ಅನುಭವ • ಬಿಪಿಸಿಎಲ್‌ನ ಮಾಜಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ	38 ವರ್ಷಗಳಿಗಿಂತ ಹೆಚ್ಚು
5	ಶ್ರೀ. ರಾಜೀವ್ ಮೆಹರಿಷಿ, ಸ್ವತಂತ್ರ ಕಾರ್ಯ ನಿರ್ವಾಹಕವಲ್ಲದ ನಿರ್ದೇಶಕ	• ಮಾಸ್ಟರ್ಸ್ ಇನ್ ಹಿಸ್ಟರಿ • ಎಂಬಿಎ, ಯೂನಿವರ್ಸಿಟಿ ಆಫ್ ಸ್ಟ್ರಾತ್‌ಕ್ಲೈಡ್, ಯುಕೆ	• ಭಾರತದ ಮಾಜಿ ನಿಯಂತ್ರಕ ಮತ್ತು ಮಹಾಲೇಖಪರಿಶೋಧಕ • ಲೋಕ ಆಡಳಿತ ಮತ್ತು ಹಣಕಾಸಿನಲ್ಲಿ ಪರಿಣತಿ	ನಾಗರಿಕ ಸೇವೆಗಳಲ್ಲಿ 40 ವರ್ಷಗಳಿಗಿಂತ ಹೆಚ್ಚು
6	ಶ್ರೀಮತಿ ವಿಭಾ ಪಡಲ್ಕರ್, ಸ್ವತಂತ್ರ ಕಾರ್ಯ ನಿರ್ವಾಹಕವಲ್ಲದ ನಿರ್ದೇಶಕಿ	• ಚಾರ್ಟರ್ಡ್ ಅಕೌಂಟೆಂಟ್	• ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕಿ ಮತ್ತು ಸಿಇಒ • ಹಣಕಾಸು ಮತ್ತು ವಿಮಾ ಕ್ಷೇತ್ರಗಳಲ್ಲಿ ಪರಿಣತಿ	30 ವರ್ಷಗಳಿಗಿಂತ ಹೆಚ್ಚು
7	ಶ್ರೀ. ಸೌರಭ್ ಅಗ್ರವಾಲ್, ಕಾರ್ಯ ನಿರ್ವಾಹಕವಲ್ಲದ ನಿರ್ದೇಶಕ	• ಬ್ಯಾಚುಲರ್ ಇನ್ ಕೆಮಿಕಲ್ ಇಂಜಿನಿಯರಿಂಗ್, ಐಐಟಿ ರೂರ್ಕಿ • ಪಿಜಿಡಿಎಂ, ಐಐಎಂ ಕಲ್ಕತ್ತಾ	• ಟಾಟಾ ಸನ್ಸ್‌ನ ಗ್ರೂಪ್ ಮುಖ್ಯ ಹಣಕಾಸು ಅಧಿಕಾರಿ • ಕಾರ್ಪೊರೇಟ್ ಹಣಕಾಸು ಮತ್ತು ಕಾರ್ಯತಂತ್ರದಲ್ಲಿ ಪರಿಣತಿ	25 ವರ್ಷಗಳಿಗಿಂತ ಹೆಚ್ಚು
8	ಶ್ರೀ. ಸಂಜಯ್ ವಿ. ಭಂಡಾರ್ಕರ್, ಸ್ವತಂತ್ರ ಕಾರ್ಯ ನಿರ್ವಾಹಕವಲ್ಲದ ನಿರ್ದೇಶಕ	• ಎಂಬಿಎ, ಎಕ್ಸ್‌ಎಲ್‌ಆರ್‌ಐ, ಜಮಶೆಡ್‌ಪುರ	• ರಾಥ್‌ಸ್‌ಚೈಲ್ಡ್ ಇಂಡಿಯಾದ ಮಾಜಿ ವ್ಯವಸ್ಥಾಪಕ ನಿರ್ದೇಶಕ • ಹೂಡಿಕೆ ಬ್ಯಾಂಕಿಂಗ್ ಮತ್ತು ಕಾರ್ಪೊರೇಟ್ ಹಣಕಾಸಿನಲ್ಲಿ ಅನುಭವ	30 ವರ್ಷಗಳಿಗಿಂತ ಹೆಚ್ಚು
9	ಶ್ರೀ. ತರುಣ್ ಬಜಾಜ್, ಸ್ವತಂತ್ರ ಕಾರ್ಯ ನಿರ್ವಾಹಕವಲ್ಲದ ನಿರ್ದೇಶಕ	• ಬ್ಯಾಚುಲರ್ ಇನ್ ಕಾಮರ್ಸ್, ಶ್ರೀರಾಮ್ ಕಾಲೇಜ್ ಆಫ್ ಕಾಮರ್ಸ್, ದೆಹಲಿ ವಿಶ್ವವಿದ್ಯಾಲಯ • ಎಂಬಿಎ, ಭಾರತೀಯ ವ್ಯವಸ್ಥಾಪನಾ ಸಂಸ್ಥೆ ಅಹಮದಾಬಾದ್ • ಎಂ.ಎಸ್ಸಿ., ಲಂಡನ್ ಸ್ಕೂಲ್ ಆಫ್ ಇಕನಾಮಿಕ್ಸ್ ಅಂಡ್ ಪೊಲಿಟಿಕಲ್ ಸೈನ್ಸ್	• ಭಾರತ ಸರ್ಕಾರದ ಮಾಜಿ ಕಂದಾಯ ಕಾರ್ಯದರ್ಶಿ • ಹಣಕಾಸು, ತೆರಿಗೆ ಮತ್ತು ಲೋಕ ಆಡಳಿತದಲ್ಲಿ ಪರಿಣತಿ	ನಾಗರಿಕ ಸೇವೆಗಳಲ್ಲಿ 34 ವರ್ಷಗಳಿಗಿಂತ ಹೆಚ್ಚು
10	ಶ್ರೀ. ಪ್ರಮೋದ್ ಅಗರ್ವಾಲ್, ಸ್ವತಂತ್ರ ಕಾರ್ಯ ನಿರ್ವಾಹಕವಲ್ಲದ ನಿರ್ದೇಶಕ	• ಬಿ.ಟೆಕ್ (ಸಿವಿಲ್), ಐಐಟಿ ಮುಂಬೈ • ಎಂ.ಟೆಕ್ (ಡಿಸೈನ್ ಇಂಜಿನಿಯರಿಂಗ್), ಐಐಟಿ ದೆಹಲಿ	• ಕೋಲ್ ಇಂಡಿಯಾ ಲಿಮಿಟೆಡ್‌ನ ಮಾಜಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರು (ಸಿಎಂಡಿ); ಮಧ್ಯಪ್ರದೇಶ ಸರ್ಕಾರದ ಪ್ರಧಾನ ಕಾರ್ಯದರ್ಶಿ • ಯೋಜನಾ ನಿರ್ವಹಣೆ, ತಾಂತ್ರಿಕ ಮೈತ್ರಿಗಳು, ಕಾರ್ಯತಂತ್ರಾತ್ಮಕ ಯೋಜನೆ	ನಾಗರಿಕ ಸೇವೆಗಳಲ್ಲಿ 30+ ವರ್ಷಗಳಿಗಿಂತ ಹೆಚ್ಚು

7. ಸಮಾನ ಚಟುವಟಿಕೆಗಳಲ್ಲಿನ ಕಾರ್ಯಚಟುವಟಿಕೆಗಳು ಮತ್ತು ಹಿಂದಿನ ಅನುಭವದ ಸಾರಾಂಶ:

ವಿದ್ಯುತ್ ವಿತರಣಾ ಕ್ಷೇತ್ರದಲ್ಲಿ, ಟಾಟಾ ಪವರ್ ಮುಂಬೈ, ಅಜ್ಮೀರ್ ಹಾಗೂ ದೆಹಲಿ ಮತ್ತು ಒಡಿಶಾ ರಾಜ್ಯಗಳ ಗ್ರಾಹಕರಿಗೆ ನಿರಂತರ, ಕೈಗೆಟುಕುವ ಮತ್ತು ವಿಶ್ವಾಸಾರ್ಹ ವಿದ್ಯುತ್ ಪೂರೈಕೆಯನ್ನು ಒದಗಿಸುತ್ತಿದೆ.

i) **ಮುಂಬೈನಲ್ಲಿ ವಿತರಣಾ ಪರವಾನಗಿ:** ಮಾನ್ಯ ಎಂಇಆರ್‌ಸಿ ಮುಂಬೈ ನಗರ ಹಾಗೂ ಮುಂಬೈ ಉಪನಗರ ಪ್ರದೇಶದ ಭಾಗಗಳಿಗೆ (ಚೆನೆ ಮತ್ತು ವರ್ಸಾವೆ ಪ್ರದೇಶಗಳನ್ನು ಒಳಗೊಂಡ ಮೀರಾ ಭಾಯಂದರ್ ಮುನಿಸಿಪಲ್ ಕಾರ್ಪೊರೇಶನ್ ವ್ಯಾಪ್ತಿ) 25 ವರ್ಷಗಳ ಅವಧಿಗೆ ಟಾಟಾ ಪವರ್‌ಗೆ ವಿತರಣಾ ಪರವಾನಗಿ (ವಿತರಣಾ ಪರವಾನಗಿ ಸಂಖ್ಯೆ 1/2014) ಮಂಜೂರು ಮಾಡಿದೆ. ಟಾಟಾ ಪವರ್ ಡಿಸ್ಟ್ರಿಬ್ಯೂಷನ್ – ಮುಂಬೈ, 485 ಚದರ ಕಿ.ಮೀ. ಪ್ರದೇಶದಲ್ಲಿ 0.8 ಮಿಲಿಯನ್‌ಗಿಂತ ಹೆಚ್ಚು ಗ್ರಾಹಕರಿಗೆ ಸೇವೆ ನೀಡುತ್ತಿದ್ದು, 4,850 CKM ಜಾಲ ಉದ್ದ ಹಾಗೂ 1,076 ಮೆಗಾವ್ಯಾಟ್ ಗರಿಷ್ಠ ಬೇಡಿಕೆಯನ್ನು ಹೊಂದಿದೆ. ಟಾಟಾ ಪವರ್ ಡಿಸ್ಟ್ರಿಬ್ಯೂಷನ್ – ಮುಂಬೈ ಸುಮಾರು 1.24% ವಿತರಣಾ ನಷ್ಟದೊಂದಿಗೆ ಅತ್ಯಾಧುನಿಕ ವಿದ್ಯುತ್ ವಿತರಣಾ ಜಾಲವನ್ನು ನಿರ್ವಹಿಸುತ್ತಿದೆ.

ii) **ದೆಹಲಿಯಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ದೆಹಲಿ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಾಟಾ ಪವರ್ – ಡಿಡಿಎಲ್) ಜುಲೈ 2002ರಲ್ಲಿ ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ (51%) ಮತ್ತು ರಾಷ್ಟ್ರೀಯ ರಾಜಧಾನಿ ಪ್ರದೇಶ ದೆಹಲಿ ಸರ್ಕಾರ (49%) ನಡುವಿನ ಪಬ್ಲಿಕ್ ಪ್ರೈವೇಟ್ ಪಾರ್ಟ್‌ನರ್‌ಶಿಪ್ (PPP) ಮಾದರಿಯ ಜಂಟಿ ಉದ್ಯಮವಾಗಿ ಸ್ಥಾಪಿಸಲಾಯಿತು. ಟಾಟಾ ಪವರ್ – ಡಿಡಿಎಲ್ ಸುಮಾರು 2.1 ಮಿಲಿಯನ್ ಗ್ರಾಹಕರಿಗೆ ಸೇವೆ ಸಲ್ಲಿಸುತ್ತಿದ್ದು, ಸುಮಾರು 12500 CKM ವಿದ್ಯುತ್ ವಿತರಣಾ ಜಾಲವನ್ನು ನಿರ್ವಹಿಸುತ್ತಿದೆ. AT&C ನಷ್ಟದ ಮಟ್ಟಗಳು 2002ರಲ್ಲಿ 53.1% ಇದ್ದದ್ದು 2025ರಲ್ಲಿ 5.54%ಕ್ಕೆ ಇಳಿದಿವೆ.

iii) **ಮಧ್ಯ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ಸೆಂಟ್ರಲ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPCODL) ಟಾಟಾ ಪವರ್ ಮತ್ತು ಒಡಿಶಾ ಸರ್ಕಾರದ ನಡುವಿನ ಜಂಟಿ ಉದ್ಯಮವಾಗಿದ್ದು, ಟಾಟಾ ಪವರ್ ಕಂಪನಿ (51%) ಬಹುಪಾಲು ಹೊಂದಿದೆ. TPCODL 29,354 ಚದರ ಕಿ.ಮೀ. ವ್ಯಾಪ್ತಿಯ ವಿಶಾಲ ವಿತರಣಾ ಪ್ರದೇಶದಲ್ಲಿ 3.3 ಮಿಲಿಯನ್ ಗ್ರಾಹಕರಿಗೆ ಸೇವೆ ನೀಡುತ್ತಿದೆ. ಜೂನ್ 2020ರ ಸ್ವಾಧೀನದ ಸಮಯದಲ್ಲಿ 30.49% ಇದ್ದ AT&C ನಷ್ಟಗಳು ಈಗ 19.6%ಕ್ಕೆ ಇಳಿದಿವೆ. TPCODL 1,14,119 CKM ವಿದ್ಯುತ್ ವಿತರಣಾ ಜಾಲವನ್ನು ನಿರ್ವಹಿಸುತ್ತಿದೆ.

iV) **ಉತ್ತರ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ನಾರ್ದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPNODL) ವಿದ್ಯುತ್ ವಿತರಣೆ ಮತ್ತು ಚಿಲ್ಲರೆ ಪೂರೈಕೆಯ ಕಾರ್ಯ ನಿರ್ವಹಿಸಲು ಟಾಟಾ ಪವರ್ (51%) ಮತ್ತು ಗ್ರಿಡ್ಕೋ ಲಿಮಿಟೆಡ್ (49%) ನಡುವಿನ ಜಂಟಿ ಉದ್ಯಮವಾಗಿ ಏಪ್ರಿಲ್ 2021ರಲ್ಲಿ ಸ್ಥಾಪಿಸಲಾಯಿತು. TPNODL 27,920 ಚದರ ಕಿ.ಮೀ. ವ್ಯಾಪ್ತಿಯ ಪ್ರದೇಶದಲ್ಲಿ ಹರಡಿರುವ 2.2 ಮಿಲಿಯನ್ ಗ್ರಾಹಕರಿಗೆ ಸೇವೆ ನೀಡುತ್ತಿದೆ. FY25ರ ಅಂತ್ಯದಲ್ಲಿ ವಾರ್ಷಿಕ AT&C ನಷ್ಟಗಳು 12.6%ರಷ್ಟಿದ್ದು, ಇದು ಮಾನ್ಯ OERC ನಿಗದಿಪಡಿಸಿದ 17.09% ಗುರಿಗಿಂತ 4.49% ಕಡಿಮೆಯಾದ ಸಾಧನೆಯಾಗಿದೆ. TPNODL 566 ಪವರ್ ಟ್ರಾನ್ಸ್‌ಫಾರ್ಮರ್‌ಗಳು, 81,168 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ಹಾಗೂ 1,64,629 CKM ಜಾಲವನ್ನು ನಿರ್ವಹಿಸುತ್ತಿದೆ.

V) **ದಕ್ಷಿಣ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ಸದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPSODL) ಜನವರಿ 2021ರಲ್ಲಿ ತನ್ನ ಕಾರ್ಯಾಚರಣೆಯನ್ನು ಆರಂಭಿಸಿತು. ಸುಮಾರು 2.2 ಮಿಲಿಯನ್ ಗ್ರಾಹಕರೊಂದಿಗೆ, TPSODL ಒಡಿಶಾದ ದಕ್ಷಿಣ ಭಾಗದ ಸುಮಾರು 48,751 ಚದರ ಕಿ.ಮೀ. ವಿಸ್ತೀರ್ಣವನ್ನು ಹೊಂದಿದೆ. TPSODL 112955 ಸಿಕೆಎಂ ನೆಟ್‌ವರ್ಕ್ ಅನ್ನು ನಿರ್ವಹಿಸುತ್ತದೆ ಮತ್ತು ದಾಖಲಾದ ಗರಿಷ್ಠ ಬೇಡಿಕೆ 798 ಎಂವಿಎ ಆಗಿತ್ತು.

Vi) **ಪಶ್ಚಿಮ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ವೆಸ್ಟರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಿಪಿಡಬ್ಲ್ಯೂಒಡಿಎಲ್) ಟಾಟಾ ಪವರ್ (51%) ಮತ್ತು ಗ್ರಿಡ್ಕೋ ಲಿಮಿಟೆಡ್ (49%) ನಡುವಿನ ಜಂಟಿ ಉದ್ಯಮವಾಗಿದ್ದು, ಜನವರಿ 2021ರಲ್ಲಿ ತನ್ನ ಕಾರ್ಯಾಚರಣೆಯನ್ನು ಆರಂಭಿಸಿತು. ಟಿಪಿಡಬ್ಲ್ಯೂಒಡಿಎಲ್ 48,373 ಚದರ ಕಿ.ಮೀ. ವ್ಯಾಪ್ತಿಯ 2.2 ಮಿಲಿಯನ್ ನೋಂದಾಯಿತ ಗ್ರಾಹಕ ನೆಲೆಯನ್ನು ಹೊಂದಿತ್ತು. ಟಿಪಿಡಬ್ಲ್ಯೂಒಡಿಎಲ್ 692 ಪವರ್ ಟ್ರಾನ್ಸ್‌ಫಾರ್ಮರ್‌ಗಳು, 82,752 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ಮತ್ತು 1,79,694 ಸಿಕೆಟಿ. ಕಿ.ಮೀ. ಜಾಲವನ್ನು ನಿರ್ವಹಿಸುತ್ತಿದೆ. ಎಫ್‌ವೈ 25ರ ಅವಧಿಯಲ್ಲಿ ಎಟಿಅಂಡ್‌ಸಿ ನಷ್ಟಗಳು 17.1%ರಷ್ಟಿತ್ತು. ದಾಖಲಾದ ಗರಿಷ್ಠ ಬೇಡಿಕೆ 1,780 ಮೆಗಾವ್ಯಾಟ್ ಆಗಿತ್ತು.

Vii) **ಅಜ್ಮೀರ್‌ನಲ್ಲಿ ವಿತರಣಾ ಫ್ರಾಂಚೈಸಿ:**
ಟಾಟಾ ಪವರ್ ಅಜ್ಮೀರ್ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPADL) ಅಜ್ಮೀರ್ ವಿದ್ಯುತ್ ವಿತರಣ ನಿಗಮ ಲಿಮಿಟೆಡ್ ಜೊತೆ ವಿತರಣಾ ಫ್ರಾಂಚೈಸಿ ಒಪ್ಪಂದ (DFA)ಕ್ಕೆ ಸಹಿ ಹಾಕಿರುವ ವಿತರಣಾ ಫ್ರಾಂಚೈಸಿಯಾಗಿದೆ. TPADL ಅಜ್ಮೀರ್ ನಗರದ ವಿತರಣಾ ಜಾಲವನ್ನು ನಿರ್ವಹಿಸುವುದು ಮತ್ತು ಸಂರಕ್ಷಿಸುವುದರ ಜೊತೆಗೆ ಸುಮಾರು 200 ಚದರ ಕಿ.ಮೀ. ಪ್ರದೇಶದಾದ್ಯಂತ ಬಿಲ್ಲಿಂಗ್ ಮತ್ತು ಸಂಗ್ರಹಣೆಯನ್ನು ನಿರ್ವಹಿಸುವ ಜವಾಬ್ದಾರಿಯನ್ನು ಹೊಂದಿದೆ. TPADL AT&C ನಷ್ಟಗಳನ್ನು 17.2%ರಿಂದ 7.8%ಕ್ಕೆ ಇಳಿಸುವಲ್ಲಿ ಗಮನಾರ್ಹ ಕೊಡುಗೆ ನೀಡಿದೆ.

8. ಪೂರೈಕೆಯ ಪ್ರಸ್ತಾವಿತ ಪ್ರದೇಶ, ಅದರ ವಿವರ ಹಾಗೂ ಸೇವೆ ಸಲ್ಲಿಸಲು ಉದ್ದೇಶಿಸಿರುವ ಗ್ರಾಹಕರ ಸಂಖ್ಯೆ: ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಯು ಹೆಸ್ಕಾಂನ ಮೂರು (3) ಆದಾಯ ಜಿಲ್ಲೆಗಳಾದ ಬೆಳಗಾವಿ, ಉತ್ತರ ಕನ್ನಡ ಮತ್ತು ಧಾರವಾಡವನ್ನು ಒಳಗೊಂಡ ಭೌಗೋಳಿಕವಾಗಿ ಪರಸ್ಪರ ಸಂಪರ್ಕ ಹೊಂದಿರುವ ಪ್ರದೇಶದಲ್ಲಿ ವಿದ್ಯುತ್ ವಿತರಣೆ ಮತ್ತು ಪೂರೈಕೆಯನ್ನು ಕೈಗೊಳ್ಳಲು ಉದ್ದೇಶಿಸಿದೆ. ಮೇಲ್ಕಂಡ ಪ್ರದೇಶಗಳು ಸಂಪೂರ್ಣವಾಗಿ ಅಥವಾ ಭಾಗಶಃ ಕೆಳಕಂಡ ಪ್ರದೇಶಗಳನ್ನು ಒಳಗೊಂಡಿವೆ: **1) ಬೆಳಗಾವಿ ಮಹಾನಗರ ಪಾಲಿಕೆ 2) ಗೋಕಾಕ ಸಿಎಂಸಿ 3) ನಿಪ್ಪಾಣಿ ಸಿಎಂಸಿ 4) ದಾಂಡೇಲಿ ಸಿಎಂಸಿ 5) ಕಾರವಾರ ಸಿಎಂಸಿ 6) ಶಿರಸಿ ಸಿಎಂಸಿ 7) ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ .**
TPC ಪರವಾನಗಿ ಮಂಜೂರಾದ ದಿನಾಂಕದಿಂದ ಐದು (5) ವರ್ಷಗಳ ಅವಧಿಯ ಅಂತ್ಯದೊಳಗೆ 38,500 (ಮೂವತ್ತೆಂಟು ಸಾವಿರದ ಐದುನೂರು)ಕ್ಕಿಂತ ಹೆಚ್ಚು ಗ್ರಾಹಕರಿಗೆ ಸೇವೆ ಸಲ್ಲಿಸಲಿದೆ.

9. ಪರಿಶೀಲನೆ ಅಥವಾ ಖರೀದಿಗಾಗಿ ಅರ್ಜಿಯ ಪ್ರತಿಯನ್ನು ಪಡೆಯಬಹುದಾದ ನೋಡಲ್ ವ್ಯಕ್ತಿಯ ಸಂಪರ್ಕ ವಿವರಗಳು:

(i)	ವ್ಯಕ್ತಿಯ ಹೆಸರು ಮತ್ತು ಪದನಾಮ	ಶ್ರೀ. ಮನೀಷ್ ದಹಾಕೆ, ಗ್ರೂಪ್ ಹೆಡ್ – ನೆಟ್‌ವರ್ಕ್ ಪ್ಲಾನಿಂಗ್ ಅಂಡ್ ಕನ್ಸ್ಯೂಮರ್ ಇಂಜಿನಿಯರಿಂಗ್ (ಸಿಟಿ)
(ii)	ಪರಿಶೀಲನೆ ಅಥವಾ ಖರೀದಿಗಾಗಿ ಅರ್ಜಿಯ ಪ್ರತಿಯನ್ನು ಪಡೆಯಬಹುದಾದ ಕಚೇರಿಯ ವಿಳಾಸ:	ದಿ ಟಾಟಾ ಪವರ್ ಕಂಪನಿ ಲಿಮಿಟೆಡ್, ವಿತರಣಾ ವಿಭಾಗ, ಸೇನಾಪತಿ ಬಾಪತ್ ಮಾರ್ಗ, ಲೋವರ್ ಪರೇಲ್, ಮುಂಬೈ 400 013, ಮಹಾರಾಷ್ಟ್ರ, ಭಾರತ
(iii)	ಸಿಡಿ ಸಹಿತ ಸವಿವರ ಅರ್ಜಿ ದಾಖಲೆಗಳು (ಇಂಗ್ಲಿಷ್‌ನಲ್ಲಿ) (ರೂ. 150/- ನಗದು ಅಥವಾ [ದಿ ಟಾಟಾ ಪವರ್ ಕಂಪನಿ ಲಿಮಿಟೆಡ್] ಹೆಸರಿಗೆ ಮುಂಬೈನಲ್ಲಿ ಪಾವತಿಸಬಹುದಾದ ಡಿಡಿ/ಚೆಕ್ ಮೂಲಕ).	
(iv)	ಸವಿವರ ಅರ್ಜಿ ದಾಖಲೆಗಳು (ಇಂಗ್ಲಿಷ್‌ನಲ್ಲಿ) (ರೂ. 100/- ಪಾವತಿಯೊಂದಿಗೆ);	
(v)	ಸವಿವರ ಅರ್ಜಿ ದಾಖಲೆಯ ಸಿಡಿ (ಇಂಗ್ಲಿಷ್‌ನಲ್ಲಿ) (ರೂ. 50/- ಪಾವತಿಯೊಂದಿಗೆ);	

10. ಅರ್ಜಿಯ ಪ್ರತಿ ಮತ್ತು ಅದರಲ್ಲಿ ಉಲ್ಲೇಖಿಸಲಾದ ಇತರ ದಾಖಲೆಗಳನ್ನು ಉಚಿತವಾಗಿ ಡೌನ್‌ಲೋಡ್ ಮಾಡಬಹುದಾದ ವೆಬ್‌ಸೈಟ್ ವಿಳಾಸ: ವೆಬ್‌ಸೈಟ್: www.tatapower.com

11. ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಈ ಮೂಲಕ ದೃಢೀಕರಿಸಿ ಘೋಷಿಸುತ್ತದೆ: ಕೇಂದ್ರ ಸರ್ಕಾರವು ಪ್ರಕಟಿಸಿರುವ ವಿದ್ಯುತ್ ವಿತರಣಾ ಪರವಾನಗಿ (ಬಂಡವಾಳ ಸಮರ್ಪಕತೆ, ಸಾಲಸಾಮರ್ಥ್ಯ ಮತ್ತು ನಡವಳಿಕೆ ಸಂಹಿತೆಯ ಹೆಚ್ಚುವರಿ ಅಗತ್ಯಗಳು) ನಿಯಮಗಳು, 2005 (ಕಾಲಕಾಲಕ್ಕೆ ತಿದ್ದುಪಡಿಯಾದಂತೆ)ರ ನಿಯಮ 3ರ ಅಡಿಯಲ್ಲಿ ನಿಗದಿಪಡಿಸಲಾದ ಹೆಚ್ಚುವರಿ ಅಗತ್ಯಗಳನ್ನು ಅರ್ಜಿದಾರರು ಯಥಾವತ್ತಾಗಿ ಪಾಲಿಸುತ್ತಾರೆ. ಮೇಲ್ಕಂಡಂತೆ TPC ಪರವಾನಗಿ ಅರ್ಜಿಯನ್ನು ಸಲ್ಲಿಸಿದ್ದು, ಅರ್ಜಿಯ ಭಾಗವಾಗಿ ಎಲ್ಲಾ ಅನುಸರಣಾ ದಾಖಲೆಗಳನ್ನು ಸಹ ಲಗತ್ತಿಸಿದೆ.

''ವಾರ್ಷಿಕವಾಗಿ ಕಾಲೇಜಿಗೆ ಸುಮಾರು 50 ಕೋಟಿ ರೂ. ಸಂಗ್ರಹ ಆಗುತ್ತದೆ. ಅದರಲ್ಲಿ 30 ಕೋಟಿ ರೂ. ಸಿಬ್ಬಂದಿ ವೇತನಕ್ಕೆ ಹೋದರೆ, ಉಳಿದದ್ದು ಸಂಶೋಧನೆ ಹಾಗೂ ಕಾಲೇಜು ಅಭಿವೃದ್ಧಿಗಾಗಿ ಬಳಕೆ ಆಗಲಿದೆ,'' ಎಂದು ಸ್ಪಷ್ಟನೆ ನೀಡಿದರು. ''ಕಾಲೇಜಿನಲ್ಲಿ ಹುದ್ದೆಯೇ ಇಲ್ಲದೆ 14 ಜನರರಿಗೆ ಬಡ್ತಿ ನೀಡಲಾಗಿದೆ. ಇದಕ್ಕೆ ಕಾರ್ಯಕಾರಿ ಸಮಿತಿಯಲ್ಲೂ ಅನುಮೋದನೆ ಪಡೆದಿಲ್ಲ. ಈ ಬಗ್ಗೆ ತನಿಖೆ ಮಾಡಿಸಿ ಕಾನೂನು ಕ್ರಮ ಕೈಗೊಳ್ಳುತ್ತೇವೆ,'' ಎಂದರು.

ಬೆಳಗಾವಿಯಲ್ಲೂ ವಂಚಕರ ಕರಾಮತ್ತು

ಡಿಜಿಟಲ್ ಅರೆಸ್ಟ್ ಪ್ರಕರಣ

ಬೆಂಗಳೂರು: ರಾಜಧಾನಿಯ ಪೊಲೀಸರು ಭೇದಿಸಿದ್ದ ಡಿಜಿಟಲ್ ಅರೆಸ್ಟ್ ಪ್ರಕರಣದ ತನಿಖೆ ಚುರುಕುಗೊಂಡಿದ್ದು, ಬಂಧಿತ ಆರೋಪಿಗಳ ಮತ್ತಷ್ಟು ವಂಚನೆ ಕೃತ್ಯಗಳು ಬಯಲಾಗುತ್ತಿವೆ. ಆರೋಪಿಗಳ ಪೈಕಿ ಪಾಲಕ್ ಭಾಯ್ ಪಟೇಲ್ ಮತ್ತು ಅಮಿತ್ ನರೇಂದ್ರ ಪಟೇಲ್, ಬೆಳಗಾವಿ ನಗರದಲ್ಲಿ ಡಿಜಿಟಲ್ ಅರೆಸ್ಟ್ ಮೂಲಕ 15 ಕೋಟಿ ರೂ. ದೋಚಿರುವುದು ತನಿಖೆಯಲ್ಲಿ ಗೊತ್ತಾಗಿದೆ.

15 ಕೋಟಿ ರೂ. ಡಿಜಿಟಲ್ ಅರೆಸ್ಟ್ ವಂಚನೆ ಸಂಬಂಧ ಪಾಲಕ್ ಮತ್ತು ಅಮಿತ್ ವಿರುದ್ಧ ಈ ಹಿಂದೆಯೇ ಬೆಳಗಾವಿ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ (ಸಿಸಿಪಿಎಸ್) ಪ್ರಕರಣ ದಾಖಲಾಗಿತ್ತು. ಈ ಪ್ರಕರಣದ ತನಿಖೆಗಾಗಿ ಬೆಳಗಾವಿ ಸಿಸಿಪಿಎಸ್ ಪೊಲೀಸರು, ಬಾಡಿ ವಾರೆಂಟ್ ಮೇಲೆ ಪಾಲಕ್ ಹಾಗೂ ಅಮಿತ್‌ನನ್ನು ವಶಕ್ಕೆ ತೆಗೆದುಕೊಂಡು ವಿಚಾರಣೆ ಆರಂಭಿಸಿದ್ದಾರೆ. ''ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ಬೆಂಗಳೂರಿನ ವೃದ್ಧೆಯನ್ನು ಬೆದರಿಸಿ 24 ಕೋಟಿ ರೂ. ದೋಚಿದ್ದ ಸಂಬಂಧ 6 ಮಂದಿಯನ್ನು ಬಂಧಿಸಲಾಗಿದೆ. ಈ ಆರೋಪಿಗಳ ಬ್ಯಾಂಕ್ ಖಾತೆಗಳಿಂದ 1.46 ಕೋಟಿ ರೂ. ಜಪ್ತಿ ಮಾಡಲಾಗಿದೆ. ಇನ್ನೂ 1.40 ಕೋಟಿ ರೂ. ಜಪ್ತಿ ಕಾರ್ಯ ಮುಂದುವರಿದಿದೆ,'' ಎಂದು ಸೈಬರ್ ಕಮಾಂಡ್ ಸೆಂಟರ್‌ನ ಡಿಜಿಪಿ ಪ್ರಣಬ್ ಮೊಹಾಂತಿ ತಿಳಿಸಿದ್ದಾರೆ.

ಬಂಧಿತ ಆರೋಪಿಗಳ ಪೈಕಿ ಈರೋಡ್ ಮೂಲದ ಶಿವಜ್ಞಾನಮ್, ನಾಲ್ಕು ಸೈಬರ್ ಅಪರಾಧ ಪ್ರಕರಣಗಳಲ್ಲಿ ಹಾಗೂ ಮುಂಬಯಿ ಮೂಲದ ಅಕ್ಕಿಬ್ ಮಲ್ಲಿಕ್, ಮೂರು ಸೈಬರ್ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿರುವುದು ತನಿಖೆಯಲ್ಲಿ ದೃಢಪಟ್ಟಿದೆ. ಉಳಿದ ಆರೋಪಿಗಳ ಅಪರಾಧ ಹಿನ್ನೆಲೆ ಬಗ್ಗೆ ಹೆಚ್ಚಿನ ತನಿಖೆ ಮಾಡಲಾಗುತ್ತಿದೆ. ಆರೋಪಿಗಳು ಸಂತ್ರಸ್ತ ವೃದ್ಧೆಯಿಂದ ದೋಚಿರುವ ಹಣದ ಜಪ್ತಿಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಮೊಹಾಂತಿ ಹೇಳಿದ್ದಾರೆ.

TATA

TATA POWER

THE TATA POWER COMPANY LIMITED,

Bombay House, 24, Homi Mody Street, Mumbai - 400 001, India, Tel: (9122) 6665 8282, Fax: (91 22) 6665 8801 Website: www.tatapower.com CIN: L28920MH1919PLC000567

ಸಾರ್ವಜನಿಕ ಸೂಚನೆ

ವಿದ್ಯುತ್ ಕಾಯ್ದೆ, 2003ರ ಕಲಂ 14 ಮತ್ತು ಕಲಂ 15ರ ಅಡಿಯಲ್ಲಿ ಜೆಇಎಸ್‌ಕಾಂನ ನಾಲ್ಕು (4) ಜಿಲ್ಲೆಗಳಾದ ಬಳ್ಳಾರಿ, ಕಲಬುರಗಿ (ಗುಲ್ಬರ್ಗಾ), ರಾಯಚೂರು ಮತ್ತು ಯಾದಗಿರಿ ಪ್ರದೇಶಗಳಿಗೆ ವಿತರಣಾ ಪರವಾನಗಿ ಮಂಜೂರು ಮಾಡುವ ಕುರಿತು ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಲ್ಲಿಸಿರುವ ಅರ್ಜಿಯ ಬಗ್ಗೆ ಸಲಹೆಗಳು / ಆಕ್ಷೇಪಣೆಗಳನ್ನು ಆಹ್ವಾನಿಸುವ ಸೂಚನೆ

(ಪ್ರಕರಣ ಸಂಖ್ಯೆ: MP/05/2026)

1. ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ (ಟಾಟಾ ಪವರ್) ಸಂಸ್ಥೆಯು, ವಿದ್ಯುತ್ ಕಾಯ್ದೆ 2003ರ ಕಲಂ 14 ಮತ್ತು 15ರ ಅಡಿಯಲ್ಲಿ ಹಾಗೂ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) (ಲೈಸೆನ್ಸಿಂಗ್) ನಿಯಮಾವಳಿ, 2004 ಮತ್ತು ಅನ್ವಯವಾಗುವ ಇತರ ನಿಯಮಗಳು ಹಾಗೂ ನಿಯಮಾವಳಿಗಳ ಅನ್ವಯ, **ಜೆಇಎಸ್‌ಕಾಂನ ನಾಲ್ಕು (4) ಭೌಗೋಳಿಕವಾಗಿ ಸಂಯೋಜಿತ ಆದಾಯ ಜಿಲ್ಲೆಗಳಾದ ಬಳ್ಳಾರಿ, ಕಲಬುರಗಿ (ಗುಲ್ಬರ್ಗಾ), ರಾಯಚೂರು ಮತ್ತು ಯಾದಗಿರಿ** ಪ್ರದೇಶಗಳಿಗೆ ಟಿಪಿಸಿಎಲ್‌ಗೆ ವಿತರಣಾ ಪರವಾನಗಿ ಮಂಜೂರು ಮಾಡುವಂತೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ (KERC/ಆಯೋಗ) ಮುಂದೆ ಅರ್ಜಿ (ಪ್ರಕರಣ ಸಂಖ್ಯೆ MP 05/2026) ಸಲ್ಲಿಸಿದೆ. ಆಯೋಗವು ಕಾಯ್ದೆಯ ಕಲಂ 15(2)ರ ಅಡಿಯಲ್ಲಿ ಟಾಟಾ ಪವರ್ ಸಾರ್ವಜನಿಕ ಸೂಚನೆ ಪ್ರಕಟಿಸಲು ನಿರ್ದೇಶಿಸಿದೆ.
2. **ಅರ್ಜಿಯ ಮುಖ್ಯ ಅಂಶಗಳನ್ನು ಸಂಕ್ಷಿಪ್ತವಾಗಿ ಕೆಳಗಿನಂತೆ ನೀಡಲಾಗಿದೆ:**

ಅರ್ಜಿದಾರರ ಹೆಸರು:	ದಿ ಟಾಟಾ ಪವರ್ ಕಂಪನಿ ಲಿಮಿಟೆಡ್
ಅರ್ಜಿದಾರರ ನೋಂದಾಯಿತ ಕಚೇರಿಯ ವಿಳಾಸ:	ಬಾಂಬೆ ಹೌಸ್, 24 ಹೋಮಿ ಮೋದಿ ಸ್ಟ್ರೀಟ್, ಮುಂಬೈ 400 001
ಅರ್ಜಿ ಸಲ್ಲಿಸಿರುವ ಪರವಾನಗಿಯ ಸ್ವರೂಪ:	ಕಾಯ್ದೆಯ ಕಲಂ 14ರ 6ನೇ ಉಪವಿಧಾನದ ಅಡಿಯಲ್ಲಿ ವಿತರಣಾ ಪರವಾನಗಿ.
ಅರ್ಜಿದಾರರ ಮುಖ್ಯ ವ್ಯವಹಾರ ಪ್ರದೇಶ:	**ಜೆಇಎಸ್‌ಕಾಂನ ನಾಲ್ಕು (4) ಭೌಗೋಳಿಕವಾಗಿ ಸಂಪರ್ಕಿತ ಆದಾಯ ಜಿಲ್ಲೆಗಳಾದ ಬಳ್ಳಾರಿ, ಕಲಬುರಗಿ (ಗುಲ್ಬರ್ಗಾ), ರಾಯಚೂರು ಮತ್ತು ಯಾದಗಿರಿ.**

3. **ಅರ್ಜಿಯ ಇತರೆ ಮುಖ್ಯ ಅಂಶಗಳು:**
- ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಯು ಮುಂಬೈ, ಅಜ್ಮೀರ್ ಹಾಗೂ ದೆಹಲಿ ಮತ್ತು ಒಡಿಶಾ ರಾಜ್ಯಗಳಲ್ಲಿ ಗ್ರಾಹಕರ ವಿದ್ಯುತ್ ಬೇಡಿಕೆಯನ್ನು ಪೂರೈಸುತ್ತಿದೆ.
- ಟಾಟಾ ಪವರ್ ಡಿಸ್ಟ್ರಿಬ್ಯೂಷನ್ – ಮುಂಬೈ, ಮುಂಬೈಯ 485 ಚ.ಕಿ.ಮೀ. ಪ್ರದೇಶದಲ್ಲಿ 0.8 ದಶಲಕ್ಷಕ್ಕಿಂತ ಹೆಚ್ಚು ಗ್ರಾಹಕರಿಗೆ ಸೇವೆ ನೀಡುತ್ತಿದ್ದು, 4850 CKM ಜಾಲದ ಉದ್ದ ಹಾಗೂ 99.99% ಕ್ಕಿಂತ ಹೆಚ್ಚು ವಿಶ್ವಾಸಾರ್ಹತೆಯನ್ನು ಹೊಂದಿದೆ; ಇದು ದೇಶದಲ್ಲೇ ಅತಿ ಉನ್ನತ ಮಟ್ಟದಲ್ಲೊಂದಾಗಿದೆ.
- ಟಾಟಾ ಪವರ್ – ಡಿಡಿಎಲ್, ಟಾಟಾ ಪವರ್ ಸೆಂಟ್ರಲ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPCODL), ಟಾಟಾ ಪವರ್ ನಾರ್ದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPNODL), ಟಾಟಾ ಪವರ್ ಸದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPSODL), ಟಾಟಾ ಪವರ್ ವೆಸ್ಟರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPWODL) ಹಾಗೂ ಟಾಟಾ ಪವರ್ ಅಜ್ಮೀರ್ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPADL) ಸಂಸ್ಥೆಗಳ ಮೂಲಕ ಟಾಟಾ ಪವರ್ ಗಮನಾರ್ಹ ಕಾರ್ಯಕ್ಷಮತೆಯನ್ನು ತೋರಿಸಿದೆ.
- ಟಾಟಾ ಪವರ್ ಸಂಸ್ಥೆಯು ಶತಮಾನಕ್ಕೂ ಹೆಚ್ಚು ಕಾಲ ವಿದ್ಯುತ್ ವಿತರಣಾ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದು, ದಿನೇದಿನೇ ಸಂಕೀರ್ಣಗೊಳ್ಳುತ್ತಿರುವ ವಿದ್ಯುತ್ ವಿತರಣಾ ವ್ಯವಹಾರವನ್ನು ನಿರ್ವಹಿಸಲು ಅಪರೂಪದ ಪರಿಣತಿ ಮತ್ತು ಸಾಮರ್ಥ್ಯವನ್ನು ಹೊಂದಿದೆ. ಅರ್ಜಿದಾರನು ವಿವಿಧ ಸಮನ್ವಯಾತ್ಮಕ ಪ್ರಯೋಜನಗಳನ್ನು ಬಳಸಿಕೊಂಡು, **ಬಳ್ಳಾರಿ, ಕಲಬುರಗಿ (ಗುಲ್ಬರ್ಗಾ), ರಾಯಚೂರು ಮತ್ತು ಯಾದಗಿರಿ** ಜಿಲ್ಲೆಗಳನ್ನೊಳಗೊಂಡ ಪ್ರಸ್ತಾಪಿತ ಸರಬರಾಜು ಪ್ರದೇಶದಲ್ಲಿನ ಗ್ರಾಹಕರ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಉದ್ದೇಶಿಸಿದ್ದಾನೆ.
- ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ವಿತರಣಾ ಪರವಾನಗಿ ಕೋರಿರುವ ಪ್ರಸ್ತಾಪಿತ ಪ್ರದೇಶವು ಪ್ರಸ್ತುತ **ಗುಲ್ಬರ್ಗಾ ಎಲೆಕ್ಟ್ರಿಸಿಟಿ ಸಪ್ಲೈ ಕಂಪನಿ ಲಿಮಿಟೆಡ್ (GESCOM)** ನ ವಿತರಣಾ ವ್ಯಾಪ್ತಿಗೆ ಒಳಪಡುತ್ತದೆ.

4. **ಅರ್ಜಿದಾರರ ಕಾನೂನುಬದ್ಧ ಸ್ಥಿತಿ ಮತ್ತು ನೋಂದಣಿ ಸಂಖ್ಯೆ:**
ಪಬ್ಲಿಕ್ ಲಿಮಿಟೆಡ್ ಕಂಪನಿ – CIN [L28920MH1919PLC000567].

5. **ಷೇರು ಹಿಡಿಕೆ ಮಾದರಿ**

ಕ್ರ. ಸಂ.	ಷೇರುದಾರರ ಹೆಸರು	ಷೇರು ಹಿಡಿಕೆ ಮಾದರಿ (31 ಮಾರ್ಚ್ 2025ರ ಸ್ಥಿತಿಗೆ)
(i)	ಪ್ರೊಮೋಟರ್ ಮತ್ತು ಪ್ರೊಮೋಟರ್ ಗುಂಪು	1497257565
(ii)	ಸಾರ್ವಜನಿಕರು	1698081982
(iii)	ನಾನ್-ಪ್ರೊಮೋಟರ್ – ನಾನ್-ಪಬ್ಲಿಕ್	0
(iv)	ಡಿಆರ್‌ಗಳ ಅಡಿಪಾಯದ ಷೇರುಗಳು	0
(v)	ನೌಕರರ ಟ್ರಸ್ಟ್ ಹೊಂದಿರುವ ಷೇರುಗಳು	0
(vi)	**ಒಟ್ಟು**	**3195339547**

6. **ನಿರ್ವಹಣಾ ವಿವರ (ನಿರ್ದೇಶಕ ಮಂಡಳಿ):**

ಕ್ರ. ಸಂ.	ಹೆಸರು ಮತ್ತು ಪದನಾಮ	ಶೈಕ್ಷಣಿಕ ಅರ್ಹತೆ	ಪರಿಣತಿ ಕ್ಷೇತ್ರ	ಅನುಭವ
1	ಶ್ರೀ ನಟರಾಜನ್ ಚಂದ್ರಶೇಖರನ್, ಸ್ವತಂತ್ರವಲ್ಲದ, ಕಾರ್ಯನಿರ್ವಹಣೆಯಲ್ಲದ ನಿರ್ದೇಶಕ, ಅಧ್ಯಕ್ಷರು;	• ಮಾಸ್ಟರ್ಸ್ ಇನ್ ಕಂಪ್ಯೂಟರ್ ಅಪ್ಲಿಕೇಶನ್ಸ್, ರೀಜನಲ್ ಎಂಜಿನಿಯರಿಂಗ್ ಕಾಲೇಜು, ತ್ರಿಚಿ • ಗೌರವ ಡಾಕ್ಟರ್ ಆಫ್ ಲೆಟರ್ಸ್	• ಟಾಟಾ ಸನ್ಸ್ ಅಧ್ಯಕ್ಷತೆ, • ಜಾಗತಿಕ ವ್ಯವಹಾರ ಕಾರ್ಯಾಚರಣೆಗಳಲ್ಲಿ ನಾಯಕತ್ವ;	36 ವರ್ಷಗಳಿಗಿಂತ ಹೆಚ್ಚು
2	ಡಾ. ಪ್ರವೀರ್ ಸಿನ್ಹಾ, ವ್ಯವಸ್ಥಾಪಕ ನಿರ್ದೇಶಕರು ಮತ್ತು ಸಿಇಒ	• ಐಐಟಿ ದೆಹಲಿ ಯಿಂದ ಪಿಎಚ್.ಡಿ. • ನ್ಯಾಷನಲ್ ಲಾ ಸ್ಕೂಲ್ ಬೆಂಗಳೂರು ಯಿಂದ ಮಾಸ್ಟರ್ಸ್ ಇನ್ ಬಿಸಿನೆಸ್ ಲಾ • ದೆಹಲಿ ಕಾಲೇಜ್ ಆಫ್ ಎಂಜಿನಿಯರಿಂಗ್‌ನಿಂದ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಪದವಿ	• ವಿದ್ಯುತ್ ಕ್ಷೇತ್ರ ತಜ್ಞರು • ವಿದ್ಯುತ್ ಉತ್ಪಾದನೆ ಮತ್ತು ವಿತರಣೆಯಲ್ಲಿ ನಾಯಕತ್ವ;	36 ವರ್ಷಗಳಿಗಿಂತ ಹೆಚ್ಚು
3	ಶ್ರೀಮತಿ ಅಂಜಲಿ ಬನ್ಸಾಲ್, ಸ್ವತಂತ್ರ ಕಾರ್ಯನಿರ್ವಹಣೆಯಲ್ಲದ ನಿರ್ದೇಶಕಿ	• ಬ್ಯಾಚಲರ್ ಇನ್ ಕಂಪ್ಯೂಟರ್ ಎಂಜಿನಿಯರಿಂಗ್ • ಕೊಲಂಬಿಯಾ ವಿಶ್ವವಿದ್ಯಾಲಯದಿಂದ ಅಂತಾರಾಷ್ಟ್ರೀಯ ಹಣಕಾಸು ಮತ್ತು ವ್ಯವಹಾರದಲ್ಲಿ ಮಾಸ್ಟರ್ಸ್;	• ಕಾರ್ಪೊರೇಟ್ ಆಡಳಿತ • ತಂತ್ರಜ್ಞಾನ ಮತ್ತು ಹಣಕಾಸು ಸೇವಾ ಕ್ಷೇತ್ರಗಳಲ್ಲಿ ಅನುಭವ;	ಅನುಭವ: 20 ವರ್ಷಗಳಿಗಿಂತ ಹೆಚ್ಚು
4	ಶ್ರೀ ಅಶೋಕ್ ಸಿನ್ಹಾ, ಸ್ವತಂತ್ರ ಕಾರ್ಯನಿರ್ವಹಣೆಯಲ್ಲದ ನಿರ್ದೇಶಕರು;	• ಐಐಟಿ ಕಾನ್ಪುರದಿಂದ ಕೆಮಿಕಲ್ ಎಂಜಿನಿಯರಿಂಗ್ ಬ್ಯಾಚಲರ್ಸ್ • ಐಐಎಂ ಬೆಂಗಳೂರು ಯಿಂದ ಎಂಬಿಎ	• ಇಂಧನ ಕ್ಷೇತ್ರದಲ್ಲಿ ವಿಶಾಲ ಅನುಭವ • ಬಿಪಿಸಿಎಲ್‌ನ ಮಾಜಿ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು;	38 ವರ್ಷಗಳಿಗಿಂತ ಹೆಚ್ಚು
5	ಶ್ರೀ ರಾಜೀವ್ ಮೆಹ್ರಿಷಿ, ಸ್ವತಂತ್ರ ಕಾರ್ಯನಿರ್ವಹಣೆಯಲ್ಲದ ನಿರ್ದೇಶಕರು	• ಇತಿಹಾಸದಲ್ಲಿ ಮಾಸ್ಟರ್ಸ್ • ಯುಕೆ ಯ ಸ್ಟ್ರಾತ್‌ಕ್ಲೈಡ್ ವಿಶ್ವವಿದ್ಯಾಲಯದಿಂದ ಎಂಬಿಎ;	• ಭಾರತದ ಮಾಜಿ ನಿಯಂತ್ರಕ ಮತ್ತು ಮಹಾಲೇಖಾ ಪರಿಶೋಧಕರು • ಸಾರ್ವಜನಿಕ ಆಡಳಿತ ಮತ್ತು ಹಣಕಾಸಿನಲ್ಲಿ ಪರಿಣಿತಿ;	ನಾಗರಿಕ ಸೇವೆಯಲ್ಲಿ 40 ವರ್ಷಗಳಿಗಿಂತ ಹೆಚ್ಚು
6	ಶ್ರೀಮತಿ ವಿಭಾ ಪಡಲ್ಕರ್, ಸ್ವತಂತ್ರ, ಕಾರ್ಯನಿರ್ವಹಣೆಯಲ್ಲದ ನಿರ್ದೇಶಕಿ	• ಚಾರ್ಟರ್ಡ್ ಅಕೌಂಟೆಂಟ್	• ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕಿ ಮತ್ತು ಸಿಇಒ • ಹಣಕಾಸು ಮತ್ತು ವಿಮಾ ಕ್ಷೇತ್ರಗಳಲ್ಲಿ ಪರಿಣಿತಿ;	30 ವರ್ಷಗಳಿಗಿಂತ ಹೆಚ್ಚು
7	ಶ್ರೀ ಸೌರಭ್ ಅಗ್ರವಾಲ್, ಕಾರ್ಯನಿರ್ವಹಣೆಯಲ್ಲದ ನಿರ್ದೇಶಕರು	• ಐಐಟಿ ರೂರ್ಕಿಯಿಂದ ಕೆಮಿಕಲ್ ಎಂಜಿನಿಯರಿಂಗ್ ಬ್ಯಾಚಲರ್ಸ್ • ಐಐಎಂ ಕಲ್ಕತ್ತಾದಿಂದ ಪಿಜಿಡಿಎಂ	• ಟಾಟಾ ಸನ್ಸ್ ಗುಂಪಿನ ಮುಖ್ಯ ಹಣಕಾಸು ಅಧಿಕಾರಿ • ಕಾರ್ಪೊರೇಟ್ ಹಣಕಾಸು ಮತ್ತು ತಂತ್ರದಲ್ಲಿ ಪರಿಣಿತಿ	25 ವರ್ಷಗಳಿಗಿಂತ ಹೆಚ್ಚು
8	ಶ್ರೀ ಸಂಜಯ್ ವಿ. ಭಂಡಾರ್ಕರ್, ಸ್ವತಂತ್ರ, ಕಾರ್ಯನಿರ್ವಹಣೆಯಲ್ಲದ ನಿರ್ದೇಶಕರು	• ಎಂಬಿಎ, ಎಕ್ಸ್‌ಎಲ್‌ಆರ್‌ಐ, ಜಮಶೆಡ್‌ಪುರ	• ರೋಥ್‌ಶೈಲ್ಡ್ ಇಂಡಿಯಾದ ಮಾಜಿ ವ್ಯವಸ್ಥಾಪಕ ನಿರ್ದೇಶಕರು • ಹೂಡಿಕೆ ಬ್ಯಾಂಕಿಂಗ್ ಮತ್ತು ಕಾರ್ಪೊರೇಟ್ ಹಣಕಾಸಿನಲ್ಲಿ ಅನುಭವ	30 ವರ್ಷಗಳಿಗಿಂತ ಹೆಚ್ಚು
9	ಶ್ರೀ ತರುಣ್ ಬಜಾಜ್, ಸ್ವತಂತ್ರ ಕಾರ್ಯನಿರ್ವಹಣೆಯಲ್ಲದ ನಿರ್ದೇಶಕರು	• ಶ್ರೀ ರಾಮ್ ಕಾಲೇಜ್ ಆಫ್ ಕಾಮರ್ಸ್, ದೆಹಲಿ ವಿಶ್ವವಿದ್ಯಾಲಯದಿಂದ ವಾಣಿಜ್ಯದಲ್ಲಿ ಬ್ಯಾಚಲರ್ಸ್ • ಐಐಎಂ ಅಹಮದಾಬಾದ್‌ನಿಂದ ಎಂಬಿಎ • ಲಂಡನ್ ಸ್ಕೂಲ್ ಆಫ್ ಎಕಾನಾಮಿಕ್ಸ್ ಅಂಡ್ ಪಾಲಿಟಿಕಲ್ ಸೈನ್ಸ್‌ನಿಂದ ಎಂ.ಎಸ್‌ಸಿ.	• ಭಾರತ ಸರ್ಕಾರದ ಮಾಜಿ ಆದಾಯ ಕಾರ್ಯದರ್ಶಿ • ಹಣಕಾಸು, ತೆರಿಗೆ ಮತ್ತು ಸಾರ್ವಜನಿಕ ಆಡಳಿತದಲ್ಲಿ ಪರಿಣಿತಿ	ನಾಗರಿಕ ಸೇವೆಯಲ್ಲಿ 34 ವರ್ಷಗಳಿಗಿಂತ ಹೆಚ್ಚು
10	ಶ್ರೀ ಪ್ರಮೋದ್ ಅಗರವಾಲ್, ಸ್ವತಂತ್ರ, ಕಾರ್ಯನಿರ್ವಹಣೆಯಲ್ಲದ ನಿರ್ದೇಶಕರು	• ಐಐಟಿ ಮುಂಬೈಯಿಂದ ಬಿ.ಟೆಕ್ (ಸಿವಿಲ್) • ಐಐಟಿ ದೆಹಲಿ ಯಿಂದ ಎಂ.ಟೆಕ್ (ಡಿಸೈನ್ ಎಂಜಿನಿಯರಿಂಗ್);	• ಕೋಲ್ ಇಂಡಿಯಾ ಲಿಮಿಟೆಡ್‌ನ ಮಾಜಿ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು (CMD), ಮಧ್ಯ ಪ್ರದೇಶ ಸರ್ಕಾರದ ಪ್ರಧಾನ ಕಾರ್ಯದರ್ಶಿ • ಯೋಜನಾ ನಿರ್ವಹಣೆ • ವ್ಯೂಹಾತ್ಮಕ ಮೈತ್ರಿಗಳು • ಕಾರ್ಯತಂತ್ರಾತ್ಮಕ ಯೋಜನೆ	ನಾಗರಿಕ ಸೇವೆಯಲ್ಲಿ 30+ ವರ್ಷಗಳಿಗಿಂತ ಹೆಚ್ಚು

7. **ಸಮಾನ ಸ್ವರೂಪದ ಚಟುವಟಿಕೆಗಳಲ್ಲಿ ಕಾರ್ಯಾಚರಣೆಗಳು ಮತ್ತು ಹಿಂದಿನ ಅನುಭವದ ಸಾರಾಂಶ:**
ವಿದ್ಯುತ್ ವಿತರಣಾ ಕ್ಷೇತ್ರದಲ್ಲಿ ಟಾಟಾ ಪವರ್ ಸಂಸ್ಥೆಯು ಮುಂಬೈ, ಅಜ್ಮೀರ್ ಹಾಗೂ ದೆಹಲಿ ಮತ್ತು ಒಡಿಶಾ ರಾಜ್ಯಗಳ ಗ್ರಾಹಕರಿಗೆ ಅಡ್ಡಿಯಿಲ್ಲದ, ಕೈಗೆಟುಕುವ ಮತ್ತು ವಿಶ್ವಾಸಾರ್ಹ ವಿದ್ಯುತ್ ಸರಬರಾಜು ಮಾಡುತ್ತಿದೆ.

I. **ಮುಂಬೈಯಲ್ಲಿ ವಿತರಣಾ ಪರವಾನಗಿ:** ಗೌರವಾನ್ವಿತ MERC, ಟಾಟಾ ಪವರ್‌ಗೆ 25 ವರ್ಷಗಳ ಅವಧಿಗೆ ಮುಂಬೈ ನಗರ ಮತ್ತು ಮುಂಬೈ ಉಪನಗರ ಪ್ರದೇಶದ ಒಂದು ಭಾಗಕ್ಕೆ ವಿತರಣಾ ಪರವಾನಗಿ (Distribution License No. 1 of 2014) ಮಂಜೂರು ಮಾಡಿದೆ. ಟಾಟಾ ಪವರ್ ಡಿಸ್ಟ್ರಿಬ್ಯೂಷನ್ – ಮುಂಬೈ 485 ಚ.ಕಿ.ಮೀ. ಪ್ರದೇಶದಲ್ಲಿ 0.8 ದಶಲಕ್ಷಕ್ಕಿಂತ ಹೆಚ್ಚು ಗ್ರಾಹಕರಿಗೆ ಸೇವೆ ನೀಡುತ್ತಿದ್ದು, 4,850 CKM ಜಾಲ ಉದ್ದ 1,076 MW ಗರಿಷ್ಠ ಬೇಡಿಕೆ ಹಾಗೂ ಸುಮಾರು 1.24% ವಿತರಣಾ ನಷ್ಟಗಳೊಂದಿಗೆ ಅತ್ಯಾಧುನಿಕ ವಿತರಣಾ ಜಾಲವನ್ನು ನಡೆಸುತ್ತಿದೆ.

II. **ದೆಹಲಿಯಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ದೆಹಲಿ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (ಟಾಟಾ ಪವರ್ – DDL) ಅನ್ನು ಜುಲೈ 2002ರಲ್ಲಿ ಟಾಟಾ ಪವರ್ ಕಂಪನಿ ಲಿಮಿಟೆಡ್ (51%) ಮತ್ತು ದೆಹಲಿ ರಾಷ್ಟ್ರೀಯ ರಾಜಧಾನಿ ಪ್ರದೇಶ ಸರ್ಕಾರ (49%)ಗಳ ಸಂಯುಕ್ತ ಉಪಕ್ರಮವಾಗಿ ಸಾರ್ವಜನಿಕ-ಖಾಸಗಿ ಭಾಗಧಾರಿ (PPP) ಮಾದರಿಯಲ್ಲಿ ಸ್ಥಾಪಿಸಲಾಯಿತು. ಟಾಟಾ ಪವರ್ – DDL ಸುಮಾರು 2.1 ದಶಲಕ್ಷ ಗ್ರಾಹಕರಿಗೆ ಸೇವೆ ನೀಡುತ್ತಿದ್ದು, ಸುಮಾರು 12500 CKM ವಿದ್ಯುತ್ ವಿತರಣಾ ಜಾಲವನ್ನು ನಿರ್ವಹಿಸುತ್ತಿದೆ; AT&C ನಷ್ಟ ಮಟ್ಟವು 2002ರ 53.1%ರಿಂದ 2025ರಲ್ಲಿ 5.54%ಕ್ಕೆ ಇಳಿದಿದೆ.

III. **ಸೆಂಟ್ರಲ್ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ಸೆಂಟ್ರಲ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPCODL) ಟಾಟಾ ಪವರ್ ಮತ್ತು ಒಡಿಶಾ ಸರ್ಕಾರದ ಸಂಯುಕ್ತ ಉಪಕ್ರಮವಾಗಿದ್ದು, ಬಹುಪಾಲು ಹಂಚಿಕೆಯನ್ನು ಟಾಟಾ ಪವರ್ ಕಂಪನಿ (51%) ಹೊಂದಿದೆ. TPCODL 29,354 ಚ.ಕಿ.ಮೀ. ವ್ಯಾಪಕ ವಿತರಣಾ ಪ್ರದೇಶದಲ್ಲಿ 3.3 ದಶಲಕ್ಷ ಗ್ರಾಹಕರಿಗೆ ಸೇವೆ ನೀಡುತ್ತಿದ್ದು, ಜೂನ್ 2020ರಲ್ಲಿ ಸ್ವೀಕರಣದ ಸಮಯದ 30.49% AT&C ನಷ್ಟವು ಈಗ 19.6%ಕ್ಕೆ ಇಳಿದಿದೆ; 114119 ಸರ್ಕ್ಯೂಟ್ ಕಿ.ಮೀ. ಜಾಲವನ್ನು ನಿರ್ವಹಿಸುತ್ತಿದೆ.

IV. **ನಾರ್ದರ್ನ್ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ನಾರ್ದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPNODL) ಅನ್ನು ಏಪ್ರಿಲ್ 2021ರಲ್ಲಿ ಟಾಟಾ ಪವರ್ (51%) ಮತ್ತು GRIDCO Ltd (49%) ಗಳ ಸಂಯುಕ್ತ ಉಪಕ್ರಮವಾಗಿ ರಚಿಸಲಾಯಿತು. TPNODL 27920 ಚ.ಕಿ.ಮೀ. ಪ್ರದೇಶದಲ್ಲಿ 2 ದಶಲಕ್ಷ ಗ್ರಾಹಕರಿಗೆ ಸೇವೆ ನೀಡುತ್ತಿದ್ದು, FY 25 ಕೊನೆಯಲ್ಲಿ AT&C ನಷ್ಟವನ್ನು 12.6% ಮಟ್ಟದಲ್ಲಿಟ್ಟಿದೆ; ಇದು OERC ನಿಗದಿಪಡಿಸಿದ 17.09% ಗುರಿಯಿಗಿಂತ 4.49% ಕಡಿಮೆ. ಸಂಸ್ಥೆ 566 ಪವರ್ ಟ್ರಾನ್ಸ್‌ಫಾರ್ಮರ್‌ಗಳು, 81168 ಡಿಸ್ಟ್ರಿಬ್ಯೂಷನ್ ಟ್ರಾನ್ಸ್‌ಫಾರ್ಮರ್‌ಗಳು ಮತ್ತು 164629 CKM ಜಾಲವನ್ನು ನಿರ್ವಹಿಸುತ್ತದೆ.

V. **ಸದರ್ನ್ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ಸದರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPSODL) ಜನವರಿ 2021ರಲ್ಲಿ ಕಾರ್ಯಾರಂಭ ಮಾಡಿತು. ಸುಮಾರು 2.2 ದಶಲಕ್ಷ ಗ್ರಾಹಕರೊಂದಿಗೆ TPSODL ದಕ್ಷಿಣ ಒಡಿಶಾದ ಸುಮಾರು 48,751 ಚ.ಕಿ.ಮೀ. ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿದ್ದು, 112955 CKM ಜಾಲವನ್ನು ನಿರ್ವಹಿಸುತ್ತದೆ; ದಾಖಲಾಗಿದ ಗರಿಷ್ಠ ಬೇಡಿಕೆ 798 MVA ಆಗಿತ್ತು.

VI. **ವೆಸ್ಟರ್ನ್ ಒಡಿಶಾದಲ್ಲಿ ವಿತರಣಾ ಪರವಾನಗಿ:** ಟಾಟಾ ಪವರ್ ವೆಸ್ಟರ್ನ್ ಒಡಿಶಾ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPWODL) ಟಾಟಾ ಪವರ್ (51%) ಮತ್ತು GRIDCO Limited (49%) ಗಳ ಸಂಯುಕ್ತ ಉಪಕ್ರಮವಾಗಿದ್ದು, ಜನವರಿ 2021ರಲ್ಲಿ ಕಾರ್ಯಾರಂಭ ಮಾಡಿತು. TPWODL 48,373 ಚ.ಕಿ.ಮೀ. ವ್ಯಾಪ್ತಿಯಲ್ಲಿ 2.2 ದಶಲಕ್ಷ ನೋಂದಾಯಿತ ಗ್ರಾಹಕರನ್ನು ಹೊಂದಿದ್ದು, 692 ಪವರ್ ಟ್ರಾನ್ಸ್‌ಫಾರ್ಮರ್‌ಗಳು, 82752 ಡಿಸ್ಟ್ರಿಬ್ಯೂಷನ್ ಟ್ರಾನ್ಸ್‌ಫಾರ್ಮರ್‌ಗಳು ಮತ್ತು 179694 ಸರ್ಕ್ಯೂಟ್ ಕಿ.ಮೀ. ಜಾಲವನ್ನು ನಿರ್ವಹಿಸುತ್ತದೆ; FY 25ರಲ್ಲಿ AT&C ನಷ್ಟ 17.1% ಮತ್ತು ಗರಿಷ್ಠ ಬೇಡಿಕೆ 1780 MW ಆಗಿತ್ತು.

VII. **ಅಜ್ಮೀರ್‌ನಲ್ಲಿ ವಿತರಣಾ ಫ್ರಾಂಚೈಸಿ:** ಟಾಟಾ ಪವರ್ ಅಜ್ಮೀರ್ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ (TPADL) ಅಜ್ಮೀರ್ ವಿದ್ಯುತ್ ವಿತರಣ್ ನಿಗಮ್ ಲಿಮಿಟೆಡ್ ಜೊತೆ Distribution Franchisee Agreement (DFA) ಮಾಡಿಕೊಂಡಿರುವ ವಿತರಣಾ ಫ್ರಾಂಚೈಸಿಯಾಗಿದೆ. TPADL ಅಜ್ಮೀರ್ ನಗರದ ಸುಮಾರು 200 ಚ.ಕಿ.ಮೀ. ಪ್ರದೇಶದಲ್ಲಿ ವಿತರಣಾ ಜಾಲದ ಕಾರ್ಯಾಚರಣೆ ಮತ್ತು ನಿರ್ವಹಣೆ, ಬಿಲ್ಲಿಂಗ್ ಮತ್ತು ಸಂಗ್ರಹಣೆಗೆ ಜವಾಬ್ದಾರಿಯಾಗಿದ್ದು, AT&C ನಷ್ಟವನ್ನು 17.2%ರಿಂದ 7.8%ಕ್ಕೆ ಇಳಿಸುವಲ್ಲಿ ಕೊಡುಗೆ ನೀಡಿದೆ.

8. **ಪ್ರಸ್ತಾವಿತ ಸರಬರಾಜು ಪ್ರದೇಶ, ಅದರ ವಿವರಣೆ ಮತ್ತು ಸೇವೆ ನೀಡಲು ಉದ್ದೇಶಿಸಿರುವ ಗ್ರಾಹಕರ ಸಂಖ್ಯೆ:** ದಿ ಟಾಟಾ ಪವರ್ ಕಂಪನಿ ಲಿಮಿಟೆಡ್, **ಜೆಇಎಸ್‌ಕಾಂನ ಬಳ್ಳಾರಿ, ಕಲಬುರಗಿ (ಗುಲ್ಬರ್ಗಾ), ರಾಯಚೂರು ಮತ್ತು ಯಾದಗಿರಿ ಎಂಬ ನಾಲ್ಕು (4) ಆದಾಯ ಜಿಲ್ಲೆಗಳ ಭೌಗೋಳಿಕವಾಗಿ** ಸಂಯೋಜಿತ ಪ್ರದೇಶದಲ್ಲಿ ವಿದ್ಯುತ್ ವಿತರಣೆ ಮತ್ತು ಸರಬರಾಜು ಕೈಗೊಳ್ಳಲು ಉದ್ದೇಶಿಸಿದೆ. ಮೇಲ್ಕಂಡ ಪ್ರದೇಶಗಳು ಸಂಪೂರ್ಣವಾಗಿ ಅಥವಾ ಭಾಗಶಃ ಕೆಳಗಿನ ನಗರ ಸ್ಥಳೀಯ ಸಂಸ್ಥೆಗಳನ್ನು ಒಳಗೊಂಡಿವೆ: **1. ಬಳ್ಳಾರಿ ಸಿಟಿ ಕಾರ್ಪೊರೇಷನ್ 2. ಕಲಬುರಗಿ ಸಿಟಿ ಕಾರ್ಪೊರೇಷನ್ 3. ರಾಯಚೂರು ಸಿಟಿ ಕಾರ್ಪೊರೇಷನ್ 4. ಸಿರುಗುಪ್ಪ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 5. ಶಹಾಬಾದ್ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 6. ಸಿಂಧನೂರು ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 7. ಶಹಾಪುರ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 8. ಸುರಪುರ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್ 9. ಯಾದಗಿರಿ ಸಿಟಿ ಮ್ಯೂನಿಸಿಪಲ್ ಕೌನ್ಸಿಲ್.** ಟಿಪಿಸಿ, ಪರವಾನಗಿ ಮಂಜೂರಾದ ಬಳಿಕ 3 ವರ್ಷಗಳ ಅಂತ್ಯದೊಳಗೆ 51,000 ಕ್ಕಿಂತ ಹೆಚ್ಚು (ಐವತ್ತೊಂದು ಸಾವಿರ) ಗ್ರಾಹಕರಿಗೆ ಸೇವೆ ನೀಡಲಿದೆ.

9. ಅರ್ಜಿಯ ಪ್ರತಿಯನ್ನು ಪರಿಶೀಲನೆ ಅಥವಾ ಖರೀದಿಗಾಗಿ ಪಡೆಯಬಹುದಾದ ನೋಡಲ್ ಅಧಿಕಾರಿಯ ಸಂಪರ್ಕ ವಿವರಗಳು:

(i)	ವ್ಯಕ್ತಿಯ ಹೆಸರು ಮತ್ತು ಹುದ್ದೆ	ಶ್ರೀ ಮನೀಶ್ ದಹಾಕೆ, ಗ್ರೂಪ್ ಹೆಡ್ – ನೆಟ್‌ವರ್ಕ್ ಪ್ಲಾನಿಂಗ್ ಮತ್ತು ಕನ್ಸ್ಯೂಮರ್ ಎಂಜಿನಿಯರಿಂಗ್ (ಸಿಟಿ).
(ii)	ಪರಿಶೀಲನೆ ಅಥವಾ ಖರೀದಿಗಾಗಿ ಅರ್ಜಿಯ ಪ್ರತಿಯನ್ನು ಪಡೆಯಬಹುದಾದ ಕಚೇರಿ ವಿಳಾಸ	ದಿ ಟಾಟಾ ಪವರ್ ಕಂಪನಿ ಲಿಮಿಟೆಡ್, ಡಿಸ್ಟ್ರಿಬ್ಯೂಷನ್ ಡಿವಿಷನ್, ಸೇನಾಪತಿ ಬಾಪಟ್ ಮಾರ್ಗ, ಲೋವರ್ ಪರೇಲ್, ಮುಂಬೈ – 400013, ಮಹಾರಾಷ್ಟ್ರ, ಭಾರತ.
(iii)	ಸವಿಸ್ತಾರ ಅರ್ಜಿ ದಾಖಲೆಗಳು ಹಾಗೂ ಸಿಡಿ (ಇಂಗ್ಲಿಷ್‌ನಲ್ಲಿ): ರೂ. 150/- ನಗದು ಅಥವಾ ಮುಂಬೈಯಲ್ಲಿ ಪಾವತಿಸಬಹುದಾದ "The Tata Power Company Limited" ಹೆಸರಿನ ಡಿಡಿ / ಚೆಕ್ ಮುಖಾಂತರ.	
(iv)	ಸವಿಸ್ತಾರ ಅರ್ಜಿ ದಾಖಲೆಗಳು (ಇಂಗ್ಲಿಷ್‌ನಲ್ಲಿ): ರೂ. 100/-	
(v)	ಸವಿಸ್ತಾರ ಅರ್ಜಿ ದಾಖಲೆಗಳ ಸಿಡಿ (ಇಂಗ್ಲಿಷ್‌ನಲ್ಲಿ): ರೂ. 50/-	

10. **ಅರ್ಜಿಯ ಪ್ರತಿಯನ್ನು ಹಾಗೂ ಅದರಲ್ಲಿ ಉಲ್ಲೇಖಿತ ಇತರ ದಾಖಲೆಗಳನ್ನು ಉಚಿತವಾಗಿ ಡೌನ್‌ಲೋಡ್ ಮಾಡಬಹುದಾದ** ವೆಬ್‌ಸೈಟ್ ವಿಳಾಸ: www.tatapower.com
11. ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಇವುಗಳ ಮೂಲಕ ದೃಢೀಕರಿಸಿ ಘೋಷಿಸುತ್ತದೆ: ಕೇಂದ್ರ ಸರ್ಕಾರದಿಂದ ಅಧಿಸೂಚಿತವಾದ The Distribution of Electricity Licence (Additional Requirements of Capital Adequacy, Creditworthiness and Code of Conduct) Rules, 2005 (ಕಾಲಕಾಲಕ್ಕೆ ತಿದ್ದುಪಡಿಗೊಂಡಂತೆ) ಯ ನಿಯಮ 3ರ ಅಡಿಯಲ್ಲಿ ನಿಗದಿಪಡಿಸಲಾದ ಹೆಚ್ಚುವರಿ ಅವಶ್ಯಕತೆಗಳನ್ನು ಅರ್ಜಿದಾರನು ಸಮರ್ಪಕವಾಗಿ ಅನುಸರಿಸುತ್ತಾನೆ. ಮೇಲ್ಕಂಡಂತೆ ಟಿಪಿಸಿ ಪರವಾನಗಿ ಅರ್ಜಿಯನ್ನು ಸಲ್ಲಿಸಿದ್ದು ಎಲ್ಲಾ ಅನುಸರಣೆ ಸಂಬಂಧಿತ ದಾಖಲೆಗಳನ್ನು ಅರ್ಜಿಯ ಭಾಗವಾಗಿ ಸಂಲಗ್ನಗೊಳಿಸಿದೆ.
12. ಪ್ರಕಟಿಸಲಾದ ಈ ಸಾರ್ವಜನಿಕ ಸೂಚನೆಗೆ ಪ್ರತಿಕ್ರಿಯೆಯಾಗಿ, ಸಲಹೆ / ಆಕ್ಷೇಪಣೆ ಸಲ್ಲಿಸಲು ಉದ್ದೇಶಿಸುವ ಪ್ರತಿಯೊಬ್ಬರೂ, ಅದನ್ನು ಇಂಗ್ಲಿಷ್ ಅಥವಾ ಕನ್ನಡ ಭಾಷೆಯಲ್ಲಿ, ಲಿಖಿತ ರೂಪದಲ್ಲಿ, ಇಮೇಲ್ ಐಡಿ: asst.secykerc@gmail.com ಗೆ ಕಳುಹಿಸಬಹುದು. ಈ ವ್ಯವಸ್ಥೆ ಬಳಸುವಲ್ಲಿ ಯಾವುದೇ ತೊಂದರೆ ಇದ್ದಲ್ಲಿ, ಸಂಬಂಧಿತ ಹಿತಾಸಕ್ತಿ ಹೊಂದಿದವರು ಕೆಲಸದ ದಿನಗಳಲ್ಲಿ ಬೆಳಿಗ್ಗೆ 10:00 ರಿಂದ ಸಂಜೆ 05:00ರವರೆಗೆ KERC ಕಚೇರಿಯನ್ನು ಮೊಬೈಲ್ ಸಂಖ್ಯೆ 8147 144 627 ಅಥವಾ ಇಮೇಲ್ ಐಡಿ asst.secykerc@gmail.com ಮೂಲಕ ಸಂಪರ್ಕಿಸಬಹುದು.
13. ಮೇಲ್ಕಂಡ ಇಮೇಲ್ ಐಡಿ ಮೂಲಕ ತನ್ನ ಸಲಹೆ / ಆಕ್ಷೇಪಣೆಯನ್ನು ಸಲ್ಲಿಸಿದ ವ್ಯಕ್ತಿಯು ತನ್ನ ಸಲ್ಲಿಕೆಯ ಮುದ್ರಿತ ಪ್ರತಿಯನ್ನು ಬೇರ್ಪಡಿಸಿ ಸಲ್ಲಿಸುವ ಅಗತ್ಯವಿಲ್ಲ. ಎಲೆಕ್ಟ್ರಾನಿಕ್ ಮಾಧ್ಯಮದ ಸೌಲಭ್ಯವಿಲ್ಲದವರು ತಮ್ಮ ಸಲಹೆ / ಆಕ್ಷೇಪಣೆಯನ್ನು ಮುದ್ರಿತ ಪ್ರತಿಯಲ್ಲಿ ಕಾರ್ಯದರ್ಶಿ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ, No. 16C-1, ಮಿಲ್ಲರ್ಸ್ ರಸ್ತೆ, ಕಾವೇರಪ್ಪ ಲೇಔಟ್, ವಸಂತನಗರ, ಬೆಂಗಳೂರು, ಕರ್ನಾಟಕ – 560052 ಅವರಿಗೆ ಉದ್ದೇಶಿಸಿ, ಈ ಸೂಚನೆಯ ಪ್ರಕಟಣೆಯ ದಿನಾಂಕದಿಂದ ಮೂವತ್ತು (30) ದಿನಗಳೊಳಗೆ ಸಲ್ಲಿಸಬಹುದು. ಜೊತೆಗೆ, ಶ್ರೀ ವಿ. ಎಚ್. ವಾಗ್ಳೆ, ಟಾಟಾ ಪವರ್ ಕಂಪನಿ ಲಿಮಿಟೆಡ್ ಅವರಿಗೆ ಸೇವೆ ಸಲ್ಲಿಸಿರುವುದರ ಪುರಾವೆಯನ್ನು ಕೂಡ ಸಂಲಗ್ನಗೊಳಿಸಬೇಕು; ಸಂಪರ್ಕ ವಿವರಗಳು: Tel: (91-22)-67172953, Email: vidyadhar.wagle@tatapower.com ಸಲ್ಲಿಕೆಯ ಮೇಲೆ ಕಳುಹಿಸಿದವರ ಪೂರ್ಣ ಹೆಸರು, ಅಂಚೆ ವಿಳಾಸ ಮತ್ತು ಲಭ್ಯವಿದ್ದಲ್ಲಿ ಇಮೇಲ್ ವಿಳಾಸ ಅನಿವಾರ್ಯವಾಗಿ ಇರಬೇಕು. **23 ಜೂನ್ 2026 ರಂದು ಸಂಜೆ 5 ಗಂಟೆಯ** ನಂತರ ಸ್ವೀಕರಿಸುವ ಸಲಹೆಗಳು ಮತ್ತು / ಅಥವಾ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಇತರ ಯಾವುದೇ ವಿಧಾನದಲ್ಲಿ ಸಲ್ಲಿಸಲಾದ ಸಲಹೆಗಳು / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
14. ಟಿಪಿಸಿ ಸ್ವೀಕರಿಸಿದ ಪ್ರತಿಯೊಂದು ಆಕ್ಷೇಪಣೆ / ಟಿಪ್ಪಣಿಗೆ, ಸ್ವೀಕೃತಿಯಾದ ದಿನದಿಂದ ಮೂರು ದಿನಗಳೊಳಗೆ, ಆದರೆ **23 ಜೂನ್ 2026ರವರೆಗೆ** ಸ್ವೀಕರಿಸಲಾದ ಎಲ್ಲಾ ಆಕ್ಷೇಪಣೆ / ಟಿಪ್ಪಣಿಗಳ ಸಂಬಂಧ **27 ಜೂನ್ 2026ರೊಳಗೆ** ಉತ್ತರಿಸಬೇಕು.

ಸ್ಥಳ: ಮುಂಬೈ
ದಿನಾಂಕ: 25 ಮೇ, 2026

ಸಹಿ/-
ವಿದ್ಯಾಧರ ಹರಿ ವಾಗ್ಳೆ
ಚೀಫ್ – ರೆಗ್ಯುಲೇಟರಿ
ದಿ ಟಾಟಾ ಪವರ್ ಕಂಪನಿ ಲಿಮಿಟೆಡ್

ಹಲವು ಟೆಕ್ ಕಂಪನಿಗಳಿಗೆ ಈಗ ಜ್ಞಾನೋದಯ | ಫಾರ್ಚೂನ್ ವರದಿ ಬಹಿರಂಗ

ಎಐಗಿಂತ ಮಾನವ ಶ್ರಮವೇ ಅಗ್ಗ

ಹೊಸದಿಲ್ಲಿ: ಕೃತಕ ಬುದ್ಧಿಮತ್ತೆ(ಎಐ) ಬಳಕೆಯಿಂದ ಭಾರಿ ಉಳಿತಾಯವಾಗುತ್ತದೆ. ಮನುಷ್ಯರು ಮಾಡುವ ಕೆಲಸಗಳನ್ನು ಇವು ನಿರಾಯಾಸ ಹಾಗೂ ಕ್ಷಿಪ್ರವಾಗಿ ನಿರ್ವಹಿಸುತ್ತವೆ. ಇದರಿಂದ ಮಾನವ ಶ್ರಮಕ್ಕೆ ಕೊಡುವ ವೇತನ ಉಳಿಯುತ್ತದೆ ಎಂಬ ನಂಬಿಕೆಗಳು ಹುಸಿಯಾಗಿವೆ ಎಂದು ವರದಿಯೊಂದು ತಿಳಿಸಿದೆ.

''ಮೈಕ್ರೊಸಾಫ್ಟ್ ಮತ್ತು ಉಬರ್‌ಗಳಿಗೆ ಎಐ ತುಂಬ ದುಬಾರಿ ಎನಿಸಿದೆ. ಸುಧಾರಿತ ಎಐ ವ್ಯವಸ್ಥೆ ರೂಪಿಸುವುದು ಮತ್ತು ಅದರ ಕಾರ್ಯ ನಿರ್ವಹಣೆಗೆ ಅನುವು ಮಾಡಿಕೊಡುವುದು ಬಲು ದುಬಾರಿ. ಎಐ ಕೆಲಸ ಮಾಡಬೇಕಾದರೆ ಕಂಪನಿಗಳು ಬೃಹತ್ ಡೇಟಾ ಸೆಂಟರ್‌ಗಳನ್ನು ನಿರ್ಮಿಸಬೇಕಾಗುತ್ತದೆ. ಎಐ ಕೆಲಸ ಮಾಡುವುದಕ್ಕೆ ವಿಶೇಷ ಕಂಪ್ಯೂಟರ್ ಚಿಪ್‌ಗಳನ್ನು ಖರೀದಿಸಬೇಕಾಗುತ್ತದೆ. ಡೇಟಾ ಕೇಂದ್ರಗಳು ಗಣಕಗಳನ್ನು ಚಾಲನೆಯಲ್ಲಿಡಲು ಮತ್ತು ಕಾರ್ಯ ನಿರ್ವಹಿಸಲು ಹೆಚ್ಚು ವಿದ್ಯುತ್‌ಅನ್ನು ಬಳಸುತ್ತವೆ. ಈ ವೆಚ್ಚವು ಮಾನವ ಶ್ರಮದ ಬಳಕೆ ಮಾಡುವ ವೆಚ್ಚಕ್ಕಿಂತ ಅಧಿಕ ಎನ್ನುವ ಸತ್ಯ ಮೈಕ್ರೊಸಾಫ್ಟ್ ಮತ್ತು ಉಬರ್ ಸಂಸ್ಥೆಗಳಿಗೆ ಮನವರಿಕೆಯಾಗಿದೆ,''

ಎಂದು ಅಮೆರಿಕದ ಬಿಸಿನೆಸ್ ಮ್ಯಾಗಜಿನ್ 'ಫಾರ್ಚೂನ್' ವರದಿ ತಿಳಿಸಿದೆ.

''ಹಲವು ದೈನಂದಿನ ಕೆಲಸಗಳಿಗೆ ಎಐ ಪ್ರೋಗ್ರಾಂ ಬಳಸುವುದಕ್ಕಿಂತ ಮನುಷ್ಯರನ್ನು ಬಳಸುವುದು ತುಂಬ ಅಗ್ಗವಾಗುತ್ತದೆ. ಉದಾಹರಣೆಗೆ ಕೋಡ್ ಬರೆಯಲು, ಗ್ರಾಹಕರ ಪ್ರಶ್ನೆಗಳಿಗೆ ಉತ್ತರಿಸಲು ಅಥವಾ ಡೇಟಾವನ್ನು ವಿಂಗಡಿಸಲು ಎಐ ಬಳಸಿದಾಗ ಹೆಚ್ಚಿನ ವಿದ್ಯುತ್ ಅಗತ್ಯವಿರುತ್ತದೆ. ಉದ್ಯೋಗಿಯೊಬ್ಬರು ಎಐಗೆ ಪ್ರಶ್ನೆಯನ್ನು ಕೇಳಿದ ಪ್ರತಿ ಬಾರಿಯೂ ಅದು ಕಂಪನಿಗೆ ಹಣದ ವೆಚ್ಚವನ್ನು ಉಂಟುಮಾಡುತ್ತದೆ. ಸಾವಿರಾರು ಉದ್ಯೋಗಿಗಳು ದಿನವಿಡೀ ಎಐ ಬಳಸಿದಾಗ, ಬಿಲ್‌ಗಳು ಬೆಟ್ಟದಂತೆ ಏರುತ್ತವೆ. ಇದಕ್ಕೆ ವ್ಯತಿರಿಕ್ತವಾಗಿ ಒಬ್ಬ ಮಾನವ ಉದ್ಯೋಗಿಗೆ ಅದೇ ಕೆಲಸವನ್ನು ಮಾಡಲು ಲಕ್ಷಾಂತರ ಡಾಲರ್ ಮೌಲ್ಯದ ಕಂಪ್ಯೂಟರ್ ಹಾರ್ಡ್‌ವೇರ್ ಅಗತ್ಯ ಇರುವುದಿಲ್ಲ,'' ಎಂದು ವರದಿ ವಿವರಿಸಿದೆ.

''ಈ ಅಂಶಗಳನ್ನು ಗಮನಿಸಿ ಎಐ ವಿಫಲ ಎನ್ನಲಾಗದು. ತಂತ್ರಜ್ಞಾನ ಹೊಸದಿದ್ದಾಗ ದುಬಾರಿಯಾಗಿರುತ್ತದೆ. ಎಐ ಅನ್ನು ಅಗ್ಗವಾಗಿಸಲು ಕಂಪನಿಗಳು ಹಲವು ಮಾರ್ಗೋಪಾಯಗಳನ್ನು ಕಂಡುಕೊಳ್ಳುತ್ತಿವೆ. ಆದರೆ ಸದ್ಯಕ್ಕಂತೂ ಎಐ ನಿರೀಕ್ಷಿಸಿದಷ್ಟು ಅಗ್ಗವಲ್ಲ ಎಂಬುದು ಮಾತ್ರ ಕಂಪನಿಗಳಿಗೆ ಮನವರಿಕೆಯಾಗುತ್ತಿದೆ,'' ಎಂದೂ ವರದಿ ತಿಳಿಸಿದರು.

23% ಬಳಕೆ ಸೂಕ್ತ

ಎಂಐಟಿಯ ಗಣಕ ವಿಜ್ಞಾನ ಮತ್ತು ಕೃತಕ ಬುದ್ಧಿಮತ್ತೆ ಪ್ರಯೋಗಾಲಯ(ಸಿಎಸ್‌ಎಐಎಲ್) ನಡೆಸಿದ ಅಧ್ಯಯನದ ಪ್ರಕಾರ, ಮಾನವ ಉದ್ಯೋಗಿಗಳು ಮಾಡುತ್ತಿರುವ ಗುಣಮಟ್ಟ ತಪಾಸಣೆ, ಚಿಲ್ಲರೆ ಉತ್ಪನ್ನಗಳ ನಿಗಾ ಮೊದಲಾದವ ಕೆಲಸಗಳಲ್ಲಿ ಕೇವಲ ಶೇ.23ರಷ್ಟು ಮಾತ್ರ ಎಐ ಮೂಲಕ ಮಾಡುವುದು ಕಂಪನಿಗಳಿಗೆ ಲಾಭದಾಯಕ. ಉಳಿದ ಶೇ.77ರಲ್ಲೂ ಎಐ ಅಳವಡಿಸಿದರೆ ಮಾನವ ಉದ್ಯೋಗಿಗಳಿಂತಲೂ ದುಬಾರಿಯಾಗುತ್ತದೆ.

10 ಪಟ್ಟು ಅಧಿಕ ವಿದ್ಯುತ್ ಬಳಕೆ

ಏನಾದ್ದಾರೂ ಹುಡುಕಲು ಗೂಗಲ್ ಸರ್ಚ್‌ಗೆ ತಗಲುವ ವೆಚ್ಚಕ್ಕೆ ಹೋಲಿಸಿದರೆ ಎಐ ಆಧಾರಿತ ಚಾಟ್ ಜಿಪಿಟಿ, ಇಲ್ಲವೆ ಗೂಗಲ್ ಜೆಮಿನಿಯಲ್ಲಿ ಒಂದು ಪ್ರಶ್ನೆಗೆ ಉತ್ತರ ಹುಡುಕಲು 10 ಪಟ್ಟು ವಿದ್ಯುತ್ ಹೆಚ್ಚು ವಿದ್ಯುತ್ ಮತ್ತು ಕಂಪ್ಯೂಟಿಂಗ್ ಪವರ್ ಬೇಕಾಗುತ್ತದೆ ಎಂದು ರಾಯಿಟರ್ಸ್ ವರದಿ ಮಾಡಿದೆ.

ಬ್ರೆಂಟ್ ಕಚ್ಚಾತೈಲ ಬೆಲೆ ಇಳಿಕೆ ಮುಂಬಯಿ ಷೇರುಪೇಟೆ ಏರಿಕೆ

ಮುಂಬಯಿ: ಕದನ ವಿರಾಮಕ್ಕೆ ಇರಾನ್ ಮತ್ತು ಅಮೆರಿಕ ನಡೆಸುತ್ತಿರುವ ಮಾತುಕತೆ ಸಕಾರಾತ್ಮಕ ಹಾದಿಯಲ್ಲಿರುವುದರಿಂದ ಹರ್ಮುಜ್ ಜಲಸಂಧಿಗೆ ವಿಧಿಸಿದ್ದ ನಿರ್ಬಂಧಗಳು ಶೀಘ್ರದಲ್ಲೇ ತೆರವಾಗುತ್ತವೆ ಎಂಬ ಸುದ್ದಿ ಹಾಗೂ ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆ ಇಳಿಕೆಯಿಂದ ಸೋಮವಾರ ಹೂಡಿಕೆದಾರರಲ್ಲಿ ಹೆಚ್ಚಿನ ಉತ್ಸಾಹ ಕಂಡುಬಂದಿತು. ಹೀಗಾಗಿ ಮುಂಬಯಿ ಷೇರುಪೇಟೆ ಸೂಚ್ಯಂಕ 'ಸೆನ್ಸೆಕ್ಸ್' 1,073.61 ಅಂಕ (ಶೇ.1.42) ಏರಿ 76,488.96 ರಲ್ಲಿ ವಹಿವಾಟು ಮುಗಿಸಿತು. ಭಾರತೀಯ ಷೇರು ಪೇಟೆ ಸೂಚ್ಯಂಕ 'ನಿಫ್ಟಿ' 312 ಅಂಕ (ಶೇ.1.32) ಏರಿ 24,031.70ರಲ್ಲಿ ಸ್ಥಿರಗೊಂಡಿತು.

ಏಷ್ಯಾ ಮಾರುಕಟ್ಟೆಗಳ ಪೈಕಿ ನಿಕ್ಕೈ 225 ಇಂಡೆಕ್ಸ್, ಶಾಂಘೈನ ಎಸ್‌ಎಸ್‌ಇ ಕಾಂಪೋಸಿಟ್ ಇಂಡೆಕ್ಸ್ ಸಕಾರಾತ್ಮಕವಾಗಿದ್ದವು. ಐರೋಪ್ಯ ಮಾರುಕಟ್ಟೆ ಹಾಗೂ ಅಮೆರಿಕ ಮಾರುಕಟ್ಟೆಯಲ್ಲೂ ಏರಿಕೆ ಇತ್ತು.

ಕಚ್ಚಾತೈಲ ಬೆಲೆ ಇಳಿಕೆ: ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾತೈಲದ ಬೆಲೆ 5.52 ಡಾಲರ್ ಇಳಿದು ಬ್ಯಾರೆಲ್‌ಗೆ 97. 82 ಡಾಲರ್ ಆಗಿದೆ.

ರೂಪಾಯಿ ಮೌಲ್ಯವರ್ಧನೆ: ಸತತವಾಗಿ ಇಳಿಕೆ ಹಾದಿಯಲ್ಲಿ ಸಾಗುತ್ತಿದ್ದ ರೂಪಾಯಿ ಮೌಲ್ಯ ಈಗ ಪಥ ಬದಲಿಸಿದೆ. ಕಳೆದ ಮೂರು ವಹಿವಾಟು ದಿನಗಳಿಂದಲೂ ಏರು ಗತಿ ಕಾಪಾಡಿಕೊಂಡಿದೆ. ಸೋಮವಾರ ಡಾಲರ್ ಎದುರು ರೂಪಾಯಿ ಮೌಲ್ಯದಲ್ಲಿ 35 ಪೈಸೆ ಏರಿ 95.25 ರೂ. ಆಗಿದೆ.

ಎಲ್ಲರ ಮೇಲೆ ಪರಿಣಾಮ ಬೀರುತ್ತಿರುವ ಮಧ್ಯಪ್ರಾಚ್ಯ ಬಿಕ್ಕಟ್ಟು

3F ಪಾಲನೆ ಈಗಿನ ತುರ್ತು: ನಿರ್ಮಲಾ

ಮುಂಬಯಿ: ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದ ಜಾಗತಿಕವಾಗಿ ರಸಗೊಬ್ಬರದ ಬೆಲೆ ಊಹೆಗೆ ನಿಲುಕದಷ್ಟು ಏರಿಕೆಯಾಗಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಕಳವಳ ವ್ಯಕ್ತಪಡಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿರುವ ಮಿತವ್ಯಯ ತತ್ವವನ್ನು ಪುನರುಚ್ಚರಿಸಿರುವ ನಿರ್ಮಲಾ ಅವರು, ''ಈಗಿನ ಸನ್ನಿವೇಶದಲ್ಲಿ ಎಲ್ಲರೂ ತ್ರೀ ಎಫ್ ಅಂದರೆ ಇಂಧನ (ಫ್ಯೂಯಲ್), ರಸಗೊಬ್ಬರ (ಫರ್ಟಿಲೈಸರ್) ಮತ್ತು ವಿದೇಶಿ ವಿನಿಮಯದ (ಫಾರೆಕ್ಸ್) ಮೇಲೆ ಹೆಚ್ಚು ಗಮನಹರಿಸಬೇಕು,'' ಎಂದು ಮನವಿ ಮಾಡಿದ್ದಾರೆ.

''ಮಧ್ಯಪ್ರಾಚ್ಯ ಬಿಕ್ಕಟ್ಟು ಕೇವಲ ರಾಜತಾಂತ್ರಿಕ ಇಲ್ಲವೇ ಭೌಗೋಳಿಕ ರಾಜಕೀಯ ವಿಷಯವಲ್ಲ, ಇದು ಜಾಗತಿಕವಾಗಿ ಶ್ರೀಸಾಮಾನ್ಯರ ಬದುಕು ಹಾಗೂ ಸಣ್ಣ ಉದ್ಯಮಗಳ ಮೇಲೆ ತೀವ್ರ ಪರಿಣಾಮ ಬೀರಿದೆ. ಭಾರತ ಸೇರಿದಂತೆ ಹಲವು ದೇಶಗಳಿಗೆ ದೊಡ್ಡ ಸವಾಲಾಗಿ ಪರಿಣಮಿಸುತ್ತಿದೆ,'' ಎಂದು ಹೇಳಿದರು.

''ಫೆಬ್ರವರಿ 28ರಂದು ಇರಾನ್ ಮೇಲೆ ಅಮೆರಿಕ-ಇಸ್ರೇಲ್ ಜಂಟಿ ದಾಳಿ ನಡೆಸಿದವು. ಅಂದು ಆರಂಭವಾದ ಬಿಕ್ಕಟ್ಟು 80–90 ದಿನಗಳಾದರೂ ಮುಂದುವರಿದಿದೆ. ಇದರಿಂದ ಸರಕುಗಳ ಬೆಲೆ ಏರುಗತಿಯಲ್ಲಿದೆ. ಇಷ್ಟೂ ದಿನಗಳಲ್ಲಿ ಕಚ್ಚಾತೈಲ ಹಾಗೂ ರಸಗೊಬ್ಬರದ ಬೆಲೆಗಳು ಗಗನಕ್ಕೇರಿವೆ. ಚಿನ್ನದ ಬೆಲೆ ಕೂಡ ಏರುಗತಿಯಲ್ಲೇ ಇದೆ. ಚಿನ್ನ ಖರೀದಿ ಏರಿದರೆ ದೇಶದ ವಿದೇಶಿ ವಿನಿಮಯ ಮೀಸಲು ಕಡಿಮೆಯಾಗುತ್ತದೆ. ಇಂಧನ ವೆಚ್ಚದ ಹೆಚ್ಚಳ, ಸರಕು ಸಾಗಣೆಯಲ್ಲಿ ವಿಳಂಬ ಗತಿ ಹಾಗೂ ದುಬಾರಿ ವೆಚ್ಚ, ದುಡಿಯುವ ಬಂಡವಾಳದ ಮೇಲೆ ಹೆಚ್ಚಿದ ಒತ್ತಡ, ರಫ್ತು ಬೇಡಿಕೆಯಲ್ಲಿ ಅನಿಶ್ಚಿತತೆ ಉಂಟಾಗಿದೆ,'' ಎಂದರು.

ಬಿಐಎಎಲ್ ಲಾಭಾಂಶದ ಚೆಕ್ ಹಸ್ತಾಂತರ

2025–26ನೇ ಸಾಲಿನ 16.49 ಕೋಟಿ ರೂ. ಲಾಭಾಂಶ ಚೆಕ್ ಮುಖ್ಯಮಂತ್ರಿಗೆ ಸಲ್ಲಿಕೆ

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತ (ಬಿಐಎಎಲ್) ತನ್ನಲ್ಲಿ ಶೇ.13ರಷ್ಟು ಬಂಡವಾಳ ಪಾಲು ಹೊಂದಿರುವ ರಾಜ್ಯ ಸರಕಾರಿ ಸ್ವಾಮ್ಯದ ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ (ಕೆಎಸ್‌ಐಐಡಿಸಿ) 2025–26ನೇ ಸಾಲಿನ ಲಾಭಾಂಶ 16,49,93,400 ರೂ. ಅನ್ನು ಸೋಮವಾರ ಹಸ್ತಾಂತರಿಸಲಾಯಿತು.

ಬಿಐಎಎಲ್ ಅಧ್ಯಕ್ಷ ಹರಿ ಮರಾರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಡಿವಿಡೆಂಡ್ ಮೊತ್ತದ ಚೆಕ್ ಹಸ್ತಾಂತರಿಸಿದರು. ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್, ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಕೆಎಸ್‌ಐಐಡಿಸಿ ವ್ಯವಸ್ಥಾಪಕ ನಿರ್ದೇಶಕಿ ಖುಷ್ಬೂ ಗೋಯೆಲ್ ಪಾಲ್ಗೊಂಡಿದ್ದರು.

''ಬಿಐಎಎಲ್ 2025–26ನೇ ಸಾಲಿಗೆ ಪ್ರತಿ ಷೇರಿಗೆ 3 ರೂ. ಲಾಭಾಂಶ ಘೋಷಿಸಿದೆ. ಆದರಂತೆ ಕೆಎಸ್‌ಐಐಡಿಸಿಗೆ 16.49 ಕೋಟಿ ರೂ. ಒಟ್ಟು ಲಾಭಾಂಶ ನೀಡಲಾಗಿದೆ. ಇದರಲ್ಲಿ ತೆರಿಗೆ ಕಡಿತದ ನಂತರ ಆ ಸಂಸ್ಥೆಗೆ 14.84 ಕೋಟಿ ರೂ. ಡಿವಿಡೆಂಡ್ ದೊರಕಿದೆ. ಈ ಲಾಭಾಂಶ ಘೋಷಣೆಯು ಬಿಐಎಎಲ್ ಸಂಸ್ಥೆಯ ಅತ್ಯುತ್ತಮ ಆರ್ಥಿಕ ನಿರ್ವಹಣೆಯ ಸಂಕೇತವಾಗಿದೆ. ಸಂಸ್ಥೆಯಲ್ಲಿ ಕೆಎಸ್‌ಐಐಡಿಸಿ ರಾಜ್ಯ ಸರಕಾರವನ್ನು ಪ್ರತಿನಿಧಿಸುತ್ತಿದೆ. ಬಿಐಎಎಲ್ ಸಂಸ್ಥೆಯು 2017–18ರ ಬಳಿಕ ಇದೇ ಮೊದಲ ಬಾರಿಗೆ ಡಿವಿಡೆಂಡ್ ಘೋಷಿಸಿದೆ. ಈ ನಡುವೆ, ನಿಗಮಕ್ಕೆ ಬಂದ ಲಾಭವನ್ನು ಬಳಸಿಕೊಂಡು ಮೂಲಸೌಕರ್ಯ ಮತ್ತು ಸಾಮರ್ಥ್ಯ ವಿಸ್ತರಣೆಯಂತಹ ಪ್ರಮುಖ ಯೋಜನೆಗಳನ್ನು ಪೂರ್ಣಗೊಳಿಸಿದ್ದು, ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಾರ್ಯಾಚರಣೆಗಳನ್ನು ಇನ್ನಷ್ಟು ಸದೃಢಗೊಳಿಸಲಾಗಿದೆ,'' ಎಂದು ಎಂ.ಬಿ.ಪಾಟೀಲ್ ತಿಳಿಸಿದ್ದಾರೆ.

ಬಿಐಎಎಲ್‌ನಲ್ಲಿ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ಶೇ.13ರಷ್ಟು, ಎಫ್‌ಐಎಚ್ ಮಾರಿಷಸ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್ ಶೇ.30.36 ಮತ್ತು ಆ್ಯಂಕರೇಜ್ ಇನ್‌ಫ್ರಾಸ್ಟ್ರಕ್ಚರ್ ಇನ್ವೆಸ್ಟ್‌ಮೆಂಟ್ಸ್ ಹೋಲ್ಡಿಂಗ್ಸ್ ಲಿಮಿಟೆಡ್ ಶೇ.43.64ರಷ್ಟು ಬಂಡವಾಳ ಪಾಲು ಹೊಂದಿವೆ.

ಚೀನಿಯರ ಸೌಂದರ್ಯ ಪ್ರಜ್ಞೆಯಿಂದ ಕತ್ತೆಗಳ ಜೀವಕ್ಕೆ ಅಪಾಯ!

ಬೀಜಿಂಗ್: ಚೀನಾದ ಮಧ್ಯಮ ವರ್ಗದ ಜನರಲ್ಲಿ ಹೆಚ್ಚುತ್ತಿರುವ ಸೌಂದರ್ಯ ಪ್ರಜ್ಞೆಯು ಕತ್ತೆಗಳ ಜೀವಕ್ಕೆ ಎರವಾಗುತ್ತಿದೆ! ಹೌದು, ಯೌವನವನ್ನು ಉಳಿಸಿಕೊಳ್ಳಲು ಹಾಗೂ ರೋಗ ನಿರೋಧಕ ಶಕ್ತಿ ಪಡೆಯಲು ಕತ್ತೆಯ ಚರ್ಮದಿಂದ ತಯಾರಿಸಿದ 'ಎಜಿಯಾವೋ' ಎಂಬ ಉತ್ಪನ್ನದ ಬಳಕೆ ಅಲ್ಲಿ ಜೋರಾಗಿದೆ. ಮೊದಲು ಶ್ರೀಮಂತರು ಮಾತ್ರ ಈ ಉತ್ಪನ್ನ ಬಳಸುತ್ತಿದ್ದರು. ಈಗ ಮಧ್ಯಮ ವರ್ಗದವರಲ್ಲಿ ಇದರ ಜನಪ್ರಿಯತೆ ಹೆಚ್ಚಾಗಿದೆ. ಹೀಗಾಗಿ ಭಾರಿ ಪ್ರಮಾಣದಲ್ಲಿ ಕತ್ತೆಗಳ ಹತ್ಯೆ ಚೀನಾದಲ್ಲಿ ನಡೆಯುತ್ತಿದೆ. ಎಜಿಯಾವೋ ಅನ್ನು ಆ ದೇಶದಲ್ಲಿ 2,000 ಕ್ಕೂ ಹೆಚ್ಚು ವರ್ಷಗಳಿಂದ ಬಳಸಲಾಗುತ್ತಿದೆ. ಸಾಂಪ್ರದಾಯಿಕವಾಗಿ ಕತ್ತೆಯ ಚರ್ಮವನ್ನು ಕುದಿಸಿ ಇದನ್ನು ತಯಾರಿಸಲಾಗುತ್ತದೆ. ಈಗ ವಿಜ್ಞಾನಿಗಳು ಈ ಉತ್ಪನ್ನಕ್ಕೆ ಪರ್ಯಾಯ ಉತ್ಪನ್ನ ಕಂಡುಹಿಡಿಯುವ ಪ್ರಯತ್ನದಲ್ಲಿದ್ದಾರೆ. ''ಸಂಶೋಧಕರು ಹೊಸ ತಂತ್ರಜ್ಞಾನವನ್ನು ಬಳಸಿ ಪ್ರಯೋಗಾಲಯದಲ್ಲೇ ಕತ್ತೆಯ ಕೊಲಾಜಿನ್ ಅನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ಪ್ರಾಣಿಗಳ ಹತ್ಯೆಯನ್ನು ಅವಲಂಬಿಸದೆ ಕತ್ತೆಯ ಪ್ರೊಟೀನ್ ಅನ್ನು ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸುವ ವ್ಯವಸ್ಥೆಯನ್ನು ರೂಪಿಸುವುದು ಇದರ ಉದ್ದೇಶವಾಗಿದೆ,'' ಎಂದು ಸೌತ್ ಚೀನಾ ಮಾರ್ನಿಂಗ್ ಪೋಸ್ಟ್ ವರದಿ ಮಾಡಿದೆ.

ನೈಋತ್ಯ ರೈಲ್ವೆ

ಇ–ಟೆಂಡರ್ ಸೂಚನೆ ಸಂಖ್ಯೆ 02/2027/ಎಸ್‌ಬಿಸಿ ದಿನಾಂಕ: 19.05.2026

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಗಳಿಗೆ ಇ-ಟೆಂಡರ್ ಆಹ್ವಾನಿಸಿದ್ದಾರೆ.

ಕ್ರ.ಸಂ.	ಟೆಂಡರ್ ಸಂಖ್ಯೆ	ಸಂಕ್ಷಿಪ್ತ ವಿವರಣೆ (ಇ–ಮುಕ್ತ ಟೆಂಡರ್)	ಪ್ರಮಾಣ	ಘಟಕ
1	ಎಲ್ 8265651	ಕಂಪ್ರೆಸ್ಡ್ ಏರ್ ಪೈಪ್‌ಲೈನ್‌ನ ಪೂರೈಕೆ, ಸ್ಥಾಪನೆ ಮತ್ತು ಕಾರ್ಯಾರಂಭ.	1	ಸೆಟ್

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16-06-2026 ರಂದು 10.30 ಗಂಟೆಗಳವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಹಿರಿಯ ವಿಭಾಗೀಯ ಸಾಮಗ್ರಿಗಳ ವ್ಯವಸ್ಥಾಪಕರು, ಬೆಂಗಳೂರು

ಪಿಯುಬಿ/144/ಎಎಡಿ360/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2026–27

ಸುಲಭ ಟಿಕೆಟ್ ಬುಕಿಂಗ್, ಪಿಎನ್‌ಆರ್ ಸ್ಥಿತಿ ಪರಿಶೀಲನೆ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ನೈಋತ್ಯ ರೈಲ್ವೆ

ಮುಕ್ತ ಟೆಂಡರ್ ಸೂಚನೆ ಸಂಖ್ಯೆ. ಬಿಇ–29–2026–27–ಒಟಿ–02 (ಇ–ಟೆಂಡರಿಂಗ್ ಮೂಲಕ)

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಗಳಿಗೆ ಇ-ಟೆಂಡರ್ ಆಹ್ವಾನಿಸಿದ್ದಾರೆ.

ಕ್ರ.ಸಂ.	ಟೆಂಡರ್ ಸಂಖ್ಯೆ	ಕೆಲಸದ ವಿವರಣೆ	ಅಂದಾಜು ಮೌಲ್ಯ
1	ಬಿಇ–29–2026–27–ಒಟಿ–02	ಹಳೆಯ ಸಾಂಪ್ರದಾಯಿಕ ಎಸಿ ಘಟಕಗಳ ಬದಲಿಗೆ ಬಿಇಇ 5 ಸ್ಟಾರ್ ರೇಟಿಂಗ್ ಹೊಂದಿರುವ ಹವಾನಿಯಂತ್ರಣ ಘಟಕಗಳನ್ನು ಸಮಯದ ಆಧಾರದ ಮೇಲೆ ಒದಗಿಸುವುದು ಮತ್ತು ಬೆಂಗಳೂರು ವಿಭಾಗದ ಮೇಲೆ ಹಳೆಯ ಬಿಇಇ 5 ಸ್ಟಾರ್ ರೇಟಿಂಗ್ ಹೊಂದಿರುವ ಗೀಸರ್‌ಗಳ ಬದಲಿಗೆ ಬಿಇಇ 5 ಸ್ಟಾರ್ ರೇಟಿಂಗ್ ಹೊಂದಿರುವ ಗೀಸರ್‌ಗಳನ್ನು ಸಮಯದ ಮತ್ತು ಸ್ಥಿತಿಯ ಆಧಾರದ ಮೇಲೆ ಒದಗಿಸುವುದು 2) ಬೆಂಗಳೂರು ವಿಭಾಗದಲ್ಲಿ ಪ್ರಮುಖ ಜಿಎಲ್‌ಆರ್ ಗಳ ಮೇಲೆ ಸ್ಟ್ಯಾಂಡ್‌ಬೈ ಪಂಪ್‌ಗಳನ್ನು ಒದಗಿಸುವುದು **ಮುಗಿಸುವ ಅವಧಿ (ತಿಂಗಳು): 08 ತಿಂಗಳು**	ರೂ. 1,02,70,867/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 12-06-2026 ರಂದು 15.00 ಗಂಟೆಗಳವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಹಿರಿಯ ವಿಭಾಗೀಯ ವಿದ್ಯುತ್ ಅಭಿಯಂತರರು/ ಜನರಲ್/, ಬೆಂಗಳೂರು

ಪಿಯುಬಿ/146/ಎಎಡಿ360/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2026–27

ಸುಲಭ ಟಿಕೆಟ್ ಬುಕಿಂಗ್, ಪಿಎನ್‌ಆರ್ ಸ್ಥಿತಿ ಪರಿಶೀಲನೆ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಬಂಗಾರಪೇಟೆ

Phone No: 08153-255409, Email-cdpobangarpet@gmail.com

ಸ:ಶಿ.ಅ.ಯೋ.ಬಂ/ವಾ.ಟೆ/2026–27 ದಿನಾಂಕ: 19.05.2026

"ಪತ್ರಿಕಾ ಪ್ರಕಟಣೆ"

ಕಛೇರಿ ಉಪಯೋಗಕ್ಕೆ ಬಾಡಿಗೆ ವಾಹನ ಸರಬರಾಜಿಗೆ ಟೆಂಡರ್ ಆಹ್ವಾನಿಸಿರುವ ಬಗ್ಗೆ. ಶಿಶು ಅಭಿವೃದ್ಧಿ ಯೋಜನೆ, ಬಂಗಾರಪೇಟೆ ಇಲಾಖೆಯ ಕಛೇರಿ ಉಪಯೋಗಕ್ಕಾಗಿ ಬಾಡಿಗೆ ವಾಹನ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅರ್ಜಿ ಸಲ್ಲಿಸುವ ಕೊನೆಯ **ದಿನಾಂಕ: 26.05.2026ರ ಮಧ್ಯಾಹ್ನ 4.00** ಗಂಟೆಗೆ. **ವಿವರ: (1)** ಅಂದಾಜು ಟೆಂಡರ್ ಮೊತ್ತ: ರೂ. 4.80 ಲಕ್ಷಗಳು **(2)** ಟೆಂಡರ್ ಪ್ರಕಟಣೆ **ದಿನಾಂಕ: 20.05.2026 (3)** ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 27.05.2026 ಮಧ್ಯಾಹ್ನ 4.00 ಗಂಟೆಗೆ (4)** ತಾಂತ್ರಿಕ ಲಕೋಟೆ ತೆರೆಯುವ **ದಿನಾಂಕ:29.05.2026 ಬೆಳಿಗ್ಗೆ 11.00 ಗಂಟೆಗೆ (5)** ಹಣಕಾಸಿನ ಲಕೋಟೆಯನ್ನು ತೆರೆಯುವ **ದಿನಾಂಕ: 30.05.2026ರ ಮಧ್ಯಾಹ್ನ 3.00 ಗಂಟೆಗೆ (6)** ಟೆಂಡರೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ : 9,600/– ಹೆಚ್ಚಿನ ಮಾಹಿತಿಗಾಗಿ ಇ–ಟೆಂಡರ್ ಸಲ್ಲಿಸಲು Karnataka Public Procurement Portal Website address: **https://kppp.karnataka.gov.in** ಸಂಪರ್ಕಿಸಬಹುದಾಗಿದೆ.

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಬಂಗಾರಪೇಟೆ.

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:79/ಕೆಎಸ್‌ಎಂಸಿಎ/2026–27

ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ.430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು – 560099. ದೂರವಾಣಿ: 080–27835122

ವೆಬ್‌ಸೈಟ್: www.anekal.tpa.gov.in, www.e-vinyasa.kar.nic.in

ಸಂಖ್ಯೆ: ಆಯೋಪ್ರಾ/FD 8 TAR/2020–21 ದಿನಾಂಕ: 25–05–2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಆನೇಕಲ್ ಯೋಜನಾ ಪ್ರಾಧಿಕಾರದಲ್ಲಿ ಲಭ್ಯವಿರುವ ಹೆಚ್ಚುವರಿ ನಿಧಿ ರೂ. 17.77 ಕೋಟಿಗಳನ್ನು ಒಂದು ವರ್ಷದ ಅವಧಿಗೆ ಮೀರದಂತೆ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡುವ ಸಂಬಂಧ ಅರ್ಹ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದ್ದು, ಆಸಕ್ತಿಯುಳ್ಳ ಟೆಂಡರ್‌ದಾರರು ದಿನಾಂಕ: **10–06–2026 ರಂದು ಸಮಯ ಮಧ್ಯಾಹ್ನ 3.00 ಗಂಟೆ ಒಳಗೆ** ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬಹುದು ಹಾಗೂ ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್: **https://kppp.karnataka.gov.in** ನಲ್ಲಿ ಪರಿಶೀಲಿಸಬಹುದು.

ಸಹಿ/– ಸದಸ್ಯ–ಕಾರ್ಯದರ್ಶಿ ಹಾಗೂ
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

ವಾಸಾಸಂಇ/ವಾ.ಪ್ರ/808/ ಅಡ್ವರ್ಟೈಸ್/2026–27

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂಖ್ಯೆ ಎಸ್‌ಡಬ್ಲ್ಯೂಆರ್‌ಟಿಎಂವೈಪಿಆರ್ 2026 ಡಬ್ಲ್ಯೂಟಿ 05 ದಿನಾಂಕ 18.05.2026

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಕ್ಕಾಗಿ ಇ–ಟೆಂಡರ್ ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಬೆಂಗಳೂರಿನ ಜಫರಾಬಾದ್/	ರೂ. 5,12,62,210/-

ಯಶವಂತಪುರ ಮತ್ತು ಯಶವಂತಪುರದ ಎಸ್‌ಟಿಎಂಆರ್‌ಡಿ/ ಹುಬ್ಬಳ್ಳಿಯಲ್ಲಿರುವ ಟ್ರ್ಯಾಕ್ ಯಂತ್ರಗಳ ಐಒಎಚ್ ಗೆ ಸಂಬಂಧಿಸಿದ ದುರಸ್ತಿ ಮತ್ತು ಇತರ ಕೆಲಸಗಳು

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 17–06–2026 ರಂದು 11.00 ಗಂಟೆಗಳವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಉಪ ಮುಖ್ಯ ಅಭಿಯಂತರರು/ಟ್ರ್ಯಾಕ್ ಮಷಿನ್, ಬೆಂಗಳೂರು

ಪಿಯುಬಿ/143/ಎಎಡಿ360/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2026–27

ಸುಲಭ ಟಿಕೆಟ್ ಬುಕಿಂಗ್, ಪಿಎನ್‌ಆರ್ ಸ್ಥಿತಿ ಪರಿಶೀಲನೆ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/184/2026

ದಿನಾಂಕ : 19–05–2026

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕಾಮಗಾರಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಚಾಮರಾಜನಗರ (CMNR)	ರೂ. 57,03,74,165/-

ನಿಲ್ದಾಣ ಯಾರ್ಡ್ ಮರುರೂಪಿಸಲು ನಿರ್ಮಾಣ ಮತ್ತು ಹೊಸ ಅಗ್ರಹಾರ (HAH) ನಿಲ್ದಾಣದ ಚೈ:48655ನಲ್ಲಿ ಹೆಚ್ಚುವರಿ ಲೂಪ್‌ಲೈನ್ ಒದಗಿಸುವುದಕ್ಕಾಗಿ ಸಂಯೋಜಿತ ಕಾಮಗಾರಿ (ಸಿವಿಲ್, ವಿದ್ಯುತ್ ಸಾಮಾನ್ಯ ಮತ್ತು ಒಹೆಚ್‌ಇ ಕಾಮಗಾರಿಗಳು) (ಟೆಂಡರ್ ಉಲ್ಲೇಖ ಸಂ. ಸಿಎಂಎನ್‌ಆರ್–ಹೆಚ್‌ಎಹೆಚ್–ಯಾರ್ಡ್–ಲೂಪ್‌ಲೈನ್)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 11–06–2026 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು / ಬೆಂಗಳೂರು ದಂಡು

ಪಿಯುಬಿ/149/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2026–27

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway-SWR | SWRRLY | @SWRAILWAYHQ | @sw_railways

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂಖ್ಯೆ ಇಸಿಎನ್–ಟಿಆರ್‌ಡಿ–04–2025–ಆರ್‌ಟಿ ದಿನಾಂಕ 19.05.2026

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಕ್ಕಾಗಿ ಇ–ಟೆಂಡರ್ ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಎಸ್‌ಡಬ್ಲ್ಯೂಆರ್ ವಲಯದ	ರೂ. 2,56,49,420.16/–

ಹುಬ್ಬಳ್ಳಿಯ ಮುಖ್ಯ ವಿದ್ಯುತ್ ಅಭಿಯಂತರರು, ನಿರ್ಮಾಣ ವ್ಯಾಪ್ತಿಯಲ್ಲಿ ವಿವಿಧ ನಿರ್ಮಾಣ ಸ್ಥಳಗಳು/ವಿಭಾಗಗಳಿಗೆ (ಬೆಂಗಳೂರು ದಂಡು ಮತ್ತು ಹುಬ್ಬಳ್ಳಿ ಘಟಕ) ಯೋಜನಾ ಮೇಲ್ವಿಚಾರಣಾ ಸೇವೆಗಳನ್ನು ಒದಗಿಸಲು ಯೋಜನಾ ಮೇಲ್ವಿಚಾರಣಾ ಸೇವೆಗಳ ಸಂಸ್ಥೆ (ಪಿಎಸ್‌ಎಸ್‌ಎ) ನೇಮಕಕ್ಕಾಗಿ ಪ್ರಸ್ತಾವನೆ (ಆರ್ ಎಫ್‌ಪಿ)ಯ ವಿನಂತಿ

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 03–07–2026 ರಂದು 11.00 ಗಂಟೆಗಳವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಉಪ ಮುಖ್ಯ ವಿದ್ಯುತ್ ಅಭಿಯಂತರರು/ಟಿಆರ್‌ಡಿ-I/ ನಿರ್ಮಾಣ/ಬೆಂಗಳೂರು ದಂಡು

ಪಿಯುಬಿ/147/ಎಎಡಿ360/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2026–27

ಸುಲಭ ಟಿಕೆಟ್ ಬುಕಿಂಗ್, ಪಿಎನ್‌ಆರ್ ಸ್ಥಿತಿ ಪರಿಶೀಲನೆ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ನೈಋತ್ಯ ರೈಲ್ವೆ

ರೈಲ್ವೆ ಸಚಿವಾಲಯ

ಅಧಿಸೂಚನೆ

ಬೆಂಗಳೂರು, 07 ಮೇ, 2026

S.O. 2310(E) – ರೈಲ್ವೆ ಕಾಯ್ದೆ, 1989 (1989 ರ 24) ರ ಸೆಕ್ಷನ್ 20F ನ ಷರತ್ತು (6) ಮತ್ತು ಸೆಕ್ಷನ್ 2 ರ ಷರತ್ತು 7A ನಿಂದ ನೀಡಲಾದ ಅಧಿಕಾರಗಳನ್ನು ಚಲಾಯಿಸುವಾಗ, ರೈಲ್ವೆ ಸಚಿವಾಲಯ (ನೈಋತ್ಯ ರೈಲ್ವೆ, ನಿರ್ಮಾಣ ಸಂಸ್ಥೆ, ಬೆಂಗಳೂರು ಕಂಟೋನ್ಮೆಂಟ್) ಕೆಳಗಿನ ಕೋಷ್ಟಕದ ಕಾಲಮ್ (4) ರಲ್ಲಿ ಉಲ್ಲೇಖಿಸಲಾದ ಅಧಿಕಾರಿಗಳಿಗೆ 'ಸಮರ್ಥ ಪ್ರಾಧಿಕಾರ' ಎಂದು ಮತ್ತು ಕೆಳಗಿನ ಕೋಷ್ಟಕದ ಕಾಲಮ್ (5) ರಲ್ಲಿ ಉಲ್ಲೇಖಿಸಲಾದ ಅಧಿಕಾರಿಗಳಿಗೆ 'ಮಧ್ಯಸ್ಥರು' ಎಂದು ಅಧಿಕಾರ ನೀಡುತ್ತದೆ, ಈ ಅಧಿಸೂಚನೆಯನ್ನು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಕೆಳಗಿನ ಕೋಷ್ಟಕದ ಕಾಲಮ್ (3) ರಲ್ಲಿ ಉಲ್ಲೇಖಿಸಲಾದ ಜಿಲ್ಲೆಗೆ ಸಂಬಂಧಿಸಿದ ವಿಶೇಷ ರೈಲ್ವೆ ಯೋಜನೆಗಳಿಗೆ ಸಂಬಂಧಿಸಿದಂತೆ ಅಂತಹ ವಿಶೇಷ ರೈಲ್ವೆ ಯೋಜನೆಯ ಅನುಷ್ಠಾನ, ನಿರ್ವಹಣೆ, ನಿರ್ವಹಣೆ ಮತ್ತು ಕಾರ್ಯಾಚರಣೆಯ ಸಾರ್ವಜನಿಕ ಉದ್ದೇಶಕ್ಕಾಗಿ.

ಕ್ರ. ಸಂ.	ಯೋಜನೆಯ ಹೆಸರು	ಜಿಲ್ಲೆ	ಸಕ್ಷಮ ಪ್ರಾಧಿಕಾರ	ಮಧ್ಯಸ್ಥಗಾರ
1	2	3	4	5
1	ಬೆಂಗಳೂರು ನಗರ – ಮೈಸೂರು ವಿಭಾಗ: ನಾಯಂಡಹಳ್ಳಿ ಮತ್ತು ಕೆಂಗೇರಿ ನಿಲ್ದಾಣಗಳ ನಡುವೆ KM: 10/900–11/000 ನಲ್ಲಿ LC ಸಂಖ್ಯೆ 10 ರ ಬದಲಿಗೆ ರಸ್ತೆ ಕೆಳ ಸೇತುವೆ ನಿರ್ಮಾಣ.	ಬೆಂಗಳೂರು	ವಿಶೇಷ ಭೂಸ್ವಾಧೀನ ಅಧಿಕಾರಿ, ಬೆಂಗಳೂರು	ಪ್ರಾದೇಶಿಕ ಆಯುಕ್ತರು, ಬೆಂಗಳೂರು

ನಂ.ಡಬ್ಲ್ಯೂ.271/ಸಿಎನ್/ಬಿಎನ್‌ಸಿ/2026–27/ಲ್ಯಾಂಡ್ ಎಸ್‌ಆರ್‌ಪಿ/1727

ಹೆಚ್ಚಿನ ವಿವರಗಳಿಗೆ https://egazette.gov.in ಗೆ ಲಾಗ್‌ಆನ್ ಮಾಡಿ.

ಪ್ರದೀಪ್ ಪುರಿ, ಮುಖ್ಯ ಎಂಜಿನಿಯರ್–III, ನಿರ್ಮಾಣ, ಬೆಂಗಳೂರು ಕಂಟೋನ್ಮೆಂಟ್

ಪಿಯುಬಿ/148/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2026–27

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway-SWR | SWRRLY | @SWRAILWAYHQ | @sw_railways

ಕೃಷ್ಣಾ ನೀರಿಗೆ ಮಹಾ ಮೊಂಡಾಟ

ಹಿಪ್ಪರಗಿ ಬ್ಯಾರೇಜ್ ಬರಿದು | ಕುಡಿಯುವ ನೀರಿಗೆ ಹಾಹಾಕಾರ

■ **ರವಿರಾಜ್ ಆರ್.ಗಲಗಲಿ** ಬಾಗಲಕೋಟೆ
raviraj.galagali@timesofindia.com

ಉತ್ತರ ಕರ್ನಾಟಕದ ಜೀವನದಿ ಕೃಷ್ಣಾ ನದಿಗೆ ನೀರು ಬಿಡಿ ಎಂಬ ರಾಜ್ಯದ ಮನವಿಗೆ ಮಹಾರಾಷ್ಟ್ರ ಸರಕಾರದಿಂದ ಸ್ಪಂದನೆ ದೊರೆತಿಲ್ಲ.

ಬಾಗಲಕೋಟೆ, ಬೆಳಗಾವಿ ಜಿಲ್ಲೆಗಳಲ್ಲಿ ಕುಡಿಯುವ ನೀರಿಗೆ ತೀವ್ರ ತೊಂದರೆ ಆಗಿರುವ ಹಿನ್ನೆಲೆಯಲ್ಲಿ ಹಿಪ್ಪರಗಿ ಬ್ಯಾರೇಜ್‌ಗೆ ಕೊಯ್ನಾ ಜಲಾಶಯದಿಂದ 2 ಟಿಎಂಸಿ ನೀರು ಪೂರೈಸಿ ಎಂಬ ಮನವಿಗೆ ಮಹಾರಾಷ್ಟ್ರದಿಂದ ಸಕಾರಾತ್ಮಕ ಉತ್ತರ ದೊರೆತಿಲ್ಲ. ಬಿರು ಬೇಸಿಗೆಯಿಂದ ಹಿಪ್ಪರಗಿ ಬ್ಯಾರೇಜ್‌ನಲ್ಲಿ ನೀರಿನ ಮಟ್ಟ ಡೆಡ್ ಸ್ಟೋರೇಜ್ ತಲುಪಿದೆ. 6 ಟಿಎಂಸಿ ಸಾಮರ್ಥ್ಯದ ಬ್ಯಾರೇಜ್‌ನಲ್ಲಿ ಸದ್ಯ 0.50 ಟಿಎಂಸಿ ನೀರು ಸಂಗ್ರಹವಿದೆ. ಕುಡಿಯುವ ನೀರು ಪೂರೈಸಲು ಸಾಧ್ಯವಾಗದ ಸ್ಥಿತಿಯಿದೆ.

ಬಾಗಲಕೋಟೆ ಜಿಲ್ಲೆಯ ಹಿಪ್ಪರಗಿ ಬ್ಯಾರೇಜ್ ಬಳಿ ಬರಿದಾದ ಕೃಷ್ಣಾನದಿ.

ದೊರೆಯದ ಸ್ಪಂದನೆ

ನೀರು ಪೂರೈಸುವಂತೆ ಒಂದೂವರೆ ತಿಂಗಳ ಹಿಂದೆಯೇ ಜಲಸಂಪನ್ಮೂಲ ಇಲಾಖೆ ಅಪರ ಕಾರ್ಯದರ್ಶಿ ಮಹಾರಾಷ್ಟ್ರ ಸರಕಾರಕ್ಕೆ ಪತ್ರ ಬರೆದು ಮನವಿ ಮಾಡಿದ್ದರು. ರಾಜ್ಯ ಸರಕಾರದ ಪ್ರಧಾನ ಕಾರ್ಯದರ್ಶಿಯೂ ಮಹಾರಾಷ್ಟ್ರ ಸರಕಾರದೊಂದಿಗೆ ಮಾತನಾಡಿದ್ದರು. ಎರಡೂ ರಾಜ್ಯಗಳ ಮಧ್ಯದ ಸೌಹಾರ್ದ ಒಪ್ಪಂದದ ಪ್ರಕಾರ 2 ಟಿಎಂಸಿ ನೀರು ಬಿಡುಗಡೆಗೆ ಕೋರಲಾಗಿತ್ತು. ಆದರೆ ಕೊಯ್ನಾ ಜಲಾಶಯದಿಂದ ನೀರು ಬಿಡುವ ಬಗ್ಗೆ ಮಹಾರಾಷ್ಟ್ರ ಸರಕಾರದಿಂದ ಉತ್ತರ ಬಂದಿಲ್ಲ.

ಕೃಷ್ಣೆಯ ಉಗಮ ಸ್ಥಾನ ಮಹಾರಾಷ್ಟ್ರದ ಮಹಾಬಳೇಶ್ವರದಿಂದ ಅಂದಾಜು 140 ಕಿ.ಮೀ ದೂರದಲ್ಲಿರುವ ಕೊಯ್ನಾ ಬಳಿ ಅಣೆಕಟ್ಟೆ ನಿರ್ಮಿಸಲಾಗಿದೆ. ಅಲ್ಲಿಂದ ಹರಿದು ಬರುವ ನೀರು ಕರ್ನಾಟಕದ ಬೆಳಗಾವಿ, ಬಾಗಲಕೋಟೆ, ವಿಜಯಪುರ, ರಾಯಚೂರು ಜಿಲ್ಲೆಗಳ ಮೂಲಕ ಆಂಧ್ರಪ್ರದೇಶಕ್ಕೆ ಹೋಗುತ್ತದೆ. ಬೇಸಿಗೆ ಸಮಯದಲ್ಲಿ ಕೊಯ್ನಾ ಡ್ಯಾಂನಿಂದ ನೀರು ಬಿಡಿಸಿಕೊಳ್ಳುವ ಸಂಪ್ರದಾಯ ದಶಕಗಳಿಂದ ಚಾಲ್ತಿಯಲ್ಲಿದೆ.

ಪ್ರತಿ ಟಿಎಂಸಿಗೆ ನಾಲ್ಕು ಲಕ್ಷ ರೂ.ನಂತೆ ರಾಜ್ಯ ಸರಕಾರ ಪಾವತಿ ಮಾಡುತ್ತದೆ. ಸದ್ಯ ಕೊಯ್ನಾ ಜಲಾಶಯದಲ್ಲಿ ನೀರಿನ ಸಂಗ್ರಹವೂ ಇದೆ. ಹೀಗಾಗಿ 2 ಟಿಎಂಸಿ ನೀರು ಪೂರೈಸಲು ಮಹಾರಾಷ್ಟ್ರಕ್ಕೆ ಸಮಸ್ಯೆಯಿಲ್ಲ. ಆದರೆ, ಬಾಗಲಕೋಟೆ, ಬೆಳಗಾವಿ ಜಿಲ್ಲೆಗಳಲ್ಲಿ ನೀರಿನ ಕೊರತೆಯಾದಾಗ ಬೇಡಿದರೂ ಮಹಾರಾಷ್ಟ್ರ ನೀರು ಬಿಡುವುದಿಲ್ಲ.

ಕೊಯ್ನಾ ಜಲಾಶಯ ಪಾತ್ರದಲ್ಲಿ ಭಾರಿ ಮಳೆ ಸುರಿದು ಡ್ಯಾಂ ಭರ್ತಿಯಾಗುವ ಹಂತ ತಲುಪುತ್ತಿದ್ದಂತೆ ಏಕಾಏಕಿ ನೀರು ಬಿಡುಗಡೆ ಮಾಡುವುದರಿಂದ ರಾಜ್ಯದಲ್ಲಿ ನೆರೆ ಹಾವಳಿ, ಬೆಳೆ ಹಾನಿ ಉಂಟಾಗುತ್ತದೆ.

ಜೀವಜಲ ಕೊರತೆ

ಬೆಳಗಾವಿ, ಬಾಗಲಕೋಟೆ ಜಿಲ್ಲೆಗಳ 2 ಲಕ್ಷಕ್ಕಿಂತ ಹೆಚ್ಚಿನ ಜನರಿಗೆ ಕುಡಿಯುವ ನೀರು ಪೂರೈಸಲು ಬ್ಯಾರೇಜ್ ನೀರು ಆಧಾರ. ಅಂದಾಜು 60 ಸಾವಿರ ಎಕರೆ ಪ್ರದೇಶದ ಕೃಷಿಗೆ ಬ್ಯಾರೇಜ್ ನೀರು ಮೂಲ. ಕೆಲ ತಿಂಗಳುಗಳ ಹಿಂದೆ ಬ್ಯಾರೇಜ್‌ನ ಗೇಟ್ ಮುರಿದ ಪರಿಣಾಮ 2 ಟಿಎಂಸಿ ನೀರು ಪೋಲಾಗಿದೆ.

ಕೊಯ್ನಾ ಜಲಾಶಯದಿಂದ ನೀರು ಪೂರೈಸುವಂತೆ ರಾಜ್ಯ ಸರಕಾರದ ಪ್ರಧಾನ ಕಾರ್ಯದರ್ಶಿ ಮಹಾರಾಷ್ಟ್ರ ಸರಕಾರಕ್ಕೆ ಮನವಿ ಮಾಡಿದ್ದಾರೆ. ಕೊಲ್ಹಾಪುರ ಜಿಲ್ಲಾಧಿಕಾರಿಯವರೊಂದಿಗೆ ನಾನು ಮಾತನಾಡಿ ಮನವಿ ಮಾಡಿದ್ದೇನೆ.

-ಸಂಗಪ್ಪ ಎಂ. ಬಾಗಲಕೋಟೆ ಜಿಲ್ಲಾಧಿಕಾರಿ

ಐಸಿಯು ಬೆಡ್ ಇಲ್ಲದ್ದರಿಂದ ಬೇರೆ ಆಸ್ಪತ್ರೆಗೆ ಶಿಫಾರಸು

ಸರಕಾರಕ್ಕೆ ವೆನ್ಲಾಕ್ ಆಸ್ಪತ್ರೆಯಿಂದ ಸ್ಪಷ್ಟನೆ

ಚಿಕ್ಕಮಗಳೂರು: ಅಪಘಾತಕ್ಕೀಡಾಗಿ ವೆನ್ಲಾಕ್ ಆಸ್ಪತ್ರೆಗೆ ಬಂದ ಆಲ್ದೂರಿನ ರವಿ ಎಂಬುವರಿಗೆ ತುರ್ತು ಚಿಕಿತ್ಸೆ ನೀಡಿ, ಐಸಿಯುನಲ್ಲಿ ಬೆಡ್ ಲಭ್ಯವಿಲ್ಲದ ಕಾರಣಕ್ಕೆ ಖಾಸಗಿ ಆಸ್ಪತ್ರೆಗೆ ರವಾನಿಸಲಾಗಿತ್ತು ಎಂದು ವೆನ್ಲಾಕ್ ಆಸ್ಪತ್ರೆ ಅಧೀಕ್ಷಕರು ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯ ಅಧಿಕಾರಿಗಳಿಗೆ ಸ್ಪಷ್ಟನೆ ನೀಡಿದ್ದಾರೆ.

ಮೇ 21ರಂದು 'ವಿಜಯ ಕರ್ನಾಟಕ'ದಲ್ಲಿ ಪ್ರಕಟವಾದ 'ಸಾಮಾನ್ಯರ ಜೀವಕ್ಕೆ ಬೆಲೆಯೇ ಇಲ್ಲವೇ' ವರದಿ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯ ಅಧಿಕಾರಿಗಳು ಈ ಕುರಿತು ಸ್ಪಷ್ಟನೆ ನೀಡುವಂತೆ ವೆನ್ಲಾಕ್ ಆಸ್ಪತ್ರೆ ಮುಖ್ಯ ಅಧೀಕ್ಷಕರಿಗೆ ಪತ್ರದ ಮೂಲಕ ಸೂಚಿಸಿದ್ದರು.

''ಚಿಕ್ಕಮಗಳೂರಿನ ರವಿ ಅವರ ಪ್ರಕರಣದಲ್ಲಿ ಅವರನ್ನು ರಾತ್ರಿ 9 ಗಂಟೆಗೆ ವೆನ್ಲಾಕ್ ಜಿಲ್ಲಾಸ್ಪತ್ರೆಗೆ ಕರೆತರಲಾಗಿತ್ತು. ರೋಗಿ ಪ್ರಜ್ಞಾಹೀನರಾಗಿದ್ದು, ತುರ್ತು ಚಿಕಿತ್ಸಾ ವಿಭಾಗದಲ್ಲಿ ಪರೀಕ್ಷೆ ಮಾಡಲಾಯಿತು. ರೋಗಿಯನ್ನು ಆಸ್ಪತ್ರೆಗೆ ಕರೆತರುವ ಮೊದಲು ಐಸಿಯು ಬೆಡ್ ಲಭ್ಯತೆ ಬಗ್ಗೆ ವಿಚಾರಿಸಿರಲಿಲ್ಲ. ಪ್ರಸ್ತುತ ಆಸ್ಪತ್ರೆಯಲ್ಲಿ 116 ಐಸಿಯು ಬೆಡ್ ಲಭ್ಯವಿದ್ದು ಯಾವಾಗಲೂ ಭರ್ತಿಯಾಗಿರುತ್ತದೆ. ಬೇರೆ ಜಿಲ್ಲೆಗಳಿಂದ ಐಸಿಯುಗಾಗಿ ವೆನ್ಲಾಕ್ ಆಸ್ಪತ್ರೆಗೆ ಶಿಫಾರಸು ಮಾಡುವ ಮೊದಲು ಐಸಿಯು ಲಭ್ಯತೆ ಬಗ್ಗೆ ವಿಚಾರಿಸದೇ ರೋಗಿಯನ್ನು ರೆಫರ್ ಮಾಡಲಾಗುತ್ತಿದೆ,'' ಎಂದು ವೆನ್ಲಾಕ್ ಆಸ್ಪತ್ರೆ ಅಧೀಕ್ಷಕರು ಪ್ರತಿಕ್ರಿಯಿಸಿದ್ದಾರೆ.

ಭಕ್ತಿ ಮತ್ತ ವ್ಯಸನ ಎರಡೂ ಒಂದೇ ಅಲ್ಲ, ಆದರೂ ಅವುಗಳ ನಡುವೆ ಒಂದು ಸಾಮ್ಯತೆ ಇದೆ. ಏನದು? ಈ ಕುರಿತು ಈಶ ಫೌಂಡೇಶನ್‌ನ ಸದ್ಗುರು ಜಗ್ಗಿ ವಾಸುದೇವ್ ಹೇಳುವುದೇನು?
ಸಂಚಿಕೆಯಲ್ಲಿ ತಪ್ಪದೇ ಓದಿ!
ಬೋಧಿ ವೃಕ್ಷ
ಅತಿ ಹೆಚ್ಚು ಪ್ರಸಾರ ಸಂಖ್ಯೆ ಹೊಂದಿರುವ ಕನ್ನಡದ ಏಕೈಕ ಆಧ್ಯಾತ್ಮಿಕ ವಾರಪತ್ರಿಕೆ
ಪತ್ರಿಕೆಗಾಗಿ ಸಂಪರ್ಕಿಸಿ
72594 58080
ಪತ್ರಿಕೆಗಾಗಿ ಸ್ಕ್ಯಾನ್ ಮಾಡಿ ನಿಮ್ಮ ವಿಳಾಸ ಬರೆದು submit ಮಾಡಿ

100 ಕೋಟಿ ರೂ. ದುರ್ಬಳಕೆ

ತಾಲೂಕು ಮಟ್ಟದಲ್ಲಿ ಗ್ಯಾರಂಟಿ ಯೋಜನೆಗಳ ಪರಿಶೀಲನೆ

■ **ವಿಕ ಸುದ್ದಿಲೋಕ** ಬೆಂಗಳೂರು

ಕೆಲವು ಗ್ಯಾರಂಟಿ ಯೋಜನೆಗಳ ಫಲಾನುಭವಿಗಳು ಮೃತಪಟ್ಟಿದ್ದು, ಸುಮಾರು 100 ಕೋಟಿ ರೂ. ಬೇರೆಯವರಿಗೆ ತಲುಪಿ ದುರ್ಬಳಕೆಯಾಗಿದೆ. ಹಾಗಾಗಿ ಫಲಾನುಭವಿಗಳ ದಾಖಲೆ ಸಂಗ್ರಹಿಸುವ ಕುರಿತಂತೆ ಚರ್ಚೆ ಮಾಡುವ ಸಲಹೆ ಬಂದಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.



''ಕೆಲವು ಪ್ರಕರಣಗಳಲ್ಲಿ ಫಲಾನುಭವಿಗಳು ಮೃತಪಟ್ಟಿದ್ದು, ಇನ್ನು ಬೇರೆಯವರ ದೂರವಾಣಿ ಸಂಖ್ಯೆ ನೀಡಿರುವುದರಿಂದ ಸರಿಯಾದ ಫಲಾನುಭವಿಗಳಿಗೆ ಯೋಜನೆ ತಲುಪುತ್ತಿದೆಯೇ, ಇಲ್ಲವೇ ಎಂದು ತಿಳಿಯಬೇಕಿದೆ. ಫಲಾನುಭವಿಗಳ ದಾಖಲೆ ಸಂಗ್ರಹಿಸುವ ಬಗ್ಗೆ ಸಲಹೆ ಬಂದಿದ್ದು, ಅದರಂತೆ ಪ್ರತಿ ತಾಲೂಕಿನಲ್ಲಿ ಇದನ್ನು ಪರಿಶೀಲನೆ ಮಾಡುತ್ತಿದ್ದೇವೆ,'' ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

2 ತಿಂಗಳಿನಿಂದ ಅನ್ನಭಾಗ್ಯ ಅಕ್ಕಿ ಸರಿಯಾಗಿ ಪೂರೈಕೆಯಾಗುತ್ತಿಲ್ಲ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ''ಕೇಂದ್ರ ಸರಕಾರ ಅಕ್ಕಿ ಬಿಡುಗಡೆ ಮಾಡುತ್ತಿಲ್ಲ, ಕೇವಲ ಕರ್ನಾಟಕ ಮಾತ್ರವಲ್ಲದೇ, ನಮ್ಮ ಪಕ್ಷದ ಸರಕಾರವಿರುವ ರಾಜ್ಯಗಳಲ್ಲಿ ಕೇಂದ್ರ ಸರಕಾರ ಇದೇ ರೀತಿ ಮಾಡುತ್ತಿದೆ,'' ಎಂದು ಆರೋಪಿಸಿದರು.

2028ರಲ್ಲೂ ನಮ್ಮದೇ ಸರಕಾರ

2028ಕ್ಕೆ ಬಿಜೆಪಿ ಸರಕಾರ ಬರುವ ಕನಸು ಕಾಣದೆ ಕೆಲಸ ಮಾಡಿ ಎಂಬ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತೀನ್ ನವೀನ್ ಅವರು ಸಪಕ್ಷೀಯರಿಗೆ ನೀಡಿರುವ ಸೂಚನೆ ಬಗ್ಗೆ ಪ್ರತಿಕ್ರಿಯಿಸಿದ ಅವರು, ''ಹಿಂದೆ ಅಮಿತ್ ಶಾ ಅವರು ರಾಜ್ಯದಲ್ಲಿ ಬಿಜೆಪಿ 122 ಸೀಟು ಗೆಲ್ಲಲಿದ್ದು, ಎಲ್ಲರೂ ಸೂಟುಬೂಟು ಸಿದ್ಧಮಾಡಿಕೊಳ್ಳಿ ಎಂದಿದ್ದರು. ನಾನು 136 ಸೀಟು ಬರಲಿದೆ ಎಂದು ಹೇಳಿದ್ದೆ. ಈಗಲೂ ಹೇಳುತ್ತಿದ್ದೇನೆ ಬರೆದುಕೊಳ್ಳಿ, 2028ಕ್ಕೆ ಇದೇ ಡಿ.ಕೆ. ಶಿವಕುಮಾರ್ ಹಾಗೂ ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬರಲಿದೆ'' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಹೈಕಮಾಂಡ್‌ಗೆ ಪರೀಕ್ಷೆ

» ಮೊದಲ ಪುಟದಿಂದ

ಇಬ್ಬರ ಬಳಿಯೂ ಅಸ್ತ್ರ: ಹೈಕಮಾಂಡ್ ಏನೋ ಯಾವುದೇ ರಿಸ್ಕ್ ಬೇಡ ಎಂಬ ಮನೋಧೋರಣೆಯಲ್ಲಿದೆ. ಆದರೆ, ಮುಖ್ಯಮಂತ್ರಿಯವರು ಸಂಪುಟ ಸರ್ಜರಿ ಬಯಸಿದ್ದಾರೆ. ಮತ್ತೊಂದೆಡೆ ಡಿಸಿಎಂ ಅವರಿಗೆ ಪ್ರಮೋಷನ್ ನಿರೀಕ್ಷೆ. ಹಾಗಾಗಿ ಉಭಯ ನಾಯಕರೂ ರಾಹುಲ್ ಗಾಂಧಿ ಬಳಿ ಈ ವಿಚಾರ ಪ್ರಸ್ತಾಪಿಸುವ ಎಲ್ಲ ಸಾಧ್ಯತೆಗಳಿವೆ. ಅಂತಹ ಸಂದರ್ಭದಲ್ಲಿ ಹೈಕಮಾಂಡ್ ಯಾವ ನಿರ್ದೇಶನ ಕೊಡಲಿದೆ ಎನ್ನುವುದೇ ಕೌತುಕವಾಗಿದೆ. ಸಿಎಂ ಕ್ಯಾಂಪ್‌ನಿಂದ ಸಂಪುಟ ಪುನಾರಚನೆಯ ಜತೆಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನವೂ ಬದಲಾಗಬೇಕು ಎಂಬ ಒತ್ತಡಪಿದೆ. ತಮಗೊಂದು ಅವಕಾಶ ನೀಡಬೇಕು. ಸರಕಾರ ರಚನೆ ಸಂದರ್ಭದಲ್ಲಿ ನಡೆದಿದೆ ಎನ್ನಲಾದ ಒಪ್ಪಂದ ಅನುಸಾರ ನಡೆದುಕೊಳ್ಳಬೇಕು ಎನ್ನುವುದು ಡಿಸಿಎಂ ಬೇಡಿಕೆ. ಈ ವಿಚಾರಗಳು ಪ್ರಸ್ತಾಪವಾದರೆ ಅದರ ಪರಿಣಾಮ ಎದುರಿಸುವುದಕ್ಕೂ ಹೈಕಮಾಂಡ್ ತಯಾರಿ ಮಾಡಿಕೊಳ್ಳಬೇಕಾಗುತ್ತದೆ. ಹಾಗಾಗಿ ಈ ಹಂತದಲ್ಲಿ ಹೈಕಮಾಂಡ್ ನಡೆ ಏನಿರಲಿದೆ ಎಂಬ ಪ್ರಶ್ನೆಯೂ ಇದೆ.

ಶಾಸಕರೂ ದಿಲ್ಲಿಗೆ: ಸಂಪುಟ ಪುನಾರಚನೆಗೆ ಬೇಡಿಕೆ ಇಟ್ಟಿರುವ 30ಕ್ಕೂ ಹೆಚ್ಚು ಶಾಸಕರು ಈಗಾಗಲೇ ದಿಲ್ಲಿಗೆ ತಲುಪಿದ್ದಾರೆ.

ಮೈಸೂರಿನಲ್ಲಿ ಕುಸ್ತಿಗೆ ಮರುಜೀವ

ಹೊಸ ಕೋಚ್ ನೇಮಕ | ಜೂ. 1ರಿಂದ ಕುಸ್ತಿ ಶಾಲೆ, ಕ್ರೀಡಾ ನಿಲಯ ಆರಂಭ

■ **ಬೀರೇಶ್ ಕಬಿನಿ** ಮೈಸೂರು
beeresha.mahadeva@timesofindia.com

ಮೈಸೂರು ವಿಭಾಗದಲ್ಲಿ ಅವಸಾನದ ಹಂತ ತಲುಪಿದ ಕುಸ್ತಿಗೆ ಮರುಜೀವ ನೀಡುವ ನಿಟ್ಟಿನಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಬಾಲಕ, ಬಾಲಕಿಯರ ಕುಸ್ತಿ ಕ್ರೀಡಾ ನಿಲಯಗಳನ್ನು ಆರಂಭಿಸಲು ನಿರ್ಧರಿಸಿದೆ. 5ರಿಂದ 7ನೇ ತರಗತಿ ಬಾಲಕರಿಗೆ ಕುಸ್ತಿ ಕ್ರೀಡಾ ಶಾಲೆ, 5ರಿಂದ ಪದವಿವರೆಗಿನ ವಿದ್ಯಾರ್ಥಿನಿಯರಿಗೆ ಕುಸ್ತಿ ಕ್ರೀಡಾ ನಿಲಯ ಹಾಗೂ ಕ್ರೀಡಾ ಶಾಲೆ ಜೂನ್ 1ರಿಂದ ಪ್ರಾರಂಭವಾಗಲಿದೆ.

ರಾಜ್ಯದ ಐದು ವಿಭಾಗಗಳಲ್ಲಿ ಬೆಳಗಾವಿ (ಬೆಳಗಾವಿ, ಬಾಗಲಕೋಟೆ, ಕಾರವಾರ, ಧಾರವಾಡ, ಗದಗ, ಹಾವೇರಿ) ವಿಭಾಗದಲ್ಲಿ ಎಂಟು ಕುಸ್ತಿ ಕ್ರೀಡಾ ನಿಲಯ, ತರಬೇತಿ ಕೇಂದ್ರಗಳಿವೆ. ಇದನ್ನು ಹೊರತುಪಡಿಸಿದರೆ ದಕ್ಷಿಣ ಕರ್ನಾಟಕದ 15 ಜಿಲ್ಲೆಗಳಲ್ಲಿ ಯಾವುದೇ ಕುಸ್ತಿ ಕ್ರೀಡಾ ಶಾಲೆ, ನಿಲಯಗಳಿರಲಿಲ್ಲ. ಈಗ ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದ ಕ್ರೀಡಾ ಸಮುಚ್ಚಯದ ಆವರಣದಲ್ಲಿನ ಮಹಿಳಾ ಕ್ರೀಡಾ ವಿದ್ಯಾರ್ಥಿ ನಿಲಯದ ಪಕ್ಕದಲ್ಲಿರುವ ಕಟ್ಟಡದಲ್ಲಿ ಕುಸ್ತಿ ಒಳಾಂಗಣ ಕ್ರೀಡಾಂಗಣಕ್ಕೆ ವ್ಯವಸ್ಥೆ ಮಾಡಲಾಗಿದ್ದು, ಕುಸ್ತಿ ಮ್ಯಾಟ್‌ಗಳನ್ನು ಹಾಕಲಾಗಿದೆ. ಇಲ್ಲಿ ತರಬೇತಿ ಆರಂಭಿಸಲಾಗುತ್ತದೆ. ಇಲ್ಲಿ ಪ್ರತಿ ವರ್ಷ 100ಕ್ಕೂ ಹೆಚ್ಚು ಕ್ರೀಡಾಪಟುಗಳಿಗೆ ತರಬೇತಿ ದೊರೆಯಲಿದೆ. ಈಗಾಗಲೇ ರಾಜ್ಯಾದ್ಯಂತ ಕ್ರೀಡಾ ಶಾಲೆಗೆ 16 ಬಾಲಕರು ಹಾಗೂ ಬಾಲಕಿಯರಿಂದ ಕ್ರೀಡಾ ನಿಲಯ ಹಾಗೂ ಶಾಲೆಗೆ 35 ಮಂದಿ ಆಯ್ಕೆಯಾಗಿದ್ದು, ಮುಂದಿನ ತಿಂಗಳಿಂದ ತರಬೇತಿ ಆರಂಭವಾಗುತ್ತದೆ.


ಮೈಸೂರಿನಲ್ಲಿ ಕುಸ್ತಿ ತರಬೇತಿ

ಕುಸ್ತಿಯ ತವರು ಮೈಸೂರು ಸೇರಿ ಏಳು ಜಿಲ್ಲೆಗಳನ್ನು ಒಳಗೊಂಡ ಮೈಸೂರು ವಿಭಾಗದಲ್ಲಿ ಕುಸ್ತಿಗೆ ಒಬ್ಬರೂ ತರಬೇತುದಾರರಿಲ್ಲ, ಅಲ್ಲದೇ ಕ್ರೀಡಾನಿಲಯ, ಪೂರಕ ಸಲಕರಣೆ ಸೇರಿ ಸೌಲಭ್ಯಗಳಿಲ್ಲದೇ ಕುಸ್ತಿ ಹಿಂದಿನ ವೈಭವವನ್ನು ಕಳೆದುಕೊಳ್ಳುತ್ತಿದೆ ಎಂಬುದರ ಕುರಿತು 2025ರ ಅ. 6ರಂದು 'ವಿಜಯ ಕರ್ನಾಟಕ' ವಿಶೇಷ ವರದಿ ಪ್ರಕಟಿಸಿತ್ತು. ಈ ಬಗ್ಗೆ ವಿಧಾನಸಭೆಯಲ್ಲಿ ವಿಚಾರ ಚರ್ಚೆಯೂ ನಡೆದಿತ್ತು. ಬಳಿಕ ಮೈಸೂರು ವಿಭಾಗಕ್ಕೆ ಒಂದು ತಿಂಗಳ ಹಿಂದೆಯಷ್ಟೇ ಒಬ್ಬ ಕುಸ್ತಿ ತರಬೇತುದಾರರನ್ನು ನೇಮಕ ಮಾಡಲಾಯಿತು.

06.10.2025
ವಿಜಯ ಕರ್ನಾಟಕ
ತವರಲ್ಲೇ ಸೊರಗುತ್ತಿದೆ 'ರಾಜ'ಕುಸ್ತಿ

ಏನೇನು ತರಬೇತಿ ?

- ಮೂಲ ಕುಸ್ತಿ ಕೌಶಲ
- ದೈಹಿಕ ಫಿಟ್ನೆಸ್
- ಶಕ್ತಿ ವೃದ್ಧಿ ವ್ಯಾಯಾಮ
- ಯೋಗ ಮತ್ತು ಮಾನಸಿಕ ತರಬೇತಿ
- ಅಭ್ಯಾಸ ಪಂದ್ಯಗಳು
- ಪೌಷ್ಟಿಕ ಆಹಾರ ಮಾರ್ಗದರ್ಶನ
- ಶಿಸ್ತು ಮತ್ತು ನಾಯಕತ್ವ
- ಹಿರಿಯ ಕೋಚ್, ಪಟುಗಳಿಂದ ಮಾರ್ಗದರ್ಶನ
- ಕುಸ್ತಿ ಬೆಳವಣಿಗೆಗೆ ಪಂಚ ಸೂತ್ರ
- ಬಾಲಕ, ಬಾಲಕಿಯರ ಕುಸ್ತಿ ಕ್ರೀಡಾ ನಿಲಯ ಆರಂಭ
- ಪ್ರತಿ 3 ತಿಂಗಳಿಗೆ ಪ್ರತಿಭಾನ್ವೇಷಣೆ
- ತಾಲೂಕುವಾರು ತರಬೇತಿ ಶಿಬಿರಗಳ ಆಯೋಜನೆ
- ವೈಜ್ಞಾನಿಕವಾಗಿ ದೈನಂದಿನ ತರಬೇತಿ
- ಸ್ಪರ್ಧೆಗಳು ಮತ್ತು ಟೂರ್ನಮೆಂಟ್ ಆಯೋಜನೆ

ಸರಕಾರ ಎರಡು ವರ್ಷಗಳ ಹಿಂದೆಯೇ ಕುಸ್ತಿ ಅಕಾಡೆಮಿ ಆರಂಭದ ಬಗ್ಗೆ ಬಜೆಟ್‌ನಲ್ಲಿ ಘೋಷಣೆ ಮಾಡಿದೆ. ತರಬೇತುದಾರು ಸೇರಿದಂತೆ ಕೆಲವೊಂದು ಸೌಲಭ್ಯಗಳ ಕೊರತೆಯಿಂದ ಆರಂಭವಾಗಿರಲಿಲ್ಲ. ಈಗ ಮೈಸೂರಿಗೆ ಕುಸ್ತಿ ಕೋಚ್ ಬಂದಿರುವುದರಿಂದ ತರಬೇತಿ ಆರಂಭಿಸಲಾಗುತ್ತಿದೆ.

- ಭಾಸ್ಕರ್ ನಾಯಕ್
ಸಹಾಯಕ ನಿರ್ದೇಶಕ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಮೈಸೂರಿನಲ್ಲಿ ಹಲವು ವರ್ಷಗಳಿಂದ ಆಧುನಿಕ ಕುಸ್ತಿ ತರಬೇತಿ ಇಲ್ಲವಾಗಿದೆ. ಈಗ ಇಲಾಖೆಯ ವತಿಯಿಂದ ಕ್ರೀಡಾ ನಿಲಯ ಹಾಗೂ ಕ್ರೀಡಾ ಶಾಲೆಯನ್ನು ಆರಂಭಿಸಲಾಗುತ್ತಿದೆ. ಇದರಿಂದ ಇನ್ನು ಮುಂದೆ ರಾಜ್ಯ, ರಾಷ್ಟ್ರಮಟ್ಟದ ಕುಸ್ತಿ ಪಟುಗಳನ್ನು ರೂಪಿಸಲು ಸಾಧ್ಯವಾಗಲಿದೆ.

- ವಿನೋದ್ ಕುಸ್ತಿ ತರಬೇತುದಾರ,
ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ

8 ಶವಗಳ ಸಾಮೂಹಿಕ ಅಂತ್ಯಸಂಸ್ಕಾರ

■ **ವಿಕ ಸುದ್ದಿಲೋಕ** ಭಟ್ಕಳ (ಉ.ಕನ್ನಡ)

ಇಲ್ಲಿನ ತಟ್ಟಿಹಕ್ಕಲ್ ಹೊಳೆಯಲ್ಲಿ ಭಾನುವಾರ ಚಿಪ್ಪೆಕಲ್ಲು ಸಂಗ್ರಹಿಸಲು ಹೋಗಿ ನೀರಿನಲ್ಲಿ ಮುಳುಗಿ ಜೀವ ತೆತ್ತ 11 ಜನರ ಪೈಕಿ 8 ಜನರ ಸಾಮೂಹಿಕ ಅಂತ್ಯಸಂಸ್ಕಾರ ಸೋಮವಾರ ಪಡುಶಿರಾಲಿಯಲ್ಲಿ ನೆರವೇರಿತು.

ಹೊಳೆಯಲ್ಲಿ ಕಣ್ಮರೆಯಾದ ಮಾದೇವ ಭೈರಪ್ಪ ನಾಯ್ಕ ಮೃತ ದೇಹ ಸೋಮವಾರ ಬೆಳಗ್ಗೆ ಪತ್ತೆಯಾಗಿದ್ದು, ಭಟ್ಕಳ ಸರಕಾರಿ ಆಸ್ಪತ್ರೆಗೆ ತಂದು ಉಳಿದ ಶವಗಳೊಂದಿಗೆ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಕುಟುಂಬ ಸದಸ್ಯರಿಗೆ ಹಸ್ತಾಂತರಿಸಲಾಯಿತು. 3 ಶವಗಳ ಅಂತ್ಯಸಂಸ್ಕಾರ ಭಾನುವಾರ ರಾತ್ರಿಯೇ ನಡೆಯಿತು.

ತಟ್ಟಿಹಕ್ಕಲ್ ಹೊಳೆಯಲ್ಲಿ ಚಿಪ್ಪೆಕಲ್ಲು ಸಂಗ್ರಹಿಸಿಕೊಂಡು ದಡಕ್ಕೆ ಬರುವ ವೇಳೆಗೆ ಅಲೆ ಬಡಿದು ನಮ್ಮನ್ನೆಲ್ಲ ಬೀಳಿಸಿತು. 10-20 ನಿಮಿಷ ಕಳೆದ ನಂತರ ದೋಣಿಯೊಂದು ಬಂದು ನಮ್ಮನ್ನು ಕಾಪಾಡಿತು. ನಾವು ಮಾತನಾಡುವ ಸ್ಥಿತಿಯಲ್ಲಿ ಇದ್ದಿರಲಿಲ್ಲ. ಈಗ ಆಸ್ಪತ್ರೆಯಲ್ಲಿದ್ದೇನೆ.

-ಮಾದೇವಿ ನಾಯ್ಕ (ಪಾರಾದವರು)

ಶವಗಳನ್ನು ಪಡುಶಿರಾಲಿಗೆ ತರುತ್ತಿದ್ದಂತೆಯೇ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತು. ಊರ ಹಿರಿಯರು, ಸಂಬಂಧಿಕರು ಆಗಮಿಸಿ ಅಂತ್ಯಸಂಸ್ಕಾರ ಸಿದ್ಧತೆಗೆ ನೆರವು ನೀಡಿದರು.

ಭಟ್ಕಳ ಪಡುಶಿರಾಲಿಯಲ್ಲಿ ಶವ ಸಂಸ್ಕಾರದ ವೇಳೆ ಸೇರಿದ್ದ ಜನಸಮೂಹ.

ಟೊಯೊಟಾದಿಂದ 1,200 ಕೋಟಿ ರೂ. ಹೂಡಿಕೆ

■ **ವಿಕ ಸುದ್ದಿಲೋಕ** ಬೆಂಗಳೂರು

ದಾಬಸ್‌ಪೇಟೆ- ದೊಡ್ಡಬಳ್ಳಾಪುರ ನಡುವೆ ರಾಜ್ಯ ಸರಕಾರ ಅಭಿವೃದ್ಧಿಪಡಿಸುತ್ತಿರುವ ಮಹತ್ವಾಕಾಂಕ್ಷಿ ಕ್ವಿನ್ ಸಿಟಿಯಲ್ಲಿ ಟೊಯೊಟಾ ಕಿರ್ಲೋಸ್ಕರ್ ಮೋಟಾರ್ಸ್ ಕಂಪನಿಯು 1,200 ಕೋಟಿ ರೂ. ಹೂಡಿಕೆಯೊಂದಿಗೆ ಜಾಗತಿಕ ಮಟ್ಟದ ತನ್ನ 'ಬಿಜ್‌ಇಂಟೆಲ್ ಹಬ್' ಸ್ಥಾಪಿಸಲು ಮುಂದಾಗಿದೆ.

ಕ್ವಿನ್ ಸಿಟಿಯಲ್ಲಿ ಬಿಜ್‌ಇಂಟೆಲ್ ಹಬ್ ಸ್ಥಾಪನೆ

ಮುಖ್ಯಮಂತ್ರಿಗಳ ನಿವಾಸ 'ಕಾವೇರಿ'ಯಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಅವರ ಸಮ್ಮುಖದಲ್ಲಿ ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್ ಮತ್ತು ಟೊಯೊಟಾ ಕಂಪನಿ ಪರವಾಗಿ ಸಿಒಒ ಮತ್ತು ವಿಶೇಷ ಯೋಜನೆಯ ನಿರ್ದೇಶಕ ಸುದೀಪ್ ದಳವಿ ಅವರು ಈ ಸಂಬಂಧ ಒಪ್ಪಂದಕ್ಕೆ ಅಂಕಿತ ಹಾಕಿದರು.

ಈ ವೇಳೆ ಮಾತನಾಡಿದ ಸಿದ್ದರಾಮಯ್ಯ ಅವರು, ''ಈ ಹೂಡಿಕೆಗೆ ಪೂರ್ಣ ಸಹಕಾರ ನೀಡಲಾಗುವುದು. ಈ ರೀತಿಯ ಘಟಕ ಸ್ಥಾಪನೆಯಾಗುತ್ತಿರುವುದು ವಿಶ್ವದಲ್ಲೇ ಮೊದಲು ಎನ್ನುವ ವಿಷಯ ಕೇಳಿ ಸಂತಸವಾಯಿತು,'' ಎಂದರು.

ಎಂ.ಬಿ. ಪಾಟೀಲ್ ಮಾತನಾಡಿ, ''ಇದು ಕ್ವಿನ್ ಸಿಟಿಯಲ್ಲಿ ಆಗುತ್ತಿರುವ ಪ್ರಪ್ರಥಮ ಹೂಡಿಕೆ. ಕಂಪನಿಯು ಐದು ವರ್ಷಗಳಲ್ಲಿ 1,200 ಕೋಟಿ ರೂ.ಗಳನ್ನು ಆರಂಭಿಕ ಬಂಡವಾಳವಾಗಿ ಹೂಡಿಕೆ ಮಾಡಲಿದ್ದು, ಇದರಿಂದ 200 ಉದ್ಯೋಗ ಸೃಷ್ಟಿಯಾಗಲಿವೆ. ಇದಕ್ಕಾಗಿ ಅಲ್ಲಿ ಟೊಯೊಟಾ ಕಂಪನಿಗೆ 300 ಎಕರೆ ಭೂಮಿ ಒದಗಿಸಲಾಗುವುದು,'' ಎಂದು ಹೇಳಿದರು.

ಕೈಗಾರಿಕಾ ಇಲಾಖೆ ಆಯುಕ್ತೆ ಖುಷ್ಬೂ ಗೋಯೆಲ್, ಕೆಐಎಡಿಬಿ ಸಿಇಒ ಗೋವಿಂದ ರೆಡ್ಡಿ, ಟೊಯೊಟಾ ಕಂಪನಿಯ ಮುಖ್ಯ ತಾಂತ್ರಿಕ ಅಧಿಕಾರಿ ಯೋಶಿನೋರಿ ನೋರಿಟಾಕೆ, ಉನ್ನತ ಮಟ್ಟದ ಪ್ರತಿನಿಧಿಗಳಾದ ಜಿ.ಶಂಕರ್, ವಿಕ್ರಮ್ ಗುಲಾಟಿ, ಉಪಾಧ್ಯಕ್ಷ ರಮೇಶ್ ರಾವ್, ಜನರಲ್ ಮ್ಯಾನೇಜರ್ ಎಚ್.ಜೆ.ಕಿರಣ್ ಪಾಲ್ಗೊಂಡಿದ್ದರು.

ಜೂ. 1ರಿಂದ ಬೇರೆ ಕೋರ್ಟ್‌ನಲ್ಲಿ ದರ್ಶನ್ ವಿಚಾರಣೆ

■ **ವಿಕ ಸುದ್ದಿಲೋಕ** ಬೆಂಗಳೂರು

ಚಿತ್ರದುರ್ಗದ ರೇಣುಕಾ ಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಹಾಗೂ ಅವರ ಗೆಳತಿ ಪವಿತ್ರಾ ಗೌಡ ವಿರುದ್ಧ ದಾಖಲಾಗಿರುವ ಪ್ರಕರಣದ ವಿಚಾರಣೆ ಜೂ. 1ರಿಂದ ಬೇರೆ ಕೋರ್ಟ್‌ನಲ್ಲಿ ನಡೆಯಲಿದೆ.

2024ರಲ್ಲಿ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಯು ಇದುವರೆಗೂ 57ನೇ ಸಿಸಿಎಚ್ ಕೋರ್ಟ್‌ನಲ್ಲಿ ನಡೆಯುತ್ತಿತ್ತು. ಜೂನ್ 1ರಿಂದ 59ನೇ ಸಿಸಿಎಚ್ ಕೋರ್ಟ್‌ನಲ್ಲಿ ನಡೆಯಲಿದೆ.

ಒಂದು ವರ್ಷದೊಳಗೆ ಪ್ರಕರಣದ ವಿಚಾರಣೆ ಪೂರ್ಣಗೊಳಿಸುವಂತೆ ಸುಪ್ರೀಂಕೋರ್ಟ್ ಸೂಚಿಸಿದ ಬೆನ್ನಲ್ಲೇ ಪ್ರಮುಖ 60 ಸಾಕ್ಷಿಗಳ ವಿಚಾರಣೆಗೆ ಸಿದ್ಧತೆ ನಡೆದಿದೆ. ನ್ಯಾಯಾಧೀಶರಾದ ಸುಜಾತಾ ಮಡಿವಾಳಪ್ಪ ಸಾಂಬ್ರಾಣಿ ಅವರು ಪ್ರಕರಣದ ವಿಚಾರಣೆ ನಡೆಸಲಿದ್ದಾರೆ. ಸಿಟಿ ಸಿವಿಲ್ ಕೋರ್ಟ್‌ನ ಡೆಪ್ಯುಟಿ ರಿಜಿಸ್ಟ್ರಾರ್ ಈ ಕುರಿತು ಆದೇಶ ಹೊರಡಿಸಿದ್ದಾರೆ. ಸುಪ್ರೀಂಕೋರ್ಟ್‌ನ ಈ ಆದೇಶದ ಪ್ರತಿಯನ್ನು ದರ್ಶನ್ ಪರ ವಕೀಲರು ಸೆಷನ್ಸ್ ಕೋರ್ಟ್‌ಗೆ ಸಲ್ಲಿಸಿದ್ದಾರೆ.

PUBLIC NOTICE

It is hereby notified that, my clients have agreed to purchase the Schedule Property from its Owners **SMT.LATHA.N W/o late Sri.Sanjeevappa (B.A.Sanjeevappa) and her sons namely SRI.AVINASH.S and SRI.HARSHA.S**, residing at No.139, 3rd 'B' Main, 3rd Cross, Behind Ayyappa Temple, Someshwaranagar, Yelahanka New Town, G.K.V.K, Bengaluru-560065. If any persons have any manner of claim, right, title, interest or demand of any nature in or over the Schedule Property, they are hereby requested to file their objections along with the photocopies of the documents on which they are relying, with the undersigned within **14 (Fourteen) days** from the date of publication of this notice. Objection/s received thereafter will not be binding on my clients.

SCHEDULE

All that piece and parcel of the agricultural dry land measuring **15½ Guntas** bearing Sy.No.49/2, situated at **Baiyyanahalli Village**, Jala Hobli, Yelahanka Taluk, Bengaluru Urban District and bounded on the:
East by : Gramathana land and Road
West by : Land bearing Sy.No.49/3
North by : Road
South by : Gramathana land and Road

Sd/- **BAYYA REDDY. M**, Advocate
No.101, 4th Floor, Sri Manjunatha Complex, 22nd Main Road, BSK 2nd Stage, Opp : Banashankari BDA Complex, Bengaluru-560070

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜನಿಯರ್‌ರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ ಬೀದರ
ಸಂಖ್ಯೆ : ಕಾನಿಇಂ/ಲೋಇ/ವಿ-ಬೀ/ಜೆಇ:5/2026-27/442 ದಿನಾಂಕ: 14-05-2026

:: ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಟೆಂಡರ್ ಪ್ರಕಟಣೆ ::

ಕರ್ನಾಟಕ ರಾಜ್ಯಪಾಲರ ಪರವಾಗಿ 2025-26 ನೇ ಸಾಲಿಗೆ ಈ ಕೆಳಕಂಡ ಕಾಮಗಾರಿಗಳ, ಲೆಕ್ಕ ಶೀರ್ಷಿಕೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಅಡಿಯ ಕನಿಷ್ಠ ರೂ. 10.00 ಲಕ್ಷಗಳ ಮತ್ತು ಗರಿಷ್ಠ ರೂ. 400.00 ಲಕ್ಷಗಳ ಮೊತ್ತದ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಕರೆಯಲಾಗಿದೆ.

PWD/2025-26/BD/RD/OW WORK_INDENT
GENERAL (06) : 34468, 34668, 35173, 36173, 36165, 34528.
SC (01) : 34473.
ST (01) : 34472.
CATEGORY-1 (01) : 34470.
CATEGORY-2A (03) : 35141, 34471, 36144.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https:kppp.karnataka.gov.in ರಿಂದ ದಾಖಲಾತಿಗಳನ್ನು ದಿನಾಂಕ: 14-05-2026 ರಿಂದ ಡೌನ್‌ಲೋಡ್ ಮಾಡಿಕೊಂಡು ದಿನಾಂಕ: 30-05-2026 ರ ಸಂಜೆ 16.00 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಅಂತರ್ಜಾಲ ತಾಣ ಅಥವಾ ಈ ಕಚೇರಿಗೆ ಸಂಪರ್ಕಿಸುವುದು.
ವಿಶೇಷ ಸೂಚನೆ :- ಯು.ಡಿ.ಐ ನಂಬರ ಹೊಂದಿರುವ ಟರ್ನಓವರ್ ಸರ್ಟಿಫಿಕೆಟ್ ಗಳನ್ನು ಮಾತ್ರ ಪರಿಗಣಿಸಲಾಗುವುದು ಎಂದು ಗುತ್ತಿಗೆದಾರರ ಗಮನಕ್ಕೆ ತರಲಾಗಿದೆ

ಸಹಿ/-
(ಶಿವಶಂಕರ್ ಕಾಮಶೆಟ್ಟಿ)
ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ ಬೀದರ

ನಿಧನ

ವಿಜ್ಞಾನಿ ರಾಮ ಭಟ್

ಕುಂದಾಪುರ (ಉಡುಪಿ): ವಿಜ್ಞಾನಿ ಡಾ. ರಾಮ ಬಿ. ಭಟ್ (83) ವಯೋಸಹಜ ಅಸ್ವಸ್ಥತೆಯಿಂದ ಕೆನಡಾದ ಟೊರೆಂಟೊದಲ್ಲಿ ಭಾನುವಾರ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಇದ್ದಾರೆ.

ಸುರತ್ಕಲ್ ಕೆಆರ್‌ಇಸಿನಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವಿ, ಮದರಾಸಿನ ಐಐಟಿಯಲ್ಲಿ ಎಂ.ಟೆಕ್ ಮತ್ತು 'ನಾದ ಕಂಪನ' ವಿಷಯದಲ್ಲಿ ಡಾಕ್ಟರೇಟ್ ಪಡೆದ ಅವರು, ತಿರುವನಂತಪುರಂನ ರಾಕೆಟ್ ಸೆಂಟರ್ ಹಾಗೂ ಅಮೆರಿಕದ 'ನಾಸಾ'ದಲ್ಲಿ ಕರ್ತವ್ಯ ಸಲ್ಲಿಸಿದ್ದರು. ಬಳಿಕ ಕೆನಡಾದ ಕಾಂಕಾರ್ಡಿಯಾ ವಿವಿಯಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ಡೀನ್ ಆಗಿದ್ದರು. ಅವರು ಬಾಳಿಕೆ ರಾಮ ಭಟ್ ಎಂಬ ಹೆಸರಿನಲ್ಲಿ ಹಲವು ಪುಸ್ತಕ, ಕವನ ಸಂಕಲನ, ಕಾದಂಬರಿಗಳನ್ನು ರಚಿಸಿದ್ದಾರೆ.

ದೂರದರ್ಶನದಲ್ಲಿ ಮತ್ತೆ ಕೌನ್ ಬನೇಗಾ ಕರೋಡ್‌ಪತಿ

ಹೊಸದಿಲ್ಲಿ: ದೂರದರ್ಶನವು ತನ್ನ ವೀಕ್ಷಕರಿಗೆ ಕೌಟುಂಬಿಕ ಮನರಂಜನೆಯನ್ನು ಒದಗಿಸಲಿದ್ದು, ಹಳೆಯ ಜನಪ್ರಿಯ ಕಾರ್ಯಕ್ರಮಗಳ ಮರುಪ್ರಸಾರ ಮಾಡಲಿದೆ.

ಎಲ್ಲರ ಮನದಲ್ಲಿ ಸದಾ ಹಸಿರಾಗಿರುವ 'ಕೌನ್ ಬನೇಗಾ ಕರೋಡ್‌ಪತಿ' ದೊಡ್ಡ ಆಕರ್ಷಣೆಯಾಗಲಿದೆ. ಇದು ಕೇವಲ ರಸಪ್ರಶ್ನೆ ಕಾರ್ಯಕ್ರಮವಾಗಿರದೆ ಕೋಟ್ಯಂತರ ಭಾರತೀಯರ ಭರವಸೆಗಳು, ಕನಸುಗಳು ಮತ್ತು ಸ್ಫೂರ್ತಿದಾಯಕ ಕಥೆಗಳ ವೇದಿಕೆಯಾಗಿದೆ. ಅಮಿತಾಭ್ ಬಚ್ಚನ್ ಅವರ ಕಾರ್ಯಕ್ರಮ ನಿರೂಪಣೆ ಎಲ್ಲರಿಗೂ ಮೋಡಿ ಮಾಡುತ್ತದೆ. ಈ ಕಾರ್ಯಕ್ರಮವು ಸೋಮವಾರದಿಂದ ಶುಕ್ರವಾರದವರೆಗೆ, ರಾತ್ರಿ 9.00 ಗಂಟೆಗೆ ವಿಶೇಷವಾಗಿ ದೂರದರ್ಶನ ನ್ಯಾಷನಲ್‌ನಲ್ಲಿ ಪ್ರಸಾರವಾಗಲಿದೆ. ಇದರ ಹೊರತಾಗಿ ವೀಕ್ಷಕರಿಗೆ ಡ್ರಾಮಾ ಸರಣಿ ರಜನಿ 2.0 ವೀಕ್ಷಿಸಬಹುದು. ಈ ಕಾರ್ಯಕ್ರಮವು ಸೋಮವಾರದಿಂದ ಶುಕ್ರವಾರದವರೆಗೆ, ಸಂಜೆ 8 ಗಂಟೆಗೆ ಪ್ರಸಾರವಾಗಲಿದೆ. ಇದಲ್ಲದೆ ಹಾಸ್ಯ ಮತ್ತು ವ್ಯಂಗ್ಯವನ್ನು ಇಷ್ಟಪಡುವ ವೀಕ್ಷಕರಿಗಾಗಿ 'ಆಫೀಸ್ ಆಫೀಸ್ - ಚಲಿ ಮುಸದ್ದಿ ಕೀ ಬೇಟಿ' ಕಾರ್ಯಕ್ರಮ ಸೋಮವಾರದಿಂದ ಶುಕ್ರವಾರದವರೆಗೆ, ಸಂಜೆ 8.30 ಕ್ಕೆ ಪ್ರಸಾರವಾಗಲಿದೆ.

ವೀಕ್ಷಕರು ಈ ಎಲ್ಲಾ ಕಾರ್ಯಕ್ರಮಗಳ ಆನಂದವನ್ನು 'ವೇವ್ಸ್ ಒಟಿಟಿ' ಪ್ಲಾಟ್‌ಫಾರ್ಮ್‌ನಲ್ಲಿಯೂ ಪಡೆಯಬಹುದು. ಹಾಸ್ಯ, ಸಾಮಾಜಿಕ ಪ್ರಸ್ತುತತೆ ಮತ್ತು ತಿಳಿವಿನ ವಿಸ್ತಾರವನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ಜನಪ್ರಿಯ ಕಾರ್ಯಕ್ರಮಗಳ ಮರು ಆರಂಭವು ವೀಕ್ಷಕರ ಹಳೆಯ ನೆನಪುಗಳಿಗೆ ಹೊಸ ತೇಜಸ್ಸನ್ನು ನೀಡುತ್ತದೆ. ಹೊಸ ಪೀಳಿಗೆಯಲ್ಲಿರುವ ತಾಜಾತನದ ಕಲ್ಪನೆಯನ್ನೇ ಬದಲಿಸುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಬೆಂಗಳೂರು ಉತ್ತರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಬ್ಯಾಟರಾಯನಪುರ ವಿಭಾಗ,
ಬಿ.ಎಸ್.ಸಿ.ಸಿ ರಸ್ತೆ, ಬೆಂಗಳೂರು-560092
ನಂ.: ಕಾ.ಪಾ.ಅ.(ಬ್ಯಾವಿ)/ಪಿಆರ್/03/2026-27 ದಿನಾಂಕ: 25.05.2026

ಸಾರ್ವಜನಿಕ ಪ್ರಕಟಣೆ

ಬ್ಯಾಟರಾಯನಪುರ ವಿಭಾಗದ ವ್ಯಾಪ್ತಿಯ ವಾರ್ಡ್‌ಗಳಾದ 15- ಬ್ಯಾಟರಾಯನಪುರ, 16- ಅಮೃತಹಳ್ಳಿ, 17- ಜಕ್ಕೂರು, 18-ಕೆಂಪಾಪುರ, 19-ಥಣಿಸಂದ್ರ, 20-ಸಂಪಿಗೆಹಳ್ಳಿ, 21-ಕೋಗಿಲು, ಈ ವಾರ್ಡ್‌ಗಳ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಶಾಲೆಯ ಕಟ್ಟಡಗಳು, ಸರ್ಕಾರಿ ಕಾಂಪೌಂಡ್ ಗೋಡೆಗಳು, ಖಾಸಗಿ ಶಾಲೆಯ ಕಟ್ಟಡಗಳು, ಖಾಸಗಿ ಶಾಲೆಯ ಕಾಂಪೌಂಡ್ ಗೋಡೆಗಳು, ಖಾಸಗಿ ಕಾಂಪೌಂಡ್ ಗೋಡೆಗಳು, ಕೇಂದ್ರ ಸರ್ಕಾರದ ಕಟ್ಟಡಗಳು, ಕೇಂದ್ರ ಸರ್ಕಾರದ ಕಾಂಪೌಂಡ್ ಗೋಡೆಗಳು ಇದಕ್ಕೆ ಸಂಬಂಧಪಟ್ಟಂತೆ, ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಶಿಥಿಲಾವಸ್ಥೆಯ ಕಟ್ಟಡಗಳು / ಗೋಡೆಗಳು ಇತರೆ ಅಪಾಯಕಾರಿ ಕಟ್ಟಡಗಳು ಕಂಡುಬಂದಲ್ಲಿ ಕೂಡಲೇ ಬ್ಯಾಟರಾಯನಪುರ ವಿಭಾಗ ಬೆಂಗಳೂರು ಉತ್ತರ ನಗರ ಪಾಲಿಕೆರವರಿಗೆ ದೂರವಾಣಿ ಮುಖಾಂತರ ಅಥವಾ ವಾಟ್ಸಾಪ್ ಮುಖಾಂತರ ಮಾಹಿತಿಯನ್ನು ನೀಡಬಹುದಾಗಿರುತ್ತದೆ.

ಖಾಸಗಿ ಶಾಲೆಯ ಕಾಂಪೌಂಡ್ ಮತ್ತು ಖಾಸಗಿ ಶಾಲೆಯ ಕಟ್ಟಡ, ಖಾಸಗಿ ಕಟ್ಟಡ ಹಾಗೂ ಖಾಸಗಿ ಕಟ್ಟಡದ ಕಾಂಪೌಂಡ್ ಗೋಡೆಗಳು ಶಿಥಿಲಾವಸ್ಥೆಯಲ್ಲಿದ್ದಲ್ಲಿ / ಅಪಾಯಕಾರಿ ಇದ್ದಲ್ಲಿ ಮಹಾನಗರ ಪಾಲಿಕೆಯ ಗಮನಕ್ಕೆ ತಂದು ಸ್ವತಃ ತಾವೇ ತೆರವುಗೊಳಿಸತಕ್ಕದ್ದು, ತಪ್ಪಿದ್ದಲ್ಲಿ ಎಲ್ಲಾ ಸರ್ಕಾರಿ ಹಾಗೂ ಅರೆ ಸರ್ಕಾರಿ ಇಲಾಖೆಗಳಿಗೆ ತಾವೇ ನೇರ ಜವಾಬ್ದಾರಿಯಾಗಿರುತ್ತೀರಿ ಎಂಬ ವಿಷಯವನ್ನು ತಮ್ಮ ಗಮನಕ್ಕೆ ತರಲಾಗಿದೆ.

ಸಂಪರ್ಕಕ್ಕಾಗಿ: (1) ಕಾರ್ಯಪಾಲಕ ಅಭಿಯಂತರರು-ಸಚಿನ್ ಎಚ್.ಪಿ., ಮೊಬೈಲ್ ಸಂಖ್ಯೆ: 98445 08268, (2) ಸಹಾಯಕ ಕಾರ್ಯಪಾಲಕ ಅಭಿಯಂತರರು-ವರುಣ್ ಕುಮಾರ್, ಮೊಬೈಲ್ ಸಂಖ್ಯೆ: 99860 68233, (3) ಸಹಾಯಕ ಕಾರ್ಯಪಾಲಕ ಅಭಿಯಂತರರು-ಶಿವಕುಮಾರ್ ಗೌಡರ್, ಮೊಬೈಲ್ ಸಂಖ್ಯೆ: 94806 85444, (4) ಸಹಾಯಕ ಕಾರ್ಯಪಾಲಕ ಅಭಿಯಂತರರು-ರಂಗನಾಥ ಬಿ.ಆರ್., ಮೊಬೈಲ್ ಸಂಖ್ಯೆ: 90088 89809.

ಸಹಿ/- ಕಾರ್ಯಪಾಲಕ ಅಭಿಯಂತರರು,
ಬ್ಯಾಟರಾಯನಪುರ ವಿಭಾಗ, ಬೆಂಗಳೂರು ಉತ್ತರ ನಗರ ಪಾಲಿಕೆ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೇಂದ್ರ ಕಛೇರಿ, ಉಗ್ರಾಣ ಮತ್ತು ಖರೀದಿ ಇಲಾಖೆ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು-560 027

ಟೆಂಡರ್ ಆಹ್ವಾನಿಸುವ ನೋಟೀಸ್ ಸಂಖ್ಯೆ: 02 ದಿನಾಂಕ: 25.05.2026

ಈ ಕೆಳಗೆ ತಿಳಿಸಿರುವ ಸಾಮಗ್ರಿಗಳನ್ನು ಸರಬರಾಜು ಮಾಡಲು / ಸೇವೆಗಳನ್ನು ಒದಗಿಸಲು ಅರ್ಹ ಸರಬರಾಜುದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.in ಮೂಲಕ (ಪೂರ್ವ ಅರ್ಹತೆ ಮತ್ತು ಅಥವಾ ವಾಣಿಜ್ಯ ದರ) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಇ-ಪೋರ್ಟಲ್‌ನ ಟೆಂಡರ್ ಸಂಖ್ಯೆ	ಖರೀದಿಸುವ ಸಾಮಗ್ರಿಗಳ/ಸೇವೆಗಳ ವಿವರ	ಟೆಂಡರ್‌ನ ಮೊತ್ತ ಕೋಟಿ ರೂ.ಗಳಲ್ಲಿ (ಅಂದಾಜು)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಸಂಜೆ 5.00 ಗಂಟೆಯವರೆಗೆ
KSRTC/2026-27/IND0294	ಟಾಟಾ ಮತ್ತು ಅಶೋಕ್ ಲೇಲ್ಯಾಂಡ್ BS-VI ವಾಹನಗಳಿಗೆ ಅಗತ್ಯವಾದ ಆಟೋಮೋಟಿವ್ ಲೂಬ್ರಿಕಾಂಟ್‌ಗಳ ಖರೀದಿ	1.22	26/05/2026
KSRTC/2026-27/IND0295	ಅಗ್ನಿಪತ್ತೆ ಹಾಗೂ ಅಗ್ನಿ ನಿಂದಕ ವ್ಯವಸ್ಥೆಗಳು AIS 135 ರಂತೆ ಕೆ ಎಸ್ ಆರ್ ಟಿ ಸಿ ಬಸ್‌ಗಳಿಗೆ	1.12	01/06/2026
KSRTC/2026-27/IND0296	2ಕೆಪಿಯೂ ಪೇಂಟ್ಸ್‌ಗಳು ಮತ್ತು ಸಂಬಂಧಿತ ಸಾಮಗ್ರಿಗಳ ಖರೀದಿ	8.00	08/06/2026
KSRTC/2026-27/IND0297	ಪ್ರಿಂಟ್ & ಕಟ್ ಇಕೋಸಾಲ್ವೆಂಟ್ ಇಂಕ್ ಜೆಟ್ ಫ್ಲೆಕ್ಸ್ ಪ್ರಿಂಟರ್ ಲ್ಯಾಮಿನೇಶನ್‌ಯಂತ್ರ & ವೈಯಕ್ತಿಕ ಕಂಪ್ಯೂಟರ್‌ಗಳ ಖರೀದಿ	0.20	01/06/2026
KSRTC/2026-27/IMD0299	ಆಯಿಲ್ ಸೀಲ್‌ಗಳ ಖರೀದಿ	1.80	20/06/2026
KSRTC/2026-27/IMD0300	ಪಿಯೂ ಅಡ್ಹೆಸಿವ್ ಸೀಲೇಂಟ್‌ಗಳ ಖರೀದಿ	1.50	22/06/2026
KSRTC/2026-27/IND0301	ಫ್ಯಾನ್ ಬೆಲ್ಟ್‌ಗಳ ಖರೀದಿ	0.70	22/06/2026
KSRTC/2026-27/IND0302	ವಾಟರ್ ಪಂಪ್ ಮತ್ತು ಅದರ ಭಾಗಗಳ ಖರೀದಿ	3.84	22/06/2026
KSRTC/2026-27/IND0303	ಫಾಸ್ಟನರ್‌ಗಳ ಖರೀದಿ	1.00	22/06/2026

ಮುಂದುವರೆದು, ಸಾಮಾಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ, ದಿನಾಂಕಗಳಲ್ಲಿ ಯಾವುದೇ ಸೇರ್ಪಡೆ/ತಿದ್ದುಪಡಿ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿಯೇ ಮಾತ್ರ ಪ್ರಕಟಗೊಳಿಸಲಾಗುವುದು. **ಸೂಚನೆ:** ಆಸಕ್ತಿಯುಳ್ಳ ಸರಬರಾಜುದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ಅಥವಾ ದೂರವಾಣಿ ಸಂಖ್ಯೆ: 080-46010000/ 080-68948777 ಕರೆಮಾಡಿ support@eprochelpdesk.com ಮೇಲ್ ಮಾಡಿ ಮಾಹಿತಿ ಪಡೆಯಬಹುದಾಗಿರುತ್ತದೆ. ಬಿಡ್ದುದಾರರಿಗೆ ಟೆಂಡರ್ ಸಂಬಂಧ ಯಾವುದೇ ಮಾಹಿತಿ ಅಗತ್ಯವಿದ್ದರೆ cosp@ksrtc.org ನಲ್ಲಿ ಸಂಪರ್ಕಿಸಬಹುದಾಗಿದೆ. (ಸಂಪರ್ಕಿಸಿ: 7760990224).

ಸಹಿ/- ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿಗಳು
(ಟೆಂಡರ್ ಕರೆಯುವ ಪ್ರಾಧಿಕಾರಿ)
ವಾಸಾಸಂಇ/ವಾಪ್ರ/ಜಿಎ/811/2026-27

ಸಂಪಾದಕೀಯ EDITORIAL

ಶಾಲೆಗಳಿಗೆ ಕಾಯಕಲ್ಪ

ಸುರಕ್ಷತೆ ಕೇವಲ ಘೋಷಣೆಯಾಗದಿರಲಿ

ಮುರಿದು ಬಿದ್ದ ಗೋಡೆಗಳು, ಶಿಥಿಲಗೊಂಡ ಚಾವಣಿ, ಮಳೆ ಬಂದರೆ ತರಗತಿಯ ಒಳಗೆ ಛತ್ರಿ ಹಿಡಿಯಬೇಕಾದ ದುಸ್ಥಿತಿ- ಇವು ರಾಜ್ಯದ ಬಹುತೇಕ ಸರಕಾರಿ ಶಾಲೆಗಳು ದಶಕಗಳಿಂದ ಎದುರಿಸುತ್ತಿರುವ ಕಟು ವಾಸ್ತವಗಳು. ಖಾಸಗಿ ಶಾಲೆಗಳ ವೈಭವದ ಮುಂದೆ ಶ್ರೀಸಾಮಾನ್ಯರ ಮಕ್ಕಳು ಕಲಿಯುವ ಸರಕಾರಿ ಶಾಲೆಗಳು ಅನಾಥ ಪ್ರಜ್ಞೆಯಿಂದ ಮೂಲೆಗುಂಪಾಗುತ್ತಿದ್ದವು. ಆದರೆ, ಈಗ ರಾಜ್ಯ ಸರಕಾರ ಹಮ್ಮಿಕೊಂಡಿರುವ 'ಸುರಕ್ಷಿತ ಕಲಿಕೆ-ಸುಭದ್ರ ಭವಿಷ್ಯ' ಯೋಜನೆ ಹಾಗೂ ಶಾಲಾ ಕಟ್ಟಡಗಳ ನವೀಕರಣದ ನಿರ್ಧಾರವು ತಡವಾಗಿಯಾದರೂ ಸರಕಾರವು ಎಚ್ಚೆತ್ತುಕೊಂಡಿರುವುದರ ಒಂದು ಆಶಾದಾಯಕ ಹೆಜ್ಜೆಯಾಗಿದೆ.

ರಾಜ್ಯದಲ್ಲಿ 48,000ಕ್ಕೂ ಹೆಚ್ಚು ಸರಕಾರಿ ಶಾಲೆಗಳಿದ್ದು, ಈ ಪೈಕಿ 3,300ಕ್ಕೂ ಹೆಚ್ಚು ಶಾಲೆಗಳು ನೂರು ವರ್ಷ ಪೂರೈಸಿವೆ ಎನ್ನುವುದು ಕನ್ನಡಿಗರ ಹೆಮ್ಮೆ. ಆದರೆ, ಈ ಪಾರಂಪರಿಕ ಕಟ್ಟಡಗಳು ಇಂದಿನ ಆಧುನಿಕ ತಂತ್ರಜ್ಞಾನಕ್ಕೆ ತಕ್ಕಂತೆ ಸುರಕ್ಷಿತವಾಗಿವೆಯೇ ಎಂಬ ಪ್ರಶ್ನೆಗೆ ಮಾತ್ರ ನಮ್ಮಲ್ಲಿ ಉತ್ತರವಿಲ್ಲ. ಸಣ್ಣ ಬಣ್ಣ ಬಳಿದು ಹಳೆಯ ಕಟ್ಟಡಗಳನ್ನು ಮುಚ್ಚಿಡುವ ಬದಲು ಅವುಗಳ ಸ್ಥಿರತೆ ಪರೀಕ್ಷಿಸುತ್ತಿರುವುದು ಶ್ಲಾಘನೀಯ. 'ಭಾರತದ ರಾಷ್ಟ್ರೀಯ ಕಟ್ಟಡ ಸಂಹಿತೆ-2016'ರ ಮಾನದಂಡಗಳಡಿ ಶಾಲಾ ಕಟ್ಟಡಗಳನ್ನು ಮರುರೂಪಿಸಲು ಹೊರಟಿರುವುದು ಸ್ವಾಗತಾರ್ಹ. ತರಗತಿ ಕೊಠಡಿಗಳ ಎತ್ತರ, ನಿರ್ಗಮನ ದ್ವಾರಗಳ ವಿಸ್ತೀರ್ಣದ ಜತೆಗೆ ಭೂಕಂಪ ಹಾಗೂ ಅಗ್ನಿ ನಿರೋಧಕ ತಂತ್ರಜ್ಞಾನ ಅಳವಡಿಕೆಗೆ ಮುಂದಾಗಿರುವುದು ಮಕ್ಕಳ ಜೀವಕ್ಕೆ ಸರಕಾರ ನೀಡುತ್ತಿರುವ ಭರವಸೆಯಾಗಿದೆ.

ಈ ಬದಲಾವಣೆಯ ಹಿಂದೆ ಮಾನ್ಯ ಹೈಕೋರ್ಟ್ 2025ರಲ್ಲಿ ನೀಡಿದ ಐತಿಹಾಸಿಕ ತೀರ್ಪಿನ ಪಾತ್ರ ದೊಡ್ಡದಿದೆ. ಖಾಸಗಿ ಮತ್ತು ಅನುದಾನರಹಿತ ಶಾಲೆಗಳಿಗೆ ವಿಧಿಸುವ ಕಠಿಣ ಅಗ್ನಿ ಸುರಕ್ಷತಾ ನಿಯಮಗಳು ಸರಕಾರಿ ಶಾಲೆಗಳಿಗೂ ಅನ್ವಯವಾಗಬೇಕು ಎಂದು ಕೋರ್ಟ್ ಹೇಳುವ ಮೂಲಕ ಶಿಕ್ಷಣ ಇಲಾಖೆಯ ಕಣ್ಣು ತೆರೆಸಿತು. ಖಾಸಗಿ ಶಾಲೆಗಳ ಮೇಲೆ ನಿಯಮಗಳ ಚಾಟಿ ಬೀಸುವ ಶಿಕ್ಷಣ ಇಲಾಖೆ, ತನ್ನದೇ ಒಡೆತನದ ಶಾಲೆಗಳಲ್ಲಿ ಮಕ್ಕಳ ಸುರಕ್ಷತೆಯನ್ನು ಗಾಳಿಗೆ ತೂರುವಂತಿಲ್ಲ ಎಂಬ ನ್ಯಾಯಾಲಯದ ನಿಲುವು ತಾರ್ಕಿಕ ಅಂತ್ಯ ಕಂಡಿದೆ.

ಸರಕಾರ 2026-27ರ ಬಜೆಟ್‌ನಲ್ಲಿ ಕೊಠಡಿಗಳ ನಿರ್ಮಾಣಕ್ಕೆ 565 ಕೋಟಿ ರೂ. ಹಾಗೂ ಶೌಚಾಲಯಗಳಿಗೆ 75 ಕೋಟಿ ರೂ. ಮೀಸಲಿಟ್ಟಿರುವುದು ಒಳ್ಳೆಯ ಬೆಳವಣಿಗೆ. ಆದರೆ, ಕೇವಲ ಬಜೆಟ್ ಘೋಷಣೆಗಳಿಂದ ಶಾಲೆಗಳು ಸುಧಾರಿಸುವುದಿಲ್ಲ. ಈ ಹಿಂದೆ ಬಿಡುಗಡೆಯಾದ ಅನುದಾನಗಳು ಎಷ್ಟರಮಟ್ಟಿಗೆ ಬಳಕೆಯಾಗಿವೆ, ಅದರಲ್ಲಿ ನಡೆದಿರುವ ಭ್ರಷ್ಟಾಚಾರ ಎಷ್ಟು ಎನ್ನುವುದು ಯಾರಿಗೂ ತಿಳಿಯದ ವಿಷಯವಲ್ಲ. ಈ ಬಾರಿ ಸಿಎಸ್‌ಆರ್ ನಿಧಿಯನ್ನೂ ಬಳಸಿಕೊಳ್ಳಲಾಗುತ್ತಿರುವುದರಿಂದ, ಪ್ರತಿಯೊಂದು ಪೈಸೆ ಕೂಡ ಮಕ್ಕಳ ಸುರಕ್ಷತೆಗೆ ಪ್ರಾಮಾಣಿಕವಾಗಿ ಬಳಕೆಯಾಗಬೇಕಿದೆ.

ಶಿಕ್ಷಣ ಇಲಾಖೆಯ ಆಯುಕ್ತರು ಹೇಳುವಂತೆ ನಿಯಮಗಳು ಕೇವಲ ಕಾಗದದ ಮೇಲೆ ಜಾರಿಯಾಗಬಾರದು. ಪ್ರತಿ ಮೂರು ತಿಂಗಳಿಗೊಮ್ಮೆ ಶಾಲೆಗಳಲ್ಲಿ 'ಮಾಕ್ ಡ್ರಿಲ್' ನಡೆಸುವ ಯೋಜನೆ ನಿರಂತರವಾಗಿ ನಡೆಯಬೇಕು. ಸರಕಾರಿ ಶಾಲೆ ಬಡವರ ಬಡ, ಮಧ್ಯಮ ವರ್ಗದ ಮಕ್ಕಳ ಪ್ರಾಣವೂ ಶ್ರೀಮಂತರ ಮಕ್ಕಳ ಪ್ರಾಣದಷ್ಟೇ ಅಮೂಲ್ಯವಾದದ್ದು. 'ಸುರಕ್ಷಿತ ಕಲಿಕೆ' ಎನ್ನುವುದು ಕೇವಲ ಆಕರ್ಷಕ ಧ್ಯೇಯವಾಕ್ಯವಾಗಿ ಉಳಿಯದೆ, ರಾಜ್ಯದ ಪ್ರತಿಯೊಂದು ಮಕ್ಕಳಿಗೂ ಸಿಗುವ ಸಾಂವಿಧಾನಿಕ ಹಕ್ಕಾಗಿ ಹಂತ-ಹಂತವಾಗಿ ಎನ್ನುವ ನೆಪದಲ್ಲಿ ಯೋಜನೆ ಕಾಲಹರಣವಾಗದೆ, ಸಮರೋಪಾದಿಯಲ್ಲಿ ಜಾರಿಯಾಗಲಿ.

ಮಧುರಾನುಭೂತಿ

ಮೂಲ ಹೆಸರಲ್ಲಿದೆ ಅಸ್ಮಿತೆಯ ಆನಂದ

ದೇಶ ವಿಭಜನೆಯಾಗಿ ಹಲವು ದಶಕಗಳೇ ಕಳೆದಿದ್ದರೂ ಪಾಕಿಸ್ತಾನದ ಪಾಲಾದ ಹಳೆಯ ಲಾಹೋರ್ ಇನ್ನೂ ಅನೇಕ ಜನರ ಮನಸ್ಸಿನಲ್ಲಿ ಉಳಿದಿದೆ. ಕೃಷ್ಣನಗರ, ಲಕ್ಷ್ಮೀಚೌಕ್, ರಾಮ್ ಗಲಿ ಎಂಬಿತ್ಯಾದಿ ಅಲ್ಲಿನ ಹೆಸರುಗಳನ್ನು ವಿಭಜನೆಯ ನಂತರ ಬದಲಾಯಿಸಲಾಯಿತಾದರೂ ಅವು ಇಂದಿಗೂ ಅನೇಕ ಮನಸ್ಸುಗಳಿಂದ ಅಳಿಸಿಹೋಗಿಲ್ಲ, ಏಕೆಂದರೆ ಅವು ಅಲ್ಲಿನ ನಾಗರಿಕತೆಯ ಕುರುಹುಗಳಾಗಿವೆ. ಬಹುಶಃ ಇದೇ ಕಾರಣಕ್ಕೆ ಪಾಕಿಸ್ತಾನದಲ್ಲಿ ಲಾಹೋರ್‌ನ



ಬೀದಿಗಳ ವಿಭಜನೆಯ ಪೂರ್ವದ ಹೆಸರುಗಳನ್ನು ಪುನರುಜ್ಜೀವನಗೊಳಿಸುವ ಪ್ರಯತ್ನಗಳು ಇಂದಿಗೂ ನಡೆಯುತ್ತಿವೆ.

ಸುಮಾರು ಎಂಟು ದಶಕಗಳ ನಂತರ, ಲಾಹೋರ್ ಈಗ ಮತ್ತೆ ಹಿಂತಿರುಗಿ ನೋಡಬೇಕಾಗಿದೆ. ಏಕೆಂದರೆ ಯಾವುದೇ ಹಳೆಯ ನಗರದ ಹೆಸರು ಕೇವಲ ಹೆಸರಲ್ಲ, ಅಲ್ಲಿನ ಚೌಕಗಳು, ಬೀದಿಗಳೆಲ್ಲ ಭೂಮಿಯಲ್ಲಿ ಹೂತುಹೋದ ಪ್ರಾಚೀನ ನಾಗರಿಕತೆಯಂತೆ ಅಲ್ಲಿನ ಇತಿಹಾಸ ಹೇಳುತ್ತಿರುತ್ತವೆ. ಆಧುನಿಕತೆಯೊಂದಿಗೆ ಎಷ್ಟೇ ಬದಲಾದರೂ ಗತಕಾಲದಲ್ಲಿ ಯಾವುದೋ ವಸ್ತು, ಖಾದ್ಯ, ಕಲೆ, ಸ್ಮಾರಕ ಇತ್ಯಾದಿ ವಿಶಿಷ್ಟತೆಯಿಂದ ಅದರ ಪ್ರಖ್ಯಾತಿಗೆ ಕಾರಣವಾಗಿದ್ದ ಬೀದಿಗಳು ಆ ಸೊಗಡನ್ನು ಉಳಿಸಿಕೊಂಡು ಬಂದಿರುತ್ತವೆ. ಮೊಘಲರು, ಬ್ರಿಟಿಷರು, ಪೋರ್ಚುಗೀಸರು ಭಾರತದ ಅನೇಕ ನಗರಗಳ ಹೆಸರು ಬದಲಾಯಿಸಿದ್ದರೂ ಇತ್ತೀಚೆಗೆ ಮತ್ತೆ ಬದಲಾವಣೆ ಮಾಡಿ ಹಳೆಯ ಹೆಸರುಗಳಲ್ಲೇ ಗುರುತಿಸುವಿಕೆಗೆ ಒಲವು ಹೆಚ್ಚುತ್ತಿದೆ.

ಯಾವುದೇ ವ್ಯಕ್ತಿ ಯಾವಾಗಲೂ ಹಳೆಯ ಸಿಹಿ ನೆನಪುಗಳಲ್ಲಿ ಕಳೆದುಹೋಗುವಿಕೆಯನ್ನು 'ನಾಸ್ಟಾಲ್ಜಿಯಾ' (Nostalgia) ಎಂದು ಕರೆಯಲಾಗುತ್ತದೆ. ಇದು ಮಾನವನ ದೌರ್ಬಲ್ಯವೆಂದು ಪರಿಗಣಿಸಲಾಗುತ್ತದೆ. ಆದರೆ, ಹಳೆಯ ನಗರಗಳ ಮೂಲ ಹೆಸರುಗಳನ್ನು ನೆನಪಿಸಿಕೊಳ್ಳುವ ಸಂತೋಷವನ್ನು ನಾಸ್ಟಾಲ್ಜಿಯಾ ಎನ್ನಲಾಗದು. ಅದು ನಮ್ಮ ಬೇರುಗಳನ್ನು ಗುರುತಿಸುವ ಮೂಲಕ ಹೊಂದುವ ಆನಂದವಾಗಿದೆ. ಭಾರತದಲ್ಲಿ ಇತ್ತೀಚಿನ ದಶಕಗಳಲ್ಲಿ ಬಾಂಬೆ- ಮುಂಬಯಿಯಾಗಿದೆ, ಅಲಹಾಬಾದ್ ಪ್ರಯಾಗ್‌ರಾಜ್ ಆಗಿದೆ, ಬನಾರಸ್- ವಾರಾಣಸಿ, ಮದ್ರಾಸ್- ಚೆನ್ನೈ, ತ್ರಿವೇಂದ್ರಂ- ತಿರುವನಂತಪುರ, ಕೊಚಿನ್- ಕೊಚ್ಚಿ, ಪಾಂಡಿಚೇರಿ- ಪುದುಚೆರಿ ಆಗಿವೆ. ಇನ್ನೂ ಅನೇಕ ನಗರಗಳಿಗೆ ಅವುಗಳ ಮೂಲ ಹೆಸರನ್ನೇ ಇಡಲಾಗಿದೆ. ಇನ್ನಷ್ಟು ನಗರಗಳಿಗೆ ಅವುಗಳ ಮೂಲ ಹೆಸರಿಡುವ ಪ್ರಯತ್ನಗಳು ಮುಂದುವರಿದಿವೆ. ಪ್ರತಿ ಬದಲಾವಣೆಯಲ್ಲೂ ಸ್ವಾಭಿಮಾನ, ಆತ್ಮಗೌರವದ ಮರುಸ್ಥಾಪನೆಯಾದ ಹೆಮ್ಮೆ ಮನಸ್ಸಿನಲ್ಲಿ ಮೂಡುತ್ತದೆ. ಇಂಥ ಬದಲಾವಣೆ ಭಾರತದಲ್ಲಷ್ಟೇ ಅಲ್ಲ, ಪ್ರಪಂಚದಾದ್ಯಂತ ಅನೇಕ ದೇಶಗಳಲ್ಲಿ ಸಂಭವಿಸಿದೆ. ಸೋವಿಯತ್ ಒಕ್ಕೂಟದ ಪತನದ ನಂತರ ಬೇರ್ಪಟ್ಟ ಅನೇಕ ದೇಶಗಳು ತಮ್ಮ ರಷ್ಯನ್ ಹೆಸರುಗಳನ್ನು ತ್ಯಜಿಸಿ ಹಳೆಯ ಹೆಸರುಗಳನ್ನು ಮತ್ತೆ ಅಳವಡಿಸಿಕೊಂಡವು. ಯಾವುದೇ ಅಸ್ಮಿತೆಯನ್ನು ಅಳಿಸಿಹಾಕಿ, ಹೊಸ ಗುರುತು ಸೃಷ್ಟಿಸಿ, ಉಳಿಸಿಕೊಂಡು ಹೋಗುವುದು ಅಷ್ಟೊಂದು ಸುಲಭವಲ್ಲ ಎಂಬುದನ್ನು ಈ ಮರು ಬದಲಾವಣೆ ಪ್ರಕ್ರಿಯೆಗಳು ನಮಗೆ ನೆನಪಿಸುತ್ತವೆ.

ವಿಕ ತಗೋ ಕನ್ನಡ

'ಹೊಸ ತವರು' - ಎಷ್ಟು ಸರಿ?

'ತೌರೂರು' ಎಂದರೆ ಮದುವೆಯಾದ ಹೆಣ್ಣಿನ ಹುಟ್ಟೂರು; ಸೇರಿದ್ದು ಅತ್ತೆಮನೆ. ಹೀಗಿರುವಾಗ ಹೆಣ್ಣಿಗೆ ತನ್ನ ತವರಿನಲ್ಲಿ ಹೊಸತು, ಹಳತು ಇರುವುದಿಲ್ಲ. ಆದರೆ, ರಾಯಲ್ ಚಾಲೆಂಜರ್ಸ್, ಬೆಂಗಳೂರು ತಂಡವು ಈಗ ರಾಯಪುರದ ಕ್ರೀಡಾಂಗಣವನ್ನು ತಮ್ಮ 'ಹೊಸ ತವರನ್ನಾಗಿ ಮಾಡಿಕೊಂಡಿದೆ' ಎನ್ನುವುದು ಸರಿಯೇ?

'ತಮ್ಮವರ್' ಎನ್ನುವುದು 'ತಮರ್' ಆಗಿ, ಅನಂತರ 'ತವರು (ತವರ್, ತವುರು, ತೌರು)' ಆಗಿದೆ. ಇದಕ್ಕೆ 1) ತನ್ನವರು, ಬಾಂಧವರು 2) ಜನ್ಮಸ್ಥಳ, ಹುಟ್ಟೂರು ಎನ್ನುವ, ಹೆಣ್ಣಿನ ತವರಿಗೆ ಸರಿಹೊಂದುವ ಅರ್ಥಗಳಿವೆ. ಇದಲ್ಲದೆ ಅದಕ್ಕೆ 'ನೆಲೆ, ವಾಸಸ್ಥಾನ, ಆಶ್ರಯಸ್ಥಾನ' ಎನ್ನುವ ಅರ್ಥವೂ ಇದೆ. ಅದನ್ನು 'ಅರಸರ ಆಳ್ವಿಕೆಯಲ್ಲಿ ಮೈಸೂರು ಸಂಗೀತ, ಕಲೆಗಳ ತವರುಮನೆಯಾಗಿತ್ತು' - ಎನ್ನುವಂತೆ ಬಳಸುತ್ತೇವೆ. ಹಾಗಾಗಿ ತಂಡದ ಆಶ್ರಯಸ್ಥಾನ ಬದಲಾದಾಗ ಅದು ಹೊಸ ತವರಾಗುತ್ತದೆ. ಹಳೆಯ ತವರಿನವರಿಗೆ ದುಃಖವೂ ಆಗುತ್ತದೆ.

- ಜಿ.ವಿ. ಅರುಣ

- ಪದ ಸೂಚಿಸಿದವರು: ಮಾರುತಿ ಆ. ಬಳ್ಳಾರಿ

ಬತ್ತಳಿಕೆ



ಭಾರತದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯೇರಿಕೆ ಪರ್ವ ಆರಂಭವಾಗಿದೆ. ಸಹಜವಾಗಿಯೇ ಇದರ ಪರಿಣಾಮವನ್ನು ಜನ ಅನುಭವಿಸುತ್ತಿದ್ದಾರೆ. ದಿನ ಬೆಳಗಾದರೆ ಇಂದು ಬೆಲೆ ಏರಿಕೆ ಎಷ್ಟಾಗಿರಬಹುದು ಎಂಬುದನ್ನು ಚೆಕ್ ಮಾಡಿಕೊಳ್ಳುವ ಪರಿಸ್ಥಿತಿ ಇದೆ. ಹಾಗಾದರೆ, ತೈಲ ಬೆಲೆ ಏರಿಕೆಗೆ ಕಾರಣಗಳೇನು? ತೈಲ ಬೆಲೆಯನ್ನು ಪ್ರಭಾವಿಸುವ ಅಂಶಗಳು ಯಾವುವು? ಆರ್ಥಿಕತೆಗೆ ಇದರ ಪೆಟ್ಟು ಏನು? ಇಲ್ಲಿದೆ ಒಂದು ಪಕ್ಷಿನೋಟ.

ಪೆಟ್ರೋಲ್ ಬಲೆ

ತೈಲ ದರ ಏರುಮುಖ...



● ಬಿ.ಸೋಮಶೇಖರ್

- 'ವಿರಾಟ್ ಕೊಹ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ 100 ಶತಕ ಬಾರಿಸುವುದು ಕಷ್ಟವಾಗಬಹುದು. ಆದರೆ, ಡಾಲರ್ ಎದುರು ರೂಪಾಯಿ ಸುಲಭವಾಗಿ ಸೆಂಚುರಿ ಹೊಡೆಯುತ್ತದೆ.'
- 'ಬೆಳಗ್ಗೆ ಪೆಟ್ರೋಲ್ ಬೆಲೆಯೇರಿಕೆ ಸುದ್ದಿ ನೋಡಿದೆ. ನಿನ್ನೆಯೇ ಬೈಕ್‌ಗೆ ಪೆಟ್ರೋಲ್ ಹಾಕಿಸಿ ದುಡ್ಡು ಉಳಿಸಿದೆ ಎಂದು ಖುಷಿಯಾಯಿತು. ಆದರೆ, ಮುಂದಿನ ಬಾರಿ ಪೆಟ್ರೋಲ್ ಹಾಕಿಸಿಕೊಳ್ಳಲು ಹೋಗುವಷ್ಟರಲ್ಲಿ ಎಷ್ಟು ಏರಿಕೆಯಾಗಿರುತ್ತೋ ಅನ್ನೋ ಭಯ ಕಾಡಲು ಶುರುವಾಯಿತು.'

ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯೇರಿಕೆ, ರೂಪಾಯಿ ಮೌಲ್ಯದ ಕುಸಿತವು ಭಾರತದ ಆರ್ಥಿಕತೆ ಮೇಲೆ ಪರಿಣಾಮ ಉಂಟುಮಾಡುತ್ತಿರುವ ಹೊತ್ತಿನಲ್ಲೇ ಜಾಲತಾಣಗಳಲ್ಲಿ ಇಂತಹ ಜೋಕ್‌ಗಳು ಹತಾಶೆ, ಬೇಸರ, ಸಿಟ್ಟು, ಆಕ್ರೋಶದ ಪ್ರತಿರೂಪದಂತೆ ಕಾಣುತ್ತಿವೆ. ಮೇಲ್ನೋಟಕ್ಕೆ ಟ್ರೋಲ್ ಎಂದು ಅನಿಸಿದರೂ ಬೆಲೆಯೇರಿಕೆಯ ಪರಿಣಾಮ, ಭವಿಷ್ಯದ ಬಗ್ಗೆ ಆತಂಕ, ಜಾಗತಿಕ ಸಂಘರ್ಷಗಳ ಮುಂದುವರಿಕೆಯು ಭೀತಿ ಉಂಟು ಮಾಡಿರುವುದಂತೂ ನಿಜ. ಆದರೆ, ಇಷ್ಟೆಲ್ಲ ಪರಿಣಾಮಕ್ಕೆ ಒಂದು ಯುದ್ಧ, ಒಂದು ಅಂಶ, ಒಂದು ವೈಫಲ್ಯ, ಒಂದು ತಪ್ಪು ಹೆಜ್ಜೆ ಕಾರಣವಲ್ಲ ಎಂಬ ವಾಸ್ತವವನ್ನೂ ಅರಿಯಬೇಕಿದೆ. ಬೆಲೆಯೇರಿಕೆಯ ಬಲೆಯೊಳಗೆ ಹತ್ತಾರು ಸಂಗತಿಗಳು ಅಡಗಿವೆ ಎಂಬುದನ್ನು ತಿಳಿಯಬೇಕಿದೆ.

ಭಾರತದ ಮೇಲಷ್ಟೇ ಪರಿಣಾಮ ಇಲ್ಲ

ಇರಾನ್-ಅಮೆರಿಕ ಸಂಘರ್ಷದಿಂದ ಭಾರತದಲ್ಲಿ ಮಾತ್ರವಲ್ಲ, ಜಗತ್ತಿನ 60ಕ್ಕೂ ಅಧಿಕ ದೇಶಗಳಲ್ಲಿ ತೈಲ ಬೆಲೆ ಏರಿಕೆಯಾಗಿದೆ. ಕಳೆದ 2 ವಾರಗಳಲ್ಲಿ ಪೆಟ್ರೋಲ್ ಬೆಲೆಯಲ್ಲಿ ಪ್ರತಿ ಲೀಟರ್‌ಗೆ 7.35 ರೂ. ಹಾಗೂ ಡೀಸೆಲ್ ಬೆಲೆಯಲ್ಲಿ 7.53 ರೂ. ಏರಿಕೆಯಾಗಿದೆ. ಭಾರತದಲ್ಲಿ ಇದುವರೆಗೆ ಇಂಧನ ಬೆಲೆಯಲ್ಲಿ ಶೇ.7.7ರಷ್ಟು ಏರಿಕೆಯಾಗಿದೆ. ಆದರೆ, ಜಪಾನ್‌ನಲ್ಲಿ ಶೇ.9.7ರಷ್ಟು ಜಾಸ್ತಿಯಾಗಿದೆ. ಸಂಘರ್ಷ ಆರಂಭವಾದ ಬಳಿಕ ಮ್ಯಾನ್ಮಾರ್‌ನಲ್ಲಿ ಶೇ.90ರಷ್ಟು ಬೆಲೆ ಜಾಸ್ತಿಯಾಗಿದೆ. ಪಾಕಿಸ್ತಾನದಲ್ಲಿ ಶೇ.55ರಷ್ಟು ಏರಿಕೆಯಾಗಿದೆ. ಜಾಗತಿಕವಾಗಿ ಅಂದರೆ, ಯುದ್ಧದಿಂದಾಗಿ ಸುಮಾರು 60 ದೇಶಗಳಲ್ಲಿ ಸರಾಸರಿ ಶೇ.22.4ರಷ್ಟು ಹೆಚ್ಚಳವಾಗಿದೆ. ಐರೋಪ್ಯ ಒಕ್ಕೂಟ, ಅಮೆರಿಕ, ಯುಎಇ, ಮಲೇಷ್ಯಾದಲ್ಲೂ ಬೆಲೆ ಜಾಸ್ತಿಯಾಗಿದೆ.

ವಿಕ ಫೋಕಸ್

ಆರ್ಥಿಕತೆಗೆ ತೈಲ ಬೆಲೆಯ ಪೆಟ್ಟು

2.2 ಲಕ್ಷ ಕೋಟಿ ರೂ. ಪ್ರಸಕ್ತ ವರ್ಷದಲ್ಲಿಯೇ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಭಾರತದ ಮಾರುಕಟ್ಟೆಯಿಂದ ಹಿಂಪಡೆದ ಹಣ

6% ರೂಪಾಯಿ ಮೌಲ್ಯ ಕುಸಿತದ ಪ್ರಮಾಣ

8.3% ಕಳೆದ ಮಾರ್ಚ್‌ನಲ್ಲಿ ಶೇ.3.88ರಷ್ಟಿದ್ದ ಸಗಟು ಹಣದುಬ್ಬರ ಏಪ್ರಿಲ್‌ನಲ್ಲಿ ಕಂಡ ಏರಿಕೆ

66.9 ಲಕ್ಷ ಕೋಟಿ ರೂ. ಫೆಬ್ರವರಿಯಲ್ಲಿ 69.9 ಲಕ್ಷ ಕೋಟಿ ರೂ. ಇದ್ದ ವಿದೇಶಿ ಮೀಸಲು ನಿಧಿಯ ಈಗಿನ ಮೊತ್ತ.

1% ಭಾರತದ ಜಿಡಿಪಿಯು 2026-27ನೇ ಸಾಲಿನಲ್ಲಿ ಶೇ.1ರಷ್ಟು ಅಂದರೆ, ಶೇ.6.5ಕ್ಕೆ ಕುಸಿಯಲಿದೆ ಎಂಬುದು ಆರ್‌ಬಿಐ ಅಂದಾಜು

ಜಾಗತಿಕ ಮಾರುಕಟ್ಟೆ ಪ್ರಕ್ಷುಬ್ಧ

ಫೆ.28ರಂದು ಅಮೆರಿಕ-ಇರಾನ್ ಸಂಘರ್ಷ ಆರಂಭವಾಗುತ್ತಲೇ ಜಾಗತಿಕ ಕಚ್ಚಾತೈಲದ ಮಾರುಕಟ್ಟೆಯಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿದೆ. ಹರ್ಮುಜ್ ಜಲಸಂಧಿ ಸ್ಥಗಿತಗೊಂಡಿದ್ದಂತೂ ಮಾರುಕಟ್ಟೆಗೆ ನುಂಗಲಾರದ ತುತ್ತಾಗಿದೆ. ಕಳೆದ ಫೆಬ್ರವರಿ ಬಳಿಕ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆಯಲ್ಲಿ ಶೇ.50ರಷ್ಟು ಜಾಸ್ತಿಯಾಗಿದೆ. ಇದರಿಂದ ಭಾರತದ ತೈಲ ಮಾರುಕಟ್ಟೆ ಕಂಪನಿಗಳು ಪರಿತಪಿಸುತ್ತಿವೆ. ಫೆಬ್ರವರಿ 28ರಿಂದ ಇದುವರೆಗೆ ತೈಲ ಮಾರುಕಟ್ಟೆ ಕಂಪನಿಗಳಿಗೆ ಪ್ರತಿ ದಿನ 1 ಸಾವಿರ ಕೋಟಿ ರೂ. ನಷ್ಟವಾಗುತ್ತಿದೆ. ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಬೆಲೆ 120 ಡಾಲರ್ ತಲುಪಿದಾಗ, ನಿತ್ಯ 1,600 ಕೋಟಿ ರೂ. ನಷ್ಟವಾಗಿದೆ ಎಂದು ಸರಕಾರ ತಿಳಿಸಿದೆ. ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ವಿಶೇಷ ಹೆಚ್ಚುವರಿ ಅಬಕಾರಿ ಸುಂಕದಲ್ಲಿ ಸರಕಾರ ತಲಾ 10 ರೂ. ಇಳಿಸಿತು. ಸರಕಾರವು ವರ್ಷಕ್ಕೆ 1 ಲಕ್ಷ ಕೋಟಿ ರೂ. ಹೊರೆಯನ್ನು ಹೊತ್ತುಕೊಂಡಿತು. ಆದರೆ, ಇರಾನ್-ಅಮೆರಿಕ ಮಧ್ಯೆ ಸಂಧಾನ ಆಗುತ್ತಿಲ್ಲ, ಮಾರುಕಟ್ಟೆ ತಹಬದಿಗೆ ಬರುತ್ತಿಲ್ಲ. 2022ರ ರಷ್ಯಾ-ಉಕ್ರೇನ್ ಸಂಘರ್ಷದ ವೇಳೆಯೂ ಕಚ್ಚಾತೈಲದ ಬೆಲೆ 120 ಡಾಲರ್ ತಲುಪಿತ್ತು.

ಯುದ್ಧದ ಕಾಲವಿದು, ಶಸ್ತ್ರಾಭ್ಯಾಸ ಅನಿವಾರ್ಯ

ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಇಳಿದಾಗ ದೇಶದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಇಳಿದಿಲ್ಲ ಎಂಬ ನಮ್ಮ ಲಾಜಿಕ್ ಸರಿಯಾಗಿಯೇ ಇದೆ. ಆದರೆ, ವಿಶ್ವದ ತೈಲ ಮಾರುಕಟ್ಟೆಗೆ ಈಗ ಸುನಾಮಿ ಅಪ್ಪಳಿಸಿದ್ದು, ಬೆಲೆಯೇರಿಕೆಯ ಹೊಡೆತದಿಂದ ಯಾವ ದೇಶವೂ ತಪ್ಪಿಸಿಕೊಳ್ಳುವ ಪರಿಸ್ಥಿತಿಯಲ್ಲಿ ಇಲ್ಲ. ಹಾಗಾಗಿ, ನಾವು ಸರಕಾರಗಳನ್ನು, ವ್ಯವಸ್ಥೆಯನ್ನು ಶಪಿಸುತ್ತಲೇ ಕಷ್ಟದ ದಿನಗಳಿಗೆ ಸಜ್ಜಾಗಬೇಕಿದೆ. ಮಿತವ್ಯಯ, ಅವಶ್ಯಕತೆ ಇದ್ದರೆ ಮಾತ್ರ ಇಂಧನ ಬಳಕೆ ಮಾಡುವ ಮನಸ್ಥಿತಿಗೆ ಒಗ್ಗಿಕೊಳ್ಳಬೇಕಿದೆ. ಇದರ ಮಧ್ಯೆಯೇ, ಸರಕಾರಗಳು ಕೂಡ ಜನ ಬೀದಿಗಿಳಿಯುವ ಮೊದಲು ಬೆಲೆಯೇರಿಕೆಗೆ ಕಡಿವಾಣ ಹಾಕಲು ಬೇರೆ ಮಾರ್ಗಗಳನ್ನು ಹುಡುಕಿದರೆ ಒಳಿತು.

10 ಡಾಲರ್ ಏರಿಕೆಯ ಪರಿಣಾಮ ಭೀಕರ

ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆಯಲ್ಲಿ 10 ಡಾಲರ್ (960 ರೂ.) ಏರಿಕೆಯಾದರೂ ಸಾಕು, ಭಾರತದ ಆರ್ಥಿಕತೆ ಮೇಲೆ ಭಾರಿ ಪರಿಣಾಮ ಬೀರುತ್ತದೆ. ಕಚ್ಚಾತೈಲದ ಬೆಲೆಯು ಬ್ಯಾರೆಲ್‌ಗೆ 10 ಡಾಲರ್ ಏರಿಕೆಯಾದರೆ, ಭಾರತವು ಪ್ರತಿ ವರ್ಷ ಆಮದಿಗಾಗಿ ಹೆಚ್ಚುವರಿಯಾಗಿ 1.7 ಲಕ್ಷ ಕೋಟಿ ರೂ. ವರೆಗೆ ವ್ಯಯಿಸಬೇಕಾಗುತ್ತದೆ. ಹಣದುಬ್ಬರದಲ್ಲಿ 35-60 ಬೇಸಿಸ್ ಪಾಯಿಂಟ್ಸ್ ಜಾಸ್ತಿಯಾಗುತ್ತವೆ. ಇಂತಹದ್ದರಲ್ಲಿ, ಕಳೆದ ಫೆಬ್ರವರಿಯಲ್ಲಿ ಪ್ರತಿ ಬ್ಯಾರೆಲ್‌ಗೆ 72 ಡಾಲರ್ ಇದ್ದ ಕಚ್ಚಾತೈಲದ ಬೆಲೆಯು ಈಗ 97.82 ಡಾಲರ್ ಇದೆ. ಇದು ಮಾರ್ಚ್‌ನಲ್ಲಿ 120 ಡಾಲರ್ ತಲುಪಿತ್ತು ಎಂಬುದು ಗಮನಾರ್ಹ.

ಇನ್ನೂ 20 ರೂಪಾಯಿ ಏರಿಕೆ?

ಸರಕಾರಿ ಸ್ವಾಮ್ಯದ ಇಂಡಿಯನ್ ಆಯಿಲ್ ಕಾರ್ಪೊರೇಷನ್, ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಹಾಗೂ ಹಿಂದುಸ್ತಾನ್ ಪೆಟ್ರೋಲ್ ಕಾರ್ಪೊರೇಷನ್ ಕಂಪನಿಗಳು ಭಾರಿ ನಷ್ಟ ಅನುಭವಿಸುತ್ತಿವೆ. ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆಯೇರಿಕೆ ಹಿನ್ನೆಲೆಯಲ್ಲಿ ಕಂಪನಿಗಳು ನಿತ್ಯ ನಷ್ಟ ಭರಿಸುವ ಅನಿವಾರ್ಯಕ್ಕೆ ಸಿಲುಕಿವೆ. ಫೆಬ್ರವರಿಯಿಂದಲೂ ತೈಲ ಮಾರುಕಟ್ಟೆ ಕಂಪನಿಗಳು 1.2 ಲಕ್ಷ ಕೋಟಿ ರೂ. ನಷ್ಟ ಅನುಭವಿಸಿವೆ. ಹರ್ಮುಜ್ ಜಲಸಂಧಿ ಸ್ಥಗಿತಗೊಂಡಿರುವುದು ಸೇರಿ ಹಲವು ಕಾರಣಗಳಿಂದ ಮುಂದಿನ ದಿನಗಳಲ್ಲೂ ತೈಲ ಬೆಲೆಯೇರಿಕೆ ಅನಿವಾರ್ಯವಾಗಿದೆ ಎಂದೇ ವಿಶ್ಲೇಷಿಸಲಾಗುತ್ತಿದೆ. ನಷ್ಟದಿಂದ ಹೊರಬರಲು ಕಂಪನಿಗಳು ಪ್ರತಿ ಲೀಟರ್‌ಗೆ ಇನ್ನೂ 20 ರೂ. ಏರಿಕೆ ಮಾಡುವ ಅನಿವಾರ್ಯತೆಗೆ ಸಿಲುಕಿವೆ. ಹಾಗಾಗಿ, ದೇಶದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆಯಲ್ಲಿ ತಲಾ 20 ರೂ. ಏರಿಕೆಯಾದರೂ ಅಚ್ಚರಿ ಇಲ್ಲ.

ಇಂಧನ ಬೆಲೆ ಏರಿಕೆಗೆ ಪಂಚ ಕಾರಣಗಳು

- ಭಾರತಕ್ಕೆ ಬೇಕಾಗಿರುವ ಒಟ್ಟು ತೈಲದಲ್ಲಿ ಶೇ.88ರಷ್ಟು ಕಚ್ಚಾತೈಲವನ್ನು ಆಮದು ಮಾಡಿಕೊಳ್ಳುತ್ತದೆ. ಇದಕ್ಕೆ ಭಾರತವು ಡಾಲರ್‌ನಲ್ಲಿಯೇ ವಹಿವಾಟು ನಡೆಸಬೇಕು. ಡಾಲರ್ ಎದುರು ರೂಪಾಯಿ ಮೌಲ್ಯವು ಈಗ 97 ರೂ.ಗೆ ಕುಸಿದಿದೆ. ಇದರಿಂದ ಭಾರತವು ಹೆಚ್ಚಿನ ಹಣ ವ್ಯಯಿಸಿ ಆಮದು ಮಾಡಿಕೊಳ್ಳಬೇಕಿದೆ.
- ಅಮೆರಿಕ-ಇರಾನ್ ಸಂಘರ್ಷದಿಂದಾಗಿ ಹರ್ಮುಜ್ ಜಲಸಂಧಿಯು ಮುಚ್ಚಿದೆ. ಭಾರತಕ್ಕೆ ಆಮದಾಗುವ ಒಟ್ಟು ಕಚ್ಚಾತೈಲ, ನೈಸರ್ಗಿಕ ಅನಿಲದಲ್ಲಿ ಶೇ.50ರಷ್ಟು ಇಂಧನವು ಜಲಸಂಧಿಯಿಂದ ಬರಬೇಕು. ಇದು ಮುಚ್ಚಿರುವುದು ಭಾರತದಲ್ಲಿ ಇಂಧನ ಮೀಸಲು ಪ್ರಮಾಣ ಕುಸಿಯುವ ಜತೆಗೆ ಬೆಲೆಯೇರಿಕೆಗೆ ಕಾರಣವಾಗಿದೆ.
- ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆಯು ಏರಿಕೆಯಾಗಿರುವುದರಿಂದ ಭಾರತದ ಮೂರು ಸರಕಾರಿ ಸ್ವಾಮ್ಯದ ತೈಲ ಕಂಪನಿಗಳಿಗೆ ಲೀಟರ್ ಪೆಟ್ರೋಲ್‌ಗೆ 24 ರೂ. ಹಾಗೂ ಲೀಟರ್ ಡೀಸೆಲ್‌ಗೆ 30 ರೂ. ನಷ್ಟವಾಗುತ್ತಿದೆ. ಈ ನಷ್ಟ ಭರಿಸಲು ಕಂಪನಿಗಳಿಗೆ ತೈಲ ಬೆಲೆಯೇರಿಕೆಯು ಅನಿವಾರ್ಯವಾದಂತಾಗಿದೆ.
- ಜಾಗತಿಕ ಕಚ್ಚಾತೈಲದ ಒಟ್ಟು ಉತ್ಪಾದನೆಯಲ್ಲಿ ಮಧ್ಯಪ್ರಾಚ್ಯ ದೇಶಗಳ ಪಾಲು ಶೇ.31ರಷ್ಟು. ಆದರೆ, ಸಂಘರ್ಷದಿಂದಾಗಿ ಮಧ್ಯಪ್ರಾಚ್ಯ ದೇಶಗಳು, ತೈಲ ರಫ್ತು ಮಾಡುವ ದೇಶಗಳಲ್ಲಿ ಉತ್ಪಾದನೆ ಕೊರತೆಯಾಗಿದೆ.
- ಸಂಘರ್ಷಗಳಿಂದಾಗಿ ಕಚ್ಚಾತೈಲದ ಸಾಗಣೆಯಲ್ಲಿ 10-15 ದಿನ ವಿಳಂಬವಾಗುತ್ತಿದೆ. ಇದರಿಂದ ಸರಕು ಸಾಗಣೆ ವೆಚ್ಚದಲ್ಲಿ ಶೇ.30-50ರಷ್ಟು ಜಾಸ್ತಿಯಾಗಿದೆ. ಇದರ ಪರಿಣಾಮ ಬೆಲೆಯ ಮೇಲೆ ಉಂಟಾಗುತ್ತಿದೆ.

somashekar.b@timesofindia.com

ಖುಲ್ ಜಾ ಸಿಮ್‌ನಿಂದ ತೆರೆದ ಡಿಜಿಟಲ್ ವ್ಯಾಲೆಟ್

ಟೆಕ್ ಪೋಸ್ಟ್ | ಮಧು ವೈ. ಎನ್.

ತಂತ್ರಜ್ಞಾನಲೋಕದಲ್ಲಿಯ ಹಲವು ಆಕಸ್ಮಿಕ ಹುಟ್ಟುಗಳ ಕತೆಗಳಲ್ಲಿ ಡಿಜಿಟಲ್ ಪೇಮೆಂಟ್ ಕತೆ ಕೂಡ ಒಂದು. ಹಾಗೆ ನೋಡಿದರೆ ಇದು ಬಡವರು ಬಡವರಿಗಾಗಿ ಬಡವರಿಗೋಸ್ಕರ ಎಂಬಂತೆ ತಮಗೆ ತಾವೇ ಕಂಡುಕೊಂಡ ತಂತ್ರಜ್ಞಾನ. ಅನಂತರ ಇದು ಎಲ್ಲೆಡೆ ಪಸರಿಸಿತಷ್ಟೇ. ಒಂದರ್ಥದಲ್ಲಿ 'ಜುಗಾಡ್ ಎಂಜಿನಿಯರಿಂಗ್'.

ಈ ಆಫ್ರಿಕಾ ದೇಶಗಳಲ್ಲಿ ನಮ್ಮ ದೇಶದಂತೆಯೇ ಉದ್ಯೋಗ ಅರಸಿಕೊಂಡು ಹಳ್ಳಿಗಳಿಂದ ತರುಣ ತರುಣಿಯರು ನಗರಗಳಿಗೆ ವಲಸೆ ಹೋಗ್ತಿದ್ದರಲ್ಲವಾ, ಹೋದೋರು ದುಡ್ಡು ಉಳಿಸಿ ಊರಲ್ಲಿನ ಹಿರಿಯರಾದ ಅಪ್ಪ ಅಮ್ಮನಿಗೋ, ಹೆಂಡತಿ ಮಕ್ಕಳಿಗೋ ಕಳಿಸಬೇಕಿತ್ತಲ್ಲವಾ, ಈ ಪುಡಿ ಹಣವನ್ನು ಕೊಟ್ಟು ಬರಲು ಅವರು ಫ್ಯಾಕ್ಟರಿಗೆ ರಜೆ ಹಾಕಿ ಬಸ್‌ಚಾರ್ಜ್ ಇಟ್ಕೊಂಡು ತಿರಗಾ ಊರಿಗೆ ಹೋಗಿ ಬರಕ್ಕಾಗ್ತಿತ್ತೇನು? ಸಮಯ ಹಾಳು, ಸಂಬಳ ಹಾಳು, ಉಳಿತಾಯವೂ ಹಾಳು. ಅವರ ಬಳಿ ಬ್ಯಾಂಕ್ ಅಕೌಂಟು ಇರ್ತಿರಲಿಲ್ಲ, ಆನ್‌ಲೈನ್ ಪೇಮೆಂಟ್ ವ್ಯವಸ್ಥೆ ಇರ್ತಿರಲಿಲ್ಲ, ಇಂಟರ್ನೆಟ್ ಅಂತೂ ಇಲ್ಲವೇ ಇಲ್ಲ. ಅವರಿದ್ದ ನಗರಗಳಲ್ಲಿ ಇರ್ತಿತ್ತೇನೋ ಆದರೆ, ಹಳ್ಳಿಗಳಲ್ಲಿ ಇರಬೇಕಲ್ಲ.

ಆದರೆ, ಕೈಯಲ್ಲಿ ಮೊಬೈಲ್ ಇತ್ತು. ಅದರಲ್ಲಿ ಸಿಮ್ ಇತ್ತು. ಅದನ್ನು ಬಳಸಬೇಕೆಂದರೆ ನಮ್ಮಲ್ಲೂ ದಶಕದ ಹಿಂದೆ ಇದ್ದಂತೆ ಕರೆನ್ಸಿ ಕಾರ್ಡು ಖರೀದಿಸಿ ಉಜ್ಜಿ ಪಿನ್ ಕೋಡನ್ನು ಎಂಟರ್ ಮಾಡಿ ರೀಚಾರ್ಜ್ ಮಾಡಿಸಬೇಕಿತ್ತು. ಈ ತರುಣ ಹುಡುಗ ಹುಡುಗಿಯರಿಗೆ ಒಂದು ಉಪಾಯ ಹೊಳೆಯಿತು. ಏನೆಂದರೆ ನಾನಿಲ್ಲಿ ಕರೆನ್ಸಿ ಕಾರ್ಡು ಖರೀದಿಸಿ ಉಜ್ಜಿ ಪಿನ್ ನೋಡ್ತೀನಿ, ಫೋನ್ ಮಾಡಿ ಅದನ್ನು ಊರಲ್ಲಿರೋ ನನ್ನ ಅಮ್ಮನೋ ಹೆಂಡತಿಗೋ ಹೇಳ್ತೀನಿ. ಅವರು ಅದನ್ನು ತಗಂಡೋಗಿ ನಮಗೆ ದಿನಸಿ ಸಾಮಾನು ಕೊಡುವ ಅಂಗಡಿಯವನಿಗೆ ಕೊಡ್ತಾರೆ. ಅಂಗಡಿಯವನು ಒಂದಿಷ್ಟು ಕಮಿಶನ್ ಹಿಡಿದುಕೊಂಡು ಅವರಿಗೆ ಅಷ್ಟು ದುಡ್ಡನ್ನು ಕೈಗಿಡ್ತಾನೆ. ಆ ಪಿನ್ನನ್ನು ಅವನು ಇನ್ಯಾರೋ ಅವನ ಬಳಿ ಫೋನ್ ರೀಚಾರ್ಜ್‌ಗೆಂದು ಬರ್ತಾರಲ್ಲ, ಅವರಿಗೆ ಮಾರ್ತಾನೆ.

ಹೆಂಗಿದೆ ಐಡಿಯಾ? ಈ ಥರ ಉಪಾಯಗಳನ್ನು ಬೆಂಗಳೂರಿನ ಕಾರ್ಮಿಕ ವರ್ಗವೂ ಮಾಡಿದ್ದಿದೆ. 'ಇಲ್ಲಿ ಹಣ ಟ್ರಾನ್ಸ್‌ಫರ್ ಮಾಡಿಕೊಡಲಾಗುತ್ತದೆ' ಎಂಬಂತಹ ಬೋರ್ಡುಗಳನ್ನು ಪೀಣ್ಯ ದಾಸರಹಳ್ಳಿಗಳ ಕಡೆ ನಾನೇ ನೋಡಿದ್ದೇನೆ. ಅಷ್ಟೆಲ್ಲ ಯಾಕೆ, ನಾನೇ ಮಾಡಿಕೊಟ್ಟಿದ್ದೇನೆ. ನನ್ನ ಮನೆ ಕಟ್ಟಲು ಬಂದಿದ್ದ ಮಧ್ಯಪ್ರದೇಶದ ಬಡಗಿಯೋರ್ವ 'ಸರ್, ಕ್ಯಾಶ್ ಕೊಡ್ತೇನೆ. ಒಂದಿಷ್ಟು ಕಮಿಶನ್ ಹಿಡ್ಕೊಂಡು ಊರಲ್ಲಿರೋ ನನ್ನ ಹೆಂಡತಿ ನಂಬರಿಗೆ ಹಣ ವರ್ಗಾವಣೆ ಮಾಡಿಕೊಡಿ' ಎಂದು ಕೇಳಿದ್ದ. ಪಾಪ ಅವರು ಕೆಲಸಕ್ಕೆಂದು ಬೆಂಗಳೂರಿಗೆ ಬಂದರೆ ಐದಾರು ತಿಂಗಳ ನಂತರವಷ್ಟೇ ವಾಪಸ್ ಹೋಗ್ತಿದ್ದರಂತೆ.

ಆಫ್ರಿಕಾ ಕತೆಗೆ ಮರಳೋಣ. ಅಂದಹಾಗೆ ಇದು ಆಫ್ರಿಕಾದಲ್ಲಿನ ಕೀನ್ಯಾ ದೇಶದ ಕತೆ. ಆಫ್ರಿಕಾ ಒಂದು ಸಾಗರ. ಅರ್ಧ ಭೂಮಂಡಲವನ್ನು ಆಕ್ರಮಿಸಿದೆ.

ಈ ಹುಡುಗರ ಐಡಿಯಾ ಏನೋ ಚೆನ್ನಾಗಿತ್ತು, ವರ್ಕಾಗಿತ್ತು ಆದರೆ ಅದರಲ್ಲೊಂದು ಸಮಸ್ಯೆ ಇತ್ತು. ಅದು ಅನಧಿಕೃತ, ಅಪರಾಧ, ಮುಖ್ಯವಾಗಿ ಹೆಚ್ಚು ಕಮಿಶನ್ ನಿಂದಾಗಿ ನಷ್ಟದ ವ್ಯವಹಾರವಾಗಿತ್ತು.

ಅದೇ ಸಮಯ ಅಂದರೆ ಸುಮಾರು 2005ರ ಆಸುಪಾಸಿನಲ್ಲಿ ವೊಡಾಫೋನ್ ಕಂಪನಿಯ ನಿಕ್ ಹ್ಯೂಸ್ ಮತ್ತು ಸೂಸಿ ಲೋನಿ ಎಂಬ ಇಬ್ಬರು ಈ ಐಡಿಯಾ

> ಫೋನ್ ರೀಚಾರ್ಜ್ ಮಾಡಿಕೊಳ್ಳುವ ವ್ಯವಸ್ಥೆಯನ್ನು ಕೀನ್ಯಾ ಜನರು ಕರೆನ್ಸಿ ಚಲಾವಣೆಗೆ ಬಳಸಿಕೊಂಡ ಸ್ಫೂರ್ತಿದಾಯಕ ಕತೆಯಿದು. ನಮ್ಮ ದೇಶದ ಯುಪಿಐಗೂ ಕಿಂಚಿತ್ತು ಪ್ರೇರಣೆ ಇದರಿಂದಲೇ ದೊರಕಿದೆ.

ಗಮನಿಸ್ತಾರೆ. ಆಫ್ರಿಕಾದಲ್ಲಿ ನಮ್ಮ ದೇಶದಲ್ಲಿರುವಂತೆಯೇ ಇನ್ನೊಂದು ಸಮಸ್ಯೆ ಇರುತ್ತದೆ, ಸಣ್ಣ ಮೊತ್ತದ ಸಾಲ ಕೊಡುವುದು, ತೀರಿಸುವುದು. ಆದರೆ, ನಮ್ಮ ದೇಶದಲ್ಲಿ ಎಡವಿದರೆ ಹೋಬಳಿ, ತಾಲೂಕು ಕೇಂದ್ರಗಳು ಸಿಗುತ್ತವೆ. ಆಫ್ರಿಕಾದಲ್ಲಿ ಹಂಗಿಲ್ಲ, ಹೇಳಿದೆನಲ್ಲ, ಅದೊಂದು ಭೂ-ಸಾಗರ. ಈ ಹಳ್ಳಿ ಜನ ತಿಂಗಳತಿಂಗಳ ಸಾಲದ ಕಂತು ಕಟ್ಟಲು ಬಸ್ ಹತ್ತಿಯೋ ಅಥವಾ ನಡಕೊಂಡೋ ಕಿಲೋಮೀಟರುಗಟ್ಟಲೆ ಹೋಗಬೇಕಿರುತ್ತದೆ. ಈ ನಿಕ್ ಮತ್ತು ಸೂಸಿ ಇವರಿಗೆ ಸಹಾಯವಾಗಲೆಂದು ಯುಕೆಯ DFID ಎಂಬ ಸಂಸ್ಥೆಯಿಂದ ಹಣಸಹಾಯ ಪಡೆದು ಮೇಲೆ ತಿಳಿಸಿದ ಸಿಮ್ ಮೂಲಕ ದುಡ್ಡು ವರ್ಗಾಯಿಸುವ ಉಪಾಯವನ್ನು ಬಳಸಿ ಒಂದು ಸಾಫ್ಟ್‌ವೇರ್ (ಆಪ್) ತಯಾರಿಸ್ತಾರೆ. ಜನ ಇನು ನಿಶ್ಚಿಂತೆಯಿಂದ ಮನೆಯಲ್ಲಿ ಕುಳಿತುಕೊಂಡೇ ಕಂತಿನ ಸಾಲವನ್ನು ತೀರಿಸಬಹುದು. ಧೂಳು, ಕಾಡು, ದೂರ, ನಡಿಗೆ ಯಾವ ತಾಪತ್ರಯವೂ ಇಲ್ಲ.

ನದಿ ಇರುವುದೇ ತನ್ನ ದಾರಿ ಕಂಡುಕೊಳ್ಳಲು. ಈ ಹಳ್ಳಿ ಜನ ಏನು ಮಾಡಿದರೆಂದರೆ ಕ್ರಮೇಣ ದಿನಸಿ ಅಂಗಡಿಗೆ ದುಡ್ಡು ಕೊಡುವುದಕ್ಕೂ, ಚಿಲ್ಲರೆ ಇಸ್ಕೊಳ್ಳುವುದಕ್ಕೂ, ಸ್ನೇಹಿತನಿಗೆ ದುಡ್ಡು ವರ್ಗಾಯಿಸುವುದಕ್ಕೂ ಎಲ್ಲದಕ್ಕೂ ಈ ಸಿಮ್ ತಂತ್ರವನ್ನೇ ಬಳಸಲು ಶುರು ಮಾಡ್ತಾರೆ. ಈ ಬಳಿಕೆ ನಗರಗಳಿಂದ ಹಳ್ಳಿಗಳಿಗೆ ಹಣ ವರ್ಗಾವಣೆ ತನಕ ಹಬ್ಬುತ್ತದೆ. ಇದು ಅನಧಿಕೃತವಲ್ಲ, ಅಪರಾಧವಲ್ಲ, ಇರುವ ವ್ಯವಸ್ಥೆಯನ್ನು ಲೋಕೋಪಯೋಗಿನ್ನಾಗಿಸಿ ಬದಲಾಯಿಸಿದ್ದರಷ್ಟೇ. ಅದು ಹಂಗೆ ಹಂಗೆ ಬೆಳೀತಾ universal digital wallet ಆಗಿ ಪರಿವರ್ತನೆಯಾಗಿಬಿಟ್ಟಿತು. ಎಂ-ಪೆಸಾ ಎಂಬ ಹೆಸರಿನಲ್ಲಿ ಪ್ರಸಿದ್ಧಿ ಪಡೆದುಕೊಂಡಿತು. ಪ್ರತಿ ಮೂಲೆ ಅಂಗಡಿಯ ಕರೆನ್ಸಿ ಮಾರಾಟಗಾರ ಈಗ ಎಂ-ಪೆಸಾ ಏಜೆಂಟಾಗಿ ಬದಲಾದ. ಕಿರಾಣಿ ಅಂಗಡಿಗಳು ಮಾನವ ಎಟಿಎಂಗಳಾಗಿ ಬದಲಾದವು. ನಿಮಗೆ ಅನಿಸುತ್ತಿರಬಹುದು, ಇಷ್ಟಾದ ಮೇಲೆ ಮಗ ನೇರವಾಗಿ ಅಮ್ಮನ ಫೋನಿಗೆ ಹಣ ವರ್ಗಾಯಿಸಬಹುದಲ್ಲ ಕಿರಾಣಿ ಅಂಗಡಿ ಯಾಕೆ ಎಂದು. ಇಲ್ಲೇ ಮಜಾ ಇರುವುದು. ಇದು ಪೂರ್ಣ ಮಟ್ಟದ ಯುಪಿಐನಂತಲ್ಲ, ಇವರಿಬ್ಬರ ಬಳಿಯೂ ಬ್ಯಾಂಕ್ ಅಕೌಂಟು ಇರುವುದಿಲ್ಲ, ಎಂ-ಪೆಸಾ ಬ್ಯಾಂಕ್ ಅಕೌಂಟ್ ಇಲ್ಲದೆಯೇ ಕೇವಲ ಸಿಮ್ ಎಂಬ ಅಧಿಕೃತ ಚಾನೆಲ್ ಮೂಲಕ ಕ್ಯಾಶನ್ನು ವರ್ಗಾವಣೆ ಮಾಡಿಕೊಳ್ಳುವ ವ್ಯವಸ್ಥೆ. ಮಗ ತನಗೆ ಬಂದ ನಗದು ಸಂಬಳವನ್ನು ಏಜೆಂಟಿನ ಕೈಗಿತ್ತು ಡಿಜಿಟಲ್ ಕರೆನ್ಸಿಯನ್ನಾಗಿಸುತ್ತಾನೆ. ನಂತರ ತನ್ನ ತಾಯಿಯ ಫೋನಿಗೆ ಟ್ರಾನ್ಸ್‌ಫರ್ ಮಾಡುತ್ತಾನೆ. ತಾಯಿ ತನ್ನೂರಿನ ಏಜೆಂಟಿನ ಬಳಿ ಹೋಗಿ ಆ ಕರೆನ್ಸಿಯನ್ನು ಅಂಗಡಿಯವನ ಫೋನಿಗೆ ವರ್ಗಾಯಿಸಿ ಕ್ಯಾಶನ್ನು ಪಡೆಯುತ್ತಾಳೆ.

ಮುಂದಿನ ಹತ್ತು ವರುಷಗಳಲ್ಲಿ ಎಂ-ಪೆಸಾ ಬೆಳೆದ ರೀತಿ ಪವಾಡಸದೃಶ. ಮೂರೂವರೆ ಕೋಟಿ ಗ್ರಾಹಕರು, ಮೂವತ್ತು ಬಿಲಿಯನ್‌ಗಳಿಗೂ ಮೀರಿದ ಟ್ರಾನ್ಸಾಕ್ಷನ್‌ಗಳು, 209 ಬಿಲಿಯನ್ ಡಾಲರು ಒಟ್ಟು ಮೊತ್ತ. ಪ್ರತಿ ಸೆಕೆಂಡಿಗೆ ಸುಮಾರು ಎರಡೂವರೆ ಸಾವಿರ ಟ್ರಾನ್ಸಾಕ್ಷನ್‌ಗಳು ಜರುಗುತ್ತಿವೆಯಂತೆ. ಕೀನ್ಯಾದ ಒಟ್ಟು ಜಿಡಿಪಿಯ ಸುಮಾರು ಶೇ.59ರಷ್ಟು ಎಂ-ಪೆಸಾ ಜಾಲದ ಮೂಲಕ ಹರಿಯುತ್ತಿದೆಯಂತೆ.

ಮುಂದೆ ಎಂ-ಪೆಸಾ ಮಾದರಿಯನ್ನು ಜಗತ್ತಿನ ಅನೇಕ ಬಡ ದೇಶಗಳು ಅನುಕರಿಸಿದವು. ಬಾಂಗ್ಲಾದೇಶದ 'ಬಿಕಾಶ್', ಪಾಕಿಸ್ತಾನದ 'ಈಜಿಪೈಸಾ', ತಾಂಜಾನಿಯಾ ಉಗಾಂಡಾ ಮೊಜಾಂಬಿಕ್ ಎಲ್ಲವೂ ಎಂ-ಪೆಸಾದ ಮರಿಮಕ್ಕಳೇ. ಭಾರತದ ಯುಪಿಐ ಸಹ ಸ್ವಲ್ಪ ಸ್ಫೂರ್ತಿ ಪಡೆದದ್ದು ಇಲ್ಲಿಂದಲೇ. ಒಂದೇ ವ್ಯತ್ಯಾಸ ಎಂ-ಪೆಸಾ ಈಗಲೂ ಖಾಸಗಿ ಕಂಪನಿಗೆ ಸೇರಿದ್ದು. ಭಾರತದ ಯುಪಿಐ ಮಾತ್ರ ಇಲ್ಲಿನ ಸರಕಾರಗಳೇ ತಮ್ಮ ದೂರದೃಷ್ಟಿಯಿಂದ ಕಟ್ಟಿದ್ದು.

(ಲೇಖಕರು: ವಿಜ್ಞಾನ ಬರಹಗಾರರು)

ವಾಚಕರ ವಿಜಯ

ಯುಪಿಎಸ್ಸಿ ಪ್ರಿಲಿಮ್ಸ್‌ನಲ್ಲಿ ಪ್ರಾದೇಶಿಕ ಭಾಷೆಗೂ ಸ್ಥಾನ ಸಿಗಲಿ

ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್ಸಿ) ಮೇ 24ರಂದು ನಡೆಸಿದ ಸಿವಿಲ್ ಸರ್ವಿಸ್ ಪೂರ್ವಭಾವಿ (ಪ್ರಿಲಿಮ್ಸ್) ಪರೀಕ್ಷೆಯ ಪ್ರಶ್ನೆ ಪತ್ರಿಕೆಯ ಕಠಿಣತೆ ಆಕಾಂಕ್ಷಿಗಳಲ್ಲಿ ಬೆವರಿಳಿಸಿದೆ.

ಪ್ರಸ್ತುತ ಪೂರ್ವಭಾವಿ ಪ್ರಶ್ನೆಪತ್ರಿಕೆಯು ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಲ್ಲಿ ಮಾತ್ರ ಲಭ್ಯವಿದೆ. ಹೀಗಾಗಿ ಇಂಗ್ಲಿಷ್ ಅಥವಾ ಹಿಂದಿ ಭಾಷೆಯ ಮೇಲಿನ ಹಿಡಿತವು ಅಭ್ಯರ್ಥಿಗಳಿಗೆ ಅನಿವಾರ್ಯವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಪ್ರಿಲಿಮ್ಸ್ ಪರೀಕ್ಷೆಯು ವರ್ಷದಿಂದ ವರ್ಷಕ್ಕೆ ಕಬ್ಬಿಣದ ಕಡಲೆಯಾಗುತ್ತಿದ್ದು, ಈ ವರ್ಷವೂ ಹಲವಾರು ಸಂಕೀರ್ಣ ಇಂಗ್ಲಿಷ್ ಪದಗಳ ಬಳಕೆ ಕಂಡುಬಂದಿತು. ಮುಖ್ಯ ಪರೀಕ್ಷೆ ಹಾಗೂ ಸಂದರ್ಶನ ಹಂತದಲ್ಲಿ ಅಭ್ಯರ್ಥಿಗಳು ತಮ್ಮ ಇಚ್ಛೆಯ ಪ್ರಾದೇಶಿಕ ಭಾಷೆಯನ್ನು ಆಯ್ಕೆ ಮಾಡುವ ಅವಕಾಶವಿದ್ದರೂ, ಆ ಹಂತ ತಲುಪಲು ಮೊದಲನೆಯದಾಗಿ ಪೂರ್ವಭಾವಿ ಪರೀಕ್ಷೆ ತೇರ್ಗಡೆಯಾಗುವುದು ಅತ್ಯವಶ್ಯಕ. ಮುಂದಿನ ದಿನಗಳಲ್ಲಿ ಕೇಂದ್ರ ಲೋಕಸೇವಾ ಆಯೋಗವು ಪ್ರಿಲಿಮಿನರಿ ಪರೀಕ್ಷೆಯಲ್ಲಿಯೂ ಪ್ರಾದೇಶಿಕ ಭಾಷೆಗಳ ಅನುವಾದವನ್ನು ಒದಗಿಸುವ ಬಗ್ಗೆ ಗಂಭೀರವಾಗಿ ಪರಿಗಣಿಸಬೇಕು. ಇದರಿಂದ ಭಾಷೆಯ ಅಡೆತಡೆ ದೂರವಾಗಿ, ಶ್ರಮಪಟ್ಟು ಓದುತ್ತಿರುವ ಎಲ್ಲಾ ಅಭ್ಯರ್ಥಿಗಳಿಗೆ ಸಮಾನ ಅವಕಾಶ ದೊರೆಯಲಿದೆ.

- ಲಿಖಿತ ಎಸ್.ಡಿ. ಮೈಸೂರು

ಮೆಟ್ರೊ ಬದಲು ತುಮಕೂರಿಗೆ ರೈಲು ಸೇವೆ ಉತ್ತಮಪಡಿಸಿ

ಖಾಸಗಿ- ಸಾರ್ವಜನಿಕ ಸಹಯೋಗದಲ್ಲಿ ಬೆಂಗಳೂರು ನಗರದಲ್ಲಿ ನಿರ್ಮಾಣ ಮಾಡಲಾದ 'ನಮ್ಮ ಮೆಟ್ರೊ' ರೈಲು ಸೇವೆಯನ್ನು ತುಮಕೂರು ನಗರದವರೆಗೂ ವಿಸ್ತರಿಸುವುದಾಗಿ ಗೃಹಮಂತ್ರಿ ಜಿ. ಪರಮೇಶ್ವರ್ ಹೇಳಿರುವುದು ಓದಿ ನಗು ಬಂದಿತು.

ಈಗಾಗಲೇ ಬೆಂಗಳೂರು ಹೃದಯಭಾಗದಿಂದ ತುಮಕೂರು ನಗರಕ್ಕೆ ಸದೃಢ ಡಬಲ್ ರೈಲ್ವೆ ಟ್ರ್ಯಾಕ್ ಇವೆ. ಕೆಎಸ್‌ಆರ್ ನಗರ ರೈಲು ನಿಲ್ದಾಣದಿಂದ ಯಶವಂತಪುರ ಮಾರ್ಗವಾಗಿ ಕೇವಲ 50 ನಿಮಿಷಗಳಲ್ಲಿ ಕೆಲವು ರೈಲುಗಳು ತುಮಕೂರು ನಗರ ತಲುಪುತ್ತವೆ. ಆದರೆ, ವಿಪರ್ಯಾಸ ಎಂದರೆ ಬೆಂಗಳೂರಿನಿಂದ ತುಮಕೂರು ನಗರಕ್ಕೆ ಅಗತ್ಯಕ್ಕೆ ತಕ್ಕಷ್ಟು ರೈಲುಗಳೇ ಇಲ್ಲ. ಇರುವ ಒಂದೆರಡು ರೈಲುಗಳ ಸಮಯ ಸರಿಯಿಲ್ಲ. ಆದೇ ಬೆಂಗಳೂರು- ತುಮಕೂರು ನಗರ ಮಾರ್ಗಕ್ಕೆ ನೂರಾರು ಬಸ್‌ಗಳು ನಿರಂತರ ಓಡಾಟ ನಡೆಸುತ್ತಿವೆ. ಬೆಳಗ್ಗೆ ಮತ್ತು ಸಂಜೆ ಸಮಯದಲ್ಲಿ ಎರಡು- ಮೂರು ಅಂತರ-ಜಿಲ್ಲಾ ರೈಲುಗಳನ್ನು ಓಡಿಸಿದರೆ ಬಸ್ ಮಾರ್ಗ 'ನಿರಂತರ ರಸ್ತೆ ಜಾಮ್' ತೊಂದರೆಯಿಂದ ನಿರಾಳವಾಗಬಹುದು. ಈ ಮಾರ್ಗಕ್ಕೆ ಮೆಟ್ರೊ ಮಾಡಲು ಹೊರಟರೆ ರಸ್ತೆ ಸಂಚಾರ ಮತ್ತಷ್ಟು ಬಿಗಡಾಯಿಸಲಿದೆ. ತುಮಕೂರಿನ ಸಂಸದರೇ ರೈಲ್ವೆ ಸಹಾಯಕ ಸಚಿವರಾಗಿದ್ದರೂ ತುಮಕೂರಿಗೆ ಯಾವುದೇ ಲಾಭ ಆಗಿಲ್ಲ. ಬರೀ ರೈಲು ನಿಲುಗಡೆಯ ಸಂಖ್ಯೆ ಹೆಚ್ಚಿಸಿದ್ದಾರೆ. ಈ ಬಗ್ಗೆ ಸಚಿವದ್ವಯರಿಬ್ಬರೂ ಯೋಚಿಸುವುದು ಒಳಿತು.

- ಗಿರೀಶ್ ಬೆಂಗಳೂರು

ಮಳೆಗಾಲದ ವಿಪತ್ತು ನಿರ್ವಹಣೆಗೆ ತಾಲೀಮು »12

ಸೊಸೆ ಮೇಲೆ ಲೈಂಗಿಕ ದೌರ್ಜನ್ಯ: ಮಾವನಿಗೆ ಜಾಮೀನು

ಬೆಂಗಳೂರು: ಪ್ರಕರಣವನ್ನು ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳುವುದಾಗಿ ಸಂತ್ರಸ್ತೆ (ಸೊಸೆ) ಪ್ರಮಾಣಪತ್ರ ಸಲ್ಲಿಸಿರುವ ಹಿನ್ನೆಲೆಯಲ್ಲಿ ಹೈಕೋರ್ಟ್, ಪದೇ ಪದೆ ಲೈಂಗಿಕ ದೌರ್ಜನ್ಯ ಆರೋಪ ಎದುರಿಸುತ್ತಿದ್ದ 75 ವರ್ಷದ ಮಾವನಿಗೆ ಜಾಮೀನು ಮಂಜೂರು ಮಾಡಿದೆ.

ಜಾಮೀನು ಮಂಜೂರು ಮಾಡುವಂತೆ ಕೋರಿ ಶಿವಾಜಿನಗರ ವಾಸಿಯಾಗಿರುವ ಆರೋಪಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಜಿ.ಎಸ್.ಕಮಲ್ ಅವರಿದ್ದ ರಜಾ ಕಾಲದ ಏಕಸದಸ್ಯ ಪೀಠ ಜಾಮೀನು ಆದೇಶ ನೀಡಿದೆ. ಅಲ್ಲದೆ, 1 ಲಕ್ಷ ರೂ.ಗಳ ವೈಯಕ್ತಿಕ ಬಾಂಡ್, ಅಷ್ಟೇ ಮೊತ್ತಕ್ಕೆ ಇಬ್ಬರು ಸ್ಥಳೀಯ ಶ್ಯೂರಿಟಿಗಳನ್ನು ಸಲ್ಲಿಸುವಂತೆ ನ್ಯಾಯಾಲಯ ಆರೋಪಿಗೆ ಷರತ್ತುಗಳನ್ನು ವಿಧಿಸಿದೆ.

ವಿಚಾರಣೆಯ ವೇಳೆ ಸಂತ್ರಸ್ತೆ ಸ್ವತಃ ನ್ಯಾಯಾಲಯಕ್ಕೆ ಹಾಜರಾಗಿ, ತನ್ನ ಪರ ವಕೀಲರ ಮೂಲಕ ಪ್ರಕರಣವನ್ನು ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳಲಾಗುತ್ತಿದೆ. ಆರೋಪಿಗೆ ಜಾಮೀನು ನೀಡುವುದಕ್ಕೆ ಯಾವುದೇ ಆಕ್ಷೇಪ ಇಲ್ಲ ಎಂದು ಪ್ರಮಾಣಪತ್ರದ ಮೂಲಕ ನ್ಯಾಯಪೀಠಕ್ಕೆ ತಿಳಿಸಿದರು. ಈ ಅಂಶವನ್ನು ದಾಖಲಿಸಿಕೊಂಡ ನ್ಯಾಯಪೀಠ, ಆರೋಪಿಯ ವಯಸ್ಸು ಹಾಗೂ ನ್ಯಾಯಾಂಗ ಬಂಧನವನ್ನು ಪರಿಶೀಲಿಸಿ ಜಾಮೀನು ಮಂಜೂರು ಮಾಡಿದೆ.

''ಜಾಮೀನು ಮಂಜೂರು ಮಾಡಿರುವುದು ಆರೋಪಿಯ ನಿರ್ದೋಷಿತ್ವವನ್ನು ಸಾಬೀತುಪಡಿಸುವುದಿಲ್ಲ, ಪ್ರಕರಣದ ವಿಚಾರಣೆ ಮುಂದುವರಿಯಲಿದ್ದು, ಆರೋಪಗಳ ಸತ್ಯಾಸತ್ಯತೆ ಬಗ್ಗೆ ಅಂತಿಮ ತೀರ್ಮಾನವನ್ನು ವಿಚಾರಣಾ ನ್ಯಾಯಾಲಯವೇ ಕೈಗೊಳ್ಳಲಿದೆ,'' ಎಂದು ನ್ಯಾಯಪೀಠ ತನ್ನ ಆದೇಶದಲ್ಲಿ ಸ್ಪಷ್ಟಪಡಿಸಿದೆ.

ಅರ್ಜಿದಾರರ ಪರ ವಕೀಲರು, ''ಆರೋಪಿಗೆ 75 ವರ್ಷವಾಗಿದ್ದು, ಹಿರಿಯ ನಾಗರಿಕರಾಗಿದ್ದಾರೆ. ಕಳೆದ ಎಂಟು ತಿಂಗಳಿಂದ ನ್ಯಾಯಾಂಗ ಬಂಧನದಲ್ಲಿದ್ದಾರೆ. ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಅರ್ಜಿದಾರರ ವಿರುದ್ಧ ಸುಳ್ಳು ಪ್ರಕರಣ ದಾಖಲಾಗಿದೆ. ಅಲ್ಲದೆ, ಆರೋಪ ಸಂಬಂಧ ದೂರಿನ ದಿನಾಂಕ, ಸಮಯವನ್ನು ಉಲ್ಲೇಖಿಸಿಲ್ಲ, ಘಟನೆಗೆ ಪ್ರತ್ಯಕ್ಷ ಸಾಕ್ಷಿಗಳಿಲ್ಲ, ಆದ್ದರಿಂದ ಅರ್ಜಿದಾರರಿಗೆ ಜಾಮೀನು ಮಂಜೂರು ಮಾಡಬೇಕು,'' ಎಂದು ಕೋರಿದರು. ಅದಕ್ಕೆ ಆಕ್ಷೇಪಿಸಿದ ಸರಕಾರಿ ವಕೀಲರು, ''ಅರ್ಜಿದಾರರ ವಿರುದ್ಧದ ಆರೋಪ ಗಂಭೀರ ಸ್ವರೂಪದ್ದಾಗಿದ್ದು, ಜಾಮೀನು ನಿರಾಕರಿಸಿ, ಅರ್ಜಿಯನ್ನು ವಜಾಗೊಳಿಸಬೇಕು,'' ಎಂದು ಪೀಠಕ್ಕೆ ಮನವಿ ಮಾಡಿದರು.

ಆದರೆ, ನ್ಯಾಯಾಲಯಕ್ಕೆ ಖುದ್ದು ಹಾಜರಾಗಿದ್ದ ಸೊಸೆ (ಸಂತ್ರಸ್ತೆ), ''ಪ್ರಕರಣವನ್ನು ಸೌಹಾರ್ದಯುತವಾಗಿ ಇತ್ಯರ್ಥಪಡಿಸುವ ಪ್ರಕ್ರಿಯೆ ನಡೆಯುತ್ತಿದೆ. ಅರ್ಜಿದಾರ ಆರೋಪಿಗೆ ಜಾಮೀನು ನೀಡುವುದಕ್ಕೆ ಅಡ್ಡಿಯಿಲ್ಲ,'' ಎಂದು ಒಪ್ಪಿಗೆ ಸೂಚಿಸಿದರು. ಈ ಅಂಶ ದಾಖಲಿಸಿಕೊಂಡ ನ್ಯಾಯಪೀಠ, ಆರೋಪಿಗೆ ಜಾಮೀನು ನೀಡಿದೆ.

ಪ್ರಕರಣದ ಹಿನ್ನೆಲೆ: ಪ್ರಕರಣದಲ್ಲಿ ಸಂತ್ರಸ್ತೆಯಾಗಿರುವ ಮಹಿಳೆಯು, ಪತಿ, ಅತ್ತೆ ಮತ್ತು ಮಾವನಿಂದ ನಿರಂತರ ಲೈಂಗಿಕ ದೌರ್ಜನ್ಯಕ್ಕೊಳಗಾಗಿರುವ ಬಗ್ಗೆ ಆರೋಪಿಸಿ ಬೆಂಗಳೂರಿನ ಪೂರ್ವ ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಈ ಸಂಬಂಧ ಮಾವ, ಅತ್ತೆಯ ಕುಟುಂಬಸ್ಥರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿತ್ತು. ಹಾಗಾಗಿ, ಮಾವ ಬಂಧನಕ್ಕೆ ಒಳಗಾಗಿದ್ದರು.

66 ಲಕ್ಷ ರೂ. ಮೌಲ್ಯದ ಅಕ್ರಮ ಮದ್ಯ ವಶ

ಬೆಂಗಳೂರು: ಗೂಡ್ಸ್‌ರೈಲಿನಲ್ಲಿ ದಿಲ್ಲಿಯಿಂದ ಬೆಂಗಳೂರಿಗೆ ತಂದಿದ್ದ 66 ಲಕ್ಷ ರೂ. ಮೌಲ್ಯದ ಅಕ್ರಮ ಮದ್ಯವನ್ನು ಅಬಕಾರಿ ಇಲಾಖೆ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಮೇ 22ರಂದು ದಿಲ್ಲಿಯಿಂದ ಬೆಂಗಳೂರಿಗೆ ಆಗಮಿಸುತ್ತಿದ್ದ ಗೂಡ್ಸ್‌ರೈಲಿನಲ್ಲಿ ಅಕ್ರಮವಾಗಿ ಮದ್ಯ ಸಾಗಾಟ ಮಾಡುತ್ತಿರುವ ಖಚಿತ ಮಾಹಿತಿ ದೊರೆತಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ನಗರ ಜಿಲ್ಲೆ ಉಪ ಆಯುಕ್ತ ಭರತೇಶ್ ನೇತೃತ್ವದಲ್ಲಿ ಅಬಕಾರಿ ಇಲಾಖೆ ಅಧಿಕಾರಿಗಳು ಹಾಗೂ ರೈಲ್ವೆ ಭದ್ರತಾ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಯಶವಂತಪುರ ರೈಲ್ವೆ ನಿಲ್ದಾಣದಲ್ಲಿ 74 ರಟ್ಟಿನ ಪೆಟ್ಟಿಗೆಗಳಲ್ಲಿದ್ದ ಮದ್ಯವನ್ನು ವಶಪಡಿಸಿಕೊಂಡಿದ್ದಾರೆ.

ವಿವಿಧ ಮಾದರಿಯ ವಿಸ್ಕಿ, ವೋಡ್ಕ ಸೇರಿದಂತೆ 1,118 ಬಾಟಲಿಗಳು ಒಟ್ಟು 1042 ಲೀಟರ್ ಶಂಕಿತ ನಕಲಿ ವಿದೇಶಿ ಮದ್ಯವನ್ನು ರಟ್ಟಿನ ಪೆಟ್ಟಿಗೆಯಲ್ಲಿ ಸಾಗಿಸಲಾಗುತ್ತಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಓರ್ವನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಅಧಿಕಾರಿಗಳು, ಸಿಬ್ಬಂದಿ ಕಾರ್ಯವನ್ನು ಅಬಕಾರಿ ಸಚಿವ ಆರ್.ಬಿ.ತಿಮ್ಮಾಪೂರ ಶ್ಲಾಘಿಸಿದ್ದಾರೆ.

ಎರಡೂವರೆ ಗಂಟೆಗೊಂದು ಆರ್ಥಿಕ ಅಪರಾಧ

ಕಳೆದ ವರ್ಷ 3,477 ಆರ್ಥಿಕ ಅಪರಾಧ ಪ್ರಕರಣ ದಾಖಲು | ನಿತ್ಯ ಸರಾಸರಿ 10 ಕೇಸ್ | ಎನ್‌ಸಿಆರ್‌ಬಿ ವರದಿಯಲ್ಲಿ ಉಲ್ಲೇಖ

■ **ವಿಕ ಸುದ್ದಿಲೋಕ** ಬೆಂಗಳೂರು

ದೇಶದ ತಂತ್ರಜ್ಞಾನ ರಾಜಧಾನಿ ಎಂದೇ ಹೆಸರಾಗಿರುವ ಬೆಂಗಳೂರಿನಲ್ಲಿ ಪ್ರತಿ ಎರಡೂವರೆ ತಾಸಿಗೊಮ್ಮೆ ಒಂದು ಆರ್ಥಿಕ ಅಪರಾಧ ಘಟಿಸುತ್ತಿದ್ದು, ಸಾರ್ವಜನಿಕರ ಹಣ ವಂಚಕರ ಪಾಲಾಗುತ್ತಿದೆ.

ನಗರದಲ್ಲಿ ಕಳೆದ ಮೂರು ವರ್ಷಗಳಲ್ಲಿ 10,580 ಅಪರಾಧ ಪ್ರಕರಣಗಳು ವರದಿಯಾಗಿದ್ದು, ನಕಲಿ ದಾಖಲೆಗಳ ಸೃಷ್ಟಿ, ವಂಚನೆ, ಹಣಕಾಸು ಅಕ್ರಮಗಳು ಹಾಗೂ ವೈಟ್ ಕಾಲರ್ ಅಪರಾಧಗಳು ಇದರಲ್ಲಿ ಸೇರಿವೆ. 2024ರಲ್ಲಿ ಬೆಂಗಳೂರಿನಲ್ಲಿ 3,477 ಆರ್ಥಿಕ ಅಪರಾಧ ಪ್ರಕರಣಗಳು ದಾಖಲಾಗಿದ್ದು, ಅತಿ ಹೆಚ್ಚು ಆರ್ಥಿಕ ಅಪರಾಧಗಳು ವರದಿಯಾದ ದೇಶದ ಐದು ಮಹಾನಗರಗಳ ಪಟ್ಟಿಯಲ್ಲಿ ಬೆಂಗಳೂರು ಸಹ ಸೇರಿದೆ ಎಂದು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ (ಎನ್‌ಸಿಆರ್‌ಬಿ) ವರದಿ ಹೇಳಿದೆ.

2024ಕ್ಕೆ ಹೋಲಿಸಿದರೆ 2023ರಲ್ಲಿ ನಗರದಲ್ಲಿ 3,858 ಹಾಗೂ 2022ರಲ್ಲಿ 3,245 ಆರ್ಥಿಕ ಅಪರಾಧ ಪ್ರಕರಣಗಳು ದಾಖಲಾಗಿವೆ. ಆದರೂ ಪ್ರತಿನಿತ್ಯ ಸರಾಸರಿ 10 ಪ್ರಕರಣಗಳು ನಡೆಯುತ್ತಿವೆ. ಹಿಂದಿನ ವರ್ಷಗಳ ದತ್ತಾಂಶವನ್ನು ಅವಲೋಕಿಸಿದರೆ ಆರ್ಥಿಕ ಅಪರಾಧಗಳಲ್ಲಿ ಏರಿಳಿತವಾಗಿರುವುದು ಕಂಡು ಬಂದಿದೆ. 2024ರಲ್ಲಿ ಮುಂಬಯಿ, ಹೈದರಾಬಾದ್, ಜೈಪುರ ಮತ್ತು ಹೊಸದಿಲ್ಲಿಯಲ್ಲಿ ಮಾತ್ರ ಹೆಚ್ಚಿನ ಆರ್ಥಿಕ ಅಪರಾಧ ಪ್ರಕರಣಗಳು ದಾಖಲಾಗಿದ್ದವು.

ಇತ್ತೀಚಿನ ವರ್ಷಗಳಲ್ಲಿ ಆರ್ಥಿಕ ಅಪರಾಧಗಳ ಸ್ವರೂಪ ಸಂಪೂರ್ಣ ಬದಲಾಗಿದೆ. ಅತಿ ದೊಡ್ಡ ಅಪರಾಧ ಕೃತ್ಯಗಳು ಕಳ್ಳತನ ಅಥವಾ ದೈಹಿಕ ಹಿಂಸೆಗೆ ಸೀಮಿತವಾಗಿಲ್ಲ. ಬೆಂಗಳೂರಿನಲ್ಲಿ ದಾಖಲಾದ 3,477 ಆರ್ಥಿಕ ಅಪರಾಧ ಪ್ರಕರಣಗಳಲ್ಲಿ 3,249 (ಶೇ.93)

ನಕಲಿ ದಾಖಲೆಗಳ ಸೃಷ್ಟಿ ಮತ್ತು ವಂಚನೆಯಡಿ ಬಂದಿವೆ. ಕಳ್ಳತನ, ಬೀದಿ ಬದಿಯ ಅಪರಾಧ ಕೃತ್ಯಗಳಿಂದ ಡಿಜಿಟಲ್ ವಂಚನೆವರೆಗೆ ಈ ಪ್ರವೃತ್ತಿ ವಿಸ್ತರಿಸಿದೆ. ಕರ್ನಾಟಕದಲ್ಲಿ 2024ರಲ್ಲಿ ಒಟ್ಟಾರೆ 7,814 ಆರ್ಥಿಕ ಅಪರಾಧಗಳು ನಡೆದಿವೆ ಎಂದು ಎನ್‌ಸಿಆರ್‌ಬಿ ವರದಿ ತಿಳಿಸಿದೆ.

ಕರ್ನಾಟಕದಲ್ಲಿ ಆರ್ಥಿಕ ಅಪರಾಧಗಳ ಸರಾಸರಿಯು ಪ್ರತಿ ಲಕ್ಷ ಜನಸಂಖ್ಯೆಗೆ 11.4 ಪ್ರಕರಣಗಳಷ್ಟಿದೆ. ರಾಜ್ಯದ ಇತರೆ ಭಾಗಗಳಿಗೆ ಹೋಲಿಸಿದರೆ ಬೆಂಗಳೂರಿನಲ್ಲಿ ಅತಿ ಹೆಚ್ಚು (ಪ್ರತಿ ಲಕ್ಷ ಜನಸಂಖ್ಯೆಗೆ 40.9 ಪ್ರಕರಣ) ಆರ್ಥಿಕ ಅಪರಾಧಗಳು ನಡೆಯುತ್ತಿವೆ. ನಗರದ ದೊಡ್ಡ ಡಿಜಿಟಲ್ ಆರ್ಥಿಕತೆ, ಭಾರಿ ಆನ್‌ಲೈನ್ ಬ್ಯಾಂಕಿಂಗ್ ಬಳಕೆ ಮತ್ತು ಸಕ್ರಿಯ ಹೂಡಿಕೆ, ಕ್ರಿಪ್ಟೊಕರೆನ್ಸಿ ಹಗರಣ, ವಾಣಿಜ್ಯ ಅಪ್ಲಿಕೇಶನ್‌ಗಳ ವಂಚನೆ, ಸಾಲದ ಅಪ್ಲಿಕೇಶನ್‌ಗಳ ಸುಲಿಗೆಯು ಇದಕ್ಕೆ ಕಾರಣ. ಅಪರಾಧದ ಸರಾಸರಿ ಲೆಕ್ಕಾಚಾರವು 2011ರ ಜನಗಣತಿಯ ದತ್ತಾಂಶವನ್ನು ಆಧರಿಸಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

ಲಖನೌಗೆ ಮೊದಲ ಸ್ಥಾನ: ಆರ್ಥಿಕ ಅಪರಾಧಗಳಲ್ಲಿ ಉತ್ತರ ಪ್ರದೇಶದ ರಾಜಧಾನಿ ಲಖನೌ ನಗರವು ದೇಶದ ಅಗ್ರ ಮೆಟ್ರೊಪಾಲಿಟನ್ ನಗರವಾಗಿ ಹೊರಹೊಮ್ಮಿದೆ. ಎನ್‌ಸಿಆರ್‌ಬಿ ವರದಿ ಪ್ರಕಾರ ಲಖನೌ ನಗರವು ಒಂದು ಲಕ್ಷ ರೂ.ಗಿಂತ ಕಡಿಮೆ ಮೊತ್ತದ ಆರ್ಥಿಕ ಅಪರಾಧಗಳ ವಿಭಾಗದಲ್ಲಿ ದೇಶದ 53 ಮಹಾನಗರಗಳಲ್ಲಿ ಮೊದಲ ಸ್ಥಾನದಲ್ಲಿದೆ. 2024ರಲ್ಲಿ ಲಖನೌದಲ್ಲಿ 251 ಪ್ರಕರಣಗಳು ದಾಖಲಾಗಿದ್ದು, ಇದು ದೇಶದಲ್ಲೇ ಅತಿ ಹೆಚ್ಚು.

> **ಶಿಕ್ಷೆ ಪ್ರಮಾಣ ಕೇವಲ ಶೇ.5**
>
> ಎನ್‌ಸಿಆರ್‌ಬಿ ಅಂಕಿ ಅಂಶಗಳು ಕಾನೂನು ವ್ಯವಸ್ಥೆಯ ಮೇಲೆ ಹೆಚ್ಚುತ್ತಿರುವ ಒತ್ತಡವನ್ನು ತೋರಿಸುತ್ತವೆ. 2024ರ ಅಂತ್ಯಕ್ಕೆ ಬೆಂಗಳೂರಿನಲ್ಲಿ 13,616 ಆರ್ಥಿಕ ಅಪರಾಧ ಪ್ರಕರಣಗಳು ವಿಚಾರಣೆಗೆ ಬಾಕಿ ಉಳಿದಿವೆ. ಇಂತಹ ಪ್ರಕರಣಗಳಲ್ಲಿ ಶಿಕ್ಷೆಯ ಪ್ರಮಾಣ ಕೇವಲ ಶೇ.5ರಷ್ಟಿದ್ದರೆ, ವಿಚಾರಣೆಗೆ ಬಾಕಿಯಿರುವ ಪ್ರಕರಣಗಳ ಪ್ರಮಾಣವು ಶೇ.95 ದಾಟಿದೆ. ಆರ್ಥಿಕ ಅಪರಾಧ ಪ್ರಕರಣಗಳಲ್ಲಿ ಪೊಲೀಸರು ಆರೋಪಪಟ್ಟಿ ಸಲ್ಲಿಸುತ್ತಿರುವ ಪ್ರಮಾಣವು ಶೇ.49.1 ರಷ್ಟಿದೆ. ವಂಚಕರು ಹಣಕಾಸು ಅಪರಾಧ ಜಾಲಗಳು, ಮ್ಯೂಲ್ ಬ್ಯಾಂಕ್ ಖಾತೆಗಳು, ತಾತ್ಕಾಲಿಕ ಸಿಮ್ ಕಾರ್ಡ್ ಮತ್ತು ಎನ್‌ಕ್ರಿಪ್ಟ್ ಸಂವಹನ ಮಾರ್ಗಗಳನ್ನು ಬಳಸಿಕೊಂಡು ದುಷ್ಕೃತ್ಯ ಎಸಗುತ್ತಿದ್ದಾರೆ. ಹೀಗಾಗಿ, ಆರೋಪಿಗಳ ಪತ್ತೆ, ವಿಚಾರಣೆ, ತನಿಖೆ ಮತ್ತು ಹಣದ ಜಪ್ತಿ ಪ್ರಕ್ರಿಯೆಯು ಕಷ್ಟಸಾಧ್ಯವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಂಬಯಿ ನಗರವು 248 ಆರ್ಥಿಕ ಅಪರಾಧ ಪ್ರಕರಣಗಳೊಂದಿಗೆ ಎರಡನೇ ಸ್ಥಾನದಲ್ಲಿದೆ. ಬೆಂಗಳೂರು ನಗರವು 95 ಪ್ರಕರಣ ದಾಖಲಾಗುವುದರೊಂದಿಗೆ ಮೂರನೇ ಸ್ಥಾನದಲ್ಲಿದೆ. ಸೂರತ್‌ನಲ್ಲಿ 63, ಜೈಪುರದಲ್ಲಿ 40 ಮತ್ತು ನಾಗಪುರದಲ್ಲಿ 32 ಪ್ರಕರಣಗಳು ದಾಖಲಾಗಿವೆ.

ಲಖನೌನಲ್ಲಿ 2024ರಲ್ಲಿ ಒಟ್ಟಾರೆ 1,732 ಆರ್ಥಿಕ ಅಪರಾಧಗಳು ದಾಖಲಾಗಿದ್ದು, ಈ ಪೈಕಿ 312 ನಂಬಿಕೆ ದ್ರೋಹ ಪ್ರಕರಣಗಳು ಸೇರಿವೆ. ಲಖನೌನಲ್ಲಿ 2023ರಲ್ಲಿ 2,446 ಮತ್ತು 2022ರಲ್ಲಿ 3,702 ಪ್ರಕರಣಗಳು ದಾಖಲಾಗಿದ್ದವು. ಕಳೆದ ಮೂರು ವರ್ಷಗಳ ಅಂಕೆ ಸಂಖ್ಯೆಯನ್ನು ವಿಶ್ಲೇಷಿಸಿದರೆ ಆರ್ಥಿಕ ಅಪರಾಧಗಳ ಪ್ರಮಾಣ ಇಳಿಕೆಯಾಗಿದೆ. ಆದರೂ ಲಖನೌನಲ್ಲಿ ಆರ್ಥಿಕ ಅಪರಾಧಗಳ ಸರಾಸರಿಯು ಪ್ರತಿ ಒಂದು ಲಕ್ಷ ಜನಸಂಖ್ಯೆಗೆ 59.7ರಷ್ಟಿದೆ. ಇದು ಮಹಾನಗರಗಳಲ್ಲಿ ದಾಖಲಾದ ಸರಾಸರಿ ದರ 37.5ಕ್ಕಿಂತ ಗಮನಾರ್ಹವಾಗಿ ಹೆಚ್ಚಾಗಿದೆ. ಲಖನೌನಲ್ಲಿ ಆರ್ಥಿಕ ಅಪರಾಧಗಳಿಗೆ ಸಂಬಂಧಿಸಿದಂತೆ ಆರೋಪಪಟ್ಟಿ ಸಲ್ಲಿಕೆ ದರವು ಶೇ.50.8ರಷ್ಟಿದೆ.

ಉತ್ತರ ಪ್ರದೇಶದ ಕಾನ್ಪುರದಲ್ಲಿ 1 ಲಕ್ಷ ರೂ.ಗಿಂತ ಕಡಿಮೆ ಮೊತ್ತದ ನಷ್ಟ ಒಳಗೊಂಡ 95 ನಂಬಿಕೆ ದ್ರೋಹ ಪ್ರಕರಣಗಳು ದಾಖಲಾಗಿದ್ದರೆ, 1 ಲಕ್ಷದಿಂದ 10 ಲಕ್ಷ ರೂ.ವರೆಗಿನ ನಷ್ಟದ 11 ಪ್ರಕರಣಗಳು ವರದಿಯಾಗಿವೆ. 10 ಲಕ್ಷದಿಂದ 50 ಲಕ್ಷ ರೂ. ನಷ್ಟದ 8 ಪ್ರಕರಣಗಳು ದಾಖಲಾಗಿವೆ. ಇನ್ನು ಗಾಜಿಯಾಬಾದ್‌ನಲ್ಲಿ ಇಂತಹ 12 ಪ್ರಕರಣಗಳು ದಾಖಲಾಗಿವೆ. ಈ ಪೈಕಿ ಎರಡು ಪ್ರಕರಣಗಳು 1 ಲಕ್ಷ ರೂ.ಗಿಂತ ಕಡಿಮೆ ಮೌಲ್ಯದ ನಷ್ಟ ಒಳಗೊಂಡಿದ್ದರೆ, 8 ಪ್ರಕರಣಗಳು 1 ಲಕ್ಷದಿಂದ 10 ಲಕ್ಷ ರೂ.ವರೆಗಿನ ನಷ್ಟವನ್ನು ಒಳಗೊಂಡಿವೆ. ಎರಡು ಪ್ರಕರಣಗಳು 10 ಲಕ್ಷದಿಂದ 50 ಲಕ್ಷ ರೂ.ವರೆಗಿನ ನಷ್ಟ ಒಳಗೊಂಡಿವೆ.

ಸೋಮವಾರ ಸಂಜೆ ಸುರಿದ ಮಳೆಯಿಂದ ಬಿಳೇಕಹಳ್ಳಿ ಬಳಿ ಬನ್ನೇರುಘಟ್ಟ ರಸ್ತೆಯು ಹೊಳೆಯಂತಾಗಿತ್ತು. ವಾಹನ ಸವಾರರು ತೀವ್ರ ತೊಂದರೆ ಅನುಭವಿಸಿದರು.

ಚೆನ್ನೈ ಗುತ್ತಿಗೆದಾರ ಕಂಪನಿ ವಿರುದ್ಧ ಕ್ರಿಮಿನಲ್ ಕೇಸ್

■ **ವಿಕ ಸುದ್ದಿಲೋಕ** ಬೆಂಗಳೂರ

ಬೌರಿಂಗ್ ಆಸ್ಪತ್ರೆ ತಡೆಗೋಡೆ ಕುಸಿತ ದುರಂತ

ಬೌರಿಂಗ್ ಆಸ್ಪತ್ರೆ ತಡೆಗೋಡೆ ಕುಸಿದು ಏಳು ಮಂದಿ ಮೃತಪಟ್ಟ ದುರಂತಕ್ಕೆ ಸಂಬಂಧಿಸಿದಂತೆ ಕಟ್ಟಡ ತೆರವು ಗುತ್ತಿಗೆದಾರ ಸಂಸ್ಥೆ ವಿರುದ್ಧ ಕಮರ್ಷಿಯಲ್ ಸ್ಟ್ರೀಟ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿಗಳು ಇತ್ತೀಚೆಗೆ ಗುತ್ತಿಗೆದಾರ ಕಂಪನಿ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸುವಂತೆ ಸೂಚನೆ ನೀಡಿದ್ದರು. ಇದರ ಬೆನ್ನಲ್ಲೇ ಆರೋಗ್ಯ ಇಲಾಖೆಯ ಎಕ್ಸಿಕ್ಯುಟೀವ್ ಎಂಜಿನಿಯರ್ ಚಂದ್ರು ನೀಡಿದ ದೂರಿನ ಅನ್ವಯ ಚೆನ್ನೈನ ಮೆಸರ್ಸ್ ಎಸ್‌ಆರ್ ಟ್ರೇಡರ್ಸ್ ವಿರುದ್ಧ ನಿರ್ಲಕ್ಷ್ಯದಿಂದ ಸಾವಿಗೆ ಕಾರಣ ಆರೋಪದ ಮೇರೆಗೆ ಪ್ರಕರಣ ದಾಖಲಾಗಿದೆ. ಕಂಪನಿಯ ವಕ್ತಾರರಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿಗೊಳಿಸಿರುವ ಪೊಲೀಸರು, ತನಿಖೆ ಚುರುಕುಗೊಳಿಸಿದ್ದಾರೆ.

ಬೌರಿಂಗ್ ಆಸ್ಪತ್ರೆಯ ಆವರಣದಲ್ಲಿದ್ದ ಹಳೆಯ ಕಟ್ಟಡಗಳನ್ನು ತೆರವುಗೊಳಿಸುವ ಗುತ್ತಿಗೆಯನ್ನು 2017ರ ಜುಲೈ 1ರಂದು ಎಸ್‌ಆರ್ ಟ್ರೇಡರ್ಸ್ ಪಡೆದುಕೊಂಡಿತ್ತು. ಹಳೆಯ ಕಟ್ಟಡ, ಗೋಡೆಗಳನ್ನು ತೆರವುಗೊಳಿಸಿದ ಬಳಿಕ ಉಳಿದ ಕಟ್ಟಡದ ಅವಶೇಷಗಳನ್ನು ಬೇರೆ ಕಡೆ ವಿಲೇವಾರಿ ಮಾಡದೇ ಅಲ್ಲಿಯೇ ಬಿಡಲಾಗಿತ್ತು. ಇದರಿಂದಲೇ ತಡೆಗೋಡೆ ಕುಸಿದು ಏಳು ಮಂದಿ ಜೀವ ಕಳೆದುಕೊಳ್ಳಲು ಕಾರಣವಾಗಿತ್ತು ಎಂಬ ಅಂಶವು ತಾಂತ್ರಿಕ ಸಮಿತಿಯ ತನಿಖೆಯಲ್ಲಿ ಗೊತ್ತಾಗಿದೆ ಎಂದು ದೂರಿನಲ್ಲಿ ವಿವರಿಸಲಾಗಿದೆ.

> **ನೋಟಿಸ್‌ಗೆ ಉತ್ತರವಿಲ್ಲ**
>
> ಕಟ್ಟಡ ನೆಲಸಮಗೊಳಿಸಿದ ಬಳಿಕ ಗುತ್ತಿಗೆ ಷರತ್ತಿನಂತೆ ಅವಶೇಷಗಳನ್ನು ವಿಲೇವಾರಿ ಮಾಡದೆ ಉಳಿಸಿದ್ದೇಕೆ ಎಂಬುದರ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಮೇ 14ರಂದು ಎಸ್‌ಆರ್ ಟ್ರೇಡರ್ಸ್‌ಗೆ ಇ-ಮೇಲ್‌ನಲ್ಲಿ ನೋಟಿಸ್ ಕಳಿಸಲಾಗಿತ್ತು. ಮೇ 18ರೊಳಗೆ ಉತ್ತರ ನೀಡುವಂತೆ ಸ್ಪಷ್ಟ ಸೂಚನೆ ನೀಡಿದ್ದರೂ ಇದುವರೆಗೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಏ.30 ರಂದು ಸುರಿದ ಧಾರಾಕಾರ ಮಳೆಯ ನಡುವೆ ಬೌರಿಂಗ್ ಆಸ್ಪತ್ರೆಯ ತಡೆಗೋಡೆ ಕುಸಿದು ವಿದ್ಯಾರ್ಥಿ ಸೇರಿ ಏಳು ಮಂದಿ ಜೀವ ಕಳೆದುಕೊಂಡಿದ್ದರು.

ಹಕ್ಕು ಪುನರ್ ಸ್ಥಾಪನೆಯ ಆದೇಶ ರದ್ದು

■ **ವಿಕ ಸುದ್ದಿಲೋಕ** ಬೆಂಗಳೂರು

ಪರಭಾರೆಯಾದ ಬರೋಬ್ಬರಿ 43 ವರ್ಷಗಳ ನಂತರ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ (ಕೆಲವು ಜಮೀನುಗಳ ಪರಭಾರೆ ನಿಷೇಧ) ಕಾಯಿದೆಯಡಿ ಜಮೀನಿನ ಮೇಲೆ ಹಕ್ಕು ಮಂಡಿಸಿದ್ದ ಮನವಿಯನ್ನು ಪುರಸ್ಕರಿಸಿದ್ದ ಉಪ ವಿಭಾಗಾಧಿಕಾರಿಗಳ ಆದೇಶವನ್ನು ಎತ್ತಿಹಿಡಿದಿದ್ದ ಬೆಂಗಳೂರು ನಗರ ಜಿಲ್ಲಾಧಿಕಾರಿ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿ ಆದೇಶಿಸಿದೆ.

ಜಿಲ್ಲಾಧಿಕಾರಿಗಳ ಆದೇಶ ಪ್ರಶ್ನಿಸಿ ಬೆಂಗಳೂರು ಉತ್ತರದ ಯಲಹಂಕ ತಾಲೂಕಿನ ತರಹುಣಸೆ ಗ್ರಾಮದ ಟಿ.ಪಿ. ಗೋಪಾಲಪ್ಪ ಮತ್ತಿತರರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ.

ಪಿಟಿಸಿಎಲ್ ಕಾಯಿದೆ ಕುರಿತು 'ನೆಕ್ಕಂಟಿ ರಾಮಲಕ್ಷ್ಮಿ' ಮತ್ತು 'ವಿವೇಕ್ ಹಿಂದೂಜಾ' ಪ್ರಕರಣಗಳ ತೀರ್ಪು ಮತ್ತು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ನೀಡಿರುವ ಈ ಹಿಂದಿನ ಆದೇಶಗಳನ್ನು ಉಲ್ಲೇಖಿಸಿದ ನ್ಯಾಯಪೀಠ, ''ಸಾಕಷ್ಟು ವಿಳಂಬವಾಗಿ ದಾವೆ ಹೂಡಲಾಗಿದೆ. ಆದ್ದರಿಂದ, ಜಿಲ್ಲಾಧಿಕಾರಿಗಳ ಆದೇಶ ಕಾನೂನು ಬಾಹಿರ,'' ಎಂದು ಹೇಳಿದೆ.

ಅಲ್ಲದೆ, ಸೂಕ್ತ ಕಾಲಮಿತಿಯೊಳಗೆ ದಾಖಲಿಸದ ಪಿಟಿಸಿಎಲ್ ಪ್ರಕರಣಗಳು ಕಾನೂನುಬದ್ಧವಾಗಿ ಊರ್ಜಿತವಾಗುವುದಿಲ್ಲ ಎಂದು ಸ್ಪಷ್ಟಪಡಿಸಿರುವ ನ್ಯಾಯಾಲಯ, ಡಿಸಿ ಮತ್ತು ಎಸಿ ಅವರ ಆದೇಶಗಳನ್ನು ರದ್ದುಗೊಳಿಸಿ, ಇಡೀ ಪ್ರಕ್ರಿಯೆಯನ್ನು ವಜಾಗೊಳಿಸಿದೆ. ಜತೆಗೆ, ಪ್ರಕರಣವನ್ನು ಕೈಬಿಡಲು ಉಭಯ ಪಕ್ಷಕಾರರು ಜಿಲ್ಲಾಧಿಕಾರಿಗಳ ಮುಂದೆ ಜಂಟಿ ಜ್ಞಾಪನಾ ಪತ್ರ ಸಲ್ಲಿಸಿದ್ದಾರೆ. ಆದರೂ, ಜಿಲ್ಲಾಧಿಕಾರಿಗಳು ಆದೇಶ ನೀಡಿರುವುದು ಸರಿಯಲ್ಲ ಎಂದು ಪೀಠ ತನ್ನ ಆದೇಶದಲ್ಲಿ ಉಲ್ಲೇಖಿಸಿದೆ.

43 ವರ್ಷಗಳ ಬಳಿಕ ಪರಭಾರೆ ಜಮೀನಿನ ಮೇಲೆ ಹಕ್ಕು ಮಂಡನೆ



ಅರ್ಜಿದಾರರ ಪರ ವಕೀಲರು, ''ಭೂಮಿಯ ಮೂಲ ಮಂಜೂರುದಾರರು ದಶಕಗಳ ಹಿಂದೆಯೇ ಭೂಮಿಯನ್ನು ಮಾರಾಟ ಮಾಡಿದ್ದಾರೆ. ಜಮೀನು ಹಸ್ತಾಂತರವಾಗಿ 43 ವರ್ಷ ಹಾಗೂ ಪಿಟಿಸಿಎಲ್ ಕಾಯಿದೆ ಜಾರಿಗೆ ಬಂದು 37 ವರ್ಷಗಳು ಕಳೆದ ನಂತರ ಅರ್ಜಿದಾರರು ಅರ್ಜಿ ಸಲ್ಲಿಸಿದ್ದಾರೆ. ಆದರೆ, ಉಪವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿಗಳು ಕಾಲಮಿತಿಯ ನಿಯಮವನ್ನು ನಿರ್ಲಕ್ಷಿಸಿ ಮತ್ತೆ ಭೂಮಿಯ ಹಕ್ಕು ಪುನರ್ ಸ್ಥಾಪನೆಗೆ ಆದೇಶಿಸಿದ್ದು, ಆ ಆದೇಶವನ್ನು ರದ್ದು ಮಾಡಬೇಕು,'' ಎಂದು ಕೋರಿದ್ದರು.

ಪ್ರಕರಣದ ಹಿನ್ನೆಲೆ: ಯಲಹಂಕ ತಾಲೂಕಿನ ತರಹುಣಸೆ ಗ್ರಾಮದ ಜಮೀನು ಸಂಬಂಧ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವರ್ಗಕ್ಕೆ ಸೇರಿದ್ದ ಮುನಿಲಕ್ಷ್ಮಮ್ಮ ಮತ್ತು ರಾಜಣ್ಣ ಎಂಬುವವರು ಸರಕಾರದಿಂದ ಮಂಜೂರಾಗಿದ್ದ ಜಮೀನು ಮಾರಾಟವಾದ 43 ವರ್ಷಗಳು ಮತ್ತು ಪಿಟಿಸಿಎಲ್ ಕಾಯಿದೆ ಜಾರಿಯಾದ 37 ವರ್ಷಗಳ ಬಳಿಕ ಅಂದರೆ, 2017ರಲ್ಲಿ ಉಪವಿಭಾಗಾಧಿಕಾರಿಗಳ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ಈಗಾಗಲೇ ಮಾರಾಟವಾಗಿರುವ ಭೂಮಿಯನ್ನು ಮತ್ತೆ ತಮ್ಮ ಹೆಸರಿಗೆ ಪುನರ್ ಸ್ಥಾಪನೆ ಮಾಡಬೇಕು ಎಂದು ಕೋರಿದ್ದರು. ಈ ಅರ್ಜಿಗಳನ್ನು ಪರಿಗಣಿಸಿದ್ದ ಉಪವಿಭಾಗಾಧಿಕಾರಿಗಳು ಜಮೀನಿನ ಹಕ್ಕು ಮರುಸ್ಥಾಪನೆಗೆ ಆದೇಶಿಸಿದ್ದರು. ಈ ಆದೇಶ ಪ್ರಶ್ನಿಸಿ ಜಮೀನಿನ ಖರೀದಿದಾರರು ಜಿಲ್ಲಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ್ದ ಜಿಲ್ಲಾಧಿಕಾರಿಗಳು ಉಪವಿಭಾಗಾಧಿಕಾರಿಗಳ ಆದೇಶವನ್ನು ಎತ್ತಿಹಿಡಿದಿದ್ದರು. ಇದನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

60 ದಿನ ಕಾಮರಾಜ ರಸ್ತೆಯಲ್ಲಿ ವಾಹನ ಸಂಚಾರ ನಿರ್ಬಂಧ

■ **ವಿಕ ಸುದ್ದಿಲೋಕ** ಬೆಂಗಳೂರು

ಶಿವಾಜಿನಗರದ ಕಾಮರಾಜ ರಸ್ತೆ ನಾಲಾ ಕ್ರಾಸ್ ರಸ್ತೆ ಸಮೀಪ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ)ದ ವತಿಯಿಂದ ಹಳೆಯ ಕಲ್ಲಿನ ಕಲ್ವರ್ಟ್ ಕಟ್ಟಡವನ್ನು ತೆರವುಗೊಳಿಸಿ ಹೊಸದಾಗಿ ಆರ್‌ಸಿಸಿ ಕಟ್ಟಡ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮುಂದಿನ 60 ದಿನಗಳ ಕಾಲ ಕಾಮರಾಜ ರಸ್ತೆಯ ವಿಠೋಬಾ ದೇವಸ್ಥಾನದಿಂದ ನಾಲಾ ರಸ್ತೆಯವರೆಗೆ ಎಲ್ಲಾ ಮಾದರಿ ವಾಹನಗಳ ಸಂಚಾರಕ್ಕೆ ನಿರ್ಬಂಧ ಇರಲಿದೆ.

ವಾಹನ ಸವಾರರೇ ಗಮನಿಸಿ

ಅಷ್ಟೇ ಅಲ್ಲದೆ, ಕಾಮರಾಜ ರಸ್ತೆಯ ಕೆ.ಆರ್.ರಸ್ತೆ, ಕಬ್ಬನ್ ರಸ್ತೆ ಜಂಕ್ಷನ್‌ನಿಂದ ಡಿಕನ್ಸನ್ ಜಂಕ್ಷನ್ ಕಡೆಗೆ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದ್ದು, ಪರ್ಯಾಯ ರಸ್ತೆ ಮಾರ್ಗಗಳನ್ನು ಬಳಸುವಂತೆ ಸಂಚಾರ ಪೊಲೀಸರು ಮನವಿ ಮಾಡಿದ್ದಾರೆ

ಪರ್ಯಾಯ ರಸ್ತೆ ಮಾರ್ಗ: ಕಮರ್ಷಿಯಲ್ ಸ್ಟ್ರೀಟ್ ಕಡೆಯಿಂದ ಕಾಮರಾಜ ರಸ್ತೆಯ ಮೂಲಕ ಪುಲಕೇಶಿನಗರ ಮತ್ತು ಬಾಣಸವಾಡಿ ಕಡೆಗೆ ಸಂಚರಿಸುವ ವಾಹನಗಳು ಕಾಮರಾಜ ರಸ್ತೆಯ ವಿಠೋಬಾ ದೇವಸ್ಥಾನದ ಹತ್ತಿರ ಬಲ ತಿರುವು ಪಡೆಯಬೇಕು. ಬಳಿಕ ವೀರಪಿಳ್ಳೈ ಸ್ಟ್ರೀಟ್ ಮೂಲಕ ನಾಗಮ್ಮ ದೇವಸ್ಥಾನದ ಹತ್ತಿರ ಎಡ ತಿರುವು ಪಡೆದು ಸೇಂಟ್ ಜಾನ್ ರಸ್ತೆಯ ಮೂಲಕ ಪುಲಕೇಶಿನಗರ ಮತ್ತು ಬಾಣಸವಾಡಿ ಕಡೆಗೆ ಸಂಚರಿಸಬಹುದು.

ಕಬ್ಬನ್ ರಸ್ತೆ ಕಡೆಯಿಂದ ಕಾಮರಾಜ ರಸ್ತೆಯ ಮೂಲಕ ಪುಲಕೇಶಿನಗರ ಮತ್ತು ಬಾಣಸವಾಡಿ ಕಡೆಗೆ ಸಂಚರಿಸುವ ವಾಹನಗಳು ಕೆ.ಆರ್.ರಸ್ತೆ, ಕಬ್ಬನ್ ರಸ್ತೆ ಜಂಕ್ಷನ್ ಹತ್ತಿರ ಬಲ ತಿರುವು ಪಡೆಯಬೇಕು. ಹಾಗೆಯೇ ಕಬ್ಬನ್ ರಸ್ತೆಯ ಮೂಲಕ ತೆರಳಿ ಮಣಿಪಾಲ್ ಜಂಕ್ಷನ್ ಹತ್ತಿರ ಎಡ ತಿರುವು ಪಡೆದು ಡಿಕನ್ಸನ್ ರಸ್ತೆ ಮೂಲಕ ನೇರವಾಗಿ ತೆರಳಿ ಬ್ಲೂ ಸ್ಟೋನ್ ಹತ್ತಿರ ಬಲ ತಿರುವು ಪಡೆದು ಸೇಂಟ್ ಜಾನ್ ರಸ್ತೆಯ ಮೂಲಕ ಪುಲಕೇಶಿನಗರ ಮತ್ತು ಬಾಣಸವಾಡಿ ಕಡೆಗೆ ಸಂಚರಿಸಬಹುದು.

ಡಿಸ್ಪೆನ್ಸರಿ ರಸ್ತೆ (ಆಲೀಸ್ ಜಂಕ್ಷನ್) ಕಡೆಯಿಂದ ಕಾಮರಾಜ ರಸ್ತೆಯ ಮೂಲಕ ಪುಲಕೇಶಿನಗರ ಮತ್ತು ಬಾಣಸವಾಡಿ ಕಡೆಗೆ ಸಂಚರಿಸುವ ವಾಹನಗಳು ಡಿಕನ್ಸನ್ ರಸ್ತೆ ಮೂಲಕ ನೇರವಾಗಿ ಚಲಿಸಿ ಬ್ಲೂ – ಸ್ಟೋನ್ ಹತ್ತಿರ ಎಡ ತಿರುವು ಪಡೆದು ಸೇಂಟ್ ಜಾನ್ ರಸ್ತೆ ಮೂಲಕ ಪುಲಕೇಶಿನಗರ ಮತ್ತು ಬಾಣಸವಾಡಿ ಕಡೆಗೆ ತೆರಳಬಹುದು.

ಆಸ್ಪತ್ರೆ ಟಾಯ್ಲೆಟ್‌ನಲ್ಲಿ ಮಹಿಳೆ ವಿಡಿಯೊ, ಫೋಟೊ ಸೆರೆ

■ **ವಿಕ ಸುದ್ದಿಲೋಕ** ಬೆಂಗಳೂರು

ಆಸ್ಪತ್ರೆ, ಹೌಸ್‌ಕೀಪಿಂಗ್ ಸಿಬ್ಬಂದಿ ವಿರುದ್ಧ ದೂರು

ನಗರದ ಪ್ರತಿಷ್ಠಿತ ಆಸ್ಪತ್ರೆಯ ಶೌಚಾಲಯದಲ್ಲಿ ಗರ್ಭಿಣಿಯೊಬ್ಬರ ಖಾಸಗಿ ಫೋಟೊ ತೆಗೆಯಲು ಹಾಗೂ ವಿಡಿಯೋ ಚಿತ್ರೀಕರಿಸಲು ಯತ್ನಿಸಿದ ಗಂಭೀರ ಆರೋಪ ಕೇಳಿ ಬಂದಿದೆ.

ಈ ಕುರಿತು 36 ವರ್ಷದ ಸಂತ್ರಸ್ತೆ ನೀಡಿರುವ ದೂರು ಆಧರಿಸಿ ಆಸ್ಪತ್ರೆ ಆಡಳಿತ ವಿಭಾಗದ ಹಾಗೂ ಹೌಸ್ ಕೀಪಿಂಗ್ ಸಿಬ್ಬಂದಿಯೊಬ್ಬನ ವಿರುದ್ಧ ವರ್ತೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

''ಮೇ 21ರಂದು ಆಸ್ಪತ್ರೆಯ ಶೌಚಾಲಯಕ್ಕೆ ತೆರಳಿದ್ದೆ. ಈ ಸಮಯದಲ್ಲಿ ಸಮೀಪದಲ್ಲಿದ್ದ ಆಸ್ಪತ್ರೆ ಸಿಬ್ಬಂದಿ ಕೃಷ್ಣರಾಮ್ ಪಂಗಿಂಗ್ ಎಂಬುವನು ತನ್ನ ಮೊಬೈಲ್‌ನಲ್ಲಿ ರಹಸ್ಯವಾಗಿ ವಿಡಿಯೊ ಚಿತ್ರೀಕರಿಸುವ ಹಾಗೂ ಫೋಟೊ ತೆಗೆಯುವ ಸುಳಿವು ಗೊತ್ತಾಗಿ ತಕ್ಷಣ ಆತನನ್ನು ಪ್ರಶ್ನೆ ಮಾಡುತ್ತಿದ್ದಂತೆ ಸ್ಥಳದಿಂದ ಕಾಲ್ಕಿತ್ತ' ಎಂದು ಸಂತ್ರಸ್ತೆ ದೂರಿನಲ್ಲಿ ವಿವರಿಸಿದ್ದಾರೆ.

ಘಟನೆ ಬಳಿಕ ಆಸ್ಪತ್ರೆ ಆಡಳಿತ ಸಿಬ್ಬಂದಿಗೆ ವಿಚಾರ ತಿಳಿಸಿದ ಬಳಿಕ ಕೃಷ್ಣರಾಮ್‌ನನ್ನು ವಶಕ್ಕೆ ಪಡೆದು ಮೊಬೈಲ್ ಪರಿಶೀಲಿಸಿದ್ದರು. ಈ ವೇಳೆ ಆವನ ಮೊಬೈಲ್‌ನಲ್ಲಿ ಮಹಿಳೆಯರ ಅಶ್ಲೀಲ ಫೋಟೊಗಳಿರುವ ಫೋಲ್ಡರ್ ಕಂಡು ಬಂದಿತ್ತು. ಈ ಘಟನೆಯಿಂದ ಮಾನಸಿಕ ಆಘಾತಕ್ಕೆ ಒಳಗಾಗಿದ್ದೇನೆ. ಈ ನಿಟ್ಟಿನಲ್ಲಿ ಕೃತ್ಯ ಎಸಗಿದ ಕೃಷ್ಣರಾಮ್ ಹಾಗೂ ಸುರಕ್ಷತೆ ಕಲ್ಪಿಸದೆ ಆಸ್ಪತ್ರೆ ಆಡಳಿತ ವಿಭಾಗದ ವಿರುದ್ಧ ಕ್ರಮ ಜರುಗಿಸುವಂತೆ ಸಂತ್ರಸ್ತೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಮೊಬೈಲ್ ಎಫ್‌ಎಸ್‌ಎಲ್‌ಗೆ: ಆರೋಪಿ ಬಳಿ ಮೊಬೈಲ್ ಜಪ್ತಿ ಮಾಡಲಾಗಿದೆ. ಮೊಬೈಲ್‌ನಲ್ಲಿ ಮಹಿಳೆಯರ ವಿಡಿಯೊ / ಫೋಟೊಗಳು ಇರುವುದು ಕಂಡು ಬಂದಿಲ್ಲ, ಆದಾಗ್ಯೂ, ಮೊಬೈಲ್ ಡೇಟಾ ರಿಟ್ರೀವ್‌ಗಾಗಿ ಎಫ್‌ಎಸ್‌ಎಲ್‌ಗೆ ಕಳಿಸಲಾಗಿದೆ. ಆರೋಪಿ ಹಾಗೂ ಆಡಳಿತ ವಿಭಾಗದ ಸಿಬ್ಬಂದಿಗೆ ವಿಚಾರಣಾ ನೋಟಿಸ್ ಜಾರಿಗೊಳಿಸಲಾಗಿದೆ ಎಂದು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಸೈದುಲು ಅಡಾವತ್ ತಿಳಿಸಿದ್ದಾರೆ.

ಡೇಟಾ ಸೆಂಟರ್‌ಗಳಿಂದ ನಗರದಲ್ಲಿ ತಾಪಮಾನ ಹೆಚ್ಚಳ

ರಾಜಧಾನಿಯಲ್ಲಿವೆ 31 ಡೇಟಾ ಸೆಂಟರ್ | ದಿನದ 24 ಗಂಟೆಯೂ ಕಾರ್ಯಾಚರಣೆ | ದಿನಕ್ಕೆ 20 ದಶಲಕ್ಷ ಲೀಟರ್ ನೀರು ಬಳಕೆ

■ **ವಿಕ ಸುದ್ದಿಲೋಕ** ಬೆಂಗಳೂರು

ಜಾಗತಿಕ ಮಟ್ಟದ ಐಟಿ ಹಬ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಸಿಲಿಕಾನ್ ಸಿಟಿಯಲ್ಲಿ ವರ್ಷದಿಂದ ವರ್ಷಕ್ಕೆ ಏರುತ್ತಿರುವ ಉರಿಬಿಸಿಲು ಆತಂಕ ಮೂಡಿಸಿದ್ದು, ನಗರದಲ್ಲಿ ಹೆಚ್ಚುತ್ತಿರುವ 'ಎಐ ಡೇಟಾ ಸೆಂಟರ್ (ದತ್ತಾಂಶ ಕೇಂದ್ರ)ಗಳು ತಾಪಮಾನ ಹೆಚ್ಚಳಕ್ಕೆ ಕೊಡುಗೆ ನೀಡುತ್ತಿವೆ.

ಈಗಾಗಲೇ ನಗರದ ತಾಪಮಾನದ ಮಟ್ಟ ದಾಖಲೆ ನಿರ್ಮಿಸಿದೆ. ಇದರ ನಡುವೆ ತಂತ್ರಜ್ಞಾನಕ್ಕೆ ಆದ್ಯತೆ ನೀಡಬೇಕೆಂದು ಕೈಗೊಳ್ಳುತ್ತಿರುವ ಅಭಿವೃದ್ಧಿ ಕೆಲಸಗಳು ಮತ್ತೊಂದು ರೀತಿಯಲ್ಲಿ ನಗರದ ವಾತಾವರಣಕ್ಕೆ ಸವಾಲಾಗಿ ಪರಿಣಮಿಸಿವೆ. ತ್ವರಿತ ಡೇಟಾ ಸಂಸ್ಕರಣೆ ಮತ್ತು ವಿಶ್ಲೇಷಣೆಗಾಗಿ ಕೃತಕ ಬುದ್ಧಿಮತ್ತೆ(ಎಐ) ಮತ್ತು ಯಂತ್ರ ಕಲಿಕೆ ಮಾದರಿಗಳಿಗೆ ತರಬೇತಿ ನೀಡಲು ಮತ್ತು ಚಲಾಯಿಸಲು ಅಪಾರ ಕಂಪ್ಯೂಟೇಶನಲ್ ಶಕ್ತಿಯನ್ನು ಹೊಂದಿರುವ ಡೇಟಾ ಸೆಂಟರ್‌ಗಳು ಈ ಸವಾಲಿಗೆ ಕಾರಣವಾಗಲು ಆರಂಭಿಸಿವೆ.

ಈಗಾಗಲೇ ಬೆಂಗಳೂರಿನಲ್ಲಿ 31 'ಎಐ ಡೇಟಾ ಸೆಂಟರ್'ಗಳಿವೆ. ಎರಡು ನಿರ್ಮಾಣ ಹಂತದಲ್ಲಿವೆ. ಎಐ ಎಲ್ಲ ವಲಯಗಳಲ್ಲೂ ಪ್ರಾಮುಖ್ಯತೆ ಪಡೆಯುತ್ತಿದೆ. ಈ ತಂತ್ರಜ್ಞಾನದ ವೃದ್ಧಿಗೆ ನೀಡುತ್ತಿರುವ ಆದ್ಯತೆ ನೋಡಿದರೆ, ಡೇಟಾ ಸೆಂಟರ್‌ಗಳ ಬೆಳವಣಿಗೆ ಹವಾಮಾನ ಮತ್ತು ಪರಿಸರದ ಮೇಲೆ ಗಂಭೀರ ಪರಿಣಾಮ ಉಂಟು ಮಾಡಲಿದೆ.



ಎಐ ಡೇಟಾ ಸೆಂಟರ್‌ಗಳ ಸಾವಿರಾರು ಸರ್ವರ್‌ಗಳು ನಿತ್ಯ 24 ಗಂಟೆಯೂ ಕಾರ್ಯಾಚರಣೆಯಲ್ಲಿರುತ್ತವೆ. ಇವು ಹೊರಸೂಸುವ ಭಾರಿ ಪ್ರಮಾಣದ ಶಾಖವು ನಗರದ ವಾತಾವರಣದಲ್ಲಿ ಸೇರುತ್ತಿದೆ. ಪರಿಣಾಮ, ಈಗಾಗಲೇ ಹವಾಮಾನ ಬದಲಾವಣೆಯಿಂದ ಅಕಾಲಿಕ ಗುಡುಗು ಸಹಿತ ಮಳೆ ಮತ್ತು ತೀವ್ರ ಗಾಳಿ, ಆಲಿಕಲ್ಲು ಮಳೆಯಂತಹ ಪ್ರಾಕೃತಿಕ ವೈಪರೀತ್ಯಗಳು ಶುರುವಾಗಿವೆ. ಬೆಂಗಳೂರಿನ ನೆರೆಹೊರೆಯ ಗ್ರಾಮೀಣ ಪ್ರದೇಶಗಳಿಗಿಂತ ತಾಪಮಾನ ಇಲ್ಲಿ ಹೆಚ್ಚಿದೆ. ಇದು ಬೆಂಗಳೂರನ್ನು ಉಷ್ಣ ದ್ವೀಪವಾಗಿ ಪರಿವರ್ತಿಸುವ ಆತಂಕ ನಿರ್ಮಾಣವಾಗಿದೆ.

ಡೇಟಾ ಸೆಂಟರ್‌ಗಳು ನಿತ್ಯ 24 ಗಂಟೆಯೂ ಕಾರ್ಯಾಚರಣೆಯಲ್ಲಿರುತ್ತವೆ. ಅಲ್ಲದೆ, ಅವು ನಿರಂತರವಾಗಿ ಹೆಚ್ಚಿನ ಪ್ರಮಾಣದ ವಿದ್ಯುತ್ ಬಳಸುತ್ತವೆ. ಜಾಗತಿಕ ಅಂಕಿ-ಅಂಶಗಳ ಪ್ರಕಾರ, ಪ್ರತಿ ವರ್ಷ ಸರಾಸರಿ ಪ್ರತಿ ಮೆಗಾವ್ಯಾಟ್‌ಗೆ ಸುಮಾರು 25 ದಶಲಕ್ಷ ಲೀಟರ್ ನೀರನ್ನು ಡೇಟಾ ಸೆಂಟರ್ ಬಳಸುತ್ತದೆ. ಜಾಗತಿಕವಾಗಿ, ಇದಕ್ಕೆ ವಾರ್ಷಿಕ ಸರಿಸುಮಾರು 560 ಶತಕೋಟಿ ಲೀಟರ್ ನೀರಿನ ಬಳಕೆಯಾಗಲಿದ್ದು, 2030ರ ವೇಳೆಗೆ ಇದು 1.2 ಟ್ರಿಲಿಯನ್ ಲೀಟರ್ ಆಗುವ ನಿರೀಕ್ಷೆಯಿದೆ. ಎಐ ಡೇಟಾ ಕೇಂದ್ರಗಳ ಗಾತ್ರ, ತಂಪಾಗಿಸುವ ತಂತ್ರಜ್ಞಾನ, ಹವಾಮಾನ ಪರಿಸ್ಥಿತಿ ಮತ್ತು ಇಂಧನ ಬೇಡಿಕೆಯನ್ನು ಅವಲಂಬಿಸಿ ತಂಪಾಗಿಸುವಿಕೆ ಮತ್ತು ಸಂಬಂಧಿತ ಕಾರ್ಯಾಚರಣೆಗಳಿಗಾಗಿ ಬೆಂಗಳೂರಿನಲ್ಲಿ ದಿನಕ್ಕೆ ಒಟ್ಟಾರೆ 20 ದಶಲಕ್ಷ ಲೀಟರ್ ನೀರನ್ನು ಬಳಸುತ್ತವೆ. ಇದು ಈಗಾಗಲೇ ನೀರಿನ ಕೊರತೆಯಿಂದ ಬಳಲುತ್ತಿರುವ ನಗರದ ಮೇಲೆ ಒತ್ತಡವನ್ನು ಹೆಚ್ಚಿಸುತ್ತದೆ.

''ಎಐ ಡೇಟಾ ಸೆಂಟರ್‌ಗಳು ಪರಿಸರದ ಮೇಲೆ ಹಾನಿ ಮಾಡುತ್ತಿವೆ ಎಂಬ ವರದಿಗಳು ನನ್ನ ಗಮನಕ್ಕೆ ಬಂದಿಲ್ಲ, ಆ ಬಗ್ಗೆ ಪರಿಶೀಲಿಸಲಾಗುವುದು. ಅಲ್ಲದೆ, ನೀರು ಮತ್ತು ವಿದ್ಯುತ್‌ನ ಸಮರ್ಥ ಬಳಕೆಯನ್ನು ಖಚಿತಪಡಿಸಿಕೊಳ್ಳಲಾಗುತ್ತಿದೆ. ಅಲ್ಲದೆ, ಶಾಖ ಹೊರಸೂವಿಕೆ ತಡೆಯಲು ಲಿಕ್ವಿಡ್ ಕೂಲಿಂಗ್ ತಂತ್ರಜ್ಞಾನವಿದೆ. ಡ್ರೈ ಎಲೆಕ್ಟ್ರಿಕ್ ಲಿಕ್ವಿಡ್‌ನಂತಹ ತಂತ್ರಜ್ಞಾನಗಳು ಇವೆ,'' ಎಂದು ಎಲೆಕ್ಟ್ರಾನಿಕ್ಸ್, ಐಟಿ, ಬಿಟಿ ಇಲಾಖೆಯ ಉನ್ನತ ಅಧಿಕಾರಿಯೊಬ್ಬರು ತಿಳಿಸಿದರು.

> **ಪರಿಸರ ಸ್ನೇಹಿ ನೀತಿ ರೂಪಿಸಲು ಆಗ್ರಹ**
>
> ಒಂದು ವಿಷನ್ ಇಲ್ಲದೆ ಬೆಂಗಳೂರಿನ ಅಭಿವೃದ್ಧಿಗೆ ಸರಕಾರಗಳು ಮುಂದಾಗಿವೆ. ಬೆಂಗಳೂರೇ ಕರ್ನಾಟಕ ಎಂದು ಬಿಂಬಿಸಲಾಗುತ್ತಿದೆ. ಬೆಂಗಳೂರನ್ನು ಮನಿ ಮೇಕಿಂಗ್ ಸಿಟಿ ಆಗಿ ಮಾಡಲಾಗುತ್ತಿದೆ. ಈಗಾಗಲೇ ನಗರದ ತಾಪಮಾನ ದಾಖಲೆ ನಿರ್ಮಿಸಿದೆ. ವಿಪರೀತ ನೀರಿನ ಬಳಕೆ ಮಾಡಲಾಗುತ್ತಿದೆ. ಗಾಳಿ ಕಲುಷಿತವಾಗುತ್ತಿದೆ. ಇಂತಹ ಆತಂಕದ ಪರಿಸ್ಥಿತಿಯಲ್ಲಿ ಡೇಟಾ ಸೆಂಟರ್‌ಗಳ ಬೆಳವಣಿಗೆ ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸಲಿದೆ. ಹಾಗಾಗಿ, ರಾಜ್ಯದ ಬೇರೆ ನಗರಗಳ ಬೆಳವಣಿಗೆಗೂ ಆದ್ಯತೆ ನೀಡಬೇಕು. ಆಗ ಸಂಪನ್ಮೂಲದ ಹಂಚಿಕೆ ಸಾಧ್ಯವಾಗುತ್ತದೆ. ಇದಕ್ಕಾಗಿ ನಿಯಂತ್ರಿತ ಡೇಟಾ ಸೆಂಟರ್‌ಗಳ ಸ್ಥಾಪನೆಗೆ ಸರಕಾರ ಮುಂದಾಗಬೇಕು. ಅಗತ್ಯ ಸಂಪನ್ಮೂಲಗಳ ಮಿತ ಬಳಕೆಗೆ ಪೂರಕವಾಗಿ ತಂತ್ರಜ್ಞಾನ ವಲಯದಲ್ಲೂ ಸುಸ್ಥಿರ ಮತ್ತು ಪರಿಸರ ಸ್ನೇಹಿ ನೀತಿಯನ್ನು ಸರಕಾರ ರೂಪಿಸಬೇಕು ಎಂದು ಪರಿಸರವಾದಿ ವಿಜಯ್ ನಿಶಾಂತ್ ಒತ್ತಾಯಿಸಿದ್ದಾರೆ.

ನಾಳೆ ರಾಷ್ಟ್ರೀಯ ಎಐ, ಡಿಜಿಟಲ್ ವಾಟರ್ ಶೃಂಗಸಭೆ

ಬೆಂಗಳೂರು: ಭವಿಷ್ಯದ ಜಲ ನಿರ್ವಹಣೆ ಕುರಿತು ಚರ್ಚಿಸಲು ಬೆಂಗಳೂರು ಜಲಮಂಡಳಿ ಮೇ 27ರಂದು ನಗರದಲ್ಲಿ 'ರಾಷ್ಟ್ರೀಯ ಎಐ ಮತ್ತು ಡಿಜಿಟಲ್ ವಾಟರ್ ಶೃಂಗಸಭೆ- 2026' ಆಯೋಜಿಸಿದೆ.

ಹವಾಮಾನ ಬದಲಾವಣೆ, ತ್ವರಿತ ನಗರೀಕರಣ ಹಾಗೂ ಅಂತರ್ಜಲ ಕುಸಿತದಂತಹ ಜಾಗತಿಕ ಸವಾಲುಗಳನ್ನು ತಂತ್ರಜ್ಞಾನದ ಮೂಲಕ ಸಮರ್ಥವಾಗಿ ಎದುರಿಸಲು ಸಜ್ಜಾಗಿರುವ ಮಂಡಳಿ, ಸಭೆಯಲ್ಲಿ ಜಲ ನಿರ್ವಹಣೆ ಕುರಿತು ಚರ್ಚಿಸಲಿದೆ. ದೇಶದಲ್ಲಿಯೇ ಮೊದಲ ಬಾರಿಗೆ ಹಮ್ಮಿಕೊಳ್ಳುತ್ತಿರುವ ಸಭೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉದ್ಘಾಟಿಸಲಿದ್ದಾರೆ.

''ಭವಿಷ್ಯದ ಸ್ಮಾರ್ಟ್ ಜಲ ನಿರ್ವಹಣಾ ವ್ಯವಸ್ಥೆಗಳನ್ನು ರೂಪಿಸುವ ಗುರಿ ಹೊಂದಿರುವ ಈ ಶೃಂಗಸಭೆಯಲ್ಲಿ ಜಾಗತಿಕ ಜಲ ತಜ್ಞರು, ಎಐ ಪರಿಣತರು ಮತ್ತು ತಂತ್ರಜ್ಞಾನ ಸಂಸ್ಥೆಗಳ ಪ್ರತಿನಿಧಿಗಳು ಸೇರಿದಂತೆ 400ಕ್ಕೂ ಹೆಚ್ಚು ಗಣ್ಯರು ಭಾಗವಹಿಸಲಿದ್ದಾರೆ. ಪ್ರಮುಖವಾಗಿ ಎಐ ಆಧಾರಿತ ಜಲ ಆಡಳಿತ, ಸ್ಮಾರ್ಟ್ ಯುಟಿಲಿಟಿ, ಡಿಜಿಟಲ್ ಟ್ವಿನ್, ಐಒಟಿ ಮೇಲ್ವಿಚಾರಣೆ, ತ್ಯಾಜ್ಯ ನೀರು ಮರುಬಳಕೆ, ಮುನ್ಸೂಚಕ ವಿಶ್ಲೇಷಣೆ ಹಾಗೂ ಭವಿಷ್ಯದ ಆರ್ಥಿಕ ಮಾದರಿಗಳ ಕುರಿತು ವಿಸ್ತೃತ ಚರ್ಚೆಗಳು ನಡೆಯಲಿವೆ,'' ಎಂದು ಮಂಡಳಿಯ ಅಧ್ಯಕ್ಷ ಡಾ.ರಾಮ ಪ್ರಸಾತ್ ಮನೋಹರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

''ಬೆಂಗಳೂರು ಮಹಾನಗರದ ಭವಿಷ್ಯದ ಬೇಡಿಕೆಗಳನ್ನು ಪೂರೈಸಲು ಹೆಚ್ಚು ಪಾರದರ್ಶಕ, ದಕ್ಷ ಮತ್ತು ಸ್ಥಿತಿಸ್ಥಾಪಕ ಸಾರ್ವಜನಿಕ ಸೇವಾ ಮಾದರಿಯನ್ನು ರೂಪಿಸುವುದು ಈ ಡಿಜಿಟಲ್ ರೂಪಾಂತರದ ಮುಖ್ಯ ಉದ್ದೇಶವಾಗಿದೆ,'' ಎಂದು ಅವರು ತಿಳಿಸಿದ್ದಾರೆ.

ಸುಗಮ ಸಂಗೀತ ಡಿಪ್ಲೊಮಾ ತರಗತಿ ಜೂನ್‌ನಲ್ಲಿ ಆರಂಭ

ಬೆಂಗಳೂರು: ಸಂಗೀತ ಧಾಮ ಸುಗಮ ಸಂಗೀತ ಶಾಲೆಯು ಮೈಸೂರಿನ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಹಾಗೂ ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯದೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ಎರಡನೇ ವರ್ಷದ ಸುಗಮ ಸಂಗೀತ ಡಿಪ್ಲೊಮಾ ಸರ್ಟಿಫಿಕೇಟ್ ಕೋರ್ಸ್‌ನ ತರಗತಿಗಳನ್ನು ಜೂನ್ ಮೊದಲ ವಾರದಿಂದ ಆರಂಭಿಸುತ್ತಿದೆ.

ಸಂಗೀತ ನಿರ್ದೇಶಕ, ಗಾಯಕ ಮೃತ್ಯುಂಜಯ ದೊಡ್ಡವಾಡ ಅವರ ಮಾರ್ಗದರ್ಶನದಲ್ಲಿ ತರಗತಿಗಳು ನಡೆಯಲಿವೆ. ಈ ಕೋರ್ಸ್ ಉದ್ಯೋಗಾಧಾರಿತವಾಗಿದ್ದು, ಶಾಲೆಗಳಲ್ಲಿ ಸಂಗೀತ ಶಿಕ್ಷಕರಾಗಿ ಸೇವೆ ಸಲ್ಲಿಸಲು ಈ ಮೊದಲು ಶಾಸ್ತ್ರೀಯ ಸಂಗೀತದಲ್ಲಿ ಸೀನಿಯರ್ ತೇರ್ಗಡೆಯಾಗಿರುವ ಸರ್ಟಿಫಿಕೇಟ್ ಅಗತ್ಯವಿತ್ತು. ಆದರೆ, ಇದೀಗ ಡಿಪ್ಲೊಮಾ ಸರ್ಟಿಫಿಕೇಟ್ ಇದ್ದರೆ ಶಾಲೆಗಳಲ್ಲಿ ಸಂಗೀತ ಶಿಕ್ಷಕರಾಗಿ ಸೇವೆ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಜೂನ್ ಮೊದಲ ವಾರದಲ್ಲಿ ಈ ವರ್ಷದ ತರಗತಿಗಳು ಪ್ರಾರಂಭವಾಗುತ್ತವೆ. ಕಳೆದ ಬಾರಿ ಮೊದಲ ವರ್ಷವಾಗಿದ್ದರಿಂದ ಹೊರ ಜಿಲ್ಲೆಗಳ ಆಸಕ್ತರಿಗೆ ಆನ್‌ಲೈನ್ ತರಗತಿಗಳ ವ್ಯವಸ್ಥೆ ಮಾಡಲು ಸಾಧ್ಯವಾಗಿರಲಿಲ್ಲ, ಹಾಗಾಗಿ, ಹಲವಾರು ಆಸಕ್ತರಿಗೆ ನಿರಾಸೆಯಾಗಿತ್ತು. ಈ ಬಾರಿ ಹೊರಗಿನವರಿಗೆ ಆನ್‌ಲೈನ್ ತರಗತಿಗಳ ವ್ಯವಸ್ಥೆಯನ್ನೂ ಮಾಡಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಮೊ.ನಂ.: 94481 39784

'ಆನ್‌ಲೈನ್ ಔಷಧ ವಿರುದ್ಧ ಹೋರಾಡಲು ಬದ್ಧ'

ಬೆಂಗಳೂರು: ಕಾನೂನು ಬಾಹಿರವಾಗಿ ನಡೆಯುತ್ತಿರುವ ಆನ್‌ಲೈನ್ ಫಾರ್ಮಸಿ ವಿರುದ್ಧ ಸರಕಾರದ ಮಟ್ಟದಲ್ಲಿ ಹೋರಾಟ ಮುಂದುವರಿಸುವುದಾಗಿ ಕರ್ನಾಟಕ ಫಾರ್ಮಾ ರಿಟೈಲರ್ಸ್ ಆ್ಯಂಡ್ ಡಿಸ್ಟ್ರಿಬ್ಯೂಟರ್ಸ್ ಆರ್ಗನೈಸೇಶನ್ (ಕೆಪಿಆರ್‌ಡಿಒ) ಎಚ್ಚರಿಸಿದೆ.

ಬಹುರಾಷ್ಟ್ರೀಯ ಕಂಪನಿಗಳು ಹಾಗೂ ಅನಧಿಕೃತ ಆನ್‌ಲೈನ್ ಪೋರ್ಟಲ್‌ಗಳು ಔಷಧ ವ್ಯಾಪಾರ ಕ್ಷೇತ್ರದಲ್ಲಿ ಸಾಮಾನ್ಯ ವಸ್ತುಗಳಂತೆ ಜೀವರಕ್ಷಕ ಔಷಧಗಳನ್ನು ಮಾರಾಟ ಮಾಡುತ್ತಿವೆ. ಇದರಿಂದ ಸಾಂಪ್ರದಾಯಿಕ ಔಷಧ ವ್ಯಾಪಾರಿಗಳ ಅಸ್ತಿತ್ವಕ್ಕೆ ಧಕ್ಕೆ ಆಗುವುದು ಮಾತ್ರವಲ್ಲ, ಇದರಿಂದ ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ವ್ಯತಿರಿಕ್ತ ಪರಿಣಾಮ ಉಂಟುಮಾಡಲಿದೆ. ಹೀಗಾಗಿ, ಹೋರಾಟ ನಿಲ್ಲುವುದಿಲ್ಲ ಎಂದು ಸಂಘದ ಅಧ್ಯಕ್ಷ ಸಿ. ಜಯರಾಮ್ ಎಚ್ಚರಿಸಿದ್ದಾರೆ.

ವ್ಯಾಪಾರಿಗಳ ಅಸ್ತಿತ್ವಕ್ಕೆ ಧಕ್ಕೆ ಬರಬಾರದೆಂಬ ಉದ್ದೇಶದಿಂದ ಜನತೆಗೆ ಔಷಧಗಳ ಕೊರತೆಯಿಂದ ತೊಂದರೆ ಆಗದಿರಲೆಂದು ಮಳಿಗೆಗಳನ್ನು ಬಂದ್ ಮಾಡದೆ ಕಪ್ಪುಪಟ್ಟಿ ಧರಿಸಿ ಇತ್ತೀಚಿನ ರಾಷ್ಟ್ರೀಯ ಮಟ್ಟದ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದ್ದೇವೆ. ರಾಜ್ಯ ಹಾಗೂ ಕೇಂದ್ರ ಸರಕಾರ ಮತ್ತು ಸಂಬಂಧಿಸಿದ ಇಲಾಖೆಯ ಜತೆ ಸಂಪರ್ಕ ಸಾಧಿಸಿ ಆನ್‌ಲೈನ್ ಔಷಧ ಡೆಲಿವರಿ ವ್ಯವಸ್ಥೆಗೆ ಕಡಿವಾಣ ಹಾಕಲು ಒತ್ತಡ ತರಲಾಗುವುದು ಎಂದು ತಿಳಿಸಿದ್ದಾರೆ.

ಎಲ್ಲಿ-ಏನು? ಮಂಗಳವಾರ

ಕೃಷಿ ವಿಶ್ವವಿದ್ಯಾಲಯ: ಅಗ್ರಿ ಸ್ಟಾರ್ಟ್‌ಅಪ್ ಕಾನ್‌ಕ್ಲೇವ್-2.0.
ಉದ್ಘಾಟನೆ : ಕೃಷಿ ಸಚಿವ ಎನ್.ಚಲುವ ರಾಯಸ್ವಾಮಿ.
ಅಧ್ಯಕ್ಷತೆ : ಕುಲಪತಿ ಎಸ್.ವಿ.ಸುರೇಶ.
ಸ್ಥಳ : ಸಭಾಂಗಣ, ಉತ್ತರ ಬ್ಲಾಕ್, ಜಿಕೆವಿಕೆ. ಬೆಳಗ್ಗೆ 10.

ಕನ್ನಡ ಗೆಳೆಯರ ಬಳಗ : ಕನ್ನಡ ಬಾವುಟ ಹಾರಿಸಿದವರು ನೆನಪಿನ ಮಾಲೆಯಲ್ಲಿ ವಿ.ಕೃ.ಗೋಕಾಕ್ ಕುರಿತು ಡಾ. ರುದ್ರೇಶ್ ಅದರಂಗಿ ಅವರಿಂದ ಉಪನ್ಯಾಸ. ಆಶಯ ನುಡಿ: ರಾ.ನಂ.ಚಂದ್ರಶೇಖರ. ಅಧ್ಯಕ್ಷತೆ: ವ.ಚ.ಚನ್ನೇಗೌಡ.
ಸ್ಥಳ : ಬಿಎಂಶ್ರೀ ಪ್ರತಿಮೆ ಎದುರು, ನ್ಯಾಷನಲ್ ಹೈಸ್ಕೂಲ್ ವೃತ್ತ. ಬಸವನಗುಡಿ. ಬೆಳಗ್ಗೆ 11ರಿಂದ 12.

ಕಾರ್ಯಕ್ರಮ ಆಹ್ವಾನ ಪತ್ರಿಕೆ ವಾಟ್ಸ್‌ಆಪ್ ಮಾಡಿ
76766 68588

ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್‌ನಿಂದ ಯಲಹಂಕ ಕೆರೆಯಲ್ಲಿ ಅಣಕು ಪ್ರದರ್ಶನ | ಸಾರ್ವಜನಿಕರಲ್ಲಿ ಜಾಗೃತಿ

ಮಳೆಗಾಲದ ವಿಪತ್ತು ನಿರ್ವಹಣೆಗೆ ತಾಲೀಮು

■ **ವಿಕ ಸುದ್ದಿಲೋಕ** ಬೆಂಗಳೂರು

ವಿಪತ್ತು ನಿರ್ವಹಣೆಯಂತಹ ತುರ್ತು ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ಸದಾ ಸನ್ನದ್ಧರಾಗಿ ಕಾರ್ಯನಿರ್ವಹಿಸುವ ಸಂಬಂಧ ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯ ಯಲಹಂಕ ಕೆರೆಯಲ್ಲಿ ಎಸ್‌ಡಿಆರ್‌ಎಫ್, ಎನ್‌ಡಿಆರ್‌ಎಫ್ ತಂಡಗಳು ಸೋಮವಾರ ಯಶಸ್ವಿ ಅಭ್ಯಾಸ ನಡೆಸಿದವು.

ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರೂ ಆದ ಉತ್ತರ ನಗರ ಪಾಲಿಕೆಯ ಆಯುಕ್ತ ಪೊಮ್ಮಲ ಸುನಿಲ್ ಕುಮಾರ್ ಸೂಚನೆಯ ಮೇರೆಗೆ ಜಂಟಿ ಆಯುಕ್ತರಾದ ಪಲ್ಲವಿ, ಮೊಹಮ್ಮದ್ ನಯೀಮ್ ಮೊಮಿನ್ ನೇತೃತ್ವದಲ್ಲಿ ಮಳೆಗಾಲದ ಸಿದ್ಧತೆ ಸಂಬಂಧ ಯಂತ್ರೋಪಕರಣಗಳು ಹಾಗೂ ತುರ್ತು ಕಾರ್ಯಾಚರಣೆ ತಂಡಗಳ ಸನ್ನದ್ಧತಾ ಕಾರ್ಯಕ್ರಮ ಮತ್ತು ಪರಿಶೀಲನೆ ನಡೆಸಲಾಯಿತು.

ಇದೇ ವೇಳೆ ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್ ಸಿಬ್ಬಂದಿಯು ಪ್ರವಾಹ ಮತ್ತು ನೀರಿನಲ್ಲಿ ಮುಳುಗಿದ ಅವಘಡಗಳ ಸಂದರ್ಭದಲ್ಲಿ ಕೈಗೊಳ್ಳಬೇಕಾದ ರಕ್ಷಣಾ ಕ್ರಮಗಳ ಕುರಿತು ಪ್ರಾಯೋಗಿಕ ಪ್ರದರ್ಶನ ನಡೆಸಿದರು. ಕಾಂಟ್ಯಾಕ್ಟ್ ರೆಸ್ಕ್ಯೂ ಹಾಗೂ ನಾನ್ ಕಾಂಟ್ಯಾಕ್ಟ್ ರೆಸ್ಕ್ಯೂ ವಿಧಾನಗಳ ಮೂಲಕ ನೀರಿನಲ್ಲಿ ಸಿಲುಕಿದವರನ್ನು ಸುರಕ್ಷಿತವಾಗಿ ರಕ್ಷಿಸುವ ವಿಧಾನಗಳನ್ನು ಪ್ರದರ್ಶಿಸಲಾಯಿತು. ಜತೆಗೆ, ತುರ್ತು ಸಂದರ್ಭಗಳಲ್ಲಿ ಮನೆಯಲ್ಲಿ ಲಭ್ಯವಿರುವ ವಸ್ತುಗಳು, ಖಾಲಿ ಬಾಟಲಿಗಳು, ಥರ್ಮಾಕೋಲ್ ಹಾಗೂ ತೆಂಗಿನ ಕಾಯಿಗಳನ್ನು ಬಳಸಿಕೊಂಡು ತಾತ್ಕಾಲಿಕ ಲೈಫ್ ಜಾಕೆಟ್ ತಯಾರಿಸುವ ಬಗ್ಗೆ ಮಾಹಿತಿ ನೀಡಲಾಯಿತು. ಇದೇ ವೇಳೆ ಸಿಪಿಆರ್ ವಿಧಾನದ ಬಗ್ಗೆಯೂ ಪ್ರದರ್ಶನ ನೀಡಲಾಯಿತು.

ಮುಖ್ಯ ಎಂಜಿನಿಯರ್‌ಗಳಾದ ರಾಘವೇಂದ್ರ ಪ್ರಸಾದ್, ಯಮುನಾ, ವಿಪತ್ತು ನಿರ್ವಹಣಾ ಸಮಾಲೋಚಕರು, ಅಧೀಕ್ಷಕ ಎಂಜಿನಿಯರ್‌ಗಳು, ಕಾರ್ಯನಿರ್ವಾಹಕ ಎಂಜಿನಿಯರ್‌ಗಳೂ ಸೇರಿದಂತೆ ರಾಷ್ಟ್ರೀಯ ಮತ್ತು ರಾಜ್ಯ ವಿಪತ್ತು ರಕ್ಷಣಾ ದಳ, ಹೋಂ ಗಾರ್ಡ್, ಬಿಎಸ್‌ಎಫ್, ಅಗ್ನಿಶಾಮಕ ದಳ, ಬೆಸ್ಕಾಂ, ಟೆಲಿಕಾಂ ಕಂಪನಿಗಳು ಹಾಗೂ ಇತರೆ ಇಲಾಖೆಗಳ ಅಧಿಕಾರಿಗಳು ಹಾಜರಿದ್ದರು.

ಟೆಲಿಕಾಂ ತುರ್ತು ಸಂವಹನ ವ್ಯವಸ್ಥೆ ಪ್ರದರ್ಶನ

ಬೆಂಗಳೂರು ಉತ್ತರ ನಗರ ನಿಗಮವು (BNCC) ಯಲಹಂಕ ಕೆರೆಯಲ್ಲಿ ಆಯೋಜಿಸಿದ್ದ ಪೂರ್ವ-ಮುಂಗಾರು ಸಿದ್ಧತಾ ಅಣಕು ಪ್ರದರ್ಶನದಲ್ಲಿ ದೂರಸಂಪರ್ಕ ಇಲಾಖೆಯ (ಕರ್ನಾಟಕ LSA) ಸಹ ನಿರ್ದೇಶಕ ರಾಜಕುಮಾರ್ ಹಾಗೂ ಸುಬ್ರಮಣಿ ಭಾಗವಹಿಸಿದ್ದರು. ವೊಡಾಫೋನ್ ಐಡಿಯಾ ಲಿಮಿಟೆಡ್ ಸಂಸ್ಥೆಯು ಎಲ್ಲಾ ಟೆಲಿಕಾಂ ಸೇವಾ ಪೂರೈಕೆದಾರರ ಪರವಾಗಿ ತುರ್ತು ಸಂವಹನ ವ್ಯವಸ್ಥೆಯನ್ನು ಸ್ಥಾಪಿಸಿ, ಐಸಿಆರ್ (Intra Circle Roaming) ಸೆಟಪ್ ಸೇರಿದಂತೆ ತುರ್ತು ಸಂದರ್ಭಗಳಲ್ಲಿ ಸಂಪರ್ಕ ವ್ಯವಸ್ಥೆಯನ್ನು ನಿರ್ವಹಿಸುವ ವಿವಿಧ ಸನ್ನಿವೇಶಗಳ ಕುರಿತು ಪ್ರಾತ್ಯಕ್ಷಿಕೆ ಮೂಲಕ ಮಾಹಿತಿ ನೀಡಿತು.

ಮುಂಗಾರು ಮಳೆ ಶೀಘ್ರದಲ್ಲೇ ಕರ್ನಾಟಕ ಹಾಗೂ ಕೇರಳ ರಾಜ್ಯಗಳಿಗೆ ಪ್ರವೇಶಿಸಲಿರುವ ಹಿನ್ನೆಲೆಯಲ್ಲಿ ತುರ್ತು ರಕ್ಷಣಾ ಕ್ರಮಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಅತ್ಯಂತ ಅಗತ್ಯವಾಗಿದೆ. ರಕ್ಷಣಾ ಸಿಬ್ಬಂದಿ ಸ್ಥಳಕ್ಕೆ ತಲುಪುವ ಮುನ್ನವೇ ಸಾರ್ವಜನಿಕರು ಪ್ರಾಥಮಿಕ ರಕ್ಷಣಾ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ತಿಳಿದುಕೊಳ್ಳಬೇಕು. ಮಳೆಗಾಲದ ಅವಧಿಯಲ್ಲಿ ಕರ್ನಾಟಕ ಕರಾವಳಿ ಸೇರಿದಂತೆ ಸೂಕ್ಷ್ಮ ಪ್ರದೇಶಗಳಲ್ಲಿ ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್ ಸಿಬ್ಬಂದಿ ನಿಯೋಜಿಸಲಾಗುತ್ತಿದೆ.

-ಅಖಿಲೇಶ್‌ಕುಮಾರ್ ಚೌಗಲೆ ಎನ್‌ಡಿಆರ್‌ಎಫ್ ಕಮಾಂಡರ್

ಚರಂಡಿ ಹೂಳಿನ ತ್ಯಾಜ್ಯ ತೆರವಿಗೆ ಸೂಚನೆ

■ **ವಿಕ ಸುದ್ದಿಲೋಕ** ಬೆಂಗಳೂರು

ರಸ್ತೆಗಳ ಅಕ್ಕಪಕ್ಕದಲ್ಲಿನ ಚರಂಡಿಗಳಿಂದ ಹೊರ ತೆಗೆದ ತ್ಯಾಜ್ಯವನ್ನು ವಾರಗಟ್ಟಲೇ ಅಲ್ಲಿಯೇ ಬಿಡದೆ ಎರಡು ದಿನಗಳಲ್ಲಿ ತೆರವುಗೊಳಿಸಬೇಕು ಎಂದು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಎಂಜಿನಿಯರ್‌ಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಪಾಲಿಕೆ ಕಚೇರಿಯಲ್ಲಿ ಸೋಮವಾರ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲನೆ ಸಂಬಂಧ ಎಂಜಿನಿಯರಿಂಗ್ ವಿಭಾಗದ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು. ಮುಖ್ಯಮಂತ್ರಿಗಳ ವಿಶೇಷ ಅಭಿವೃದ್ಧಿ ಯೋಜನೆ ಹಾಗೂ ವಿಶೇಷ ಅಭಿವೃದ್ಧಿ ಯೋಜನೆಯಡಿ ಪಾಲಿಕೆ ವ್ಯಾಪ್ತಿಯ ರಸ್ತೆ ಪಕ್ಕದ ಚರಂಡಿ ಹೂಳೆತ್ತುವ, ಬೃಹತ್ ಮಳೆ ನೀರುಗಾಲುವೆಗಳಲ್ಲಿ ಶೇಖರಣೆಯಾಗಿರುವ ಹೂಳನ್ನು ತೆಗೆಯುವ ಹಾಗೂ ಪಾದಚಾರಿ ಮಾರ್ಗಗಳ ಅಭಿವೃದ್ಧಿ, ರಸ್ತೆ ಡಾಂಬರೀಕರಣ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಖಡಕ್ ಸೂಚನೆ ನೀಡಿದರು.

ಪಾಲಿಕೆ ವ್ಯಾಪ್ತಿಯ ಚರಂಡಿ ಹೂಳೆತ್ತುವ ಕೆಲಸವನ್ನು ತುರ್ತಾಗಿ ಹಾಗೂ ಸಮರ್ಪಕವಾಗಿ ಕೈಗೊಳ್ಳುವ ದೃಷ್ಟಿಯಿಂದ ಅಭಿವೃದ್ಧಿ ಹೆಚ್ಚುವರಿ ಆಯುಕ್ತರ ನೇತೃತ್ವದಲ್ಲಿ ಎರಡೂ ವಲಯಗಳ ಜಂಟಿ ಆಯುಕ್ತರು, ಮುಖ್ಯ ಎಂಜಿನೀಯರ್, ಅಧೀಕ್ಷಕ ಎಂಜಿನಿಯರ್‌ಗಳು ತಲಾ 50 ಕಿ.ಮೀ. ವಿಸ್ತೀರ್ಣದ ಉಸ್ತುವಾರಿ ವಹಿಸಿ, ತಪಾಸಣೆ ನಡೆಸಬೇಕು. ಚರಂಡಿಗಳ ಹೂಳೆತ್ತಿ ವಾರಗಟ್ಟಲೇ ಅಲ್ಲಿಯೇ ಬಿಡುವುದರಿಂದ ವಾಹನ ಮತ್ತು ಸಾರ್ವಜನಿಕರ ಸಂಚಾರಕ್ಕೆ ಅಡಚಣೆಯುಂಟಾಗುತ್ತದೆ. ಅದನ್ನು ಎರಡು ದಿನಗಳಲ್ಲಿ ತೆರವುಗೊಳಿಸಬೇಕು. ಬೃಹತ್ ಮಳೆ ನೀರುಗಾಲುವೆ ಹಾಗೂ ರಸ್ತೆ ಪಕ್ಕದ ಚರಂಡಿಗಳ ಹೂಳೆತ್ತುವ ಕಾಮಗಾರಿಗಳ ನಿರ್ವಹಿಸಲು ವಾರ್ಷಿಕ ಗುತ್ತಿಗೆ (ಎ.ಎಂ.ಸಿ) ಪಡೆದ ಗುತ್ತಿಗೆದಾರರು ಕೈಗೊಳ್ಳಲು ಕ್ರಮ ವಹಿಸಬೇಕು ಎಂದು ಸೂಚಿಸಿದರು.

ಹೆಚ್ಚುವರಿ ಆಯುಕ್ತ (ಅಭಿವೃದ್ಧಿ) ವೆಂಕಟಾಚಲಪತಿ, ಕಂದಾಯ ಹೆಚ್ಚುವರಿ ಆಯುಕ್ತ ಕೆ. ರಂಗನಾಥ್, ಜಂಟಿ ಆಯುಕ್ತ ಹೇಮಂತ್ ಶರಣ್, ಮುಖ್ಯ ಎಂಜಿನಿಯರ್ ವಿಜಯಕುಮಾರ್ ಹರಿದಾಸ್, ಅಧೀಕ್ಷಕ ಎಂಜಿನಿಯರ್‌ಗಳಾದ ಪುನೀತ್, ಚಂದ್ರಶೇಖರ್, ಕಾರ್ಯನಿರ್ವಾಹಕ ಎಂಜಿನಿಯರ್‌ಗಳು, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್‌ಗಳು ಉಪಸ್ಥಿತರಿದ್ದರು.

'ಕಸದ ಸಮಸ್ಯೆ ಪರಿಹಾರಕ್ಕೆ ಸಲಹೆ ಸ್ವೀಕಾರ'

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆಯನ್ನು ಮತ್ತಷ್ಟು ಬಲಪಡಿಸುವ ಹಾಗೂ ಕಸದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ನಾಗರಿಕ ಸಂಸ್ಥೆಗಳ ಸಲಹೆ ಸ್ವೀಕರಿಸಲಾಗುವುದು ಎಂದು ಪಾಲಿಕೆ ಆಯುಕ್ತ ಕೆ.ಎನ್. ರಮೇಶ್ ತಿಳಿಸಿದರು.

ಪಾಲಿಕೆ ಕಚೇರಿಯಲ್ಲಿ ಸ್ವಯಂಸೇವಾ ಸಂಸ್ಥೆಗಳು ಮತ್ತು ನಾಗರಿಕ ವೇದಿಕೆಗಳ ಪ್ರಮುಖರೊಂದಿಗೆ ಸೋಮವಾರ ಸಭೆ ನಡೆಸಿ, ಪಾಲಿಕೆಯ ವ್ಯವಸ್ಥೆಯೊಡನೆ ತಮ್ಮ ಬಡಾವಣೆಗಳ ಸ್ವಚ್ಛತೆಗೆ ಘನತ್ಯಾಜ್ಯ ಸಂಗ್ರಹಣೆ ಹಾಗೂ ನಿರ್ವಹಣೆಗಾಗಿ ಹಾಲಿ ಅಳವಡಿಸಿಕೊಂಡಿರುವ ಯೋಜನೆಗಳ ಕುರಿತು ಸಮಗ್ರವಾಗಿ ಚರ್ಚಿಸಿದರು.

''ಜೆ.ಪಿ. ನಗರದಲ್ಲಿ ವುಮೆನ್ ಆಫ್ ವಿಸ್ಡಮ್ ಸಂಸ್ಥೆಯ ಸಕ್ರಿಯ ಪ್ರಯತ್ನದಿಂದ ಮಿಶ್ರ, ತ್ಯಾಜ್ಯ ಮುಕ್ತ ವಾತಾವರಣ ನಿರ್ಮಾಣವಾಗಿದ್ದು, ಶೇ.100ರಷ್ಟು ಕಸ ವಿಂಗಡಣೆ ಮಾಡಲಾಗುತ್ತಿದೆ. ಅರವಣಿ ತಂಡದ ಮೂಲಕ ಗೋಡೆ ಚಿತ್ರಗಳನ್ನು ಬಿಡಿಸಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿರುವ ಸಂಸ್ಥೆಯ ಕಾರ್ಯ ಶ್ಲಾಘನೀಯವಾದುದು. ಎಲ್ಲ ಅಪಾರ್ಟ್‌ಮೆಂಟ್‌ಗಳು ಹಾಗೂ ಪಿಜಿಗಳಲ್ಲೂ ಕಸ ವಿಂಗಡಣೆ ಕಡ್ಡಾಯಗೊಳಿಸುವುದು,'' ಸೂಕ್ತ ಎಂದು ತಿಳಿಸಿದರು.

ಪಾಲಿಕೆ ವ್ಯಾಪ್ತಿಯ ಬ್ಲಾಕ್‌ಸ್ಪಾಟ್‌ಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಿ, ಕಟ್ಟುನಿಟ್ಟಿನ ನಿಗಾ ವಹಿಸಬೇಕು. ಸಂಜೆ ವೇಳೆಯಲ್ಲೂ ಕಸ ಸಂಗ್ರಹಿಸುವುದನ್ನು ಆರಂಭಿಸಬೇಕು. ಪ್ರತಿ ವಾರ್ಡ್‌ನಲ್ಲಿ ತ್ಯಾಜ್ಯ ನಿರ್ವಹಣಾ ಕಲಿಕಾ ಕೇಂದ್ರ ಸ್ಥಾಪಿಸಿ, ಅರಿವು ಮೂಡಿಸಬೇಕು. ರಾಜಕಾಲುವೆಗಳ ಬಫರ್ ವಲಯದಲ್ಲಿ 'ಲೇನ್ ಕಂಪೋಸ್ಟರ್'ಗಳನ್ನು ಅಳವಡಿಸಲು ಹಾಗೂ ವಾರ್ಡ್ ಮಟ್ಟದಲ್ಲಿ ಶ್ರೆಡ್ಡರ್ ಯಂತ್ರಗಳು, ಕಸದ ವಾಹನಗಳು ಮತ್ತು ಕಸ ನಿರ್ವಹಣಾ ಕಲಿಕಾ ಕೇಂದ್ರಗಳನ್ನು ಸ್ಥಾಪಿಸಲು ಬೃಹತ್ ಕಂಪನಿಗಳಿಂದ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿ ಸಂಗ್ರಹಿಸಬೇಕು. ಸ್ಥಳೀಯ ಮಟ್ಟದಲ್ಲಿ ಕಾಂಪೋಸ್ಟಿಂಗ್ ಮಾಡಲು ಪಾಲಿಕೆಯಿಂದ ಜಾಗ ಗುರುತಿಸಿ, ಅನುಮತಿ ನೀಡಬೇಕೆಂಬ ಸಲಹೆಗಳು ಸಭೆಯಲ್ಲಿ ಕೇಳಿ ಬಂದವು.

ಪಾಲಿಕೆಯ ಕಸದ ವಾಹನಗಳು ವಾಣಿಜ್ಯ ಸಂಸ್ಥೆಗಳ ತ್ಯಾಜ್ಯವನ್ನು ಸಂಗ್ರಹಿಸುವುದನ್ನು ತಕ್ಷಣದಿಂದಲೇ ನಿಲ್ಲಿಸಬೇಕು. ಶೇ. 100 ರಷ್ಟು ಮನೆ-ಮನೆ ಕಸ ಸಂಗ್ರಹಣೆ ಖಾತರಿಪಡಿಸಿಕೊಳ್ಳಲು ಎಲ್ಲ ವಾಹನಗಳ ಜಿಪಿಎಸ್ ವ್ಯವಸ್ಥೆ ಕಡ್ಡಾಯ ಮಾಡುವಂತೆ ನಾಗರಿಕ ಸಂಸ್ಥೆಗಳು ಒತ್ತಾಯಿಸಿದವು.

ಸಭೆಯಲ್ಲಿ ಬಿಎಸ್‌ಡಬ್ಲ್ಯುಎಂಎಲ್‌ನ ರಾಯಭಾರಿ ಅನಿರುದ್ಧ ಜತ್ಕರ್, ಕುಮಾರಸ್ವಾಮಿ ಬಡಾವಣೆಯ ಸಿಟಿಜನ್ ಟಾಸ್ಕ್ ಫೋರ್ಸ್‌ನ ಶ್ರೀನಾಥ್, ಜೆ.ಪಿ. ನಗರದ ವುಮೆನ್ ಆಫ್ ವಿಸ್ಡಮ್, ಎಚ್‌ಎಸ್‌ಆರ್ ಸಿಟಿಜನ್ ಫೋರಂನ ಪ್ರಮುಖರು ಭಾಗವಹಿಸಿದ್ದರು.

ಹಾಸ್ಟೆಲ್, ವಸತಿ ಶಾಲೆ ಗುತ್ತಿಗೆ ನೌಕರರ ಮುಷ್ಕರ

ಕನಿಷ್ಠ ವೇತನ, ಸೇವಾ ಭದ್ರತೆಗೆ ಒತ್ತಾಯ

■ **ವಿಕ ಸುದ್ದಿಲೋಕ** ಬೆಂಗಳೂರು

ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರಿಗೆ ಕನಿಷ್ಠ ವೇತನವನ್ನು 36 ಸಾವಿರ ರೂ.ಗೆ ಏರಿಸಬೇಕು ಹಾಗೂ ನಿವೃತ್ತಿಯವರೆಗೆ ಸೇವಾ ಭದ್ರತೆ ಕಲ್ಪಿಸಬೇಕೆಂಬುದೂ ಸೇರಿದಂತೆ ನಾನಾ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಸರಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರು ನಗರದ ಫ್ರೀಡಂ ಪಾರ್ಕ್‌ನಲ್ಲಿ ಸೋಮವಾರ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದರು.

ಹಲವು ವರ್ಷಗಳಿಂದ ಕಡಿಮೆ ಸಂಬಳದಲ್ಲಿ ಯಾವುದೇ ಉದ್ಯೋಗ ಭದ್ರತೆ ಇಲ್ಲದೆ ದುಡಿಯುತ್ತಿರುವ ಹೊರಗುತ್ತಿಗೆ ನೌಕರರ ಸಮಸ್ಯೆಗಳನ್ನು ಸರಕಾರ ಗಂಭೀರವಾಗಿ ಪರಿಗಣಿಸಬೇಕು. ಕನಿಷ್ಠ ವೇತನವನ್ನು ತಕ್ಷಣ ಜಾರಿಗೆ ತಂದು, ಬಾಕಿ ವೇತನ ಪಾವತಿಸಬೇಕು ಎಂದು ಕರ್ನಾಟಕ ರಾಜ್ಯ ಸರಕಾರಿ ಕಾಯಂಯೇತರ ನೌಕರರ ಒಕ್ಕೂಟದ (ಸಿಐಟಿಯು) ಅಧ್ಯಕ್ಷೆ ಎಸ್. ವರಲಕ್ಷ್ಮಿ ಒತ್ತಾಯಿಸಿದರು.

2025ರ ಏಪ್ರಿಲ್ 11 ರಿಂದಲೇ ಪರಿಷ್ಕೃತ ಕನಿಷ್ಠ ವೇತನ ಜಾರಿಗೆ ತರಬೇಕು. ಮಾಸಿಕ ಕನಿಷ್ಠ 36 ಸಾವಿರ ರೂ. ವೇತನ ನಿಗದಿ ಮಾಡಬೇಕು. ಎಲ್ಲಾ ಸಿಬ್ಬಂದಿಗೆ ನಿವೃತ್ತಿವರೆಗೆ ಸೇವಾ ಭದ್ರತೆ ಮತ್ತು ಕೆಲಸ ಮಾಡುವ ಸ್ಥಳಗಳಲ್ಲೇ ಕಾಯಂ ನೇಮಕ ಮಾಡಬೇಕು. ನೇರ ವೇತನ ಪಾವತಿ ವ್ಯವಸ್ಥೆ ಜಾರಿಗೆ ತರಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಹೊರಗುತ್ತಿಗೆ ನೌಕರರಿಗೆ ಇಎಸ್‌ಐ, ಪಿಎಫ್, ಗುರುತಿನ ಚೀಟಿ ಸೇರಿದಂತೆ ಕಾರ್ಮಿಕ ಕಾಯಿದೆಯ ಸೌಲಭ್ಯಗಳನ್ನು ನೀಡಬೇಕು. ಮಹಿಳಾ ನೌಕರರಿಗೆ ವೇತನ ಸಹಿತ ಹೆರಿಗೆ ರಜೆ ನೀಡಬೇಕು. ಕೆಲಸದ ಸ್ಥಳದಲ್ಲಿ ಶೋಷಣೆ ಮತ್ತು ಕಿರುಕುಳ ನಿಲ್ಲಿಸಬೇಕು. ಸುಪ್ರೀಂ ಕೋರ್ಟ್ ಆದೇಶದಂತೆ ಸಮಾನ ಕೆಲಸಕ್ಕೆ ಸಮಾನ ವೇತನ ಕೊಡಬೇಕು. ಹಾಸ್ಟೆಲ್ ಹೊರಗುತ್ತಿಗೆ ಸಿಬ್ಬಂದಿಗೆ ಆರೋಗ್ಯ ಸಂಜೀವಿನಿ ಯೋಜನೆಯನ್ನು ತಕ್ಷಣ ಜಾರಿ ಮಾಡಬೇಕು ಎಂದು ಒತ್ತಾಯಿಸಿದರು.

ಕರ್ನಾಟಕ ರಾಜ್ಯ ಸರಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘದ ಅಧ್ಯಕ್ಷ ಭೀಮಶೆಟ್ಟಿಯಂಪಳ್ಳಿ, ಉಪಾಧ್ಯಕ್ಷ ಎಂ. ಜಂಬಯ್ಯ ನಾಯಕ, ಪ್ರಧಾನ ಕಾರ್ಯದರ್ಶಿ ಕೆ. ಹನುಮೇಗೌಡ ಸೇರಿದಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಕಾರ್ಯನಿರ್ವಹಿಸುತ್ತಿರುವ ಅಡುಗೆ ಸಿಬ್ಬಂದಿ, ಸಹಾಯಕರು, ಸ್ವಚ್ಛತಾ ಕಾರ್ಮಿಕರು, ಕಾವಲುಗಾರರು, ಡಿ ಗ್ರೂಪ್ ನೌಕರರು ಸೇರಿದಂತೆ ಹಲವರು ಮುಷ್ಕರದಲ್ಲಿ ಭಾಗವಹಿಸಿದ್ದರು.

ನಿರಂತರವಾಗಿ ತೈಲ ಬೆಲೆ ಹೆಚ್ಚಿಸುತ್ತಿರುವ ಕೇಂದ್ರ ಸರಕಾರದ ಕ್ರಮ ಖಂಡಿಸಿ ಯುವ ಕಾಂಗ್ರೆಸ್ ಕಾರ್ಯಕರ್ತರು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು. ಯುವ ಕಾಂಗ್ರೆಸ್ ಮಾಧ್ಯಮ ವಿಭಾಗದ ಅಧ್ಯಕ್ಷ ದೀಪಕ್‌ಗೌಡ , ಯುವ ಕಾಂಗ್ರೆಸ್ ಕಾನೂನು ವಿಭಾಗದ ಅಧ್ಯಕ್ಷ ಶ್ರೀಧರ್‌ರಾವ್, ಉತ್ತರ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರಾಹುಲ್‌ಗೌಡ, ಗಾಂಧಿನಗರ ವಿಧಾನಸಭಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹರೀಶ್ ಸೇರಿ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಮಹಾರಾಣಿ ಕ್ಲಸ್ಟರ್ ಯೂನಿವರ್ಸಿಟಿಯಲ್ಲಿ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವ ಜತೆಗೆ ಶುಲ್ಕದ ಹೊರೆ ಕಡಿಮೆ ಮಾಡಬೇಕು ಎಂದು ಆಗ್ರಹಿಸಿ ರಾಷ್ಟ್ರೀಯ ಅಂಬೇಡ್ಕರ್ ಸೇನೆ ನೇತೃತ್ವದಲ್ಲಿ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಆರ್ಟ್ ಆಫ್ ಲಿವಿಂಗ್ ಕೇಂದ್ರದ ಸಂಭ್ರಮಕ್ಕೆ ಸಾಕ್ಷಿಯಾದ ಗಣ್ಯರು

■ **ವಿಕ ಸುದ್ದಿಲೋಕ** ಬೆಂಗಳೂರು

ಆರ್ಟ್ ಲಿವಿಂಗ್ ಅಂತಾರಾಷ್ಟ್ರೀಯ ಕೇಂದ್ರದ 45 ವರ್ಷಗಳ ಪಯಣದ ಸಂಭ್ರಮದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ರಾಜ್ಯ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಆಹಾರ ಸಚಿವ ಕೆ.ಎಚ್. ಮುನಿಯಪ್ಪ, ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರಿಂದ ಆಶೀರ್ವಾದ ಪಡೆದುಕೊಂಡರು.

ನಂತರ ಮಾತನಾಡಿದ ಸಚಿವ ಕೆ.ಎಚ್. ಮುನಿಯಪ್ಪ, ''ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರು ಜಗತ್ತನ್ನು ಒಂದು ಕುಟುಂಬವೆಂದು ಭಾವಿಸಿ, ಸಮಾಜ ಕಲ್ಯಾಣಕ್ಕಾಗಿ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದಾರೆ. ಅವರ ಈ ಸಂದೇಶ ರಾಜ್ಯ, ರಾಷ್ಟ್ರ ಮಾತ್ರವಲ್ಲದೆ ಇಡೀ ಜಗತ್ತಿಗೆ ಮಾದರಿಯಾಗಿದೆ,'' ಎಂದು ಹೇಳಿದರು.

ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ''ಶ್ರೀ ಶ್ರೀ ರವಿಶಂಕರ್ ಗುರೂಜಿ ನುಡಿದಂತೆ ನಡೆಯುತ್ತಾರೆ. ತಾವು ಮಾತನಾಡಿದ್ದನ್ನು ಕಾರ್ಯರೂಪಕ್ಕೆ ತಂದವರು. ಅವರು ಮಾಡುವ ಪ್ರತಿಯೊಂದು ಕೆಲಸದಲ್ಲೂ ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯನ್ನು ಕಾಣಬಹುದು. ಸಮಾಜದ ಎಲ್ಲ ವರ್ಗದ ಜನರನ್ನು ತಮ್ಮ ಧರ್ಮ, ಜಾತಿ ಮರೆತು ಆರ್ಟ್ ಆಫ್ ಲಿವಿಂಗ್ ಕೇಂದ್ರದಲ್ಲಿ ಸೇರುವಂತೆ ಮಾಡಿದ್ದಾರೆ. ಅವರ ನಾಲ್ಕೂವರೆ ದಶಕಗಳ ಸೇವೆ, ಆಧ್ಯಾತ್ಮಿಕತೆ, ಒತ್ತಡಕ್ಕೆ ಪರಿಹಾರ ಕ್ರಮಗಳು ಮತ್ತು ಮಾನವೀಯ ಕಾರ್ಯಗಳು ಜಗಜ್ಜಾಹೀರಾಗಿವೆ,'' ಎಂದು ಹರ್ಷ ವ್ಯಕ್ತಪಡಿಸಿದರು.

ಪಶ್ಚಿಮ ಬಂಗಾಳದ ಮಾಜಿ ರಾಜ್ಯಪಾಲ ಡಾ. ಸಿ. ವಿ. ಆನಂದ ಬೋಸ್, ಗೋವಾದ ಪ್ರವಾಸೋದ್ಯಮ ಸಚಿವ ರೋಹನ್ ಅಶೋಕ್ ಖೌಂಟೆ, ಮಹಾರಾಷ್ಟ್ರದ ಸಂಸತ್ ಸದಸ್ಯ ಧೈರ್ಯಶೀಲ್ ಸಂಭಾಜಿರಾವ್ ಮಾನೆ ಉಪಸ್ಥಿತರಿದ್ದರು.

ಪೇಟೆ ಧಾರಣೆ

ಬೆಂಗಳೂರು ಸಗಟು ಬೆಲೆ
25.05.2026

ಸೂರ್ಯಕಾಂತಿ ಎಣ್ಣೆ (10 ಲೀ.)	
ಗೋಲ್ಡ್ ವಿನ್ನರ್	1720
ಜೆಮಿನಿ	1750
ಸನ್‌ಪ್ಯೂರ್ (10 ಕೆ.ಜಿ.)	1710
ಪಾಮ್ ಆಯಿಲ್ (850 ಗ್ರಾ.ನ 10 ಪ್ಯಾಕೆಟ್)	
ರುಚಿ ಗೋಲ್ಡ್	1440
ಶುಭ್ (10 ಲೀ.)	1420
ಕಡಲೆಕಾಯಿ ಎಣ್ಣೆ (10 ಲೀ.)	
ಫ್ಯೂರ್‌ನಟ್	1700
ಕೆ ಎಸ್ ಜಿ	1650
ನಟ್ ಗೋಲ್ಡ್	1620
ಕುಕ್ಕಿಂಗ್ ಆಯಿಲ್ (850 ಗ್ರಾ.ನ 10 ಪ್ಯಾಕೆಟ್)	
ಸನ್‌ಪಾರ್ಕ್	1400
ಸನ್ ಪ್ರಿಯಾ	1470
ಸನ್‌ಪ್ಲಸ್	1480
ದೀಪದ ಎಣ್ಣೆ (850 ಗ್ರಾ.ನ 10 ಪ್ಯಾಕೆಟ್)	
ಆನಂದಮ್	1470
ಅಂದಂ	1460
ಸಕ್ಕರೆ (50 ಕೆಜಿ)	
ಉತ್ತಮ	2130-2140
ಮಧ್ಯಮ	2115-2120
ಬೆಲ್ಲ (ಕ್ವಿಂಟಾಲ್)	
ಸಣ್ಣ ಅಚ್ಚು	5300-5350
ದಪ್ಪ ಅಚ್ಚು	5200-5300
ಉಂಡೆ ಸೇಲಂ	5000-5100
ಕಡ್ಲೆ ಬೇಳೆ (50 ಕೆಜಿ)	
ಲಕನ್	4450-4500



ತೊಗರಿಬೇಳೆ (50 ಕೆಜಿ)	
ಶಿವಲಿಂಗ	6510-6520
ರೆಗ್ಯುಲರ್	5650-5800
ಉದ್ದಿನ ಬೇಳೆ (50 ಕೆಜಿ)	
ಹನುಮಾನ್	6000-6050
ಮಹಾರಾಜ	5750-6300
ಕಡ್ಲೆಕಾಯಿ ಬೀಜ (40 ಕೆಜಿ)	
ಉತ್ತಮ	6000-6300
ಮಧ್ಯಮ	5400-5600
ಅಕ್ಕಿ (ಕ್ವಿಂಟಾಲ್)	
ಸೋನಾ ಮಸೂರಿ (ಹಳೆ)	5800-6200
ಸೋನಾ ಮಸೂರಿ (ಹೊಸ)	4900-5200
ಸೋನಾ ಮಸೂರಿ ಸ್ಟೀಮ್	4900-5200
ಇಡ್ಲಿಕಾರ್	3700-3900
ರಾಗಿ (ಕ್ವಿಂಟಾಲ್)	
ಉತ್ತಮ	5000-5100
ಮಧ್ಯಮ	4400-4600
ಗೋಧಿ (50 ಕೆಜಿ)	
ಉತ್ತಮ	2100-2200
ಮಧ್ಯಮ	1900-2000
ಜೋಳ (50 ಕೆಜಿ)	
ಉತ್ತಮ	2700-2800
ಮಧ್ಯಮ	2000-2400
ಈರುಳ್ಳಿ (50 ಕೆಜಿ)	
ದಪ್ಪ	950-1050
ಮಧ್ಯಮ	500-600
ಗೋಲ್ಟಾ	400-500
ಮೊಟ್ಟೆ 100ಕ್ಕೆ	615

ನಗರದಲ್ಲಿ ಒಂದೇ ರಾತ್ರಿ ಮೂರು ಕೊಲೆ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜಧಾನಿಯಲ್ಲಿ ಪ್ರತ್ಯೇಕ ಭಾಗಗಳಲ್ಲಿ ಭಾನುವಾರ ರಾತ್ರಿ ಮೂರು ಕೊಲೆಗಳಾಗಿದ್ದು, ಆಟೊ ಚಾಲಕರಿಬ್ಬರು ಹಾಗೂ ವೃದ್ಧ ಕೊಲೆಯಾಗಿದ್ದಾರೆ.

ಮದ್ಯದ ಅಮಲಿನ ಜಗಳದಲ್ಲಿ ಪರಿಚಯಸ್ಥನೇ ವೃದ್ಧನ ಮೇಲೆ ಹಲ್ಲೆ ನಡೆಸಿ ಕೊಲೆಗೈದಿರುವ ಘಟನೆ ಭಾನುವಾರ ರಾತ್ರಿ ಕುಂದಲಹಳ್ಳಿಯಲ್ಲಿ ನಡೆದಿದೆ.

ಮೆಹಬೂಬ್ ಬಾಷಾ (59) ಕೊಲೆಯಾದವರು. ಕೊಲೆ ಆರೋಪಿ ಸುಂದರ ಮೂರ್ತಿ (26) ಎಂಬುವನನ್ನು ಬಂಧಿಸಿರುವ ವೈಟ್‌ಫೀಲ್ಡ್ ಠಾಣೆ ಪೊಲೀಸರು, ತನಿಖೆ ನಡೆಸುತ್ತಿದ್ದಾರೆ.

ಕುಂದಲಹಳ್ಳಿಯಲ್ಲಿ ಬಾಡಿಗೆ ಮನೆಯಲ್ಲಿ ಒಬ್ಬಂಟಿಯಾಗಿ ವಾಸಿಸುತ್ತಿದ್ದ ಮೆಹಬೂಬ್, ಗಾರೆ ಕೆಲಸ ಮಾಡುತ್ತಿದ್ದರು. ಮದ್ಯವ್ಯಸನಿಯಾಗಿದ್ದ ಮೆಹಬೂಬ್, ಭಾನುವಾರ ರಾತ್ರಿ ಮನೆ ಸಮೀಪ ಬಿದ್ದು ಮೃತಪಟ್ಟಿದ್ದಾರೆ ಎಂಬ ಸುದ್ದಿ ಹರಿದಾಡಿತ್ತು. ಈ ನಿಟ್ಟಿನಲ್ಲಿ ರಾಮಮೂರ್ತಿನಗರದಲ್ಲಿ ನೆಲೆಸಿರುವ ಅವರ ಮಗಳು ಕೂಡ ತಂದೆಯ ಮದ್ಯವ್ಯಸನದ ಬಗ್ಗೆ ಉಲ್ಲೇಖಿಸಿ ದೂರು ನೀಡಿದ್ದರು. ಜತೆಗೆ, ತಂದೆಯ ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದರು.

ಈ ನಿಟ್ಟಿನಲ್ಲಿ ಅಸಹಜ ಸಾವು ಪ್ರಕರಣ ದಾಖಲಿಸಿ ತನಿಖೆ ನಡೆಸಲಾಗುತ್ತಿತ್ತು. ತನಿಖೆ ಹಂತದಲ್ಲಿ ಘಟನಾ ಸ್ಥಳದ ಸಮೀಪದಲ್ಲಿ ವಾಸಿಸುತ್ತಿದ್ದ ಇಬ್ಬರು ಕಾರ್ಮಿಕರ ವಿಚಾರಣೆ ನಡೆಸಿದಾಗ ಮೆಹಬೂಬ್‌ರ ತಲೆಗೆ ಕಟ್ಟಿಗೆಯಿಂದ ಹಲ್ಲೆ ನಡೆಸಿ ಸುಂದರಮೂರ್ತಿ ಕೊಲೆಗೈದಿದ್ದಾನೆ ಎಂದು ಮಾಹಿತಿ ನೀಡಿದ್ದರು.

ಈ ನಿಟ್ಟಿನಲ್ಲಿ ಕ್ಷಿಪ್ರ ಕಾರ್ಯಾಚರಣೆ ನಡೆಸಿ ಸುಂದರಮೂರ್ತಿಯನ್ನು ಬಂಧಿಸಿ ವಿಚಾರಣೆ ನಡೆಸಿದಾಗ ಕೊಲೆಗೈದಿರುವುದನ್ನು ಒಪ್ಪಿಕೊಂಡಿದ್ದಾನೆ. ಮೆಹಬೂಬ್ ಹಾಗೂ ಸುಂದರ ಮೂರ್ತಿ ಗಾರೆ ಕೆಲಸ ಮಾಡಿಕೊಂಡಿದ್ದರು. ಮದ್ಯದ ಅಮಲಿನಲ್ಲಿ ನಡೆದ ಜಗಳ ವಿಕೋಪಕ್ಕೆ ತಿರುಗಿ ಕೊಲೆಯಲ್ಲಿ ಅಂತ್ಯವಾಗಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಪ್ರಕರಣದ ತನಿಖೆ ಪ್ರಗತಿಯಲ್ಲಿದೆ ಎಂದು ಪೊಲೀಸರು ಹೇಳಿದ್ದಾರೆ.

ಸಿಗರೇಟ್ ಹೊಗೆ ಬಿಟ್ಟಿದ್ದನ್ನು ಪ್ರಶ್ನಿಸಿದ್ದಕ್ಕೆ ಆಟೊ ಚಾಲಕನ ಹತ್ಯೆ

ಬೆಂಗಳೂರು: ಸಿಗರೇಟ್ ಹೊಗೆ ಬಿಟ್ಟಿದ್ದನ್ನು ಪ್ರಶ್ನಿಸಿದ್ದಕ್ಕೆ ಕೆರಳಿದ ದುಷ್ಕರ್ಮಿಯೊಬ್ಬ ಆಟೊ ಚಾಲಕನಿಗೆ ಡ್ಯಾಗರ್‌ನಿಂದ ಇರಿದು ಕೊಲೆಗೈದಿರುವ ಘಟನೆ ಚಿಕ್ಕಬಾಣಾವರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಭಾನುವಾರ ರಾತ್ರಿ ನಡೆದಿದೆ.

ರಜಾಕ್‌ಪಾಳ್ಯದ ಸೈಯದ್ ಶಫಿ (36) ಕೊಲೆಯಾದವರು. ಕೊಲೆ ಆರೋಪಿ ದರ್ಶನ್ ಎಂಬುವನನ್ನು ಬಂಧಿಸಿರುವ ಪೊಲೀಸರು, ತನಿಖೆ ನಡೆಸುತ್ತಿದ್ದಾರೆ.

ಕೌಟುಂಬಿಕ ಕಲಹದಿಂದ ಪತ್ನಿಯಿಂದ ಪ್ರತ್ಯೇಕವಾಗಿದ್ದ ಶಫಿ, ಯಶವಂತಪುರದ ಗ್ಯಾರೇಜ್‌ನಲ್ಲಿ ಟಿಂಕರಿಂಗ್ ಕೆಲಸ ಮಾಡುತ್ತಿದ್ದ. ಬಿಡುವಿನ ಸಮಯದಲ್ಲಿ ಆಟೊ ಚಾಲನೆ ಮಾಡುತ್ತಿದ್ದ. ಭಾನುವಾರ ರಾತ್ರಿ ಅಬ್ಬಿಗೆರೆ ಮುಖ್ಯರಸ್ತೆಯಲ್ಲಿನ ಬಾರ್‌ನಲ್ಲಿ ಮದ್ಯ ಖರೀದಿಸಿ ಮುಂಭಾಗವೇ ಆಟೊ ನಿಲ್ಲಿಸಿಕೊಂಡು ಕುಡಿಯುತ್ತಿದ್ದ.

ಇದೇ ಸಮಯದಲ್ಲಿ ಬಾರ್‌ನಿಂದ ಹೊರಬಂದ ದರ್ಶನ್, ಶಫಿ ಆಟೊ ಪಕ್ಕವೇ ಮೂತ್ರ ವಿಸರ್ಜನೆ ಮಾಡಿ ಸಿಗರೇಟ್ ಹೊಗೆ ಬಿಡುತ್ತಿದ್ದ. ಇದನ್ನು ಶಫಿ ಪ್ರಶ್ನಿಸಿದ್ದ. ಇದರಿಂದ ಇಬ್ಬರ ನಡುವೆ ಮಾತಿಗೆ ಮಾತು ಬೆಳೆದು ಜಗಳ ನಡೆದಿದೆ. ಮದ್ಯದ ಅಮಲಿನಲ್ಲಿದ್ದ ದರ್ಶನ್ ಡ್ಯಾಗರ್‌ನಿಂದ ಶಫಿ ಎದೆ ಹಾಗೂ ಕುತ್ತಿಗೆಗೆ ಹಲವು ಬಾರಿ ಇರಿದು ಪರಾರಿಯಾಗಿದ್ದ. ರಕ್ತದ ಮಡುವಿನಲ್ಲಿ ಬಿದ್ದಿದ್ದ ಶಫಿ ಸ್ಥಳದಲ್ಲಿಯೇ ಮೃತಪಟ್ಟಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ಗೊತ್ತಾದ ತಕ್ಷಣ ಸ್ಥಳಕ್ಕೆ ತೆರಳಿದ್ದ ಪೊಲೀಸರು ಶಫಿ ಕುಟುಂಬಸ್ಥರಿಂದ ದೂರು ಪಡೆದಿದ್ದಾರೆ. ತಲೆಮರೆಸಿಕೊಂಡಿದ್ದ ಆರೋಪಿ ದರ್ಶನ್‌ನನ್ನು ಬಂಧಿಸಿದ್ದಾರೆ. ಆರೋಪಿ ದರ್ಶನ್ ವಿರುದ್ಧ ಈ ಹಿಂದೆ ಹಲ್ಲೆ ಪ್ರಕರಣವೊಂದು ದಾಖಲಾಗಿತ್ತು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಹಣಕಾಸು ವಿಚಾರಕ್ಕೆ ಜಗಳ: ಸ್ನೇಹಿತನ ಕೊಲೆ

ಅಪರಾಧ ಸುದ್ದಿ

ಬೆಂಗಳೂರು: ಹಣಕಾಸು ವಿಚಾರಕ್ಕೆ ಸ್ನೇಹಿತನನ್ನೇ ದುಷ್ಕರ್ಮಿಗಳಿಬ್ಬರು ಕೊಲೆಗೈದಿರುವ ಘಟನೆ ಕುಂಬಳಗೋಡು ಠಾಣಾ ವ್ಯಾಪ್ತಿಯಲ್ಲಿ ಭಾನುವಾರ ರಾತ್ರಿ ನಡೆದಿದೆ.

ತಾವರೆಕೆರೆಯ ಎನ್.ರಕ್ಷಿತ್ (25) ಕೊಲೆಯಾದವರು. ಆರೋಪಿಗಳಾದ ಕಂಬೀಪುರದ ಮೊಹಿನ್ ಪಾಷಾ, ಹಸನ್ ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ.

ಆಟೊ ಚಾಲಕನಾಗಿದ್ದ ರಕ್ಷಿತ್, ಸ್ನೇಹಿತನಾದ ಮೊಹಿನ್‌ಗೆ ಸಾಲ ಕೊಟ್ಟಿದ್ದ. ಹಲವು ತಿಂಗಳು ಕಳೆದರೂ ವಾಪಸ್ ಕೊಟ್ಟಿರಲಿಲ್ಲ. ಭಾನುವಾರ ಸಾಯಂಕಾಲ 6 ಗಂಟೆ ಸುಮಾರಿಗೆ ಮೊಹಿನ್ ಬಳಿ ಸಾಲ ವಾಪಸ್ ಪಡೆದು ಬರುವುದಾಗಿ ತನ್ನ ತಾಯಿ ಪುಷ್ಪಲತಾ ಅವರಿಗೆ ತಿಳಿಸಿದ್ದ ರಕ್ಷಿತ್, ಮನೆಯಿಂದ ಹೊರಗೆ ತೆರಳಿದ್ದ. ಆದರೆ, ಪುನಃ ಮನೆಗೆ ಹಿಂದಿರುಗಿರಲಿಲ್ಲ.

ಮಗ ರಾತ್ರಿ ಮನೆಗೆ ಬರದಿದ್ದಕ್ಕೆ ಆತಂಕಗೊಂಡ ಪುಷ್ಪಲತಾ ಅವರು ಕಂಬೀಪುರಕ್ಕೆ ತೆರಳಿ ಮೊಹಿನ್‌ನನ್ನು ಮಗನ ಕುರಿತು ಪ್ರಶ್ನಿಸಿದ್ದರು. ಈ ವೇಳೆ ಹಣಕಾಸು ವಿಚಾರಕ್ಕೆ ತನ್ನ ಸಂಬಂಧಿ ಹಸನ್ ಜತೆಗೂಡಿ ರಕ್ಷಿತ್‌ನನ್ನು ಕೊಂದು ಮೃತದೇಹವನ್ನು ರಾಮಸಂದ್ರದ ಬಳಿಯ ಗುಂಡಿಗೆ ಎಸೆದಿರುವುದಾಗಿ ತಿಳಿಸಿದ್ದ. ಇದರಿಂದ ಆತಂಕಗೊಂಡ ಪುಷ್ಪಲತಾ ಅವರು ಪೊಲೀಸರಿಗೆ ವಿಷಯ ತಿಳಿಸಿದ್ದರು. ತಕ್ಷಣ ಪೊಲೀಸರು ಕೃತ್ಯ ನಡೆದಿರುವ ಸ್ಥಳಕ್ಕೆ ತೆರಳಿದಾಗ ರಕ್ಷಿತ್ ಮೃತದೇಹ ಪತ್ತೆಯಾಗಿದೆ. ಪ್ರಕರಣ ದಾಖಲಿಸಿಕೊಂಡು ಆರೋಪಿಗಳ ಬಂಧನಕ್ಕೆ ಕ್ರಮ ವಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹರ್ಮುಜ್‌ನಲ್ಲಿ ಟೋಲ್ ಇಲ್ಲವೆಂದ ಇರಾನ್

ಕೆಲವು ಹಡಗುಗಳಿಗೆ ಮಾತ್ರ ಸಮುದ್ರ ಸೇವೆಗೆ ಶುಲ್ಕ ಎಂದು ವಿದೇಶಾಂಗ ಸಚಿವಾಲಯ ಸಮಜಾಯಿಷಿ

ವಾಷಿಂಗ್ಟನ್/ಟೆಹರಾನ್: ಹರ್ಮುಜ್ ಜಲಸಂಧಿಯಲ್ಲಿ ಸಂಚರಿಸುವ ಯಾವುದೇ ವಾಣಿಜ್ಯ ಹಡಗುಗಳಿಗೆ ಪ್ರಯಾಣ ಶುಲ್ಕ (ಟೋಲ್) ವಿಧಿಸುವ ಪ್ರಸ್ತಾಪ ಇಲ್ಲ ಎಂದು ಇರಾನ್ ಸೋಮವಾರ ಸ್ಪಷ್ಟಪಡಿಸಿದೆ.

''ಜಲಮಾರ್ಗದಲ್ಲಿ ಸಂಚರಿಸುವ ಕೆಲವು ಹಡಗುಗಳಿಗೆ ಪ್ರಸ್ತುತ 'ಸಮುದ್ರ ಸೇವೆ'ಗೆ ಮಾತ್ರ ಶುಲ್ಕ ವಿಧಿಸಲಾಗುತ್ತಿದೆ. ಶುಲ್ಕಗಳು ನಿರ್ದಿಷ್ಟ ಪ್ರದೇಶದಲ್ಲಿ ಒದಗಿಸಲಾದ ಪರಿಸರ ಹಾಗೂ ಸಮುದ್ರ ಸೇವೆಗೆ ಸಂಬಂಧಿಸಿವೆ,'' ಎಂದು ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಎಸ್ಮಾಯಿಲ್ ಬಕ್ವೈ ಹೇಳಿದ್ದಾರೆ.

ಹೆಚ್ಚುತ್ತಿರುವ ಪ್ರಾದೇಶಿಕ ಉದ್ವಿಗ್ನತೆ, ಜಲ ಮಾರ್ಗದಲ್ಲಿ ಉಂಟಾದ ಅಡಚಣೆ ನಡುವೆ ವಾಣಿಜ್ಯ ಹಡಗುಗಳಿಗೆ ಇರಾನ್ ಶುಲ್ಕ ವಿಧಿಸುತ್ತಿದೆ ಎಂಬ ವರದಿಗಳನ್ನು ಇಸ್ಲಾಮಿಕ್ ರಿಪಬ್ಲಿಕ್ ಆಡಳಿತ ನಿರಾಕರಿಸಿದೆ.

ಫೆ.28 ರಂದು ಅಮೆರಿಕ-ಇರಾನ್ ನಡುವೆ ಸಮರ ಆರಂಭವಾದ ಬಳಿಕ ಹರ್ಮುಜ್ ಜಲಸಂಧಿ ಬಿಕ್ಕಟ್ಟಿನ ಕೇಂದ್ರ ಬಿಂದುವಾಗಿದೆ. ಹಡಗುಗಳ ಸಂಚಾರದ ಮೇಲಿನ ನಿರ್ಬಂಧದಿಂದ ಜಾಗತಿಕ ತೈಲ ಸರಬರಾಜಿನಲ್ಲಿ ಏರುಪೇರಾಗಿದೆ. ವಿಶ್ವದ ಬಹುತೇಕ ದೇಶಗಳಲ್ಲಿ ಇಂಧನ ಬೆಲೆಗಳು ಗಗನಮುಖಿಯಾಗಿವೆ.

ಮತ್ತೆ ಟ್ರಂಪ್ ದ್ವಂದ್ವ

ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗಾಣಿಸಲು ನಡೆಯುತ್ತಿರುವ ರಾಜತಾಂತ್ರಿಕ ಮಾತುಕತೆ ನಡುವೆ, ''ಒಂದು ವೇಳೆ ಇರಾನ್ ಜತೆ ಒಪ್ಪಂದವಾದರೆ ಅದು ಅರ್ಥಪೂರ್ಣವಾಗಿರುತ್ತದೆ. ಇಲ್ಲವೇ ಒಪ್ಪಂದ ಮೂಡದೇ ಹೋಗಬಹುದು,'' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಸಾಮಾಜಿಕ ಜಾಲತಾಣ ಟ್ರುಥ್‌ನಲ್ಲಿ ಪೋಸ್ಟ್ ಮಾಡಿರುವ ಟ್ರಂಪ್, ''ಸಂಭವನೀಯ ಒಪ್ಪಂದ ಇನ್ನೂ ಅಂತಿಮಗೊಂಡಿಲ್ಲ, ನಮ್ಮ ಷರತ್ತುಗಳಿಗೆ ಇರಾನ್ ಸಮ್ಮತಿಸಿದಲ್ಲಿ ಒಪ್ಪಂದದ ಮಾತುಕತೆ ಮುಂದುವರಿಯಲಿದೆ.

ಒಪ್ಪಂದವಾದರೆ ಅದು ಒಳ್ಳೆಯ ಸಂಗತಿ. ಜಗತ್ತಿನ ಪಾಲಿದೆ ಅದೊಂದು ಅರ್ಥಪೂರ್ಣವಾದ ಒಪ್ಪಂದವಾಗಲಿದೆ. ಇಲ್ಲದೇ ಹೋದಲ್ಲಿ ಯಥಾಸ್ಥಿತಿ ಮುಂದುವರಿಯಬಹುದು,'' ಎಂದು ಯುದ್ಧ ಅಂತ್ಯದ ಕುರಿತು ಅಡ್ಡಗೋಡೆ ಮೇಲೆ ದೀಪ ಇಟ್ಟ ರೀತಿ ಮಾತನಾಡಿದ್ದಾರೆ.

ಅಬ್ರಹಾಂ ಒಪ್ಪಂದಕ್ಕೆ ಬನ್ನಿ: ಟ್ರಂಪ್ ಪೋಸ್ಟ್

ಮತ್ತೊಂದೆಡೆ ಇರಾನ್ ಜತೆಗಿನ ಒಪ್ಪಂದದ ಭಾಗವಾಗಲು ಅರಬ್ ರಾಷ್ಟ್ರಗಳು ಚಾರಿತ್ರಿಕ 'ಅಬ್ರಹಾಂ ಒಪ್ಪಂದ'ಕ್ಕೆ ಸಹಿ ಹಾಕಬೇಕು ಎಂದು ಟ್ರಂಪ್ ಮನವಿ ಮಾಡಿದ್ದಾರೆ. ಒಪ್ಪಂದದ ಭಾಗವಾಗುವಂತೆ ಪಾಕಿಸ್ತಾನ, ಜೋರ್ಡಾನ್, ಸೌದಿ ಅರೇಬಿಯಾ, ಟರ್ಕಿ, ಕತಾರ್ ದೇಶಗಳಿಗೆ ಟಂಪ್ ಒತ್ತಾಯಿಸಿದ್ದಾರೆ. ''ಒಪ್ಪಂದಕ್ಕೆ ಇರಾನ್ ಸಹಿ ಹಾಕಿದರೆ ಅಮೆರಿಕ ಅಧ್ಯಕ್ಷನಾದ ನನಗೆ ಸಿಗುವ ದೊಡ್ಡ ಗೌರವ,'' ಎಂದು ಟ್ರಂಪ್ ಪೋಸ್ಟ್ ಮಾಡಿದ್ದಾರೆ.

ಏನದು ಅಬ್ರಹಾಂ ಒಪ್ಪಂದ?

ಅರಬ್ ದೇಶಗಳು ಹಾಗೂ ಇಸ್ರೇಲ್ ನಡುವಿನ ರಾಜತಾಂತ್ರಿಕ ಸಂಬಂಧ ಸುಧಾರಿಸಲು ಅಮೆರಿಕ ಮಧ್ಯಸ್ಥಿಕೆಯಲ್ಲಿ ರೂಪಿತವಾದ ಒಪ್ಪಂದವಾಗಿದೆ. ಇಸ್ರೇಲ್-ಪ್ಯಾಲೆಸ್ಟೀನ್ ಎರಡು ಪ್ರತ್ಯೇಕ ರಾಷ್ಟ್ರಗಳ ಸಿದ್ಧಾಂತದೊಂದಿಗೆ ಒಪ್ಪಂದ ರೂಪಿಸಲಾಗಿದೆ. 2020ರಲ್ಲಿ ಯುಎಇ, ಬಹರೇನ್, ಮೊರಾಕೊ, ಸುಡಾನ್ ಸೇರಿ ಹಲವು ದೇಶಗಳು ಸಹಿ ಒಪ್ಪಂದಕ್ಕೆ ಹಾಕಿದ್ದವು. 2025ರಲ್ಲಿ ಕಜಕಸ್ತಾನ ಸಹ ಒಪ್ಪಂದದ ಭಾಗವಾಯಿತು. ಇಸ್ರೇಲ್-ಪ್ಯಾಲೆಸ್ಟೀನ್ ನಡುವಿನ ಸಂಘರ್ಷ ಇತ್ಯರ್ಥಪಡಿಸುವಲ್ಲಿ 'ಅಬ್ರಹಾಂ ಒಪ್ಪಂದ' ವಿಫಲವಾಗಿದೆ ಎಂದು ಅರಬ್ ರಾಷ್ಟ್ರಗಳು ದೂರಿವೆ.

'ಪುಸ್ತಕದ ಮನೆ' ಅಂಕೇಗೌಡರಿಗೆ ರಾಷ್ಟ್ರಪತಿ ಪದ್ಮಶ್ರೀ ಪುರಸ್ಕಾರ ನೀಡಿ ಗೌರವಿಸಿದರು.

ಸಮಾಜ ಸೇವಕಿ ಎಸ್.ಜಿ. ಸುಶೀಲಮ್ಮ ಅವರಿಗೆ ಪದ್ಮಶ್ರೀ ಪುರಸ್ಕಾರ ಪ್ರದಾನ.

Quick ನ್ಯೂಸ್

- ಜಾರ್ಜಿಯಾದಲ್ಲಿ ಅಹಮದಾಬಾದ್‌ನ ವೈದ್ಯಕೀಯ ವಿದ್ಯಾರ್ಥಿ ಧ್ವನಿತ್ ರಾಜ್‌ದೀಪ್ 12 ದಿನಗಳ ಮುನ್ನ ನಿಗೂಢವಾಗಿ ಕಣ್ಮರೆ; ಪ್ರಧಾನಿ ಮೋದಿ ನೆರವಿಗೆ ಪೋಷಕರ ಮನವಿ
- ಪಿಎನ್‌ಜಿ ಸಂಪರ್ಕ ಪಡೆದ ಗ್ರಾಹಕರು ಮುಂದಿನ 30 ದಿನಗಳ ಒಳಗಾಗಿ ತಮ್ಮ ಎಲ್‌ಪಿಜಿ ಸಂಪರ್ಕ ರದ್ದತಿಗೆ ಅರ್ಜಿ ಸಲ್ಲಿಸಲು ಕೇಂದ್ರದಿಂದ ಖಡಕ್ ನಿರ್ದೇಶನ
- ಕಂಡಕಂಡಲ್ಲಿ ಕಸ ಎಸೆಯುವ ಅಭ್ಯಾಸವುಳ್ಳವರು ಸಿಕ್ಕಿಂಗೆ ಭೇಟಿ ನೀಡದಿರುವುದು ಒಳಿತು ಎಂದು ಆನಂದ್ ಮಹೀಂದ್ರಾ ಅವರು 'ಎಕ್ಸ್'ನಲ್ಲಿ ಪೋಸ್ಟ್; ಸ್ವಚ್ಛತಾ ಸಂಸ್ಕೃತಿಗೆ ಮೆಚ್ಚುಗೆ
- ಗೋವುಗಳನ್ನು ಕಸಾಯಿಖಾನೆಗಳಿಗೆ ಕಳಿಸುವುದನ್ನು ತಡೆಯಲು ಒಎಲ್‌ಎಕ್ಸ್ ಮಾದರಿಯಲ್ಲಿ 'ಗೋ ಎಲ್‌ಎಕ್ಸ್' ಆರಂಭಿಸುವ ಘೋಷಣೆ ಮಾಡಿದ ಸ್ವಾಮಿ ಅವಿಮುಕ್ತೇಶ್ವರಾನಂದ ಸರಸ್ವತಿ
- ರಷ್ಯಾ, ಇರಾನ್‌ನಿಂದ ಅಗ್ಗದ ತೈಲ ಏಕೆ ಖರೀದಿಸುತ್ತಿಲ್ಲ ಎಂದು ಪ್ರಧಾನಿ ಮೋದಿಗೆ ಆಪ್ ಸಂಚಾಲಕ ಅರವಿಂದ್ ಕೇಜ್ರಿವಾಲ್ ಪ್ರಶ್ನೆ
- ದಿಲ್ಲಿಯ ಜಿಮ್‌ಖಾನಾ ಕ್ಲಬ್‌ನಿಂದ ಕೇಂದ್ರಕ್ಕೆ 47.89 ಕೋಟಿ ರೂ. ಬಾಡಿಗೆ ಬಾಕಿ; 9 ತಿಂಗಳಲ್ಲಿ 3 ನೋಟಿಸ್ ನೀಡಿರುವ ಸರಕಾರ

ಕೇಬಲ್ ಕಾರ್ ಸ್ಥಗಿತ: ಪ್ರವಾಸಿಗರ ರಕ್ಷಣೆ

ಶ್ರೀನಗರ: ಜಮ್ಮು-ಕಾಶ್ಮೀರದ ಪ್ರಸಿದ್ಧ ಪ್ರವಾಸಿ ತಾಣ ಗುಲ್ಮಾರ್ಗ್‌ನಲ್ಲಿ ಸೋಮವಾರ ತಾಂತ್ರಿಕ ದೋಷದಿಂದಾಗಿ 300 ಪ್ರವಾಸಿಗರು ಕೇಬಲ್ ಕಾರ್‌ನಲ್ಲಿ ಸಿಲುಕಿಕೊಂಡಿದ್ದರಿಂದ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಮಧ್ಯಾಹ್ನ 2.30ರ ಸುಮಾರಿಗೆ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡು ಸುಮಾರು 65 ಕ್ಯಾಬಿನ್‌ಗಳು ಮಾರ್ಗದಲ್ಲಿಯೇ ಸ್ಥಗಿತಗೊಂಡವು. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳೀಯ ಆಡಳಿತ, ರಾಜ್ಯ ವಿಪತ್ತು ಸ್ಪಂದನಾ ಪಡೆ ಮತ್ತು ರಾಷ್ಟ್ರೀಯ ವಿಪತ್ತು ಸ್ಪಂದನಾ ಪಡೆ ಸಿಬ್ಬಂದಿ ಜಂಟಿಯಾಗಿ ರಕ್ಷಣಾ ಕಾರ್ಯಾಚರಣೆ ನಡೆಸಿದರು.

ಕ್ಯಾಬಿನ್‌ಗಳಲ್ಲಿ ಸಿಲುಕಿದ್ದ ಎಲ್ಲಾ ಪ್ರವಾಸಿಗರನ್ನು ಸುರಕ್ಷಿತವಾಗಿ ಕೆಳಗೆ ಇಳಿಸಲಾಯಿತು. ಶ್ರೀನಗರದಿಂದ 51 ಕಿ.ಮೀ ದೂರದಲ್ಲಿರುವ ಗುಲ್ಮಾರ್ಗ್‌ನಲ್ಲಿ ಈ ಹಿಂದೆ 2017ರ ಜೂನ್ 25ರಂದು ದೊಡ್ಡ ಅಪಘಾತಕ್ಕೆ ಸಾಕ್ಷಿಯಾಗಿತ್ತು. ಆಗ ಬಲವಾದ ಗಾಳಿಗೆ ಮರವೊಂದು ಉರುಳಿ ಕೇಬಲ್ ಕಾರ್‌ಮೇಲೆ ಬಿದ್ದ ಪರಿಣಾಮ ಒಂದು ಕ್ಯಾಬಿನ್ ನೆಲಕ್ಕೆ ಅಪ್ಪಳಿಸಿ ಏಳು ಜನ ಮೃತಪಟ್ಟಿದ್ದರು. ಕಳೆದ ವರ್ಷ ಜನವರಿಯಲ್ಲೂ ತಾಂತ್ರಿಕ ಕಾರಣಗಳಿಂದಾಗಿ ಈ ಸೇವೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು.

ಟ್ವಿಶಾ ಕೇಸ್ ಸಂಬಂಧ ಮಾಧ್ಯಮಗಳಿಗೆ ಕಡಿವಾಣ

ಹೊಸದಿಲ್ಲಿ: ನಟಿ, ರೂಪದರ್ಶಿ ಟ್ವಿಶಾ ಶರ್ಮಾ ಸಾವಿನ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಿದ ಮಧ್ಯಪ್ರದೇಶದ ಸರಕಾರದ ಕ್ರಮವನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. ತನಿಖೆಯ ಮಧ್ಯೆ ಮಾಧ್ಯಮಗಳು ಹಸ್ತಕ್ಷೇಪದ ರೀತಿಯಲ್ಲಿ ತನಿಖಾ ವರದಿ ಪ್ರಸಾರ ಮಾಡಬಾರದು ಎಂದು ತಾಕೀತು ಮಾಡಿದೆ.

ಟ್ವಿಶಾ ಶರ್ಮಾ ಅನುಮಾನಾಸ್ಪದ ಸಾವಿನ ಕುರಿತು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜೋಯ್ಮಲ್ಯ ಬಾಗ್ಚಿ ಮತ್ತು ವಿಪುಲ್ ಪಂಚೋಲಿ ಅವರಿದ್ದ ತ್ರಿಸದಸ್ಯ ಪೀಠ, ಪ್ರಕರಣದ ನಿಷ್ಪಕ್ಷಪಾತ ತನಿಖೆ ಖಚಿತಪಡಿಸಿಕೊಳ್ಳಲು ಸ್ವತಂತ್ರ ಸಂಸ್ಥೆಯಿಂದ ತನಿಖೆ ನಡೆಯುವುದು ಸೂಕ್ತ ಎಂದು ಹೇಳಿದೆ.

''ಮಧ್ಯಪ್ರದೇಶದ ಸರಕಾರ ತನಿಖೆಯನ್ನು ಕೇಂದ್ರೀಯ ತನಿಖಾ ದಳಕ್ಕೆ ವಹಿಸುವ ಮೂಲಕ ಉತ್ತಮ ಹೆಜ್ಜೆ ಇರಿಸಿದೆ. ಪಾರದರ್ಶಕ ತನಿಖೆಯನ್ನು ನ್ಯಾಯಾಲಯ ಖಚಿತಪಡಿಸಲಿದೆ. ಸಂತ್ರಸ್ತ ಕುಟುಂಬ ಹಾಗೂ ಆರೋಪಿ ಕುಟುಂಬದ ಜತೆಗೆ ಸಾರ್ವಜನಿಕರು ತನಿಖಾ ಸಂಸ್ಥೆ ಮೇಲೆ ನಂಬಿಕೆ ಇಡಬೇಕು,'' ಎಂದು ಸಿಜೆಐ ಸೂರ್ಯಕಾಂತ್ ಹೇಳಿದರು.

ಮಾಧ್ಯಮಗಳಿಗೆ ಕಡಿವಾಣ: ಪ್ರಕರಣ ವಿಚಾರದಲ್ಲಿ ಮಾಧ್ಯಮಗಳ ತನಿಖಾ ವರದಿಗಾರಿಕೆಗೆ ಕಳವಳ ವ್ಯಕ್ತಪಡಿಸಿದ ಪೀಠ, ''ಮಾಧ್ಯಮಗಳ ಕೆಲವು ನಡೆಗಳು ನೊಂದ ಕುಟುಂಬವನ್ನು ಮತ್ತಷ್ಟು ಸಂಕಷ್ಟಕ್ಕೆ ದೂಡಿದೆ. ಘಟನೆ ಸಂಬಂಧ ನೀಡಲಾದ ಹೇಳಿಕೆಗಳನ್ನು ಮಾಧ್ಯಮಗಳು ತಮಗಿಷ್ಟ ಬಂದಂತೆ ಪ್ರಸಾರ ಮಾಡಬಾರದು,'' ಎಂದು ನಿರ್ದೇಶನ ನೀಡಿದೆ. ''ತನಿಖೆಯ ಮೇಲೆ ಪರಿಣಾಮ ಬೀರಬಹುದಾದ ಸಾಕ್ಷಿಗಳ ಹೇಳಿಕೆಗಳನ್ನು ನಿರಂತರ ಪ್ರಸಾರ ಮಾಡಬಾರದು. ನೊಂದ ಕುಟುಂಬ ಅಥವಾ ಭಾದಿತ ಕುಟುಂಬಗಳು ಮಾಧ್ಯಮಗಳ ಮುಂದೆ ಅನಗತ್ಯ ಹೇಳಿಕೆ ನೀಡಬಾರದು. ಅಗತ್ಯವಿದ್ದಲ್ಲಿ ತನಿಖಾ ಸಂಸ್ಥೆ ಮುಂದೆ ಮಾತ್ರ ಹೇಳಿಕೆ ದಾಖಲಿಸಬೇಕು,'' ಎಂದು ಕೋರ್ಟ್ ಸೂಚಿಸಿದೆ.

114 ರಫೇಲ್ ಖರೀದಿಗೆ ಸಿದ್ಧತೆ

ಹೊಸದಿಲ್ಲಿ: ಭಾರತೀಯ ವಾಯುಪಡೆಗೆ ಫ್ರಾನ್ಸ್ ನಿಂದ 114 ರಫೇಲ್ ಯುದ್ಧ ವಿಮಾನಗಳನ್ನು ಖರೀದಿಸಲು ಕೇಂದ್ರ ಸರಕಾರ ನಿರ್ಧರಿಸಿದೆ. ಉದ್ದೇಶಿತ ಪ್ರಸ್ತಾವನೆಯಲ್ಲಿ 114 ರಫೇಲ್ ಫೈಟರ್ ಜೆಟ್‌ಗಳ ಪೈಕಿ 90 ರಫೇಲ್‌ಗಳನ್ನು ಡಸಾಲ್ಟ್ ಏವಿಯೇಷನ್ ಮತ್ತು ಭಾರತೀಯ ಕಂಪನಿಯ ಸಹಯೋಗದಲ್ಲಿ ಭಾರತದಲ್ಲೇ ತಯಾರಿಸ ಲಾಗುತ್ತದೆ. ಉಳಿದ ಏರ್‌ಕ್ರಾಫ್ಟ್‌ಗಳನ್ನು ಹಂತಹಂತವಾಗಿ ಡಸಾಲ್ಟ್ ಏವಿಯೇಷನ್ ಭಾರತಕ್ಕೆ ಪೂರೈಸಲಿದೆ. ಈ ಸಂಬಂಧ ಅಧಿಕೃತ ವಿನಂತಿ ಪತ್ರವನ್ನು (ಲೆಟರ್ ಆಫ್ ರಿಕ್ವೆಸ್ಟ್) ಶೀಘ್ರ ಫ್ರಾನ್ಸ್‌ಗೆ ರವಾನಿಸಲಾಗುವುದು ಎಂದು ರಕ್ಷಣಾ ಸಚಿವಾಲಯದ ಹಿರಿಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಭಾರತೀಯ ವಾಯುಪಡೆಗೆ 114 ರಫೇಲ್ ಫೈಟರ್ ಜೆಟ್‌ಗಳನ್ನು ಖರೀದಿಸುವ ಪ್ರಸ್ತಾವನೆಗೆ ರಕ್ಷಣಾ ಸ್ವಾಧೀನ ಮಂಡಳಿಯು ಈ ಹಿಂದೆಯೇ ಒಪ್ಪಿಗೆ ಸೂಚಿಸಿತ್ತು.

ಏಕರೂಪ ನಾಗರಿಕ ಸಂಹಿತೆ ಜಾರಿಯತ್ತ ಅಸ್ಸಾಂ ಹೆಜ್ಜೆ

ವಿಧಾನಸಭೆಯಲ್ಲಿ ವಿಧೇಯಕ ಮಂಡನೆ | ಪ್ರಣಾಳಿಕೆಯ ಭರವಸೆ ಈಡೇರಿಸಿದ ಬಿಜೆಪಿ ಸರಕಾರ

ಗುವಾಹಟಿ: ಅಸ್ಸಾಂನಲ್ಲಿ ಸಮಾನ ನಾಗರಿಕ ಸಂಹಿತೆ ಕಾನೂನು ಜಾರಿಗೊಳಿಸುವ ಸಂಬಂಧ ವಿಧಾನಸಭೆ'ಯಲ್ಲಿ ಪ್ರಸ್ತಾಪಿತ 'ಸಮಾನ ನಾಗರಿಕ ಸಂಹಿತೆ, ಅಸ್ಸಾಂ-2026' ವಿಧೇಯಕ ಮಂಡಿಸಲಾಗಿದೆ.

ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮ ನೇತೃತ್ವದ ಬಿಜೆಪಿ ಸರಕಾರ ಉತ್ತರಾಖಂಡ ಹಾಗೂ ಗುಜರಾತ್ ಸರಕಾರಗಳ ಮಾದರಿಯಲ್ಲಿ ಸಮಾನ ನಾಗರಿಕ ಸಂಹಿತೆ ವಿಧೇಯಕ ಮಂಡಿಸಿದೆ. ಚುನಾವಣೆ ಪ್ರಣಾಳಿಕೆಯಲ್ಲಿ ನೀಡಿದ ಭರವಸೆಯಂತೆ ಹೊಸ ವಿಧಾನಸಭೆಯ ಮೊದಲ ಅಧಿವೇಶನದಲ್ಲೇ ವಿಧೇಯಕ ಮಂಡಿಸಿದೆ. ಸೋಮವಾರ ಮುಖ್ಯಮಂತ್ರಿ ಪರವಾಗಿ ಸಂಸದೀಯ ವ್ಯವಹಾರಗಳ ಸಚಿವ ಅತುಲ್ ಬೋರಾ ವಿಧೇಯಕ ಮಂಡಿಸಿದರು. ಕಾಂಗ್ರೆಸ್ ಸೇರಿದಂತೆ ಪ್ರತಿಪಕ್ಷಗಳು ಪ್ರಸ್ತಾಪಿತ 'ಯುಸಿಸಿ' ಜಾರಿ ವಿರೋಧಿಸಿ, ಸಭಾತ್ಯಾಗ ಮಾಡಿದವು.

ಮದುವೆ, ವಿಚ್ಛೇದನ, ಉತ್ತರಾಧಿಕಾರ, ಸಹ ಜೀವನ (ಲಿವ್ ಇನ್ ರಿಲೇಷನ್) ವಿಷಯವಾಗಿ ಎಲ್ಲಾ ಧರ್ಮೀಯರಿಗೂ ಸಮಾನ ಕಾನೂನು ರೂಪಿಸುವ ಉದ್ದೇಶದೊಂದಿಗೆ ಯುಸಿಸಿ ವಿಧೇಯಕ ಮಂಡಿಸಲಾಗಿದೆ. ಪ್ರಸ್ತಾಪಿತ ವಿಧೇಯಕದಲ್ಲಿ ಬಹುಪತ್ನಿತ್ವ, ದ್ವಿಪತ್ನಿತ್ವವನ್ನು ನಿರ್ಬಂಧಿಸಲಾಗಿದೆ. ಕಾನೂನು ಉಲ್ಲಂಘಿಸಿದರೆ ಭಾರತೀಯ ನ್ಯಾಯಸಂಹಿತೆ ಸೆಕ್ಷನ್ 82ರ ಅಡಿಯಲ್ಲಿ 7 ವರ್ಷ ಜೈಲು ಶಿಕ್ಷೆ ವಿಧಿಸುವ ಪ್ರಸ್ತಾಪ ಮಾಡಲಾಗಿದೆ.



ರಾಜ್ಯದಲ್ಲಿರುವ ಪರಿಶಿಷ್ಟ ವರ್ಗವನ್ನು ಹೊರತುಪಡಿಸಿ, ಉಳಿದೆಲ್ಲಾ ಜಾತಿಗಳು, ಧರ್ಮಗಳಿಗೆ ಏಕರೂಪ ಕಾನೂನು ರೂಪಿಸುವುದು, ಲಿಂಗಾಧಾರಿತ ಅಸಮಾನತೆ ತೊಡೆದು ಹಾಕುವುದು ಯುಸಿಸಿ ಉದ್ದೇಶವಾಗಿದೆ. ಧರ್ಮಾಧಾರಿತ ವೈಯಕ್ತಿಕ ಕಾನೂನುಗಳ ಸ್ಥಾನದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೆ ಬರಲಿದೆ. ಯುಸಿಸಿ ಜಾರಿಯಾದ ಬಳಿಕ 'ಅಸ್ಸಾಂ ಮುಸ್ಲಿಂ ವಿವಾಹ ಹಾಗೂ ನೋಂದಣಿ ಕಡ್ಡಾಯ ಕಾಯಿದೆ' ರದ್ದಾಗಲಿದೆ.

ಮದುವೆ ನೋಂದಣಿ ಕಡ್ಡಾಯ: ಪ್ರಸ್ತಾವಿತ ವಿಧೇಯಕದಲ್ಲಿ ಏಕಪತ್ನಿತ್ವ ಕಡ್ಡಾಯಗೊಳಿಸಲಾಗಿದೆ. ವರನಿಗೆ 21 ವರ್ಷ, ವಧುವಿಗೆ 18 ವರ್ಷ ವಯೋಮಿತಿ ನಿಗದಿಪಡಿಸಲಾಗಿದೆ. ಮದುವೆಯ ಧಾರ್ಮಿಕ ವಿಧಿ-ವಿಧಾನ, ಸಾಂಪ್ರದಾಯಗಳ ಆಚರಣೆಗೆ ಪೂರ್ಣ ಸ್ವಾತಂತ್ರ ನೀಡಲಾಗಿದೆ. ವೈದಿಕ ವಿವಾಹ, ಅಹೋಮ ಚಕ್ಲಾಂಗ್, ಸಪ್ತಪದಿ, ಆಶೀರ್ವಾದ, ನಿಖಾ, ಆನಂದ್ ಕರಾಜ್ ಸೇರಿದಂತೆ ಎಲ್ಲಾ ಧಾರ್ಮಿಕ ಸಂಪ್ರದಾಯಗಳ ಆಚರಣೆಗೆ ಮುಕ್ತ ಅವಕಾಶ ಕೊಡಲಾಗಿದೆ.

ಮದುವೆ ನೋಂದಣಿಯನ್ನು ಕಡ್ಡಾಯಗೊಳಿಸಿದಂತೆ ಕಾನೂನು ಪ್ರಕಾರ ವಿಚ್ಛೇದನ ಪಡೆಯುವುದನ್ನು ಕಡ್ಡಾಯ ಮಾಡಲಾಗಿದೆ. ಮದುವೆಯಾದ 60 ದಿನಗಳ ಒಳಗೆ ನೋಂದಣಿಗೆ ಅರ್ಜಿ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ. ಕ್ರೌರ್ಯ, ತೊರೆದು ಹೋದ ಸಂಗಾತಿ (ಪತಿ ಅಥವಾ ಪತ್ನಿ), ಪರಸ್ಪರ ಒಪ್ಪಿಗೆಯಂತಹ ಆಧಾರಗಳ ಮೇಲೆ ವಿಚ್ಛೇದನ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಐದು ವರ್ಷದ ಒಳಗಿನ ಮಕ್ಕಳ ಪಾಲನೆ ಹೊಣೆಯನ್ನು ತಾಯಿಗೆ ನೀಡಲಾಗಿದೆ.

ಲಿಂಗ ಸಮಾನತೆ: ಪ್ರಸ್ತಾವಿತ ಯುಸಿಸಿ ವಿಧೇಯಕದಲ್ಲಿ ಲಿಂಗ ಸಮಾನತೆ ಖಚಿತಪಡಿಸಲಾಗಿದೆ. ಪುರುಷರಷ್ಟೇ ಮಹಿಳೆಯರಿಗೂ ಸಮಾನ ಆಸ್ತಿ ಹಕ್ಕು ಕಲ್ಪಿಸಲಾಗಿದೆ. ಮೂಲ ವಾರಸುದಾರ ಮೃತಪಟ್ಟಿದ್ದಲ್ಲಿ ಪತ್ನಿ, ಮಕ್ಕಳು, ಪೋಷಕರಿಗೆ ಸಮಾನ ಆಸ್ತಿ ಹಂಚಿಕೆಗೆ ನಿಯಮ ರೂಪಿಸಲಾಗಿದೆ. ಉತ್ತರಾಧಿಕಾರಕ್ಕಾಗಿ ಪ್ರಾಪ್ತ ವಯಸ್ಕರ ಸಾಕ್ಷಿಯ ಮೂಲಕ ಉಯಿಲು ಕಾರ್ಯಗತಗೊಳಿಸಲು ಶಾಸನಬದ್ಧ ಹಕ್ಕು ನೀಡಿದೆ.

ಪ್ರಸ್ತಾವಿತ ಶಿಕ್ಷೆ

- ವಿಚ್ಛೇದನದ ನಿಯಮ ಉಲ್ಲಂಘನೆ, ಅಕ್ರಮ ವಿವಾಹ, ಕಾನೂನು ಬಾಹಿರವಾಗಿ ವೈವಾಹಿಕ ಬಂಧ ಕಡಿದುಕೊಂಡರೆ 3 ವರ್ಷ ಜೈಲು, 1 ಲಕ್ಷ ರೂ.ದಂಡ
- ಮದುವೆಯಾದ 60 ದಿನದ ಒಳಗೆ ನೋಂದಣಿ ಮಾಡದಿದ್ದರೆ ಅಥವಾ ನಿಯಮಾನುಸಾರ ವಿಚ್ಛೇದನ ಪಡೆಯದಿದ್ದರೆ 10 ಸಾವಿರ ರೂ. ದಂಡ, ಮೂರು ತಿಂಗಳ ಶಿಕ್ಷೆ
- ನೋಂದಣಿ ಸಮಯದಲ್ಲಿ ನಕಲಿ ಅಥವಾ ಕೃತಕ ದಾಖಲೆಗಳನ್ನು ಸಲ್ಲಿಸಿದಲ್ಲಿ 25 ಸಾವಿರ ರೂ.ದಂಡ, ಮೂರು ತಿಂಗಳ ಶಿಕ್ಷೆ
- ಲಿವ್ ಇನ್ ಸಂಬಂಧಗಳನ್ನು ನೋಂದಣಿ ಮಾಡದೇ ಹೋದಲ್ಲಿ ಸಂಗಾತಿಗಳಿಬ್ಬರಿಗೂ 10 ಸಾವಿರ ರೂ. ದಂಡ, ಮೂರು ತಿಂಗಳ ಶಿಕ್ಷೆ

ಪ್ರಪಾತಕ್ಕೆ ಕಾರು, ಎಂಟು ಯುವಕರ ಸಾವು

ಮುಂಬಯಿ: ಎಸ್‌ಯುವಿ ಕಾರೊಂದು ಸಾವಿರ ಅಡಿ ಆಳದ ಪ್ರಪಾತಕ್ಕೆ ಉರುಳಿಬಿದ್ದು ಎಂಟು ಜನರು ಮೃತಪಟ್ಟಿರುವ ಘಟನೆ ಮಹಾರಾಷ್ಟ್ರದ ರಾಯಗಢ ಜಿಲ್ಲೆಯಲ್ಲಿ ಭಾನುವಾರ ನಡೆದಿದ್ದು, ಸೋಮವಾರ ಬೆಳಕಿಗೆ ಬಂದಿದೆ.

ಪೊಳಾದ್‌ಪುರ-ಮಹಾಬಲೇಶ್ವರ ರಸ್ತೆಯ ಅಂಬೆನಾಲಿ ಘಾಟ್ ಪ್ರದೇಶದಲ್ಲಿ ಭಾನುವಾರ ನಸುಕಿನಲ್ಲಿ ಈ ಅಪಘಾತ ಸಂಭವಿಸಿದೆ. ನತದೃಷ್ಟ ಪ್ರಯಾಣಿಕರು ದಾಪೋಲಿಯಿಂದ ಸತಾರಗೆ ತೆರಳುತ್ತಿದ್ದರು. ಮೃತರೆಲ್ಲರೂ 19ರಿಂದ 35 ವರ್ಷದ ವಯೋಮಾನದವರಾಗಿದ್ದು, ರತ್ನಗಿರಿ ಮತ್ತು ಸತಾರಗೆ ಸೇರಿದವರು ಎಂದು ಪೊಲೀಸರು ತಿಳಿಸಿದ್ದಾರೆ.

ಕಾರು ಅಂಬೆನಾಲಿ ಘಾಟ್‌ನ ಕಡಿದಾದ ರಸ್ತೆಯಲ್ಲಿ ಚಾಲಕನ ನಿಯಂತ್ರಣ ತಪ್ಪಿ 1 ಸಾವಿರ ಅಡಿ ಆಳದ ಕಣಿವೆಗೆ ಉರುಳಿಬಿದ್ದಿದೆ. ಎಷ್ಟು ಹೊತ್ತಾದರೂ ಸತಾರ ತಲುಪದೇ ಇದ್ದದ್ದರಿಂದ ಆತಂಕಗೊಂಡ ಮೃತರ ಸಂಬಂಧಿಕರು ತಮ್ಮವರನ್ನು ಸಂಪರ್ಕಿಸಲು ಸಾಕಷ್ಟು ಪ್ರಯತ್ನಿಸಿದರೂ ನೆಟ್‌ವರ್ಕ್ ಸಮಸ್ಯೆಯಿಂದ ಸಾಧ್ಯವಾಗಲಿಲ್ಲ. ಕೊನೆಗೆ ಪೊಲೀಸರಿಗೆ ಮಾಹಿತಿ ಮುಟ್ಟಿಸಿದರು. ಪೊಳಾದ್‌ಪುರ ಸನಿಹವಿರುವ ಮೊಬೈಲ್ ಟವರ್ ಮೂಲಕ ಪೊಲೀಸರು ಸಂತ್ರಸ್ತರ ಕೊನೆಯ ಮೊಬೈಲ್ ಲೋಕೇಷನ್ ಅಂಬೆನಾಲಿ ಘಾಟ್ ಸನಿಹ ದಾಖಲಾಗಿದ್ದನ್ನು ಪತ್ತೆ ಹಚ್ಚಿದರು. ಇದರ ಜಾಡು ಹಿಡಿದು ಶೋಧ ಕಾರ್ಯ ಕೈಗೊಂಡಾಗ ಎಸ್‌ಯುವಿ ಪ್ರಪಾತಕ್ಕೆ ಉರುಳಿದ್ದನ್ನು ಪತ್ತೆ ಹಚ್ಚಿದರು.

ಒಳ ಉಡುಪಿನಲ್ಲೇ ರೌಡಿ ಪರೇಡ್!

ಕೋಲ್ಕೊತಾ: ಪಶ್ಚಿಮ ಬಂಗಾಳದ ಹೌರಾದಲ್ಲಿ ಕುಖ್ಯಾತ ಗ್ಯಾಂಗ್‌ಸ್ಟರ್ ಆಕಾಶ್ ಸಿಂಗ್ ಎಂಬಾತನನ್ನು ಒಳ ಉಡುಪಿನಲ್ಲಿ ಸಾರ್ವಜನಿಕವಾಗಿ ರಸ್ತೆಯುದ್ದಕ್ಕೂ ಪರೇಡ್ ಮಾಡಿಸುವ ಮೂಲಕ ಪೊಲೀಸರು ಸಾರ್ವಜನಿಕರ ಭೀತಿಯನ್ನು ದೂರ ಮಾಡಿದ್ದಾರೆ. ತನಿಖೆಯ ಭಾಗವಾಗಿ ಪೊಲೀಸರು ಆತನನ್ನು ಮಾಲಿಪಾಂಚ್‌ಘರಾ ಮತ್ತು ಗೋಲಾಬಾರಿ ಪೊಲೀಸ್ ಠಾಣಾ ವ್ಯಾಪ್ತಿಯ ಹಳೆಯ ಅಪರಾಧ ನಡೆದ ಸ್ಥಳಗಳಿಗೆ ಕರೆದೊಯ್ದು ಮಹಜರು ನಡೆಸಿದರು. ಈ ವೇಳೆ ಆತನ ತಲೆ ಹಾಗೂ ಗಡ್ಡವನ್ನು ಸಂಪೂರ್ಣವಾಗಿ ಬೋಳಿಸಿ, ಕೇವಲ ಬನಿಯನ್ ಮತ್ತು ಅಂಡರ್‌ವೇರ್‌ನಲ್ಲಿ ರಸ್ತೆಯಲ್ಲಿ ನಡೆಸಿಕೊಂಡು ಹೋದರು.

ಭಾರತೀಯ ವಿಜ್ಞಾನ ಸಂಸ್ಥೆ
ಬೆಂಗಳೂರು-560012

ಜಾಹೀರಾತು ಸಂಖ್ಯೆ: ಆರ್(ಹೆಚ್‌ಆರ್)/ನೇಮಕಾತಿ-1/2026

ಸಂಸ್ಥೆಯಲ್ಲಿ ಡೆಪ್ಯುಟೇಶನ್ ಆಧಾರದ ಮೇಲೆ ಉಪ ಆಡಳಿತಾಧಿಕಾರಿ ಹುದ್ದೆಯನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ, ನಮ್ಮ ವೆಬ್‌ಸೈಟ್‌ಗೆ ಭೇಟಿ ನೀಡಿ: https://iisc.ac.in/careers/regular-positions/

ಅರ್ಜಿಗಳಿಗೆ ಕೊನೆಯ ದಿನಾಂಕ: 15.06.2026
ದಿನಾಂಕ: 26.05.2026
ಸಹಿ/-, ರಿಜಿಸ್ಟ್ರಾರ್

ನಮ್ಮ ಮೆಟ್ರೋ namma metro
ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ
(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಸಹಭಾಗಿತ್ವದಲ್ಲಿ)
ಮೆಟ್ರೋ ರೈಲು ಡಿಪೋ, ಹಳೇ ಮದ್ರಾಸ್ ರಸ್ತೆ, ಎನ್‌ಜಿಇಎಫ್ ಬಸ್ ನಿಲ್ದಾಣದ ಹತ್ತಿರ, ಬೈಯಪ್ಪನಹಳ್ಳಿ, ಬೆಂಗಳೂರು - 560 038. ದೂರವಾಣಿ: 080-25191039
ಇ-ಮೇಲ್ : contactus@bmrc.co.in ವೆಬ್‌ಸೈಟ್ : www.bmrc.co.in
ಬಿಡ್ ಸಂ.: ಬಿಎಂಆರ್‌ಸಿಎಲ್/2026-27/ಬಿಡಿ/ವರ್ಕ್_ಇಂಡೆಂಟ್133
ದಿನಾಂಕ: 21.05.2026

ಟೆಂಡರ್ ಪ್ರಕಟಣೆ

ಬಿಎಂಆರ್‌ಸಿಎಲ್ ಇವರು **"ಹೆಬ್ಬಗೋಡಿ ಡಿಪೋದಲ್ಲಿ ಕುಶಲಕರ್ಮಿ ಕೆಲಸಗಳ (ಸಣ್ಣಪುಟ್ಟ ದುರಸ್ತಿ ಕಾಮಗಾರಿಗಳು) ನಿರ್ವಹಣಾ ಗುತ್ತಿಗೆ"** ಕಾಮಗಾರಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಕಾಮಗಾರಿ ವಿವರಗಳನ್ನು ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ ಪಡೆಯಬಹುದು. ಟೆಂಡರ್ ದಸ್ತಾವೇಜುಗಳನ್ನು ಪಡೆದು **ದಿನಾಂಕ: 25.06.2026, 17.00 ಗಂಟೆ ಅಥವಾ ಅದಕ್ಕೂ ಮೊದಲು** ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು https://kppp.karnataka.gov.in ವೆಬ್‌ಸೈಟ್‌ನಿಂದ ಪಡೆಯಬಹುದು ಅಥವಾ ಈ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು..

ಸಹಿ/- ಕಾರ್ಯನಿರ್ವಾಹಕ ನಿರ್ದೇಶಕರು (ಓ ಮತ್ತು ಎಂ)

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ
ಕೇಂದ್ರ ಕಛೇರಿ, ಆರ್ಚಿಡ್ ಮಾಲ್ ಹಿಂಭಾಗ, ಕಲಬುರಗಿ-585102 (ಕರ್ನಾಟಕ ರಾಜ್ಯ)
Website: https://kkrtc.karnataka.gov.in

ಸಂಖ್ಯೆ: ಕಕಸಾ/ಕೇಕ/ಸಿಬ್ಬಂದಿ/ನೇಮಕ/ನೇ-1/ಕ-461/361 /2026-27 ದಿನಾಂಕ:23.05.2026

:: ಪ್ರಕಟಣೆ ::

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ದಿನಾಂಕ: 08.10.2025 ರಂದು ಸಂಖ್ಯೆ: ಇಡಿ/ಕೆಇಎ/ ಆಡಳಿತ/ಸಿ.ಆರ್.05/2025 (ಕಲ್ಯಾಣ-ಕರ್ನಾಟಕ) ಮತ್ತು ಇಡಿ/ಕೆಇಎ/ಆಡಳಿತ/ಸಿ.ಆರ್.04/2025 (ಆರ್‌ಪಿಸಿ) ಗಳನ್ವಯ ಅಧಿಸೂಚಿಸಿದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ **ನಿರ್ವಾಹಕ ಮತ್ತು ಸಹಾಯಕ ಲೆಕ್ಕಿಗ** ಹುದ್ದೆಗಳ ನೇಮಕಾತಿ ಪ್ರಕ್ರಿಯೆಯ ಮುಂದಿನ ಭಾಗವಾಗಿ ಮೂಲ ದಾಖಲಾತಿ ಪರಿಶೀಲನೆಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಕಕರಸಾ ನಿಗಮದ ವೆಬ್ ವಿಳಾಸ **kkrtc.karnataka.gov.in** ನಲ್ಲಿ ಪ್ರಕಟಿಸಲಾಗಿದೆ.

ಸದರಿ ಪಟ್ಟಿಗೆ ಪೂರಕ ದಾಖಲಾತಿಗಳೊಂದಿಗೆ ಆಕ್ಷೇಪಣೆಗಳನ್ನು Online ಮೂಲಕ ಅಥವಾ ಖುದ್ದಾಗಿ ಸಲ್ಲಿಸಲು ದಿನಾಂಕ: **31.05.2026 ರಂದು ಸಂಜೆ 05:30 ರವರೆಗೆ** ಅವಕಾಶ ಕಲ್ಪಿಸಲಾಗಿದೆ. ನಿಗದಿತ ದಿನಾಂಕದ ನಂತರ ಸ್ವೀಕರಿಸಲಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ವಿವರಗಳಿಗಾಗಿ ಮೇಲಿನ ವೆಬ್ ವಿಳಾಸಕ್ಕೆ ಭೇಟಿ ನೀಡುವುದು. ಸಹಾಯವಾಣಿ ಸಂಖ್ಯೆ 6366374977 (ಕಛೇರಿ ವೇಳೆಯಲ್ಲಿ ಮಾತ್ರ).

ಸಹಿ/-
ಅಧ್ಯಕ್ಷರು, ಆಯ್ಕೆ ಸಮಿತಿ
ವಾ.ಸಾ.ಸಂ.ಇ/ಕಲಬುರಗಿ/163/ಕೆ.ಎಸ್.ಎಂ.ಸಿ.&ಎ/2026-27

ವಾ.ಕ.ರ.ಸಾ. ಸಂಸ್ಥೆ ಹುಬ್ಬಳ್ಳಿ ಗ್ರಾಮಾಂತರ ವಿಭಾಗ, ಹುಬ್ಬಳ್ಳಿ
ಸಂ.ವಾಕರಸಾ/ಹುಧಾನಸಾವಿ/ಸಂ/ವಾ/443/444 ದಿನಾಂಕ : 25-05-2026

ಇ-ಟೆಂಡರ್ ಪ್ರಕಟಣೆ ಸಂಖ್ಯೆ:03/2026 ಮತ್ತು ಸಂಧಾನ ಮಾತುಕತೆ ಟೆಂಡರ ಪ್ರಕಟಣೆ ಸಂಖ್ಯೆ: 03/2026

ವಾ.ಕ.ರ.ಸಾ.ಸಂಸ್ಥೆ ಹುಬ್ಬಳ್ಳಿ ಗ್ರಾಮಾಂತರ ವಿಭಾಗದ ವ್ಯಾಪ್ತಿಗೆ ಬರುವ ಎಸ್.ಸಿ.ಎಸ್.ಪಿ / ಟಿ.ಎಸ್.ಪಿ ಯೋಜನೆ ಅನುದಾನದಡಿ ಗೋಕುಲ ರೋಡ ಬಸ್ ನಿಲ್ದಾಣದ ಡಾಲರ್ಸ್ ಕಾಲೋನಿ ರೋಡಿಗೆ ಹೊಂದಿಕೊಂಡಂತೆ ಕಟ್ಟಡ -1 ರಲ್ಲಿ ನೆಲಮಹಡಿಯಲ್ಲಿನ-01 ಮಳಿಗೆ ಮತ್ತು 1ನೇ ಮಹಡಿಯಲ್ಲಿನ-13 ಮಳಿಗೆ ಒಟ್ಟು-14 ಮಳಿಗೆಗಳನ್ನು ಪರಿಶಿಷ್ಟ ಜಾತಿಗೆ ಮೀಸಲಿರಿಸಿ ಮತ್ತು ಕಟ್ಟಡ-2 ರಲ್ಲಿ ನೆಲಮಹಡಿಯಲ್ಲಿನ-02 ಮಳಿಗೆ ಮತ್ತು 1ನೇ ಮಹಡಿಯಲ್ಲಿನ-05 ಮಳಿಗೆ ಒಟ್ಟು-07 ಮಳಿಗೆಗಳನ್ನು ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿ ಜನರಲ್ ಸ್ಟಾಲಗಳನ್ನು, ಗೋಕುಲ ರೋಡ ಕೇಂದ್ರ ಬಸ್ ನಿಲ್ದಾಣ, ಹೋಸೂರ ಪ್ರಾದೇಶಿಕ ಬಸ್ ನಿಲ್ದಾಣ, ಕಲಘಟಗಿ, ಅಣ್ಣಿಗೇರಿ, ಕುಂದಗೋಳ, ವಿವಿಧ ಖಾಲಿ ಸ್ಥಳಗಳಲ್ಲಿನ ಮಳಿಗೆಗಳು / ಉಪಹಾರ ಗೃಹ /ಲಗೇಜ ರೂಮ್/ ವಿಶಾಲ ತೆರದ ನಿವೇಶನ/ಕಟ್ಟಡಗಳು/ ದ್ವಿ / ನಾಲ್ಕು ಚಕ್ರ ವಾಹನ ನಿಲುಗಡೆ ಸ್ಥಳ ಹಾಗೂ ನಲವಡಿ, ಸಂಶಿ, ತಡಸ ಬಸ್ ನಿಲ್ದಾಣಗಳ ಶೌಚಾಲಯ ಮತ್ತು ಮೂತ್ರಾಲಯ ನಿರ್ವಹಣೆ ಪರವಾನಿಗೆದಾರರ ಆಯ್ಕೆಗೆ ದಿ : **25-05-2026** ರಿಂದ ಇ-ಟೆಂಡರ್ & ಸಂದಾನ ಟೆಂಡರ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ವಿವರ/ದಿನಾಂಕಗಳು ಕೆಳಕಂಡಂತೆ ಇರುತ್ತವೆ.

ಇ-ಪ್ರೊಕ್ಯೂರಮೆಂಟ್ ವಿವರ	ನಿಗದಿಪಡಿಸಿದ ದಿನಾಂಕ	ಸಂಧಾನದ ವಿವರ	ನಿಗದಿಪಡಿಸಿದ ದಿನಾಂಕ
ಇ-ಟೆಂಡರ್ ದಸ್ತಾವೇಜುಗಳನ್ನು http://kppp.karnataka.gov.in ಮೂಲಕ ಡೌನಲೋಡ್ ಮಾಡಿಕೊಳ್ಳಬಹುದು.	ದಿ:15/06/2026 ಸಮಯ 17:00 ರವರೆಗೆ	ಸಂಧಾನದ ಅರ್ಜಿಗಳನ್ನು ಹಾಗೂ ಷರತ್ತು ಮತ್ತು ನಿಬಂಧನೆಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ.	ದಿ: 16/06/2026 ಸಮಯ 15:00 ರವರೆಗೆ
ಅರ್ಜಿ ಸಲ್ಲಿಸಲು ಕೊನೆ ದಿನಾಂಕ	ದಿ: 16/06/2026 ಸಮಯ 17:30 ರವರೆಗೆ	ಭರ್ತಿ ಮಾಡಿದ ಅರ್ಜಿಗಳನ್ನು ದಾಖಲೆಗಳೊಂದಿಗೆ ಮತ್ತು ಇ.ಎಂ.ಡಿ. ಮೊತ್ತದ ಡಿ.ಡಿ.ಯೊಂದಿಗೆ ಕಛೇರಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ	ದಿ:17/06/2026 ಸಮಯ 11:00 ರವರೆಗೆ
ಇ-ಟೆಂಡರ್ ತೆರೆಯುವ ದಿನಾಂಕ (ಯಾವುದೇ ತಾಂತ್ರಿಕ ದೋಷ ಇಲ್ಲದಿದ್ದಲ್ಲಿ)	ದಿ:18/06/2026 ಸಮಯ 11:00 ಘಂಟೆಗೆ	ಸಂಧಾನ ಮಾತುಕತೆಗೆ ನಿಗದಿಪಡಿಸಿದ ದಿನಾಂಕ	ದಿ:17/06/2026 ಸಮಯ 11:30 ಘಂಟೆಗೆ

ಇ-ಟೆಂಡರ್ ದಸ್ತಾವೇಜುಗಳನ್ನು https://kppp.karnataka.gov.in ಮೂಲಕ ಡೌನಲೋಡ್ ಮಾಡಿಕೊಳ್ಳಬಹುದು. ಇ-ಪ್ರೊಕ್ಯೂರ್‌ಮೆಂಟ್ ಸೆಲ್‌ನಿಂದ DSC (Digital Signature Certificate) ಪಡೆದಿರುವ ಅಧಿಕೃತ ಅಭ್ಯರ್ಥಿಗಳು ಮಾತ್ರ ಇ-ಟೆಂಡರ್ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ವಾ.ಕ.ರ.ಸಾ.ಸಂಸ್ಥೆಯ ಹುಬ್ಬಳ್ಳಿ ಗ್ರಾಮಾಂತರ ವಿಭಾಗದ ವಿಭಾಗೀಯ ಕಛೇರಿ, 4ನೇ ಮಹಡಿ, ಸಿ.ಬಿ.ಟಿ.-ಹುಬ್ಬಳ್ಳಿ ಸಂಪರ್ಕಿಸಲು ಕೋರಲಾಗಿದೆ. ಮೊಬೈಲ್ ಸಂಖ್ಯೆ: **7760991652 (DTO) 9900191384** ವಿಷಯ ಮೇಲ್ವಿಚಾರಕ.

ಸಹಿ/- ವಿಭಾಗೀಯ ನಿಯಂತ್ರಣಾಧಿಕಾರಿ,
ವಾ.ಕ.ರ.ಸಾ.ಸಂಸ್ಥೆ, ಹುಬ್ಬಳ್ಳಿ ಗ್ರಾಮಾಂತರ ವಿಭಾಗ, ಹುಬ್ಬಳ್ಳಿ
ವಾಸಾಸಂಇ/ಧಾರವಾಡ/ಕೆಎಸ್ಎಂಸಿಎ/226/2026-27

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸಿಂಧನೂರು.
E-Mail : apmcsindhanur@gmail.com ಜಿಲ್ಲಾ: ರಾಯಚೂರು 08535-220071, 220256

ಸಂಖ್ಯೆ:ಕೃಉಮಾಸ/ಸಿಂ/ಭದ್ರತಾ-ಸ್ವಚ್ಛತಾ/ 58 /2026-27 ದಿನಾಂಕ:20-05-2026.

ಟೆಂಡರ್ ಪ್ರಕಟಣೆ

ಸಿಂಧನೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ 2026-27ನೇ ಸಾಲಿನ ಸಮಿತಿಯ ಆಸ್ತಿ ಸಂರಕ್ಷಣೆಗಾಗಿ ಭದ್ರತಾ ಏಜೆನ್ಸಿಯವರಿಂದ ಭದ್ರತಾ ಸೇವೆಯನ್ನು ಹಾಗೂ ಮಾರುಕಟ್ಟೆ ಪ್ರಾಂಗಣಗಳ ಸ್ವಚ್ಛತಾ ಸೇವೆಗಾಗಿ ಅಗತ್ಯಕ್ಕೆ ತಕ್ಕಂತೆ ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

1) ಭದ್ರತಾ ನಿರ್ವಹಣೆ:- ಇಎಂಡಿ ಮೊತ್ತ ರೂ. 2.00ಲಕ್ಷ Indent Number: APMC / 2026-27 / SE0843. 2) ಸ್ವಚ್ಛತಾ ನಿರ್ವಹಣೆ:- ಇಎಂಡಿ ಮೊತ್ತ ರೂ. 1.00ಲಕ್ಷ Indent Number: APMC / 2026-27 / SE0844.

ಟೆಂಡರ್ ಸಲ್ಲಿಸುವ ಕೊನೆಯ ದಿ:08-06-2026 ರ ಸಾಯಂಕಾಲ 4.30ರ ವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿ:11-06-2026ರ ಪೂರ್ವಾಹ್ನ 11.00 ಗಂಟೆಗೆ, ಆರ್ಥಿಕ ಬಿಡ್ ತೆರೆಯುವ ದಿ:16-06-2026ರ ಪೂರ್ವಾಹ್ನ 11.00 ಗಂಟೆಗೆ ಸಮಿತಿಯ ಆಡಳಿತ ಕಛೇರಿಯಲ್ಲಿ ತೆರೆಯಲಾಗುವುದು.

ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳನ್ನು ರಜಾ ದಿನಗಳನ್ನು ಹೊರತುಪಡಿಸಿ, ಕಛೇರಿ ವೇಳೆಯಲ್ಲಿ ಅಥವಾ http://kppp.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.

ಸೂಚನೆ:- ಕಾರಣಾಂತರಗಳಿಂದ ನಿಗದಿಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಯಾವುದೇ ಬದಲಾವಣೆಗಳಾದಲ್ಲಿ ಮತ್ತು ಮರು ಟೆಂಡರ್ ಆಹ್ವಾನಿಸಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕೆ ಪ್ರತ್ಯೇಕವಾಗಿ ಜಾಹಿರಾತು ಹೊರಡಿಸಲಾಗುವುದಿಲ್ಲ.

ಸಹಿ/- ಕಾರ್ಯದರ್ಶಿ, ಕೃ.ಉ.ಮಾ.ಸ.ಸಿಂಧನೂರು. DIP/RCR/88KSMCA/90/2026-27 ಸಹಿ/- ಅಧ್ಯಕ್ಷರು ಕೃ.ಉ.ಮಾ.ಸ.ಸಿಂಧನೂರು.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಸಂಚಾರ (ವಾಣಿಜ್ಯ) ಇಲಾಖೆ, ಕೇಂದ್ರ ಕಛೇರಿ, 2ನೇ ಮಹಡಿ, ಕೆ.ಎಚ್. ರಸ್ತೆ, ಶಾಂತಿನಗರ, ಬೆಂಗಳೂರು - 560027.
ಸಂಖ್ಯೆ: ಬೆಂಮಸಾಸಂ/ಕೇಕ/ಸಂ/ವಾ/2068/583/2026-27 ದಿನಾಂಕ: 23.05.2026

ಟೆಂಡರ್ ಪ್ರಕಟಣೆ ಸಂಖ್ಯೆ: 07/2026-27 (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ವಿವಿಧ ಬಸ್ ನಿಲ್ದಾಣಗಳಲ್ಲಿನ ಹಾಲಿ, ಖಾಲಿ/ಹೊಸದಾಗಿ (ತೆರೆದ ಸ್ಥಳದಲ್ಲಿ) ATM ಕೌಂಟರ್‌ಗಳನ್ನು ಮಾಸಿಕ ಪರವಾನಗಿ ಶುಲ್ಕದ ಆಧಾರದ ಮೇಲೆ ಪರವಾನಗಿದಾರರ ಆಯ್ಕೆಗಾಗಿ ಆಸಕ್ತ ಬ್ಯಾಂಕ್/ಏಜೆನ್ಸಿ/ಕಂಪನಿ ಹಾಗೂ ಈ ರೀತಿಯ ಸೇವೆ ಒದಗಿಸುವವರು ಗಳಿಂದ ಇ-ಸಂಗ್ರಹಣಾ ವೇದಿಕೆ ಮುಖಾಂತರ ಟೆಂಡರ್ ಬಿಡ್‌ಗಳನ್ನು ಆಹ್ವಾನಿಸಿದೆ.

ಬಿಡ್ ಸಲ್ಲಿಸುವ ಕೊನೆಯ ದಿನಾಂಕ	15.06.2026 ರಂದು 17:00 ಗಂಟೆಯವರೆಗೆ.
ತಾಂತ್ರಿಕ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ	16.06.2026 ರಂದು 17:05 ಗಂಟೆಗೆ

ಮಾಸಿಕ ಪರವಾನಗಿ ಶುಲ್ಕ, ಇಎಂಡಿ ಮೊತ್ತ, ವಿಸ್ತೀರ್ಣ ಹಾಗೂ ಇನ್ನಿತರ ಮಾಹಿತಿಗಾಗಿ www.kppp.karnataka.gov.in ಗೆ ಲಾಗಿನ್ ಆಗಿ ಅಥವಾ ಇ-ಸಂಗ್ರಹಣಾ ಕೋಶ ದೂರವಾಣಿ ಸಂಖ್ಯೆ: 09240214000, 09240214001, 22371090, 22340060, 22340948 ಅಥವಾ 7760997519 & 7760991222 ಇ-ಮೇಲ್: ctmc@mybmtc.com ಗೆ ಸಂಪರ್ಕಿಸಬಹುದು.

ಸಹಿ/- ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ) (ಟೆಂಡರ್ ಕರೆಯುವ ಪ್ರಾಧಿಕಾರಿ)

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ - 590 018, ಕರ್ನಾಟಕ. ಭಾರತ.

ಸಂಖ್ಯೆ : ವಿ.ತಾ.ವಿ./ಬೆ./ಸ್ಥಾ.ಅ./2026-27/ಐ.ಎಫ್.ಟಿ. ನಂ. 26/856
ದಿನಾಂಕ : 23-05-2026

ಟೆಂಡರ್ ಪ್ರಕಟಣೆ
(ದ್ವಿ-ಲಕೋಟ ಪದ್ಧತಿ) (ಕೆ.ಪಿ.ಪಿ. ಪೋರ್ಟಲ್ ಮೂಲಕ) 2ನೇ ಕರೆ

ಕುಲಸಚಿವರು, ವಿ.ತಾ.ವಿ., ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ಕೆ.ಡಬ್ಲ್ಯೂ.ರ ಪ್ರಕಾರ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಆಮಂತ್ರಿಸಲಾಗಿದೆ. ಕಾಮಗಾರಿ ಹೆಸರು : ವಿ.ತಾ.ವಿ., "ಜ್ಞಾನ ಸಂಗಮ", ಬೆಳಗಾವಿಯ ಆವರಣದಲ್ಲಿರುವ ಆಡಿಟೋರಿಯಂ ಮೇಲ್ಛಾವಣಿಯ ರೂಫ್‌ಶೀಟ್ ಬದಲಾಯಿಸುವುದು ಮತ್ತು ಇತರ ನಿರ್ವಹಣಾ ಕಾಮಗಾರಿ ಮೊತ್ತ : ರೂ. 97,45,747/- (ತೆರಿಗೆ ರಹಿತ) 2ನೇ ಕರೆ. ಇತರೆ ಮಾಹಿತಿಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ದಿನಾಂಕ : 25-05-2026 ರಿಂದ ಪಡೆದುಕೊಳ್ಳಬಹುದು.

ಸಹಿ/- ಕುಲಸಚಿವರು,
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.
ಡಿಐಪಿಆರ್/ಬೆಳಗಾವಿ/300/ಮಣಿಪಾಲ್/2026-27

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಹೇಮಾವತಿ ನಾಲಾ ತನಿಖಾ ವಿಭಾಗ, ಹೆಬ್ಬೂರು
ತುಮಕೂರು ತಾಲ್ಲೂಕು ಮತ್ತು ಜಿಲ್ಲೆ ದೂರವಾಣಿ : 0816-2957008,
ಇ-ಮೇಲ್ : eehcidhebbur@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 02/2026-27 ದಿನಾಂಕ : 21-05-2026

ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು ಹೇಮಾವತಿ ನಾಲಾ ತನಿಖಾ ವಿಭಾಗ, ಕಾ.ನೀ.ನಿ.ನಿ., ಹೆಬ್ಬೂರು ರವರು ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ರೂ. 2835.62 ಲಕ್ಷಗಳ ಮೊತ್ತದ 01 ಕಾಮಗಾರಿಗೆ ಅಲ್ಪಾವಧಿ ಟೆಂಡರ್‌ನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟನ್ ಕೀ ಆಧಾರದ ಮೇಲೆ ಆಹ್ವಾನಿಸಲಾಗಿದೆ.

ಟೆಂಡರ್‌ಗಳನ್ನು ದಿನಾಂಕ : 22-05-2026 ರಿಂದ ದಿನಾಂಕ : 30-05-2026 ರ ಸಂಜೆ 4.30 ಗಂಟೆಯವರೆಗೆ ಸಲ್ಲಿಸಬಹುದಾಗಿದೆ.

ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ : www.kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಹೇಮಾವತಿ ನಾಲಾ ತನಿಖಾ ವಿಭಾಗ,
ಕಾ.ನೀ.ನಿ.ನಿ., ಹೆಬ್ಬೂರು.
ಡಿಐಪಿಆರ್/ತುಮಕೂರು/16/ಮಣಿಪಾಲ್/2026-27

LOVE VK ❤ LOVE LIFE
ಮಂಗಳವಾರ, 26 ಮೇ 2026 I ADVERTORIAL, ENTERTAINMENT INDUSTRY PROMOTIONAL FEATURE
ಲವಲVK

ಕಾರ್ತಿ ಬರ್ತ್‌ಡೇ ಪ್ರಯುಕ್ತ ಅವರ ನಟನೆಯ 30ನೇ ಸಿನಿಮಾದ ಮುಹೂರ್ತ ನಡೆದಿದೆ. ಇದರಲ್ಲಿ ಅವರಿಗೆ ನಟಿ ಮೀನಾಕ್ಷಿ ಚೌಧರಿ ಜೋಡಿಯಾಗಿದ್ದಾರೆ.

ಪ್ರಮೋದ್ ಪಂಜು, ಅಮೃತಾ ಅಯ್ಯಂಗಾರ್ ನಟನೆಯ, ಛಲ ನಿರ್ದೇಶನದ 'ಹಲ್ಕಾ ಡಾನ್' ಸಿನಿಮಾ ತಾರಾಬಳಗಕ್ಕೆ ಬಹುಭಾಷಾ ನಟ ಜಾನ್ ವಿಜಯ್ ಸೇರ್ಪಡೆಯಾಗಿದ್ದಾರೆ.

ಶೂಟಿಂಗ್ ಮಡಿಲಲ್ಲಿ ಜಗ್ಗಮಮ್ಮಿ

ಡಾರ್ಲಿಂಗ್ ಕೃಷ್ಣರಿಗೆ ಇನ್ಮುಂದೆ ಅವರ ಯಾವುದೇ ಸಿನಿಮಾಗೂ ನಾನು ಸೂಕ್ತವೆಂದು ಅನಿಸಿದರೆ ಅವಕಾಶ ನೀಡುವಂತೆ ಕೇಳಿದ್ದೇನೆ. ಅವರೂ ಇದಕ್ಕೆ ಒಪ್ಪಿದ್ದಾರೆ. ಈಗ ನಮ್ಮ ಊರಿನಲ್ಲೂ ನನ್ನನ್ನು 'ಜಗ್ಗಮಮ್ಮಿ' ಎಂದೇ ಕರೆಯುತ್ತಾರೆ.

-ಜಗದೀಶ್ | ನಟ

ಸೂಪರ್‌ಹಿಟ್ 'ಲವ್ ಮಾಕ್‌ಟೇಲ್ 3' ಸಿನಿಮಾ ಬಿಡುಗಡೆಯಾಗಿ 50 ದಿನಗಳು ಕಳೆದಿದ್ದರೂ ಅದರಲ್ಲಿರುವ 'ಜಗ್ಗಮಮ್ಮಿ' ಪಾತ್ರ ಇವತ್ತಿಗೂ ಜನಮನದಲ್ಲಿ ಉಳಿದಿದೆ. ಈ ಪಾತ್ರ ಮಾಡಿರುವ ನಟ ಜಗದೀಶ್ ಈಗ ಹೊಸ ಚಿತ್ರಕ್ಕೆ ಆಯ್ಕೆಯಾಗಿದ್ದಾರೆ.

ಮಲ್ವೀರ
feedbacklvk@vijaykarnataka.com

ಡಾರ್ಲಿಂಗ್ ಕೃಷ್ಣ 'ಲವ್ ಮಾಕ್‌ಟೇಲ್' ಸರಣಿಯ ಪ್ರತಿ ಸಿನಿಮಾದಲ್ಲಿಯೂ ಒಂದು ವಿಭಿನ್ನ ಪಾತ್ರ ಸೃಷ್ಟಿಸಿರುತ್ತಾರೆ. ತಮ್ಮ ಆಪ್ತ ವಲಯದಲ್ಲಿ ಇರುವವರಿಗೇ ಆ ಪಾತ್ರ ನೀಡಿ ಚಿತ್ರರಂಗಕ್ಕೆ ಕರೆತರುತ್ತಾರೆ. ಅಂಥದ್ದೇ ಪಾತ್ರ ಈ 'ಜಗ್ಗಮಮ್ಮಿ'. ಇದರಲ್ಲಿ ನಟಿಸಿರುವ ಜಗದೀಶ್ ಅವರು ಕೃಷ್ಣರ ತಂದೆ ಮನೆಯಲ್ಲೇ ಸುಮಾರು ವರ್ಷಗಳಿಂದ ಕೆಲಸ ಮಾಡಿದವರು.

ಚಂದನವನಕ್ಕೆ ಸಿನಿಮಾ ಹಳ್ಳಿ ಅಥವಾ 'ಶೂಟಿಂಗ್ ಮಹದೇವಪುರ' ಎಂದೂ ಪರಿಚಿತವಾಗಿರುವ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಮಹದೇವಪುರದಲ್ಲಿ ಹುಟ್ಟಿರುವ ನಟ ಜಗದೀಶ್ ಬಾಲ್ಯದಿಂದಲೇ ಸಿನಿಮಾ ಶೂಟಿಂಗ್ ನೋಡುತ್ತಾ ಬೆಳೆದವರು. ತಾವು ಸಿನಿಮಾಗೆ ಆಯ್ಕೆಯಾದ ಬಗ್ಗೆ ಲವಲvkಗೆ ವಿವರಿಸಿರುವ ಅವರು, 'ಜನರು ತೆರೆಯ ಮೇಲೆ ನೋಡುತ್ತಿದ್ದ ಕನ್ನಡದ ಸೂಪರ್‌ಸ್ಟಾರ್‌ಗಳನ್ನು ನಾನು ಚಿಕ್ಕ ವಯಸ್ಸಿನಿಂದಲೇ ಕಣ್ಣಾರೆ ಕಾಣುತ್ತಾ ಬೆಳೆದವನು. 'ಲವ್ ಮಾಕ್‌ಟೇಲ್ 3' ಸಿನಿಮಾದ ಒಂದು ಪಾತ್ರಕ್ಕೆ ನಾನು ಸೂಕ್ತವೆನಿಸಿ ನಟಿ ಮಿಲನಾ ನಾಗರಾಜ್ ನನಗೆ ನಟಿಸಲು ಹೇಳಿದರು. ಇದಕ್ಕಾಗಿ ಅವರು ನನ್ನನ್ನು ಮೈಸೂರಿನಿಂದ ಬೆಂಗಳೂರಿಗೆ ಕರೆತಂದರೂ ಇಡೀ ಸಿನಿಮಾ ಶೂಟಿಂಗ್‌ನಲ್ಲಿ ನಾನು ಡೈಲಾಗ್ ಬರೆಯುತ್ತಾ, ನನ್ನ ಪಾತ್ರವನ್ನು ಅಭ್ಯಾಸ ಮಾಡುತ್ತಾ ಅವರಿಗೆ ಎಲ್ಲಾ ವಿಧದಲ್ಲೂ ಸಹಾಯ ಮಾಡುತ್ತಾ ನಟನೆ ಹಾಗೂ ಸಿನಿಮಾ ಮೇಕಿಂಗ್ ಕಲಿತೆ. ನನ್ನ ಪಾತ್ರಕ್ಕೆ ಇಷ್ಟು ದೊಡ್ಡ ಯಶಸ್ಸು ಸಿಗುತ್ತದೆ ಎಂದು ನಾನು ಕೂಡ ನಿರೀಕ್ಷೆ ಮಾಡಿರಲಿಲ್ಲ. ಮೊದಲಿನಿಂದಲೂ ನಾನು ಶೂಟಿಂಗ್ ನೋಡುತ್ತಾ ಬೆಳೆದಿದ್ದರೂ ನಟಿಸಲು ಅವಕಾಶ ಸಿಗಬೇಕಲ್ಲ? ಯಾರೂ ನನ್ನ ನಟನೆ ಗುರುತಿಸಿರಲಿಲ್ಲ. ಈಗ ಕೃಷ್ಣರಿಂದ ಈ ಅವಕಾಶ ಸಿಕ್ಕಿದೆ' ಎಂದಿದ್ದಾರೆ.

'ಲವ್ ಮಾಕ್‌ಟೇಲ್ 3' ಸಿನಿಮಾದಲ್ಲಿ ಜಗ್ಗಮಮ್ಮಿ ಪಾತ್ರಕ್ಕೆ ಸಿಕ್ಕಿರುವ ಉತ್ತಮ ಪ್ರತಿಕ್ರಿಯೆಗಳಿಂದಾಗಿ ಜಗದೀಶ್‌ಗೆ ಈಗ ಸಾಕಷ್ಟು ಅವಕಾಶಗಳು ಬರುತ್ತಿವೆ. ಆದರೂ ಅವರು ಅದರಲ್ಲಿ ಸದ್ಯಕ್ಕೆ ಒಂದನ್ನು ಆಯ್ಕೆ ಮಾಡಿದ್ದಾರೆ. ಈ ಬಗ್ಗೆ ಅವರು, 'ಇದೇ ಜೂನ್‌ನಿಂದ 'ದೇವಿ' ಸಿನಿಮಾ ಶೂಟಿಂಗ್ ಶುರುವಾಗಲಿದೆ. ಹೊಸ ಹೀರೊ ಚೇತನ್ ನಟನೆಯ ಎರಡನೇ ಸಿನಿಮಾ ವಾಗಿರುವ ಇದರಲ್ಲಿ ನನ್ನ ಪಾತ್ರ ವಿಭಿನ್ನವಾಗಿದೆ. ತಾಯಿ ಮಗನ ಭಾವನೆಗಳಿರುವ ಈ ಹಳ್ಳಿಕಥೆಯಲ್ಲಿ ನಾನು ನಾಯಕನ ಸ್ನೇಹಿತನಾಗಿದ್ದೇನೆ. ಹೀರೊಗಿಂತಲೂ ಹೆಚ್ಚು ಸ್ಕ್ರೀನ್ ಸ್ಪೇಸ್ ಇರುವ ಪಾತ್ರ ನನ್ನದು' ಎಂದು ಹೇಳಿದ್ದಾರೆ. ■

ಚುರುಮುರಿ

ರಶ್ಮಿಕಾನೇ ಬೇಕೆಂದ ಹಾಲಿವುಡ್ ನಟ

ಟೋಕಿಯೊದಲ್ಲಿ ನಡೆದ 10ನೇ ವಾರ್ಷಿಕ ಕ್ರಚಿರೋಲ್ ಅನಿಮೇ ಅವಾರ್ಡ್ಸ್ ಕಾರ್ಯಕ್ರಮದಲ್ಲಿ ನಟಿ ರಶ್ಮಿಕಾ ಮಂದಣ್ಣ ಜತೆಗೆ ವೇದಿಕೆ ಹಂಚಿಕೊಂಡಿರುವ ಹಾಲಿವುಡ್ ನಟ ವಿನ್ಸ್ಟನ್ ಡ್ಯೂಕ್ ಈ ಸಂದರ್ಭದ ಫೋಟೊ ಶೇರ್ ಮಾಡಿ 'ಐ ಹ್ಯಾಡ್ ಅ ಬ್ಲಾಸ್ಟ್' ಎಂದು ಬರೆದಿದ್ದಾರೆ. ಇದೇ ಮೊದಲ ಬಾರಿಗೆ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಅವರು ಆಯೋಜಕರಲ್ಲಿ ರಶ್ಮಿಕಾ ಜತೆಗೇ ತಮಗೆ ವೇದಿಕೆ ಕೊಡುವಂತೆ ಮನವಿ ಮಾಡಿದ್ದರು ಎನ್ನಲಾಗಿದೆ.

ಕಿಂಗ್‌ನಲ್ಲಿ ರಣವೀರ್ ಸಿಂಗ್

ಶಾರುಖ್ ಖಾನ್ ಹಾಗೂ ದೀಪಿಕಾ ಪಡುಕೋಣೆ ನಟನೆಯ 'ಕಿಂಗ್' ಸಿನಿಮಾದಲ್ಲಿ ಒಂದು ವಿಶೇಷ ಪಾತ್ರದಲ್ಲಿ ನಟ ರಣವೀರ್ ಸಿಂಗ್ ಕಾಣಿಸಿಕೊಳ್ಳಲಿದ್ದಾರೆ ಎನ್ನಲಾಗುತ್ತಿದೆ. ಈಗಾಗಲೇ ವಿದೇಶದಲ್ಲಿ ಚಿತ್ರೀಕರಣವಾಗಿರುವ ಈ ಚಿತ್ರದ ಕೆಲವು ದೃಶ್ಯಗಳಲ್ಲಿ ಅವರು ನಟಿಸಿದ್ದಾರೆ ಎನ್ನಲು 'ಕಿಂಗ್' ಶೂಟಿಂಗ್ ಸೆಟ್‌ನಿಂದ ಅವರು ಹಂಚಿಕೊಂಡಿರುವ ಫೋಟೊಗಳೇ ಸಾಕ್ಷಿ ಎಂದು ಹೇಳಲಾಗಿದೆ.

ಹಾರರ್ ಚಿತ್ರದಿಂದ ಬಾಕ್ಸಾಫೀಸ್ ಲೂಟಿ

ಹಾಲಿವುಡ್‌ನ ಹಾರರ್ ಸಿನಿಮಾ 'ಅಬ್ಸೆಷನ್' ಹೊಸ ದಾಖಲೆಗಳನ್ನು ಬರೆಯುತ್ತಿದೆ. ಈ ರೀತಿ ಕಡಿಮೆ ಬಜೆಟ್‌ನಲ್ಲಿ ದೆವ್ವದ ಚಿತ್ರ ಮಾಡಿ ಬಾಕ್ಸಾಫೀಸ್‌ನಲ್ಲಿ ಕೋಟ್ಯಂತರ ರೂಪಾಯಿ ದೋಚುವುದು ಸುಲಭ ಎನ್ನುವುದು ಹಾಲಿವುಡ್ ಮಾತ್ರವಲ್ಲದೆ ಭಾರತೀಯ ಚಿತ್ರರಂಗದಲ್ಲೂ ಸಾಬೀತಾಗಿದೆ.

ಕಿರಣ್ ಚಂದ್ರ
kiran.b@timesofindia.com

ಅಮೆರಿಕದಲ್ಲಿ ಮೇ 10ರಂದು ತೆರೆಕಂಡ ಕರ್ರಿ ಬಾರ್ಕರ್ ನಿರ್ದೇಶನದಲ್ಲಿ ಕೇವಲ 7 ಕೋಟಿ ರೂ.ಗೆ ನಿರ್ಮಾಣವಾದ 'ಅಬ್ಸೆಷನ್' ಸಿನಿಮಾ ಈಗ ಜಗತ್ತಿನಾದ್ಯಂತ ಬರೋಬ್ಬರಿ 750 ಕೋಟಿ ರೂ. ಕಲೆಕ್ಷನ್ ಮಾಡಿದೆ. ಮೈಕಲ್ ಜಾನ್ಸ್ಟನ್, ಇಂಡೆ ನವರಟ್ಟೆ ಪ್ರಮುಖ ಪಾತ್ರದಲ್ಲಿರುವ ಈ ಚಿತ್ರ ಶೀಘ್ರದಲ್ಲೇ ಸಾವಿರ ಕೋಟಿ ರೂ. ಗಳಿಕೆ ಮಾಡಲಿದೆ ಎನ್ನಲಾಗಿದೆ. ಕಳೆದ ವರ್ಷ ಟೊರಾಂಟೊ ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿ ಬಿಡುಗಡೆಯಾಗಿದ್ದ ಈ ಸೂಪರ್‌ನ್ಯಾಚುರಲ್ ಹಾರರ್ ಚಿತ್ರ ಈ ವರ್ಷ ಜಗತ್ತಿನಾದ್ಯಂತ ರಿಲೀಸ್ ಆಗಿದ್ದು, ಭಾರತದಲ್ಲಿ ಇದೇ ಮೇ 29ರಂದು ತೆರೆಗೆ ಬರಲಿದೆ. 2007ರಲ್ಲಿ ತೆರೆಕಂಡಿದ್ದ 'ಪ್ಯಾರಾನಾರ್ಮಲ್ ಆ್ಯಕ್ಟಿವಿಟಿ' ಸಿನಿಮಾ ಕೇವಲ 15 ಲಕ್ಷ ರೂ. ಬಜೆಟ್‌ನಲ್ಲಿ ತಯಾರಾಗಿ ಜಾಗತಿಕವಾಗಿ ಭರ್ತಿ 1800 ಕೋಟಿ ರೂ.ಗೂ ಅಧಿಕ ಕಲೆಕ್ಷನ್ ಮಾಡಿತ್ತು. ಇದಾದ 19 ವರ್ಷಗಳ ನಂತರ ಬಂದಿರುವ 'ಅಬ್ಸೆಷನ್' ಈ ಹಿಂದಿನ ದಾಖಲೆ ಮುರಿಯಲಿದೆ ಎನ್ನಲಾಗುತ್ತಿದೆ.

ಕನ್ನಡದಲ್ಲೂ ಗೆದ್ದಿವೆ ಅಗ್ಗದ ಹಾರರ್

ಸ್ಯಾಂಡಲ್‌ವುಡ್‌ನಲ್ಲಿ 1993ರಲ್ಲಿ ಬಂದಿದ್ದ ಬ್ಲಾಕ್‌ಬಸ್ಟರ್ ಹಾರರ್ ಸಿನಿಮಾ 'ಶ್' ಕೇವಲ 19 ಲಕ್ಷ ರೂ. ಬಜೆಟ್‌ನಲ್ಲಿ ನಿರ್ಮಾಣವಾಗಿತ್ತು. ಆದರೆ ಇದು ಗಲ್ಲಾಪೆಟ್ಟಿಗೆಯಲ್ಲಿ ಎರಡೂವರೆ ಕೋಟಿ ರೂ. ಬಾಚಿಕೊಂಡಿತ್ತು. ಇದು ಉಪೇಂದ್ರ ಬ್ಲಾಕ್ ಬಸ್ಟರ್ ಸಿನಿಮಾ. 2013ರಲ್ಲಿ ತೆರೆಕಂಡಿದ್ದ ಫೌಂಡ್ ಫುಟೇಜ್ ಶೈಲಿಯ '6-5=2' ಸಿನಿಮಾ ಕೇವಲ 30 ಲಕ್ಷ ರೂ.ನಲ್ಲಿ ನಿರ್ಮಾಣವಾಗಿ 5 ಕೋಟಿ ರೂ.ಗೂ ಹೆಚ್ಚು ಕಲೆಕ್ಷನ್ ಮಾಡಿತ್ತು. 2016ರಲ್ಲಿ ಬಂದ 'ರಂಗಿತರಂಗ' ಚಿತ್ರ ಕೂಡ ಕೇವಲ ಒಂದೂವರೆ ಕೋಟಿ ರೂ. ಬಜೆಟ್‌ನಲ್ಲಿ ಸಿದ್ಧವಾಗಿ ಬರೋಬ್ಬರಿ 40 ಕೋಟಿ ರೂ.ಗೂ ಅಧಿಕ ಸಂಪಾದನೆ ಮಾಡಿತ್ತು. ಕಳೆದ ವರ್ಷ ಕನ್ನಡದ ಹಾರರ್ ಕಾಮಿಡಿ ಸಿನಿಮಾ 'ಸು ಫ್ರಮ್ ಸೋ' ಕೂಡ 2 ಕೋಟಿ ರೂ.ನಷ್ಟು ಕಡಿಮೆ ಬಜೆಟ್‌ನಲ್ಲಿ ತಯಾರಾಗಿ ಚಿತ್ರಮಂದಿರದಲ್ಲಿ ತೆರೆಕಂಡ ಬಳಿಕ 120 ಕೋಟಿ ರೂ.ಗೂ ಹೆಚ್ಚು ಗಳಿಸಿತು. ಹೀಗೆ ಅತಿ ಕಡಿಮೆ ಬಜೆಟ್‌ನಲ್ಲಿ ನಿರ್ಮಾಣವಾಗಿರುವ ಹಾರರ್ ಚಿತ್ರಗಳು ಕನ್ನಡದಲ್ಲೂ ಕಮಾಲ್ ಮಾಡಿವೆ.

ಬಾಲಿವುಡ್‌ನಲ್ಲೂ ಕಡಿಮೆ ಬಜೆಟ್ ಭರ್ಜರಿ ಹಿಟ್

2024ರಲ್ಲಿ ಕೇವಲ 50 ಕೋಟಿ ರೂ. ಬಜೆಟ್‌ನ ಹಾರರ್ ಸಿನಿಮಾ 'ಸ್ತ್ರೀ 2' 850 ಕೋಟಿ ರೂ.ಗೂ ಅಧಿಕ ಕಲೆಕ್ಷನ್ ಮಾಡಿ ದಾಖಲೆ ಬರೆದಿದೆ. 2018ರಲ್ಲಿ ತೆರೆಕಂಡಿದ್ದ ಇದರ ಪ್ರೀಕ್ವೆಲ್ 'ಸ್ತ್ರೀ' ಕೂಡ ಕೇವಲ 20 ಕೋಟಿ ರೂ. ಬಜೆಟ್‌ನಲ್ಲಿ ನಿರ್ಮಾಣವಾಗಿ 200 ಕೋಟಿ ರೂ.ವರೆಗೆ ಕಲೆಕ್ಷನ್ ಮಾಡಿದೆ. ಬಾಲಿವುಡ್‌ನಲ್ಲಿ ಇತ್ತೀಚಿನ ಹಾರರ್ ಸಿನಿಮಾಗಳಾದ 'ತುಂಬಾಡ್', 'ಮುಂಜ್ಯಾ', 'ಶೈತಾನ್' ಕೂಡ ಕೋಟಿಗಳಲ್ಲಿ ನಿರ್ಮಾಣಗೊಂಡು ನೂರಾರು ಕೋಟಿ ರೂ. ಕಲೆಕ್ಷನ್ ಮಾಡಿವೆ. ಈ ಹಿಂದೆ ರಾಮ್ ಗೋಪಾಲ್ ವರ್ಮ ನಿರ್ದೇಶನದ 'ಭೂತ್', 'ರಾಝ್', 'ರಾಗಿಣಿ ಎಂಎಂಎಸ್' ಸಿನಿಮಾಗಳೆಲ್ಲವೂ ಕಡಿಮೆ ಬಜೆಟ್‌ನಲ್ಲಿ ತಯಾರಾಗಿ ಹತ್ತು ಪಟ್ಟು ಅಥವಾ ಅದಕ್ಕಿಂತ ಹೆಚ್ಚೇ ಗಳಿಕೆ ಮಾಡಿ ಮೈಲಿಗಲ್ಲು ಸ್ಥಾಪಿಸಿವೆ. ■

ಪ್ರೇಕ್ಷಕರ ಅಭಿರುಚಿಗೆ ಆದ್ಯತೆ

ಸ್ಯಾಂಡಲ್‌ವುಡ್ ಹಾಗೂ ಭಾರತದ ಅನೇಕ ಪ್ರಾಂತೀಯ ಚಿತ್ರರಂಗಗಳು ಕಡಿಮೆ ಬಜೆಟ್‌ನಲ್ಲಿ ಉತ್ತಮ ಕತೆ ಆಯ್ಕೆ ಮಾಡಿ ಅದಕ್ಕೆ ಸೂಕ್ತ ಸ್ಟಾರ್‌ಕಾಸ್ಟ್, ತಂತ್ರಜ್ಞರ ತಂಡದೊಂದಿಗೆ ಹಾರರ್ ಸಿನಿಮಾಗಳನ್ನು ಮಾಡಿ ಜನರನ್ನು ಚಿತ್ರಮಂದಿರಕ್ಕೆ ಸೆಳೆಯುವ ಪ್ರಯತ್ನ ಮಾಡಬಹುದು. ನಾವು ಕೊಟ್ಟಿದನ್ನು ಜನರು ನೋಡೇ ನೋಡುತ್ತಾರೆ ಎಂಬ ಮನಸ್ಥಿತಿಯಿಂದ ಹೊರಬಂದು ಅವರಿಗೆ ಬೇಕಾದನ್ನು ನೀಡಿ ಸಂತಸಗೊಳಿಸಬೇಕಿದೆ. ಹೀಗಾದಾಗ ಮಾತ್ರ ಸದ್ಯಕ್ಕೆ ಸೋಲುಗಳಿಂದ ಕಂಗೆಟ್ಟಿರುವ ಚಿತ್ರರಂಗ ಚೇತರಿಸಿಕೊಳ್ಳಲು ಸಾಧ್ಯ.

ಜೀನತ್‌ಗೂ ಸಾಂಸಾರಿಕ ಬವಣೆ

ಅಮ್ಮನ ಆಸರೆ

ಎಂಬತ್ತರ ದಶಕದಲ್ಲಿ ತೆರೆಯ ಮೇಲೆ 'ದಮ್ ಮಾರೋ ದಮ್' ಹಾಡಿನಲ್ಲಿ ಬೋಲ್ಡ್ ಆಗಿ ನರ್ತಿಸಿ ಯುವಜನತೆಯಲ್ಲಿ ಕಿಚ್ಚು ಹಚ್ಚಿದ್ದ, 'ಸತ್ಯಂ ಶಿವಂ ಸುಂದರಂ' ಸಿನಿಮಾದಲ್ಲಿ ಸಾಂಪ್ರದಾಯಿಕ ಲುಕ್‌ನಲ್ಲಿಯೂ ಮಾದಕವಾಗಿ ಕಾಣಿಸಿ ಸಂಪ್ರದಾಯಸ್ಥರ ಕೆಂಗಣ್ಣಿಗೆ ಗುರಿಯಾಗಿದ್ದ, ಪಾಶ್ಚಿಮಾತ್ಯ ನಡೆ, ನುಡಿ, ಪೋಷಾಕು, ಸ್ಟೈಲ್ ಮೂಲಕ ಹಿಂದಿ ಚಿತ್ರರಂಗದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತಂದಿದ್ದ ನಟಿ, ಮಾಡೆಲ್ ಜೀನತ್ ಅಮಾನ್‌ರಿಗೂ ಸಾಂಸಾರಿಕ ಸಮಸ್ಯೆಗಳು ತಪ್ಪಿಲ್ಲವಂತೆ.

ಇತ್ತೀಚೆಗೆ ಈ ಹಿರಿಯ ನಟಿಯು ಇನ್‌ಸ್ಟಾದಲ್ಲಿ ಹಳೆಯ ಸಂದರ್ಶನದ ವಿಡಿಯೊ ತುಣುಕೊಂದನ್ನು ಶೇರ್ ಮಾಡಿ ತಮ್ಮ ಮೊದಲ ಮಗ ಅಜಾನ್ ಹುಟ್ಟಿದ ನಂತರ ತಾವು ಮತ್ತೆ ಚಿತ್ರರಂಗಕ್ಕೆ ಮರಳಲು ತಮ್ಮ ತಾಯಿಯ ಬೆಂಬಲವೇ ಕಾರಣ ಎಂದು ಕೃತಜ್ಞತೆ ಸಲ್ಲಿಸಿ 1988ರಲ್ಲಿ ತೆರೆಕಂಡ 'ಗವಾಹಿ' ಚಿತ್ರದ ಶೂಟಿಂಗ್ ಸಮಯದಲ್ಲಿ ತಾವು ವೈವಾಹಿಕ ಜೀವನದಲ್ಲಿ ಎದುರಿಸುತ್ತಿದ್ದ ಕಷ್ಟಗಳು ಮತ್ತು ವೈಯಕ್ತಿಕ ಜೀವನದಿಂದ ಕೆಲಕಾಲ ದೂರವಿರಲು ಬಯಸಿದ್ದರ ಬಗ್ಗೆ ಮುಕ್ತವಾಗಿ ಬರೆದುಕೊಂಡಿದ್ದಾರೆ.

'ಗವಾಹಿ ಚಿತ್ರೀಕರಣ ನಡೆದಿದ್ದು 1988ರಲ್ಲಿ. ಅಂದರೆ ನನ್ನ ಮೊದಲ ಮಗ ಅಜಾನ್ ಹುಟ್ಟಿದ ಎರಡು ವರ್ಷಗಳ ನಂತರ ಮತ್ತು ನನ್ನ ಎರಡನೇ ಮಗ ಜಹಾನ್ ಹುಟ್ಟುವುದಕ್ಕಿಂತ ಸ್ವಲ್ಪ ಮುಂಚೆ. ನನ್ನ ವೃತ್ತಿಜೀವನದ ಉತ್ತುಂಗದಲ್ಲಿದ್ದಾಗ ನಾನು ಕಲ್ಪಿಸಿಕೊಂಡಿದ್ದ ಗೃಹಸ್ಥ ಜೀವನದ ಸುಂದರ ಚಿತ್ರಣವು ಈ ಹಂತದಲ್ಲಿ ಮಸುಕಾಗಲು ಪ್ರಾರಂಭಿಸಿತ್ತು. ಮದುವೆ ಮತ್ತು ಮಾತೃತ್ವ ಎರಡೂ ಒಟ್ಟಿಗೇ ಬಂದಿದ್ದವು, ವೈವಾಹಿಕ ಜೀವನದಲ್ಲಿ ಬಿರುಕುಗಳು ಕಾಣಿಸಿಕೊಳ್ಳಲು ಶುರುವಾಗಿದ್ದವು. ನಾನು ನನ್ನ ಪುಟ್ಟ ಮಗ ಅಜಾನ್‌ನನ್ನು ಕರೆದುಕೊಂಡು ದಕ್ಷಿಣ ಮುಂಬಯಿಯಲ್ಲಿದ್ದ ನನ್ನ ತಾಯಿಯ ಮನೆಗೆ ಹೋಗಿ ಅವರ ಜೊತೆ ವಾಸಿಸುತ್ತಿದ್ದೆ. ಆಗ ಅನಿರೀಕ್ಷಿತವಾಗಿ ಒಂದು ಉತ್ತಮ ಚಿತ್ರಕಥೆ ನನ್ನ ಮನೆ ಬಾಗಿಲಿಗೆ ಬಂತು. ಒಂದು ಕಾಲದಲ್ಲಿ ನನ್ನ ವೃತ್ತಿ ಜೀವನದಿಂದ ದೂರ ಓಡಲು ಬಯಸಿದ್ದ ನಾನು ಆ ಸಮಯದಲ್ಲಿ ನನ್ನ ವೈಯಕ್ತಿಕ ಜೀವನದಿಂದ ತಪ್ಪಿಸಿಕೊಳ್ಳಲು ಬಯಸಿದ್ದೆ! ಮಗಳು, ತಾಯಿ, ಹೆಂಡತಿ ಎಂಬ ಗುರುತಿನ ಆಚೆಗೂ ನನಗೊಂದು ಸ್ವಂತ ಅಸ್ತಿತ್ವವಿದೆ ಎಂಬುದನ್ನು ನೆನಪಿಸಿಕೊಳ್ಳಬೇಕಿತ್ತು. ಆಗ ನನ್ನ ಅದ್ಭುತ ಅಮ್ಮ ನನ್ನ ನೆರವಿಗೆ ನಿಂತರು. ಅಜಾನ್‌ನನ್ನು ನಾನು ನೋಡಿಕೊಳ್ಳುತ್ತೇನೆ, ನೀನು ವೃತ್ತಿ ಮುಂದುವರಿಸು ಎಂದರು. ಇದರಿಂದಾಗಿ ನನಗೆ 'ಗವಾಹಿ' ಚಿತ್ರದಲ್ಲಿ ನಟಿಸಲು ಸಾಧ್ಯವಾಯಿತು' ಎಂದಿದ್ದಾರೆ ಜೀನತ್ ಅಮಾನ್. ■

ಟೀನೇಜ್ ಪ್ರೀತಿಯಲ್ಲಿ ಬ್ರೇಕಪ್ ಮರ್ಡರ್

ಹದಿಹರೆಯದ ಪ್ರೀತಿ ಯಾವಾಗ ಪಕ್ವವಾಗುತ್ತದೆ? ಅದನ್ನು ಪರೀಕ್ಷಿಸುವುದು ಹೇಗೆ?

ಆರ್. ಶ್ರೀನಾಗೇಶ್
feedbacklvk@vijaykarnataka.com



ಅವನಲ್ಲಿ ಅವಳಿಗೆ ಅವಳಲ್ಲಿ ಅವನಿಗೆ ಆಕರ್ಷಣೆ ಹುಟ್ಟಿದ ಕ್ಷಣದಲ್ಲಿ ಹಿಂದೆಂದೂ ಕಂಡು ಕೇಳರಿಯದ ಸುಂದರ ಲೋಕದ ಪರಿಚಯವಾಗುತ್ತದೆ. ಇಲ್ಲಿ ವಿಹರಿಸಿದಷ್ಟೂ ಹೊತ್ತು ಮುಗಿಯದ ಮಾತು, ತೀರದ ನೋಟ. ಹೀಗೆ ಪ್ರೀತಿಯ ದಾರಿಯಲ್ಲಿ ಸಿಕ್ಕ ಕಲ್ಲುಮುಳ್ಳುಗಳೆಲ್ಲ ಅವರಿಬ್ಬರ ಪಾಲಿಗೆ ಹೂವಾಗಿ ಬದಲಾಗುತ್ತವೆ. ಆದರೆ ಅದೆಷ್ಟು ದೂರ? ಒಂದಷ್ಟು ದೂರ ಕೈಕೈ ಹಿಡಿದು ಹೆಜ್ಜೆ ಹಾಕಿದವರನ್ನು ಏಕತಾನತೆ ಹಿಡಿದು ನಿಲ್ಲಿಸುತ್ತದೆ. ಪ್ರೀತಿಯ ದಾರಿ ಸವೆದಿದ್ದರ ಸೂಚನೆ ನೀಡುತ್ತದೆ. ಜೊತೆಯಾಗಿ ಮುಂದೆ ಹೆಜ್ಜೆ ಇಡಲಾಗದಷ್ಟು ದೇಹ ಬಳಲುತ್ತದೆ. ಮನಸ್ಸು ದೂರವಾಗುವ ಮಾತನಾಡುತ್ತದೆ. ಅಲ್ಲಿಗೆ ಪ್ರೇಮದೂರಿನ ದಾರಿಯ ಮಧ್ಯದಲ್ಲೇ ಸಿಕ್ಕ ತಿರುವಿನಲ್ಲಿ ಪ್ರೇಮಿಗಳು ಪರಸ್ಪರ ಬೇರೆಯಾಗುತ್ತಾರೆ. ಪ್ರೇಮ ವೈಫಲ್ಯ ಎಂಬ ಹೊಸ ಕಿರುದಾರಿಯಲ್ಲಿ ಒಂಟಿಯಾಗಿ ಹೆಜ್ಜೆ ಹಾಕಲು ಮನ ಒಪ್ಪುವುದಿಲ್ಲ. ಹತಾಶೆ, ಬೇಸರ, ದ್ವೇಷ, ಅಸಹಾಯಕತೆ ನಾನಾ ರೂಪದಲ್ಲಿ ಕಾಡುತ್ತದೆ. ಅದು ಎಲ್ಲಿಯವರೆಗೆ ಅಂದರೆ ಜೀವವೇ ನೀನು ಎಂದೆಲ್ಲ ಹಾಡಿ ಹೊಗಳಿದ್ದ ಪ್ರೇಮಿಯ ಜೀವ ತೆಗೆಯುವ ತನಕ.

ಇತ್ತೀಚಿನ ದಿನಗಳಲ್ಲಿ ಪ್ರೇಮ ವೈಫಲ್ಯ ಅಪರಾಧವಾಗಿ ಬದಲಾಗುವ ಪ್ರಕರಣಗಳು ಹೆಚ್ಚುತ್ತಿವೆ. ಆದರೆ ಇದು ಕೇವಲ ಎರಡು ಯುವ ಜೀವಗಳ ಅಂತ್ಯವಲ್ಲ, ಬದಲಾಗಿ ಆ ಜೀವಗಳನ್ನೇ ನಂಬಿ ಬದುಕುತ್ತಿದ್ದ ಕುಟುಂಬಗಳ ಪಾಲಿನ ಜೀವಂತ ನರಕ. ಪ್ರೀತಿಯ ಕಾರಣಕ್ಕೆ ವಯಸ್ಸಿಗೆ ಬಂದ ಮಗಳನ್ನೋ, ಮಗನನ್ನೋ ಕಳೆದುಕೊಂಡ ಪೋಷಕರು ಅನುದಿನವೂ ನೋವು ಅನುಭವಿಸಬೇಕಾಗುತ್ತದೆ. ಹೀಗಾಗಿ ಪ್ರೀತಿಯ ಆರಂಭದಲ್ಲೇ ಅದರ ಪಕ್ವತೆ ಅರಿಯುವುದು ಅತ್ಯಗತ್ಯ.

ಪ್ರೀತಿ-ಮೋಹದ ನಡುವಿನ ಅಂತರ: ಪ್ರೀತಿ, ವಿರಸ ಮತ್ತು ಕೊಲೆ ಒಂದಕ್ಕೊಂದು ಜೋಡಣೆಯಾಗದ ಹಂತಗಳು. ಪ್ರೀತಿ ಎಂದರೇನು? ಅದರಲ್ಲಿರುವ ಹೊಣೆಗಾರಿಕೆಗಳೇನು? ನಿರೀಕ್ಷೆಗಳು ಹುಸಿಯಾದಾಗ ಅವುಗಳನ್ನು ಎದುರಿಸುವುದು ಹೇಗೆ? ಈ ಯಾವುದೇ ಪ್ರಶ್ನೆಗಳನ್ನು ಕೇಳಿಕೊಳ್ಳದೆಯೇ ಕೇವಲ ಸಖ್ಯವನ್ನೇ ಪ್ರೀತಿ ಎಂದು ತಪ್ಪಾಗಿ ಅರ್ಥೈಸಿಕೊಳ್ಳುವುದು ಇಂದಿನ ಸಮಸ್ಯೆ. ಅಪಕ್ವ ಮನಸ್ಸುಗಳ ಮೇಲೆ ಪ್ರಭಾವ ಬೀರುವ ಕೆಲವು ಶಕ್ತಿಗಳು, ಪರಿಣಾಮದ ಬಗ್ಗೆ ಯೋಚಿಸದೆ ಕೇವಲ ಬಣ್ಣದ ಕನಸುಗಳನ್ನು ಮಾರಾಟ ಮಾಡುತ್ತಿವೆ. ಹಿಂದೆ 15ನೇ ವಯಸ್ಸಿನ ಹಂತವು ವಿರೋಧ ಲಿಂಗಿಯ ಬಗ್ಗೆ ಕುತೂಹಲ ಮೂಡಿಸುವ ಪ್ರಾಯವಾಗಿತ್ತು. ಆದರೆ ಇಂದು ಅಂತರ್ಜಾಲದ ಅತಿ ಬಳಕೆಯಿಂದಾಗಿ ಮಕ್ಕಳು ಬಹಳ ಸಣ್ಣ ವಯಸ್ಸಿನಲ್ಲೇ ಇಂತಹ ಆಕರ್ಷಣೆಗಳಿಗೆ ಒಳಗಾಗುತ್ತಿದ್ದಾರೆ.

ಹತಾಶೆಯ ಹಾದಿ: ಕೆಲವರು ಪ್ರೀತಿಯಲ್ಲಿ ತಮ್ಮ ಸರ್ವಸ್ವವನ್ನೂ ಪಣಕ್ಕಿಡುತ್ತಾರೆ. ಇದು ಶಾಶ್ವತ ಎಂದು ನಂಬಿ ತಮ್ಮ ಭವಿಷ್ಯವನ್ನೇ ಅದರಲ್ಲಿ ಹೂಡಿಕೆ ಮಾಡುತ್ತಾರೆ. ಪ್ರೀತಿಸುವ ಸಮಯದಲ್ಲಿ ಪರಸ್ಪರರ ಭಾವನೆಗಳು, ಮನೆಯ ಪರಿಸ್ಥಿತಿ ಅಥವಾ ವಾಸ್ತವದ ನಿರೀಕ್ಷೆಗಳ ಬಗ್ಗೆ ಚರ್ಚಿಸುವ ತಾಳ್ಮೆ ಇವರಿಗಿರುವುದಿಲ್ಲ. ಸಂಬಂಧದಲ್ಲಿ ಕಾಣಿಸಿಕೊಳ್ಳುವ ಎಚ್ಚರಿಕೆಯ ಸಂಕೇತಗಳನ್ನು ಇವರು ನಿರ್ಲಕ್ಷಿಸುತ್ತಾರೆ. ತಾವು ಕಟ್ಟಿಕೊಂಡ ಭ್ರಮಾಸೌಧ ಕುಸಿದುಬೀಳಬಹುದು ಎಂಬ ಭಯವೇ ಇದಕ್ಕೆ ಕಾರಣ.

ಮಾಲೀಕತ್ವದಿಂದ ಮೃಗೀಯತೆ ಕಾರಣ: ಪ್ರೀತಿಯಲ್ಲಿ ಪರಸ್ಪರ ಗೌರವ, ನಂಬಿಕೆಗಿಂತ ಮಾಲೀಕತ್ವ ಹೆಚ್ಚಾಗುತ್ತಿದೆ. 'ಅವನು ಅಥವಾ ಅವಳು ನನಗೆ ಮಾತ್ರ ಸೇರಿದವರು' ಎಂಬ ಹಠ ಅಹಮಿಕೆಯನ್ನು ಬೆಳೆಸುತ್ತದೆ. ಯಾವಾಗ ಸಂಬಂಧ ಮುರಿದು ಬೀಳುತ್ತದೋ, ಆಗ ತಾವು ತೊಡಗಿಸಿದ ಬಂಡವಾಳ, ಅದು ಭವಿಷ್ಯವಿರಲಿ, ಕನಸು, ಹಣ, ದೇಹವಿರಲಿ ಎಲ್ಲವೂ ವ್ಯರ್ಥವಾಯಿತು ಎಂಬ ಹತಾಶೆ ಕಾಡುತ್ತದೆ. ಈ ಹತಾಶೆಯೇ ದ್ವೇಷವಾಗಿ ಬದಲಾಗಿ ಪ್ರತೀಕಾರಕ್ಕೆ ಪ್ರಚೋದಿಸುತ್ತದೆ.

ಅಪರಾಧದಲ್ಲಿ ಅಂತ್ಯ: ಹುಡುಗರು ಹುಡುಗಿ ತಮ್ಮ ನಿಯಂತ್ರಣದಲ್ಲಿದ್ದಾಳೆ ಎಂದು ಭಾವಿಸಿರುತ್ತಾರೆ. ಬ್ರೇಕಪ್ ಆದಾಗ ಅವರ ಅಹಂಗೆ ದೊಡ್ಡ ಪೆಟ್ಟು ಬೀಳುತ್ತದೆ. ಈ ಪೆಟ್ಟೇ ಹಲ್ಲೆ ಮತ್ತು ಹತ್ಯೆಗಳಿಗೆ ದಾರಿ ಮಾಡಿಕೊಡುತ್ತಿದೆ. ■

ಪ್ರೀತಿಸುವುದು ಯಾವಾಗ?

ಹದಿಹರೆಯದಲ್ಲಿ ಪರಸ್ಪರ ಆಕರ್ಷಣೆ, ಪ್ರೀತಿಸುವುದು ತಪ್ಪಲ್ಲ. ಆದರೆ ಅದರ ಉದ್ದೇಶ ಮುಖ್ಯ. ಅದಕ್ಕೊಂದು ಸ್ಪಷ್ಟತೆ ಇರಬೇಕು. ಹೀಗಾಗಿ ವಯೋಸಹಜವಾಗಿ ಪ್ರೀತಿಯ ಶಕ್ತಿ ಅರ್ಥ ಮಾಡಿಕೊಳ್ಳುವ ಪಕ್ವತೆ ಬರಬೇಕು. ಆರ್ಥಿಕವಾಗಿ ಸ್ವತಂತ್ರರಾಗುವ ತನಕ ನಮ್ಮ ಸರ್ವಸ್ವವನ್ನೂ ಪಣಕ್ಕಿಡುವ ಅಗತ್ಯವಿಲ್ಲ. ಪ್ರೀತಿಸುವವರು ತಮ್ಮ ಸಖ್ಯ ಆನಂದಿಸುತ್ತಾ ಪರಸ್ಪರರ ಬೆಳವಣಿಗೆಗೆ ಪೂರಕವಾಗಿದ್ದಾಗ ಮಾತ್ರ ಪ್ರೀತಿಸುವವರು ಮತ್ತು ಅವರ ಕುಟುಂಬಗಳು ಸುರಕ್ಷಿತವಾಗಿರಲು ಸಾಧ್ಯ.

ಕಾನ್ಸ್ ಅಂಗಳದಲ್ಲಿ ಮೆರೆದ ಮಿನಿ ಭಾರತ

ಬಬಿತಾ ಎಸ್.
babitha.salian@timesofindia.com

ವಿದೇಶಿ ಉಡುಪು, ಆಭರಣ, ಮೇಕಪ್, ಆ್ಯಕ್ಸೆಸರಿ ಮುಂತಾದ ಬೆಡಗು ಬಿನ್ನಾಣಗಳ ಮಧ್ಯೆ ಭಾರತದ ಗ್ರಾಮೀಣ ಭಾಗದ ಕೆಲವು ಜವಳಿ ಮತ್ತು ಆಭರಣಗಳ ಸುಂದರ ಪ್ರಸ್ತುತಿಗೆ ಕಾನ್ಸ್ 2026 ಸಾಕ್ಷಿಯಾಯಿತು. ಈವರೆಗೆ ನಡೆದ ಕಾನ್ಸ್ ಚಿತ್ರೋತ್ಸವಗಳಲ್ಲಿ ಭಾರತೀಯವಾದ, ಅದರಲ್ಲೂ ವಿಶೇಷವಾಗಿ ಸೀರೆ, ನತ್ತು, ಕಾಂಜೀವರಂ ರೇಷ್ಮೆ ಇತ್ಯಾದಿಯೇ ಗಮನ ಸೆಳೆದಿದ್ದವು. ಭಾರತೀಯ ಸೆಲೆಬ್ರಿಟಿಗಳು ಇಲ್ಲಿನ ಉಡುಪು, ಆಭರಣಗಳನ್ನು ಧರಿಸುತ್ತಿದ್ದರೂ ಅದಕ್ಕೆ ಅತ್ಯಾಧುನಿಕ ವಿನ್ಯಾಸಗಳನ್ನು ಸಂಯೋಜಿಸಿದ್ದರು.

ಈ ಬಾರಿಯೂ ಟಾಪ್ ಸೆಲೆಬ್ರಿಟಿಗಳು ಗೌನ್, ಕೋರ್ಸೆಟ್, ಪ್ಯಾಂಟ್ ಸೂಟ್, ಸ್ಟ್ರಾಪ್‌ಲೆಸ್, ಕೇಪ್, ಫ್ರಂಟ್ ಸ್ಲಿಟ್ ವಿನ್ಯಾಸಗಳ ಡಿಸೈನರ್ ಧರಿಸಿ ಅತ್ಯಾಧುನಿಕವಾಗಿ ಕಂಗೊಳಿಸಿದ್ದಾರೆ. ಇದರ ಮಧ್ಯೆಯೂ ಕಾನ್ಸ್ ರೆಡ್ ಕಾರ್ಪೆಟ್ ಮತ್ತು ಅದರಾಚೆ ಭಾರತದ ವಿವಿಧ ಪ್ರದೇಶಗಳ ಸ್ಥಳೀಯ ಜವಳಿ ವಿಶೇಷ, ಉಡುಪು, ಸೀರೆ ಧರಿಸುವ ಶೈಲಿ, ಪಾರಂಪರಿಕ ಆಭರಣಗಳು ಅದೇ ರೂಪದಲ್ಲಿ ರಾರಾಜಿಸಿದ್ದು ವಿಶೇಷ. ಸ್ಥಳೀಯ ಭಾಷೆಗಳ ಚಿತ್ರನಟಿಯರು, ಸೋಶಿಯಲ್ ಮೀಡಿಯಾ ಇನ್‌ಫ್ಲುಯೆನ್ಸರ್‌ಗಳು, ಡಿಜಿಟಲ್ ಕ್ರಿಯೇಟರ್‌ಗಳು 'ವೋಕಲ್ ಫಾರ್ ಲೋಕಲ್' ಎಂಬಂತೆ ತಮ್ಮ ನೆಲದ ಪೋಷಾಕುಗಳಲ್ಲಿಯೇ ಬೆರಗು ಮೂಡಿಸಿದರು. ಮುಖ್ಯವಾಗಿ ಈ ಉಡುಪುಗಳಿಗೆ ಒಂದಿನಿತೂ ಪಾಶ್ಚಾತ್ಯ ವಿನ್ಯಾಸದ ಸ್ಪರ್ಶ ನೀಡದೆ ಅಪ್ಪಟ ದೇಸಿ ಲುಕ್‌ನಲ್ಲಿಯೇ ಪ್ರಸ್ತುತಪಡಿಸಿದ ಹೆಗ್ಗಳಿಕೆ ಇವರದು.

ಕರುನಾಡಿನ ಲಂಬಾಣಿ ಕಸೂತಿ: ಕಾನ್ಸ್‌ನಲ್ಲಿ ಖ್ಯಾತ ಇನ್‌ಫ್ಲುಯೆನ್ಸರ್ ದಿಶಾ ಮದನ್ ಕಪ್ಪು ಬಣ್ಣದ ಹಾಲ್ಟರ್ ನೆಕ್ ಕೋರ್ಸೆಟ್ ಶೈಲಿಯ ಶಾರ್ಟ್ ಸ್ಕರ್ಟ್ ಧರಿಸುವ ಮೂಲಕ ಕರ್ನಾಟಕದ ವಿಜಯಪುರ ಜಿಲ್ಲೆಯ ಲಂಬಾಣಿ ಕಸೂತಿ ವಿಶೇಷವನ್ನು ಪ್ರಸ್ತುತಪಡಿಸಿದ್ದಾರೆ. ಬಂಜಾರ ಕಸೂತಿ ಎಂದೂ ಕರೆಯಲಾಗುವ ಇದನ್ನು ಅವರು ಕಾನ್ಸ್‌ನಲ್ಲಿ ಪ್ರದರ್ಶಿಸಿದ್ದು ವಿಶೇಷ. ಐವರು ಮಹಿಳಾ ಕುಶಲಕರ್ಮಿಕರ್ಮಿಗಳು 2500 ಗಂಟೆಗಳ ಅವಧಿಯಲ್ಲಿ ಈ ವಿಶೇಷ ಲಂಬಾಣಿ ಕಸೂತಿ ಪೋಷಾಕನ್ನು ಸಿದ್ಧಪಡಿಸಿದ್ದಾರೆ ಎನ್ನಲಾಗಿದೆ.

ಮಹಾರಾಷ್ಟ್ರದ ನೌವಾರಿ ಪೈಠಾಣಿ ಸೀರೆ: ಮರಾಠಿ ನೆಲದ ಪೈಠಾಣಿ ರೇಷ್ಮೆ ಸೀರೆಯನ್ನು ಆ ಭಾಗದ ನೌವಾರಿ ಅಂದರೆ ಕಚ್ಚೆ ಶೈಲಿಯಲ್ಲಿಯೇ ಧರಿಸಿ ಮರಾಠಿ ಚಿತ್ರನಟಿ ಪ್ರಜಕ್ತಾ ಮಾಲಿ ರೆಡ್ ಕಾರ್ಪೆಟ್‌ನಲ್ಲಿ ಮೋಡಿ ಮಾಡಿದ್ದಾರೆ. ಅವರೊಂದಿಗೆ ಮರಾಠಿ ನಟಿಯರಾದ ಜಯಂತಿ ವಾಗ್ಧರೆ, ನಿವೇದಿತಾ ಸರಾಫ್, ಕಂಟೆಂಟ್ ಕ್ರಿಯೇಟರ್ ಅಂಕಿತಾ ವಾಲಾವಾಲ್ಕರ್ ಪೈಠಾಣಿ ಸೀರೆ ಮತ್ತು ಅದರಿಂದ ಮಾಡಿದ ಗೌನ್‌ನಲ್ಲಿ ಮಿಂಚಿದರು.

ಪಂಜಾಬಿ ಸಲ್ವಾರ್: ರೂಪದರ್ಶಿ ಮತ್ತು ಪಂಜಾಬಿ ನಟಿ ರೂಪಿಂದರ್ ಕೌರ್ ಗಿಲ್ ತಮ್ಮ ಮೊದಲ ಕಾನ್ಸ್ ಪದಾರ್ಪಣೆಯ ವೇಳೆ ಅಪ್ಪಟ ಪಂಜಾಬಿ ಯುವತಿಯಾಗಿ ಕಾಣಿಸಿಕೊಂಡಿದ್ದಾರೆ. ಕೆನೆ ಬಣ್ಣದ ಸಲ್ವಾರ್‌ಗೆ ಹೊಂಬಣ್ಣದ ರೇಷ್ಮೆ ನೂಲುಗಳಿಂದ ಆ ಭಾಗದ ಚರ್ಡಿಕಲಾ ಕಸೂತಿ ಮೂಡಿಸಿದ್ದ ಪ್ಯಾಂಟ್ ಮತ್ತು ದುಪಟ್ಟಾ ಧರಿಸಿದ್ದ ಅವರು ಪಂಜಾಬಿ ಜೂತಿ ಧರಿಸಿದ್ದರು. ಅವರು ದುಪಟ್ಟಾವನ್ನು ತಲೆಯ ಮೇಲೆಯಿಂದ ಕೆಳಗಿಳಿಸಿದ್ದು ಇನ್ನೊಂದು ವಿಶೇಷ.

ರಾಜಸ್ಥಾನಿ ಘೂಂಘಟ್: ರಾಜಸ್ಥಾನದ ನಟಿ, ರೂಪದರ್ಶಿ ರುಚಿ ಗುಜ್ಜರ್ ಆ ಭಾಗದ ರಜಪೂತ್ ಪೋಷಾಕಿನಲ್ಲಿಯೇ ರೆಡ್‌ಕಾರ್ಪೆಟ್‌ನಲ್ಲಿ ನಡೆದಾಡಿದರು. ಗುಲಾಬಿ ಬಣ್ಣದ ಚನಿಯಾ ಚೋಲಿ ಮತ್ತು ಆಭರಣಗಳನ್ನು ಧರಿಸಿದ್ದ ಅವರು ರಜಪೂತ್ ಮಹಿಳೆಯರು ಮುಖ ಕಾಣಬಾರದೆಂದು ಧರಿಸುವ ಘೂಂಘಟ್ ಅಂದರೆ ತಲೆ ಮೇಲೆ ಸೆರಗು ಹೊದ್ದುಕೊಂಡೇ ಪೋಸ್ ನೀಡಿದ್ದರು. ತಮ್ಮ ನೆಲದಲ್ಲಿ ಈ ಪದ್ಧತಿ ಈಗಲೂ ಇದೆ ಎಂಬುದನ್ನು ಸಾರಲು ಧರಿಸಿದ್ದ ಅವರ ಈ ಶೈಲಿಗೆ ಟೀಕೆಯೂ ವ್ಯಕ್ತವಾಗಿದೆ. ನಟಿ ಮೌನಿ ರಾಯ್ ಗುಜರಾತ್‌ನ ಜವಳಿ ವಿಶೇಷ ಪಟೋಲಾ ಚಿತ್ತಾರಗಳ ಉಡುಪು ಧರಿಸಿ ಕಾಣಿಸಿಕೊಂಡಿದ್ದಾರೆ.

ವೃಂದಾವನದ ಕಂಪು: ಫ್ಯಾಷನ್ ಡಿಸೈನರ್ ಮತ್ತು ಕಂಟೆಂಟ್ ಕ್ರಿಯೇಟರ್ ಇಶಿತಾ ಮಂಗಲ್ ಹಿಂದೂ ಖಗೋಳಶಾಸ್ತ್ರದಲ್ಲಿ ಮಹತ್ವ ಪಡೆದಿರುವ ಒಂಬತ್ತು ಗ್ರಹಗಳನ್ನು ಪ್ರತಿನಿಧಿಸುವ ಒಂಭತ್ತು ರತ್ನಗಳನ್ನು ಅಳವಡಿಸಿದ್ದ ಕೋರ್ಸೆಟ್ ಮತ್ತು ಅದೇ ಥೀಮ್‌ನ ಕೈಚೀಲ ಹಿಡಿದುಕೊಂಡು ಮಿಂಚಿದ್ದಾರೆ. ರೂಪದರ್ಶಿ, ನಟಿ ಆರತಿ ಖೇತ್ರಪಾಲ್ ಬಿಳಿ ಗೌನ್ ಮೇಲೆ ವೃಂದಾವನ ಥೀಮ್‌ನ ಕಸೂತಿಗಳನ್ನು ಬಿಡಿಸಿ ಕೈಯಲ್ಲಿ ತುಳಸಿ ಮಾಲೆ ಹಿಡಿದು ರೆಡ್ ಕಾರ್ಪೆಟ್‌ನಲ್ಲಿ ಮಿಂಚಿದ್ದು, ಇನ್ನೊಂದು ಲುಕ್‌ನಲ್ಲಿ ವೃಂದಾವನ ಚಿತ್ರಗಳಿರುವ ಲೆಹೆಂಗಾ, ಕೃಷ್ಣನ ಚಿತ್ರವಿರುವ ಹ್ಯಾಂಡ್‌ಬ್ಯಾಗ್ ಮತ್ತು ಕೈಯಲ್ಲಿ ಪಾಕೆಟ್ ಗಾತ್ರದ ಭಗವದ್ಗೀತೆ ಹಿಡಿದುಕೊಂಡಿದ್ದರು. ಫ್ಯಾಷನ್ ಡಿಸೈನರ್ ಮತ್ತು ಉದ್ಯಮಿ ಅಂಜಲಿ ಫೌಗಟ್ ತಿಳಿ ನೀಲಿ ಬಣ್ಣದ ಲೆಹೆಂಗಾ, ಚೋಲಿ ಧರಿಸಿ ಅದರೊಂದಿಗೆ ಭಾರತದ ಭಕ್ತಿ ಪರಂಪರೆಯಲ್ಲಿರುವ ರಾಧಾ ಕೃಷ್ಣರ ಪುಟ್ಟ ವಿಗ್ರಹಗಳಿರುವ ಆ್ಯಕ್ಸೆಸರಿಗಳನ್ನು ಪ್ರಸ್ತುತಪಡಿಸಿದ್ದರು. ■

ಆರತಿ ಖೇತ್ರಪಾಲ್



ಅಂಜಲಿ ಫೌಗಟ್



ಇಶಿತಾ ಮಂಗಲ್



ಜಯಂತಿ ವಾಗ್ಧರೆ

ಮೌನಿ ರಾಯ್

ರುಚಿ ಗುಜ್ಜರ್

ಈ ವರ್ಷದ ಕಾನ್ಸ್ ಚಿತ್ರೋತ್ಸವದಲ್ಲಿ ಭಾರತದ ಟಾಪ್ ಸೆಲೆಬ್ರಿಟಿಗಳು ಧರಿಸಿದ್ದ ಡಿಸೈನರ್ ಉಡುಪುಗಳಿಗಿಂತ ಪ್ರಾಂತೀಯ ಚಿತ್ರನಟಿಯರು, ಇನ್‌ಫ್ಲುಯೆನ್ಸರ್‌ಗಳು ಹಾಕಿದ್ದ ಎಥ್ನಿಕ್ ವೇರ್‌ಗಳೇ ಹೆಚ್ಚು ಗಮನ ಸೆಳೆದವು.

RNI No. KARKAN/2016/71628
Vol. 11 Issue no. 145
This newspaper/periodical is published by Lokesh K V from No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru-560011. (Ph: 080-40877666) on behalf of Metropolitan Media Company Limited, edited by Sudarshan Channangihalli and printed by (a) Sekar S at Bennett Coleman & Co Ltd., The Times of India Press, No. 9/10/11-A, 4th Main, KIADB Bommasandra Industrial Area, Anekal Taluk, Bangalore - 560 099 (Ph: 080-42200500). (b) Murthy D from Metropolitan Media Company Limited, Plot No.34/B, Hootagalli Industrial Area, Belavadi post, Mysuru - 570 018. (c) Narappa G from Metropolitan Media Company Limited., Sy. No.45/2, Savalanga Road, Navule, Kasaba Hobli, Shivamogga- 577 204. (d) Siddappa Kashibadiger from Metropolitan Media Company Limited, Plot No 33 R.S. No. 536, Honaga Industrial Estate, Honaga , Belagavi Taluk, Belagavi 591156. (e) Sanjay Kanekal from Metropolitan Media Company Limited Plot No. 15 & 16, KIADB Rayapur Industrial Area, Hubballi - 580 009. (f) R Gururaj from Metropolitan Media Co. Ltd., Plot No. 9, KSSIDC, Industrial Area, Kaladagi Road, Vidyagiri, Bagalakote- 587102 (g)Raghavendra Rao from Metropolitan Media Company Limited., Plot No. 224, in Sy. No. 41/2, 41/B & 42, Kapnoor II Stage Industrial Area, Kalaburagi- 585 104.(h) Shivakumar V Hiremath from Metropolitan Media Company Limited., Plot No. 124 (part) and Plot No. 125 (part) of Sy. No. 132/1, Oddarahatti village, Gangavathi (i) Girish K from Metropolitan Media Company Limited No. 284 (Part), 285, 286 & 287, Baikampady Industrial Area, Mangaluru – 575 011.
" © All Rights Reserved. Reproduction in whole or part without permission is prohibited.